ಅನುವಾದ : ಬಿ. ಪುಟ್ಟಸ್ವಾಮಯ್ಯ

CC-O. In Public Domain. Digitized by eGangotri

ಶಿವ ಮಹಿಮ್ನ ಸ್ತೋತ್ರ

ಸೌಂದರ್ಯ ಲಹರಿ

ಪ್ರಕಾಶಕರು :

ಶ್ರೀ ದುರ್ಗಾ ಬುಕ್ ಟ್ರಸ್ಟ್

ಶ್ರೀರಾಂಪುರ, ಬೆಂಗಳೂರು-560 021

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidya Bharathi
Book Centre,
Bharathi Street,
SRINGERI - 577 13

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಎರಡು ಸ್ತೋತ್ರ ರತ್ನಗಳು

ಶಿವಮಹಿಮ್ನಸ್ತವ-ಸೌಂದರ್ಯಲಹರಿ

(ಕಾವ್ಯರೂಪ ಕನ್ನಡ ಅನುವಾದ)

ಅನುವಾದ
ಬಿ. ಪುಟ್ಟಸ್ವಾಮಯ್ಯ

ಪ್ರಕಾಶಕರು ;
ಶ್ರೀದುರ್ಗಾ ಬುಕ್ ಟ್ರಸ್ಟ್
ಶ್ರೀರಾಂಪುರ, ಬೆಂಗಳೂರು-೨೧

ಅಧಿಕೃತ ಮಾರಾಟಗಾರರು
ಶಾರದಾ ಪ್ರಕಾಶನ, ಅರಳೇಪೇಟೆ, ಬೆಂಗಳೂರು-೫೩

Sri Vidyabharathi Book Centre, Sringeri

CC-O. In Public Domain. Digitized by eGangotri

ERADU STHOTRA RATNAGALU
Shivamahimnastava mattu Soundaryalahari
Poetical rendering in Kannada by B. Puttaswamayya.
Pages 158+40 Price·Rs.12-50

(ಹಕ್ಕುಗಳನ್ನು ಕಾದಿರಿಸಲಾಗಿದೆ)

ಬೆಲೆ : ರೂ. 12-50

ಮುದ್ರಕರು
ರೋಹಿಣಿ ಪ್ರಿಂಟರ್ಸ್
ನಂ. 2, ಕೆ. ವಿ. ಲೇನ್, ಆರಳೀಪೇಟೆ, ಬೆಂಗಳೂರು-53

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಷಯ ಸೂಚಿ

ಮುನ್ನುಡಿ : ಪ್ರೊ. ಎಸ್. ಕೆ. ರಾಮಚಂದ್ರರಾವ್ — 5

ಪ್ರಸ್ತಾವನೆ : ಡಾಕ್ಟರ್ ರಂ. ಶ್ರೀ ಮುಗಳಿ

ಕೆಲವು ಅಭಿಪ್ರಾಯಗಳು : ಸರ್ವಶ್ರೀ ಡಾ॥ ಹಾ. ಮ. ನಾಯಕ—15

ಡಾ॥ ಕೆ. ಕೃಷ್ಣಮೂರ್ತಿ. ಡಾ॥ ಎಸ್. ಎಂ. ವೃಷಭೇಂದ್ರಸ್ವಾಮಿ, ಡಾ॥ ಗೊರೂರು ರಾಮಸ್ವಾಮಿ ಐಯ್ಯಂಗಾರ್, ಪ್ರೊಫೆಸರ್ ಶಂಕರ ಮೊಕಾಸಿ ಪುಣೇಕರ್, ಪ್ರಾಧ್ಯಾಪಕ, ಸ.ಸ. ಮಾಳವಾಡ, ಎಲ್.ಎಸ್. ಶೇಷಗಿರಿರಾವ್ ಪ್ರೊ.ಎಂ.ವಿ. ಸೀತಾರಾಮಯ್ಯ.

ಬಿನ್ನಹ — 35

ಮಾನ್ಯ ವಾಚಕರಲ್ಲಿ ಅನುವಾದಕನ ಆತ್ಮೀಯ ನುಡಿಗಳು

ಶಿವಮಹಿಮ್ನಸ್ತವ ೧–೫೫

ಕನ್ನಡ ಅನುವಾದ ಟಿಪ್ಪಣಿ

ಸೌಂದರ್ಯಲಹರಿ ೫೫–೧೨೮

ಕನ್ನಡ ಅನುವಾದ ಟಿಪ್ಪಣಿ

ಶಿವಮಹಿಮ್ನಸ್ತವ ೧೨೯–೧೩೬

ಸಂಸ್ಕೃತ ಮೂಲ

ಸೌಂದರ್ಯಲಹರಿ

ಸಂಸ್ಕೃತ ಮೂಲ ೧೩೭–೧೫೬

ಒಪ್ಪೋಲೆ ೧೫೭

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಕನ್ನಡನಾಡಿನ ಹಿರಿಯ, ಹಿರಿಮೆಯ ಸಾಹಿತಿ ಪುಟ್ಟಸ್ವಾಮಯ್ಯನವರು ಕಾದಂಬರಿಕಾರರೆಂದು ಹೆಸರಾದರೂ ಅವರ ಆಧ್ಯಾತ್ಮಿಕ ಚಿಂತನೆ–ಸಾಧನೆಗಳು ಅವರ ವ್ಯಕ್ತಿತ್ವಕ್ಕೆ ಪುಟವಿಟ್ಟಿವೆ. ತಮ್ಮ ಸಾರ್ಥಕ ಬಾಳುವೆಯ ಗೋಪುರಕ್ಕೆ ಕಳಶವಿಡುವಂತೆ ಲಲಿತಾ ಸಹಸ್ರನಾಮವನ್ನು ಸಾಂಗತ್ಯವಾಗಿ, ದುರ್ಗಾಸಪ್ತಶತಿಯನ್ನು ಕಾವ್ಯವಾಗಿ ತಿರುಗಿಸಿ ಕನ್ನಡಕ್ಕೆ ತಂದಿದ್ದಾರೆ. ಸಾಹಿತಿಯ ಸಂಸ್ಕಾರ ಹೀಗೆ ಹೊರಹೊಮ್ಮಿ ಜನರ ಸಂಸ್ಕಾರವನ್ನು ಹಿಗ್ಗಿಸುವ ಕೆಲಸ ಮಾಡಿದೆ. ಶ್ರೀವಿದ್ಯೆಯ ತಾಂತ್ರಿಕ ಪ್ರಕ್ರಿಯೆಗಳ ಪರಿಚಯ, ಪರಿಭಾಷೆಯ ಮೇಲೆ ಒಡೆತನ ಇವರಿಗೆ ಸಿದ್ಧಿಸಿವೆಯೆಂಬುದು ಈ ಎರಡೂ ಕೃತಿಗಳಿಂದ ಈಗಾಗಲೇ ಸ್ಪಷ್ಟವಾಗಿದೆ.

ಅವರ ಚೇತನದ ಉತ್ಸಾಹ ಈಗ ಅವರನ್ನು ಇನ್ನಷ್ಟು ಮುಂದೆ ನಡೆಸಿದೆ. ಈಗ ಪುಷ್ಪದಂತನ 'ಶಿವಮಹಿಮ್ನಸ್ತವ', ಶಂಕರರ ಹೆಸರಿಗೆ ಸಲ್ಲಿಸಿರುವ 'ಸೌಂದರ್ಯಲಹರಿ' ಈ ಎರಡೂ ಕೃತಿಗಳನ್ನು ಕನ್ನಡಕ್ಕೆ ಇಳಿಸಿದ್ದಾರೆ. ಮೂಲ ಸಂಸ್ಕೃತದಲ್ಲಿ ಇವೆರಡೂ ಮಧುರವಾದ ಕಾವ್ಯಗಳು; ಭಾವುಕತೆ, ಭಕ್ತಿ, ಬೆಡಗುಗಳನ್ನೊಳಗೊಂಡಿರುವುವು. ಅವುಗಳ ಪದಲಾಲಿತ್ಯ, ಅರ್ಥ ಗೌರವ, ಛಂದೋಬಂಧುರತೆಗೆ ರಸಿಕರು ತಲೆದೂಗಿ ಹಾಡಿ ಹೊಗಳಿದ್ದಾರೆ. ಇನ್ನು, ಧರ್ಮದ ಚೌಕಟ್ಟಿನಲ್ಲಿ ಸಿದ್ಧವಾದ ಕೃತಿಗಳೆಂದಮೇಲೆ ಆದರ ವಿಚಾರ ಶೀಲತೆ, ತತ್ತ್ವನಿರೂಪಣೆ, ಸಿದ್ಧಾಂತ ವಿಶ್ಲೇಷಣೆಗಳನ್ನೂ ಗಮನಿಸಬೇಕಲ್ಲವೆ? ಇವನ್ನೆಲ್ಲ ಗಮನಿಸಿದಾಗ, ಇವೆರಡೂ ಕೃತಿಗಳ ಹಿರಿಮೆ ಮುಗಿಲನ್ನೇ ಮುಟ್ಟುತ್ತದೆ.

'ಶಿವಮಹಿಮ್ನಸ್ತವ'ದ ಹೆಗ್ಗಳಿಕೆಯನ್ನು ಹೇಳಲು ಈ ಪ್ರತಿಮೆಯನ್ನು ಬಳಸುವುದಿದೆ–'ಸಮುದ್ರದಂಥ ಪಾತ್ರೆಯಲ್ಲಿ ಅಸಿತಗಿರಿ (ಎಂದರೆ ಹಿಮಾಲಯ) ಯಷ್ಟು ಮಸಿಯನ್ನು ತುಂಬಿಕೊಂಡು, ಕಲ್ಪವೃಕ್ಷದಂಥ ಲೇಖನಿಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಬಳಸಿ, ಭೂಮಿಯಷ್ಟು ವಿಸ್ತಾರವಾದ ಪತ್ರದ ಮೇಲೆ ಶಾರದೆಯೇ ಬರೆಯ ತೊಡಗಿದರೂ, ಎಲ್ಲ ಕಾಲವೂ ಬರೆದರೂ ಶಿವನ ಗುಣಗಳನ್ನು ಕೊನೆ ಮುಟ್ಟಿಸಿ ಹೇಳುವುದಾದೀತೆ? ಈ ಕೆಲಸವನ್ನು ಪುಷ್ಪದಂತ ಮಾಡಿದ್ದಾನೆ.'

ಅಸಿತಗಿರಿಸಮಂ ಸ್ಯಾತ್ ಕಜ್ಜಲಂ ಸಿಂಧುಪಾತ್ರೇ
ಸುರತರುವರಶಾಖಾ ಲೇಖನೀ ಪತ್ರಮುರ್ವೀ ||
ಲಿಖತಿ ಯದಿ ಗೃಹೀತ್ವಾ ಶಾರದಾ ಸರ್ವಕಾಲಂ
ತದಪಿ ತವ ಗುಣಾನಾಂ ಈಶ ಪಾರಂ ನ ಯಾತಿ ||

ವರ್ಣನೆಗೆ ನಿಲುಕದ ಶಿವತತ್ತ್ವವನ್ನು ಕುರಿತ ಈ ಕೃತಿಯನ್ನು ರಚಿಸಿದ ಕವಿ ಪುಷ್ಪದಂತನನ್ನು ಗಂಧರ್ವರಾಜನೆಂದು ನಿರ್ದೇಶಿಸುವುದು ಕವಿಸಮಯ. ಕವಿಯನ್ನು ಪುಷ್ಪದಂತನೆಂದಿರುವುದೂ ಕವಿಸಮಯವೆನ್ನಿ. ಈ ಕೃತಿಯ ಮೊದಲ ಮಾತೃಕೆಯಾದ ಮಂಧಾತ ಅಮರೇಶ್ವರ ದೇವಾಲಯದ ಶಿಲಾಶಾಸನ (ನರ್ಮದಾ ತೀರದ ನೀಮಾಡ್ ಜಿಲ್ಲೆಯಲ್ಲಿನ ಮಂಧಾತ ಎಂಬೂರಿನ ಗುಡಿಯಲ್ಲಿ ಕ್ರಿಸ್ತಾಬ್ದ ೧೦೬೩ರ ಶಾಸನ) ಕವಿಯ ಹೆಸರನ್ನು ಹೇಳದೆ 'ಇತಿ ಮಹಿಮ್ನಸ್ತವಂ ಸಮಾಪ್ತಂ' ಎಂದು ಮುಗಿಯುತ್ತದೆ. ಮುಂದಿನ ಒಂದು ಪ್ರತಿಯಲ್ಲಿ 'ಪುಷ್ಪದಂತಾಭಿಧಾನ ಗಂಧರ್ವವಿರಚಿತ'ವೆಂಬ ಒಕ್ಕಣೆಯಿದೆ; ಇನ್ನೊಂದರಲ್ಲಿ ಕವಿಯನ್ನು 'ಪುಷ್ಪದಂತ ಗಂಧರ್ವರಾಜ'ನೆಂದು ಕರೆದಿದ್ದಾರೆ; ಮತ್ತೊಂದರಲ್ಲಿ ಪುಷ್ಪದಂತ 'ಗಂಧರ್ವಾಚಾರ್ಯ'ನಾಗಿ ಕಾಣಿಸಿಕೊಳ್ಳುತ್ತಾನೆ; ಇನ್ನೂ ಒಂದರಲ್ಲಿ ಬರಿಯ 'ಪುಷ್ಪದಂತಾಚಾರ್ಯ'ನಾಗಿದ್ದಾನೆ.

ಯಾವ ಪುಷ್ಪದಂತನೋ, ಎಲ್ಲಿಯವನೋ, ಯಾವ ಕಾಲದವನೋ! ಆದರೆ ಈ ಕೃತಿಯ ಪ್ರಖ್ಯಾತಿ ಎಂಟುನೂರು ವರ್ಷಗಳನ್ನೂ ಮೀರಿ ನಿಂತಿರುವುದಂತೂ ದಿಟ. ಇಲ್ಲಿನ ಶ್ಲೋಕಗಳು ಸೋಮದೇವನ 'ಯಶಸ್ತಿಲಕ ಚಂಪೂ', ರಾಜಶೇಖರನ 'ಕಾವ್ಯಮೀಮಾಂಸಾ', ಜಯಂತಭಟ್ಟನ 'ನ್ಯಾಯ ಮಂಜರಿ'ಗಳಲ್ಲಿ ಉದ್ಧೃತವಾಗಿವೆ. ಇದಕ್ಕೆ ಹಲವಾರು ಟೀಕೆಗಳು ಸಿದ್ಧವಾಗಿವೆ ಕೆಲವೊಮ್ಮೆ ಇದನ್ನು 'ಶಿವರಹಸ್ಯ'ಕ್ಕೆ ಸೇರಿದ ಭಾಗವೆಂದು ವ್ಯವಹರಿಸುವುದೂ ಇದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿವನ ಹೆಗ್ಗಳಿಕೆಯನ್ನು ಹೇಳುವ ಕೃತಿಯಾದರೂ ವೇದೋಪನಿಷತ್ತುಗಳ ಸಾರವನ್ನು ಆಳವಡಿಸಿಕೊಂಡು ಶಿವನನ್ನು ಪರಮಾರ್ಥ ತತ್ತ್ವವೆಂದೂ ಪರ ಬ್ರಹ್ಮಸ್ವರೂಪವೆಂದೂ ಒಕ್ಕಣಿಯಿರುವುದರಿಂದ ಇದು ಮತಗ್ರಂಥಗಳ ಸಾಲಿಗೆ ಸಲ್ಲುವುದಿಲ್ಲ; ಅಧ್ಯಾತ್ಮಗ್ರಂಥಗಳ ಗುಂಪಿಗೇ ಸೇರುವುದು. ಸಂಕೇತಗಳೇ ಇಲ್ಲಿನ ಪುರಾಣ ಪ್ರಸಂಗಗಳಲ್ಲಿ ಎದ್ದು ಕಾಣುವ ವಿವರ. ಹೀಗಿರುವಲ್ಲಿ, ಕೃತಿ ಸರ್ವಜನಾದರಣೀಯವಾಗಿರುವುದು ಆಶ್ಚರ್ಯವಲ್ಲ.

ಹಾಗೆಯೇ 'ಸೌಂದರ್ಯಲಹರಿ'ಯೂ ಶಕ್ತಿ ಪರವಾದ ಸ್ತೋತ್ರ ಗ್ರಂಥವಾದರೂ ಆಧ್ಯಾತ್ಮ ಪ್ರಸಕ್ತಿಯೇ ಅಲ್ಲಿ ಮುಖ್ಯವಾದ ವಿವರ. ವ್ಯಾಖ್ಯಾನಕಾರರಾದ ಲಕ್ಷ್ಮೀಧರ, ಭಾಸ್ಕರರಾಯ, ಜ್ಞಾನಶಿವಾಚಾರ್ಯ ಇವರು ಈ ಕೃತಿ ಶಂಕರಾಚಾರ್ಯರದ್ದೆಂದು ಹೇಳಿದರೂ, 'ಡಿಂಡಿಮ'ವ್ಯಾಖ್ಯಾನಕಾರನು ಶಿವನೇ ಇದರ ಕರ್ತೃವೆಂದೂ, 'ಸುಧಾವಿದ್ಯೋತಿನೀ'ವ್ಯಾಖ್ಯಾನಕಾರನು ಇದು ಪ್ರವರ ಸೇನನ ಕೃತಿಯೆಂದೂ ಹೇಳಿದ್ದಾರೆ. ಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯಗಳಲ್ಲಿರುವ ನಿಲುವಿಗೂ 'ಸೌಂದರ್ಯಲಹರಿ'ಯ ನಿಲುವಿಗೂ ತುಂಬ ಭೇದವಿರುವುದು ದಿಟ. 'ಸೌಂದರ್ಯಲಹರಿ' ತಾಂತ್ರಿಕ ಗ್ರಂಥ; ಶಾಂಕರಾದ್ವೈತಕ್ಕೆ ಸರಿಹೊಂದುವುದಿಲ್ಲ. ಶಂಕರಾಚಾರ್ಯರಿಗೆ ತಂತ್ರದಲ್ಲಿ ಆಸಕ್ತಿಯಾಗಲೀ ವಿಶ್ವಾಸವಾಗಲೀ ಇದ್ದಂತೆ ಅವರ ಭಾಷ್ಯ ಗ್ರಂಥಗಳಿಂದ ತಿಳಿದು ಬರುವುದಿಲ್ಲ.

ಇದು ಹೇಗಾದರೂ ಇರಲಿ, 'ಸೌಂದರ್ಯಲಹರಿ'ಯ ಹಿರಿಮೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ. ಕಾದಿ ಮತ ಸಂಪ್ರದಾಯಕ್ಕೆ ಮುಖ್ಯವಾದ ಆಕರಗಳಲ್ಲೊಂದು ಇದು; 'ತಂತ್ರರಾಜತಂತ್ರ', 'ವಾಮಕೇಶ್ವರ ತಂತ್ರ'ಗಳ ಛಾಯೆಯನ್ನು ಶ್ಲೋಕ ಶ್ಲೋಕದಲ್ಲೂ ಕಾಣಬಹುದು. ಸ್ತೋತ್ರ ಸಾಹಿತ್ಯದಲ್ಲಿ ಇದಕ್ಕಿರುವ ಗೌರವ ಬೇರೆ ಯಾವ ಕೃತಿಗೂ ಇರಲಾರದು.

ಶ್ರೀ ಪುಟ್ಟಸ್ವಾಮಯ್ಯನವರು ಇವೆರಡೂ ಸ್ತೋತ್ರಕೃತಿಗಳನ್ನು ಕನ್ನಡಾನುವಾದಕ್ಕೆ ಆಯ್ದುಕೊಂಡಿರುವುದು ಸೂಕ್ತವಾಗಿಯೇ ಇದೆ. ನಾರ್ಮನ್ ಬ್ರೌನ್ ಇವೆರಡೂ ಕೃತಿಗಳನ್ನು ಸಚಿತ್ರವಾಗಿ ಮೂಲ–ಅನುವಾದಗಳೊಂದಿಗೆ ಪ್ರಕಟ ಮಾಡಿ ರಸಿಕರ, ಭಾವುಕರ, ಜಿಜ್ಞಾಸುಗಳ ಗಮನವನ್ನೆಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಕಡೆ ಸೆಳೆದರು ('ಸೌಂದರ್ಯಲಹರಿ', ಹರ್ವಾರ್ಡ್ ಓರಿಯಂಟಲ್ ಸೀರೀಸ್, ೪೩, ೧೯೫೮; 'ಶಿವ ಮಹಿಮ್ನಸ್ತವ', ಅಮೆರಿಕನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ಪುಣೆ, ೧೯೬೫). ಆದರೆ ಅವರ ಪ್ರಕಟಣೆಗಳಲ್ಲಿ ಆಧ್ಯಾತ್ಮಿಕ ಅಥವಾ ತಾಂತ್ರಿಕ ಚೌಕಟ್ಟು ಅಭ್ಯಾಸಿಗಳಿಗೆ ದೊರೆಯುವುದಿಲ್ಲ. ಈ ಕೊರತೆಯನ್ನು ಪುಟ್ಟಸ್ವಾಮಯ್ಯನವರು ನೀಗಿದ್ದಾರೆ. ಶ್ಲೋಕ ಸಂದರ್ಭಗಳನ್ನು ವಿವರಿಸಿ, ವಿಶೇಷಾಂಶಗಳ ಕಡೆ ಗಮನವನ್ನು ಹರಿಸಿ, ಕ್ಲಿಷ್ಟ ಪರಿಭಾಷೆಗಳಿಗೆ ಟಿಪ್ಪಣಿಗಳನ್ನು ಒದಗಿಸಿದ್ದಾರೆ.

ಮೂಲ 'ಶಿವ ಮಹಿಮ್ನಸ್ತವ'ದ ಮೊದಲ ಇಪ್ಪತ್ತೊಂಬತ್ತು ಶ್ಲೋಕಗಳೂ, ಇಡೀ 'ಸೌಂದರ್ಯಲಹರಿ'ಯೂ ಶಿಖರಿಣೀ ವೃತ್ತದಲ್ಲಿವೆ. ಮೊದಲ ಕೃತಿಯ ಮೂವತ್ತನೆಯ ಶ್ಲೋಕ ಹರಿಣೀ ವೃತ್ತದಲ್ಲಿಯೂ ಕಡೆಯದು ಮಾಲಿನೀ ವೃತ್ತದಲ್ಲಿಯೂ ಇವೆ. ಎರಡೂ ಕೃತಿಗಳ ಭಾವಾನುವಾದವನ್ನು ಕಾವ್ಯ ರೂಪದಲ್ಲಿಯೇ ಕನ್ನಡದಲ್ಲಿ ತಂದಿರುವುದೊಂದು ವಿಶೇಷ. 'ಮಹಿಮ್ನ ಸ್ತವ'ದ ಬಹುಭಾಗ ಕನ್ನಡದ ಚಂಪಕ ಮಾಲಾ ವೃತ್ತದಲ್ಲಿ ಮೂಡಿ ಬಂದಿರುವುದು ತುಂಬ ಸೊಗಸಾಗಿದೆ. 'ಸೌಂದರ್ಯಲಹರಿ'ಯ ಭಾವಾನುವಾದವನ್ನು ಲಕ್ಷ್ಮೀಧರನ ವ್ಯಾಖ್ಯಾನದ ಜಾಡನ್ನೇ ಹಿಡಿದು ಮಾಡಿದ್ದಾರೆ. ಇಲ್ಲಿರುವ ತಾತ್ತ್ವಿಕ–ಚಿಂತನೆ, ರಹಸ್ಯದ ಅನುಸಂಧಾನ, ಕಾವ್ಯದ ಸ್ವಾರಸ್ಯ ಯಾವುದೂ ಕೆಡದಂತೆ ಕನ್ನಡದಲ್ಲಿಯೂ ಮೂಡಿಸಿದ್ದಾರೆ. ಇದೊಂದು ಸಾಹಸವೇ ಎನ್ನಬೇಕು.

ಈ ಕೃತಿಯ ಗದ್ಯಾನುವಾದಗಳು ಕೆಲವು ಬೆಳಕು ಕಂಡಿವೆ. 'ಶಿವ ಮಹಿಮ್ನಸ್ತವ'ದ ಪರಿಚಯವನ್ನು ನಮ್ಮ ಜನರಿಗೆ ಅಷ್ಟಾಗಿ ಈವರೆಗೆ ಯಾರೂ ಮಾಡಿಕೊಟ್ಟಿರಲಿಲ್ಲವೆನ್ನಿ. ಪುಟ್ಟಸ್ವಾಮಯ್ಯನವರೇ ಮೊದಲಿಗರು. ಆದರೆ 'ಸೌಂದರ್ಯಲಹರಿ'ಗೆ ಜತ್ಕಣಾಮಾತ್ಯನದೂ ಸೇರಿ ಹತ್ತಾರು ಕನ್ನಡ ಅನುವಾದಗಳಿವೆ. ಆದರೆ ಮೂಲ ಕಾವ್ಯದ ಧಾಟಿ, ಭಾವ, ಚಿಂತನಾನುಕೂಲ್ಯಗಳು ಗದ್ಯಾನುವಾದದಲ್ಲಿ ಪ್ರತಿಬಿಂಬಿತವಾಗುವುದು ಸುಲಭವಲ್ಲ. ಆದುದರಿಂದಲೇ ಪುಟ್ಟಸ್ವಾಮಯ್ಯನವರು ಕಾವ್ಯಕೃತಿಗೆ ಕಾವ್ಯದ ಅನುವಾದವನ್ನೇ ಕನ್ನಡಿ ಹಿಡಿದಿದ್ದಾರೆ. ಇದರಲ್ಲಿ ಔಚಿತ್ಯವುಂಟು, ಸಾರ್ಥಕ್ಯವುಂಟು. ಈ ವರೆಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾದಂಬರಿ, ಕಥೆ, ನಾಟಕಗಳಿಂದ ಹೆಸರಾದ ಸಾಹಿತಿಯ ಉದ್ಯಮ ಕವಿತೆಯಲ್ಲೂ ಎಷ್ಟು ಸಿದ್ಧಿಯನ್ನು ಪಡೆದಿದೆಯೆನ್ನುವುದು ತಿಳಿಯುತ್ತದೆ. ಜೀವಕ್ಕೆ ಸಂಸ್ಕಾರವಿದ್ದರೆ, ಹೃದಯದಲ್ಲಿ ಶ್ರದ್ಧೆಯಿದ್ದರೆ, ಮನಸ್ಸಿನಲ್ಲಿ ಉತ್ಸಾಹವಿದ್ದರೆ ಚೇತನದಲ್ಲಿ ಸತ್ತ್ವವಿದ್ದರೆ ಅಭಿವ್ಯಕ್ತಿಯ ಯಾವುದೇ ಪ್ರಕಾರವಾದರೂ ಸರಿಯೇ.

ಕನ್ನಡ ನಾಡಿನಲ್ಲಿ ಶ್ರೀವಿದ್ಯೆ ಹಿಂದೊಮ್ಮೆ ಹರಡಿಕೊಂಡಿದ್ದಿತು. ಇದರ ಬೆಳಕಿಗೆ ಕಾರಣರಾದ ಭಾಸ್ಕರರಾಯನೂ ಲೊಲ್ಲ–ಲಕ್ಷ್ಮೀಧರನೂ ಕನ್ನಡಿಗರೇ ಜಕ್ಕಣಾಮಾತ್ಯನಂತೂ ಸರಿಯೇ ಸರಿ. ಶ್ರೀಚಕ್ರಪೂಜೆಗೆ ಹೆಸರಾದ ಕಾಂಚೀಪುರದ ಕಾಮಕೋಟಿ ಪೀಠದ ಹಿಂದಿನೆಲ್ಲ ಸ್ವಾಮಿಗಳೂ ಕನ್ನಡ ನಾಡಿನವರು. ಈ ಉಪಾಸನೆಯನ್ನು ಕುರಿತು ಕನ್ನಡದಲ್ಲಿರುವಷ್ಟು ವಿಪುಲವಾದ ಸಾಹಿತ್ಯ ತೆಲುಗಿನಲ್ಲೂ ಇಲ್ಲ, ತಮಿಳಿನಲ್ಲೂ ಇಲ್ಲ. ಪುಟ್ಟಸ್ವಾಮಯ್ಯನವರ ಪ್ರಯತ್ನದ ಫಲವಾಗಿ ಶ್ರೀವಿದ್ಯೆಯಲ್ಲಿನ ಆಸಕ್ತಿ ನಮ್ಮ ಜನರಲ್ಲಿ ಮತ್ತೆ ಕೆರಳಲಿ ಎಂದು ಹಾರೈಸುತ್ತೇನೆ.

ದುಂದುಭಿ ಸಂವತ್ಸರದ ಆಶ್ವಯುಜ
ಕೃಷ್ಣ ಚತುರ್ದಶಿ — ಸಾಲಿಗ್ರಾಮ ಕೃಷ್ಣರಾಮಚಂದ್ರ ರಾವ್
ಜಯನಗರ, ಬೆಂಗಳೂರು — (ವಿದ್ಯಾಲಂಕಾರ ಪ್ರೊ.ಎಸ್.ಕೆ.ರಾಮಚಂದ್ರರಾವ್)

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಸ್ತಾವನೆ

ಸಂಸ್ಕೃತ ಭಾಷೆಯಲ್ಲಿ ಇರುವ ಅಪಾರವಾದ ಸಾಹಿತ್ಯವನ್ನು ನೇರವಾಗಿ ಅರಿತುಕೊಳ್ಳುವ ಅನುಕೂಲತೆ ಮತ್ತು ಮನಃಪ್ರವೃತ್ತಿಗಳು ಕಡಿಮೆಯಾಗುತ್ತಿರುವ ಇಂದಿನ ಕಾಲದಲ್ಲಿ ಭಾಷಾಂತರರೂಪದಲ್ಲಿ ಅದನ್ನು ಅವರವರ ಮಾತೃಭಾಷೆಯಲ್ಲಿ ಒದಗಿಸಿಕೊಡುವುದು ಒಂದು ಅವಶ್ಯ ಕರ್ತವ್ಯವಾಗಿದೆ. ಈ ದಿಶೆಯಲ್ಲಿ ಸಂಸ್ಕೃತ ಕಾವ್ಯ, ನಾಟಕ, ಶಾಸ್ತ್ರ ಮುಂತಾದವುಗಳು ಇತರ ಭಾಷೆಗಳಂತೆ ಕನ್ನಡದಲ್ಲಿಯೂ ಭಾಷಾಂತರವಾಗಿ ದೊರೆಯಲಿ ಎಂಬ ಉದ್ದೇಶದಿಂದ ಹಲವಾರು ಪ್ರಯತ್ನಗಳು ಆಗಿವೆ. ಪ್ರಸ್ತುತ ಕೃತಿಯಲ್ಲಿ ಅವುಗಳ ಮುಂದುವರಿಕೆಯೆಂದು ಹಿರಿಯ ಸಾಹಿತಿಗಳಾದ ಶ್ರೀ ಬಿ. ಪುಟ್ಟಸ್ವಾಮಯ್ಯನವರು ಶಿವಮಹಿಮ್ನಸ್ತವ ಮತ್ತು ಸೌಂದರ್ಯಲಹರಿ ಈ ಎರಡು ಸುವಿಖ್ಯಾತವಾದ ಸ್ತುತಿಕಾವ್ಯಗಳನ್ನು ಪದ್ಯರೂಪದಲ್ಲಿಯೆ ಅನುವಾದಿಸಿಕೊಟ್ಟಿದ್ದಾರೆ.

ಶಿವಮಹಿಮ್ನಸ್ತವವನ್ನು ಬರೆದ ಕವಿ ಪುಷ್ಪದಂತ ಗಂಧರ್ವನು ಕ್ರಿಸ್ತ ಪೂರ್ವ ೨ನೆಯ ಶತಮಾನದಷ್ಟು ಪ್ರಾಚೀನಕಾಲದಲ್ಲಿ ಇದ್ದಿರಬಹುದೆಂದು ಹೇಳಲಾಗಿದೆ. ಅವನು ಈ ಕೃತಿಯ ೩೨ ಪದ್ಯಗಳಲ್ಲಿ ಶಿವನ ಮಹಿಮೆಯನ್ನು ತರತರದಿಂದ ಕೊಂಡಾಡಿದ್ದಾನೆ. ಇವುಗಳ ಕನ್ನಡ ಅನುವಾದವನ್ನು ಚಂಪಕಮಾಲಾ, ಮತ್ತೇಭವಿಕ್ರೀಡಿತ, ಉತ್ಪಲಮಾಲಾ ಈ ಮುಂತಾದ ಅಕ್ಷರವೃತ್ತಗಳಲ್ಲಿ ಅನುವಾದಕರು ಕನ್ನಡಿಸಿದ್ದಾರೆ. ಚಂಪಕಮಾಲೆಯಲ್ಲಿರುವ ಅನುವಾದಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಅಕ್ಷರವೃತ್ತದಲ್ಲಿ ಅನುವಾದವೆಂದ ಮೇಲೆ ಶೈಲಿ ಪ್ರಸನ್ನವೂ ಅಕ್ಲಿಷ್ಟವೂ ಆದ ಹಳಗನ್ನಡವೇ ಆಗಿದೆ. ಪ್ರಾರಂಭದ ಪದ್ಯದಿಂದಲೇ ಇದಕ್ಕೆ ನಿದರ್ಶನಗಳನ್ನು ಕಾಣಬಹುದು : 'ಗಿರಿಶ, ಮಹೇಶ, ನಿನ್ನ ಮಹಿಮಾತಿಶಯಂ ಕೀಳರಿಮೆಗೆ ನಿಲ್ಕಲೆಂತು ?' ಹೀಗೆ ಅನುವಾದವು ಮೊದಲಾಗುತ್ತದೆ. ಇಲ್ಲಿ 'ಕೀಳರಿಮೆ' ಎಂಬ ಪದದ ಔಚಿತ್ಯವನ್ನು ಗಮನಿಸಬೇಕು. ಈಶ್ವರನ ಮಹಿಮಾತಿಶಯವನ್ನು ಬಣ್ಣಿಸಲು ತನ್ನ ಬುದ್ಧಿ, ತನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಳಿವಳಿಕೆ ಸಾಲವು ಎಂಬ ಕಾರಣದಿಂದ ಕವಿ ತನ್ನ ಶಕ್ತಿಯ ಪರಿಮಿತಿಯನ್ನು ತಿಳಿಸಿರುವನಲ್ಲದೆ ಅದರಿಂದ ಇಂದಿನ ಅರ್ಥದಲ್ಲಿಯೂ ತನ್ನಲ್ಲಿ ನುನೆ ಮಾಡಿದ ಕೀಳರಿಮೆಯನ್ನೂ ಸೂಚಿಸಿದ್ದಾನೆ. ಮಾನವರನ್ನು ವರ್ಣಿಸುವಾಗ ಒಮ್ಮೊಮ್ಮೆ ಶಕ್ತಿ ಸಾಲದೆ ಹೋಗಬಹುದು, ಆದರೆ ಕೀಳರಿಮೆ ಇರಬೇಕಾಗಿಲ್ಲ. ಎಂದಿಗೂ ತನ್ನ ವಾಣಿಗೆ ಸಾಧ್ಯವಿಲ್ಲ ಎಂಬ 'ಕೀಳರಿಮೆ' ಉಂಟಾಗುವುದು ಅಪಾರ ಮಹಿಮನಾದ ಶಿವನ ಸ್ತುತಿಯನ್ನು ಮಾಡಲು ತೊಡಗಿದಾಗ ಮಾತ್ರ. ಈ ಸ್ತವದ ೩೧ನೆಯ ಪದ್ಯದಲ್ಲಿ ಒಂದು ಅದ್ಭುತವಾದ ರೂಪಕದಿಂದ ಮಾತಿನ ಒಡತಿಯಾದ ಶಾರದಾದೇವಿಗೆ ಸಹ ಶಿವನ ಮಹಿಮೆಯನ್ನು ಪೂರ್ತಿಯಾಗಿ ವರ್ಣಿಸುವುದು ಸಾಧ್ಯವಿಲ್ಲ ಎಂಬುದನ್ನು ನಿರೂಪಿಸಿದ ಮಾನವಕವಿಗೆ ಕೀಳರಿಮೆ ಇರುವುದು ತೀರ ಸಹಜ. ಆ ಪದ್ಯದ ಅನುವಾದವು ಇಲ್ಲಿ ಹೀಗೆ ಬಂದಿದೆ :

'ಶರನಿಧಿ ಬಟ್ಟಲೆಂದೆನಿಸಲ್, ಅಂಜನ ಶೈಲಮೆ ಕಜ್ಜಲಂ, ಸ್ಫುರತ್ ।
ಸುರತರು ಶಾಖೆ ಲೇಖನಿ, ವಿಶಾಲ ಧರಿತ್ರಿ ಅಲೇಖ ಮಾಗಿರಲ್ ॥
ಸ್ಮರಹರ ನಿಷ್ಠೆಯಿಂದೆ ಪರಿಭಾವಿಸಿ ಶಾರದೆ ಸರ್ವಕಾಲಮುಂ ।
ಬರೆದೊಡಂ ಇನ್ನುಂ ತೀರದಿಪ ನಿಮ್ಮ ಮಹಾತ್ಮ್ಯೆಯೆ ವಿಶ್ವದಭ್ಭುತಂ' ॥

ಹೀಗೆ ಅನುವಾದಕರು 'ಶಿವಮಹಿಮ್ನಸ್ತವದ ಪದ್ಯಗಳನ್ನು ಕನ್ನಡ ನುಡಿಯ ಜಾಯಮಾನಕ್ಕೆ ಸರಿ ಹೊಂದುವಂತೆ, ಒಟ್ಟಿನಲ್ಲಿ ಸಮರ್ಪಕವಾಗಿ ಕನ್ನಡಿಸಿದ್ದಾರೆ. ಕನ್ನಡಿಸುವುದೆಂದರೆ ಕನ್ನಡ ಭಾಷೆಗೆ ಪರಿವರ್ತನ ಮಾಡುವುದು ಮಾತ್ರವಲ್ಲ, ಅದರ ಜಾಯಮಾನಕ್ಕೆ ಅನುಗುಣವಾಗಿ ಅನುವಾದಿಸುವುದು ಎಂಬುದರ ಅರಿವನ್ನು ಇಲ್ಲಿ ತೋರ್ಪಡಿಸಿದ್ದಾರೆ

ಈ ಪುಸ್ತಕದಲ್ಲಿಯ ಇನ್ನೊಂದು ಅನುವಾದವೆಂದರೆ ಶಂಕರಾಚಾರ್ಯರ 'ಸೌಂದರ್ಯಲಹರಿ' ಎಂಬ ಪ್ರಸಿದ್ಧವಾದ ಸ್ತುತಿ ಕಾವ್ಯದ್ದಾಗಿದೆ. 'ಶಿವ ಮಹಿಮ್ನಸ್ತವ'ದಲ್ಲಿ ಶಿವನ ಸ್ತುತಿಯಿದ್ದರೆ ಅವನ ಶಕ್ತಿ ಸ್ವರೂಪಿಣಿಯಾದ ಪಾರ್ವತಿಯ ಸ್ತುತಿ 'ಸೌಂದರ್ಯಲಹರಿ'ಯ ನೂರು ಪದ್ಯಗಳಲ್ಲಿ ಸೂಸಿ ಹರಿದಿದೆ. ಈ ಅನುವಾದವನ್ನು ಸಾಂಗತ್ಯದ ಧಾಟಿಯಲ್ಲಿ ಮಾಡಲಾಗಿದೆ. ಮೂಲದ ಒಂದು ಶ್ಲೋಕದ ಅಭಿಪ್ರಾಯವನ್ನು ಎರಡು ಸಾಂಗತ್ಯದ ನುಡಿಗಳಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಳವಡಿಸಿರುವುದು ಇದರ ವೈಶಿಷ್ಟ್ಯವಾಗಿದೆ. ಇಲ್ಲಿಯೂ ಶಂಕರಾಚಾರ್ಯರಂಥವರು ಕೂಡ ಅದೇ ಕೇಳರಿವೆಯ ಕಥನದಿಂದಲೇ ಸ್ತುತಿಯನ್ನು ಪ್ರಾರಂಭಿಸಿದ್ದಾರೆ: 'ಇಂತು ಹರಿಹರ ವಿರಿಂಚಾದಿ ದೇವತರೆಲ್ಲ ಪೂಜಿಪ ದೈವ ನೀನು, ಎಂತು ನರನು ಪೂರ್ವಪುಣ್ಯವಿಲ್ಲದೆ ನಿನ್ನ ನುತಿಸಿ ನಮಿಸೆ ಶಕ್ತನಹನು?' ಎಂಬಲ್ಲಿ ಕೂಡ ಇದೇ ಭಾವವು ಸೂಚಿತವಾಗಿದೆ: 'ಹಿಮಗಿರಿ ತನುಜಾತೆ, ನಿನ್ನ ಸೌಂದರ್ಯವ ತೂಗಿ ನೋಡುವೆನೆಂದು ಭ್ರಮಿಸಿ ಕಮಲಭವನು ಮೊದಲಾಗಿ ಕವೀಂದ್ರರು ಭ್ರಾಂತರಾದರು ಬಹು ಶ್ರಮಿಸಿ'. ಇಂಥ ಈ ಕೃತಿಯು ಅನುವಾದವು ಇನ್ನಿಷ್ಟು ಸರಳವೂ ಪ್ರಸನ್ನವೂ ಆದ ಶೈಲಿಯಲ್ಲಿ ಬಂದಿರುವುದರಿಂದ ಅರ್ಥವಾಹಿಯಾಗಿದೆ.

ನಾಟಕ,ಕಾದಂಬರಿ ಈ ಮುಂತಾದ ಪ್ರಕಾರಗಳಲ್ಲಿ ಹಲವಾರು ಮೇಲ್ಮಟ್ಟದ ಕೃತಿಗಳನ್ನು ರಚಿಸಿ ಆಧುನಿಕ ಕನ್ನಡ ಸಾಹಿತ್ಯವನ್ನು ಶ್ರೀಮಂತ ಗೊಳಿಸಿ ಜನಾನುರಾಗಿಗಳಾದ ಶ್ರೀ ಪುಟ್ಟಸ್ವಾಮಯ್ಯನವರು ಅನುವಾದ ಕಾರ್ಯದಲ್ಲಿಯೂ ಸಮರ್ಥರೆಂಬುದನ್ನು ಈ ಪುಸ್ತಕವು ತೋರಿಸಿ ಕೊಡುತ್ತದೆ. ಇದನ್ನು ಕನ್ನಡಿಗರು ತುಂಬು ಹೃದಯದಿಂದ ಸ್ವಾಗತಿಸುವರೆಂದೂ ಇದರ ವಾಚನ–ಮನನಗಳಿಂದ ತಮ್ಮ ಜ್ಞಾನ ಹಾಗೂ ಶ್ರದ್ಧೆಗಳನ್ನು ಹೆಚ್ಚಿಸಿಕೊಳ್ಳುವರೆಂದೂ ಹಾರೈಸುತ್ತೇನೆ.

ರಾಜಾಜಿನಗರ, ಬೆಂಗಳೂರು
೧೧–೧೧–೧೯೮೨

ರಂ. ಶ್ರೀ ಮುಗಳಿ
ಪ್ರಾಧ್ಯಾಪಕರು, ಕನ್ನಡ ಸಾಹಿತ್ಯದ
ವಿಖ್ಯಾತ ಇತಿಹಾಸಕಾರರು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲವು ಅಭಿಪ್ರಾಯಗಳು

ಮೈಸೂರು ವಿಶ್ವ ವಿದ್ಯಾನಿಲಯದ
ಕನ್ನಡ ಅಧ್ಯಯನ ಸಂಸ್ಥೆಯ
ನಿರ್ದೇಶಕ ಡಾ. ಹಾ. ಮಾ.ನಾಯಕ
ಕನ್ನಡ ಮತ್ತು ಭಾಷಾ ವಿಜ್ಞಾನ ಪ್ರಾಧ್ಯಾಪಕ

ಮಾನಸಗಂಗೋತ್ರಿ, ಮೈಸೂರು-೫೭೦ ೦೦೬
ದೂರವಾಣಿ : ೨೨೫೪೯
ನವಂಬರ್ 10, 1983

ಸಾರ್ಥಕ ಪ್ರಯತ್ನ

ಮಾನ್ಯರಾದ ಶ್ರೀ ಪುಟ್ಟಸ್ವಾಮಯ್ಯನವರಲ್ಲಿ ವಿಜ್ಞಾಪನೆಗಳು

ತಮ್ಮ ಕಾಗದ ಬಂದಿದೆ. ಪುಸ್ತಕದ ಕರಡು ಪ್ರತಿಯೂ ಬಂದಿದೆ. 'ಶಿವಮಹಿಮ್ನಸ್ತವ' ಮತ್ತು 'ಸೌಂದರ್ಯಲಹರಿ'ಗಳ ನಿಮ್ಮ ಅನುವಾದಗಳನ್ನು ಆಸಕ್ತಿ ಕುತೂಹಲಗಳಿಂದ ಓದಿದೆ. ನಮ್ಮ ಜನರಿಗೆ ಈ ಕೃತಿಗಳನ್ನು ಮುಟ್ಟಿಸುವ ನಿಮ್ಮ ಪ್ರಯತ್ನ ಸಾರ್ಥಕವಾದುದೆಂದು ಭಾವಿಸುತ್ತೇನೆ. ನಿಮ್ಮ ಸುದೀರ್ಘವಾದ ಸಾಹಿತ್ಯಸೇವೆಯನ್ನು ಗಮನಿಸುತ್ತ, ಮೆಚ್ಚುತ್ತ ಬಂದ ನಿಮ್ಮ ಅಭಿಮಾನಿಗಳಲ್ಲಿ ನಾನೂ ಒಬ್ಬ ಎಂದು ಹೇಳಿಕೊಳ್ಳಲು ನನಗೆ ಸಂತೋಷವಾಗುತ್ತದೆ.

ಅನಾರೋಗ್ಯದ ಈ ಇಳಿ ವಯಸ್ಸಿನಲ್ಲಿ ನೀವು ಇಂಥದೊಂದು ಕೆಲಸವನ್ನು ಕೈಗೊಂಡದ್ದು, ದುರ್ಗಾ ಬುಕ್ ಟ್ರಸ್ಟಿನ ಧಾರ್ಮಿಕ ಚಟುವಟಿಕೆಗಳನ್ನು ಹಮ್ಮಿಕೊಂಡದ್ದು ಅಭಿಮಾನದ ವಿಷಯ. ನಿಮ್ಮ ದುಡಿಮೆ ನನ್ನಂಥವರಿಗೆ ಸ್ಫೂರ್ತಿಯೂ, ಶಕ್ತಿಯೂ, ಆದರ್ಶಪ್ರಾಯವೂ ಆಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಮ್ಮ ಅನುವಾದ ನೇರವಾಗಿದೆ; ಸರಳವಾಗಿದೆ; ಸಂವಹನ ಗುಣವನ್ನು ಕಾಪಾಡಿಕೊಂಡಿದೆ. ಎಷ್ಟೋ ವರ್ಷಗಳಿಂದ ನಿಮ್ಮ ಮನಸ್ಸಿನಲ್ಲಿ ತುಂಬಿದ್ದ ತುಡಿದಿದ್ದ ಈ ಕೆಲಸ ಈಗ ಈ ರೂಪತಾಳಿದೆ. ಈ ಪ್ರಕ್ರಿಯೆಯೇ ಅನುವಾದದ ಯಶಸ್ಸಿಗೆ ಕಾರಣವಾಗಿದೆ. ಗೌರವಗಳೊಡನೆ,

ತಮ್ಮ ವಿಶ್ವಾಸದ
ಹಾ.ಮಾ.ನಾಯಕ

ಪ್ರಾಧ್ಯಾಪಕ ಕೆ. ಕೃಷ್ಣಮೂರ್ತಿ
ಮುಖ್ಯಸ್ಥರು
ಸಂಸ್ಕೃತ ವಿಭಾಗ

ಕರ್ನಾಟಕ ವಿಶ್ವವಿದ್ಯಾನಿಲಯ
ಧಾರವಾಡ
೧೨-೧೧-೧೯೮೨

ಭಾಷೆಯ ಸದುಪಯೋಗ

ಸನ್ಮಾನ್ಯರೂ ವಿದ್ವತ್ಕವಿಗಳೂ ಆದ ಶ್ರೀ ಬಿ. ಪುಟ್ಟಸ್ವಾಮಯ್ಯನವರು ಸರಲ-ಸುಂದರವಾಗಿ ಕನ್ನಡ ಛಂದೋಬಂಧಗಳಲ್ಲಿ ಅನುವಾದಿಸಿರುವ 'ಶಿವ ಮಹಿಮ್ನಸ್ತವ' ಹಾಗು 'ಸೌಂದರ್ಯಲಹರಿ' ಸ್ತೋತ್ರಗಳನ್ನು ಅಲ್ಲಲ್ಲಿ ಓದಿ ನನಗುಂಟಾಗಿರುವ ಆನಂದದ ಅಭಿವ್ಯಕ್ತಿಗಾಗಿ ಈ ಎರಡು ಮಾತು.

ಭಾಷೆಗೆ ಅನೇಕ ಉಪಯೋಗಗಳುಂಟು. ವ್ಯಾಪಾರಕ್ಕೆ, ನಿತ್ಯವ್ಯವಹಾರಕ್ಕೆ, ಕೋಪ-ತಾಪಗಳ, ನೋವು-ನಲಿವುಗಳ, ರಾಗ-ವಿರಾಗಗಳ ಅಭಿವ್ಯಕ್ತಿಗೆ ಅದನ್ನು ಬಳಸದವರೇ ಇಲ್ಲ. ಅದನ್ನು ಸೌಂದರ್ಯ ದೃಷ್ಟಿಯಿಂದ ಬಳಸಬಲ್ಲಾತನೇ ಕವಿ; ಆ ಚೆಲುವನ್ನರಿತು ಆಸ್ವಾದಿಸಬಲ್ಲವರೇ ರಸಿಕರು. ಸಹೃದಯರಾದ ರಸಿಕರ ಮೆಚ್ಚುಗೆಯಿಂದ ಕವಿಗೆ ಕೀರ್ತಿ, ಸಂಪತ್ತು, ಸನ್ಮಾನ ಅಜರಾಮರವಾಗಿ ಲಭಿಸುತ್ತದೆ. ವಿಶ್ವದ ಎಲ್ಲ ಭಾಷೆಗಳಲ್ಲೂ ಕಾವ್ಯಕ್ಕೆ ಇದಕ್ಕಿಂತ ಹೆಚ್ಚಿನ ಸ್ಥಾನವಿಲ್ಲ. ಆದರೆ ಸಂಸ್ಕೃತ ಭಾಷೆಯ ಅಪೂರ್ವ ವೈಶಿಷ್ಟ್ಯವೆಂದರೆ ಭಾಷಾಸೌಂದರ್ಯಕ್ಕೆ ಇದಕ್ಕೂ ಹೆಚ್ಚಿನ ಗುರಿಯನ್ನು ಸಾಧಿಸಿರುವುದೇ. ಭಗವಂತನನ್ನು ಭಕ್ತಿಯಿಂದ ಸಾಕ್ಷಾತ್ಕರಿಸಿಕೊಳ್ಳಲು, ಸಂಕಟಗಳಿಂದ ಪಾರಾಗಲು, ಐಹಿಕ ಆಮುಷ್ಮಿಕ ಇಷ್ಟಾರ್ಥಗಳನ್ನು ಸಾಧಿಸಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾಷೆ ಬಳಕೆಯಾದಾಗ "ಸ್ತೋತ್ರ"ವಾಗುತ್ತದೆ. ಅದೇ ಕ್ರಾಂತದರ್ಶಿಗಳಾದ ಋಷಿಗಳ ಮುಖದಿಂದ ಹೊಮ್ಮಿ "ವೇದಮಂತ್ರ"ವೂ ಆಗುತ್ತದೆ. ಹೀಗೆ ಭಾಷೆಗೊಂದು ದಿವ್ಯ ಆಯಾಮವಿರುವುದರ ಅರಿವು, ಸಂಸ್ಕೃತದ ಅಸಾಮಾನ್ಯ ಮಹತ್ವಕ್ಕೆ ದ್ಯೋತಕ. ಈ ಅರಿವಿನಿಂದಲೇ ಬಾಣ-ಮಯೂರ-ಕಾಳಿದಾಸ ಮುಂತಾದ ಮಹಾಕವಿಗಳು, ಶಂಕರ ಭಗವತ್ಪಾದರೇ ಮೊದಲಾದ ಆಚಾರ್ಯ ವರ್ಯರು, ನಾನಾ ಪುರಾಣ ನಿರ್ಮಾಪಕರಾದ ವ್ಯಾಸಾದಿಗಳು "ಸ್ತೋತ್ರ" ವೆಂಬ ಸಾಹಿತ್ಯ ಪ್ರಕಾರವನ್ನು ಪರಿಪರಿಯಿಂದ ಪರಿಷ್ಕರಿಸಿದ್ದಾರೆ. ಅಂತೆಯೇ ಪರಾವಾಕ್ಶಿನ ಅಂತರ್ಜ್ಯೋತಿಯನ್ನು ಬೆಳಗಿಸಬಲ್ಲ ಹೊಸಹೊಸ ಛಂದೋಬಂಧ ಗಳನ್ನು ಆವಿಷ್ಕರಿಸಿದ್ದಾರೆ. ಸ್ತೋತ್ರಗಳ ಮಹಿಮೆ ಮಂತ್ರಾತ್ಮಕವಾಗಿರುತ್ತದೆ; ಎಂದರೆ ಅಲ್ಲಿ ತಂತ್ರಶಾಸ್ತ್ರದಲ್ಲಿ ಹೇಳುವ ಬೀಜಾಕ್ಷರಗಳ ಸಾರ್ಥಕ ಸಂಪ್ರಯೋಗವಿರುತ್ತದೆ. 'ಓಂ' ಎಂಬ ಪ್ರಣವಾಕ್ಷರ ಮಂತ್ರಾತ್ಮಕವಾದ್ದರಿಂದ ಅದರ ಅನುವಾದ ಅಶಕ್ಯ. ವೇದಮಂತ್ರಗಳನ್ನು ಮತ್ತೊಂದು ಭಾಷೆಯಲ್ಲಿ ಅನುವಾದಿಸಿ ಯಾರೂ ಅವುಗಳನ್ನು ಯಜ್ಞಾದಿಕರ್ಮಗಳಲ್ಲಿ ಬಳಸುವಂತಿಲ್ಲ.

ಆದ್ದರಿಂದ ವೇದಾಧ್ಯಯನದ ನಿಷ್ಠೆಯ ಅಗತ್ಯವಿಲ್ಲದ ಸಾಮಾನ್ಯರ ಬಾಳಿಗೂ ಭಗವಂತನ ಅನುಗ್ರಹವನ್ನು ಭಾಷಾಮಾಧ್ಯಮದಿಂದ ದೊರಕಿಸಿ ಕೊಡುವ ಮಹೋನ್ನತ ಆದರ್ಶದಿಂದ ಮಹಾಕವಿಗಳೂ ಮಹಾ ಆಚಾರ್ಯರೂ ಹೊಸ ಬಗೆಯ ಛಂದಸ್ಸಿನ ಸಂಪ್ರದಾಯಗಳನ್ನು ಅಕ್ಷರ ವೃತ್ತಗಳಲ್ಲೂ ಮಾತ್ರಾವೃತ್ತಗಳಲ್ಲೂ ಬಳಕೆಗೆ ಹಿಂದೆಯೇ ತಂದರು. ಆಯಾ ಛಂದಸ್ಸು ಗಳಿಗೆ ದಿವ್ಯಶಕ್ತಿ ಗುಪ್ತವಾಗಿರುತ್ತದೆ. ವೇದಮಂತ್ರಗಳೂ ಛಂದೋರೂಪವೇ! ಭಾಷೆ ಬೇರೆಯಾದರೆ ಆಡ್ಡಿಯಿಲ್ಲ; ಭಾವವುಳಯಬೇಕು. ಆ ಸ್ತೋತ್ರದ ಶಕ್ತಿ ಲುಪ್ತವಾಗದೆ ಭಾಷಾಂತರದಲ್ಲಿಯೂ ಉಳಿಯಬೇಕೆಂಬ ಆಸ್ಥೆಯುಳ್ಳ ವರಿಗೆ ಛಂದಸ್ಸೊಂದೇ ಮುಖ್ಯ ಮಾಧ್ಯಮ. ಆ ಛಂದಸ್ಸನ್ನು ಬಿಟ್ಟು ಬರೆದರೆ 'ಅಬದ್ಧ'; ಪ್ರಬುದ್ಧರಿಗೆ ಅದು ಅಗ್ರಾಹ್ಯ.

ಅಚ್ಚ ಕನ್ನಡದ ನುಡಿಗಟ್ಟು

ಇದನ್ನು ಬಲ್ಲವರು ಕನ್ನಡದ ಸ್ತೋತ್ರ ರಚನಾ ಪರಂಪರೆಯನ್ನು ಪರಿಶ್ರಮದಿಂದ ಅನುಶೀಲನಮಾಡಬೇಕಾಗುತ್ತದೆ. ಚಂಪೂಕಾವ್ಯಗಳಲ್ಲಿ ನಾನಾ

CC-O. In Public Domain. Digitized by eGangotri

ಕಂದ-ವೃತ್ತಗಳಲ್ಲಿ ಸ್ತೋತ್ರಗಳು ಬಂದರೂ ಹರಿಹರನಂತೆ ಸ್ತೋತ್ರ 'ಶತಕ' ಗಳನ್ನು ಬರೆದವರು ಸಾಮಾನ್ಯವಾಗಿ "ಖ್ಯಾತ ಕರ್ನಾಟಕ"ಗಳೆನಿಸಿದ 'ಮತ್ತೇಭ ವಿಕ್ರೀಡಿತ', 'ಚಂಪಕಮಾಲಾ', 'ಉತ್ಪಲಮಾಲಾ' ವೃತ್ತಗಳನ್ನೇ ಬಳ ಸಿರುವುದನ್ನು ನೋಡುತ್ತೇನೆ. ಮುಂದೆ ಷಟ್ಪದಿ, ತ್ರಿಪದಿ-ಸಾಂಗತ್ಯಗಳಲ್ಲೂ ಸ್ತೋತ್ರ ಸಾಹಿತ್ಯ ಬೆಳೆದು ಜನಪ್ರಿಯವಾಗಿದೆ. ಇಂದಿನ ಸಾಹಿತ್ಯ ಪ್ರಯೋಗ ಗಳಲ್ಲಿ ಧಾರ್ಮಿಕ ಭಾವನೆ ಶೂನ್ಯಪ್ರಾಯವಾಗಿರುವುದರಿಂದ ಪೂರ್ವಪರಂಪರೆಯ ಛಂದೋರಚನೆಗಳ ಸೊಬಗಿಗೆ ನಾವು ಎರವಾಗುವಂತಹ, ಕಿವುಡಾಗುವಂತಹ, ದುರವಸ್ಥೆಯೊದಗಿದೆ. ಆದರೆ ಆಂಧ್ರ-ಕೇರಳಗಳಲ್ಲಿ ಹೀಗಾಗಿಲ್ಲ. ಲೌಕಿಕ ಕಾವ್ಯಗಳನ್ನೂ ಹಿಂದಿನ ಛಂದಸ್ಸುಗಳಲ್ಲಿ ಬರೆದು ಜನರ ಹೃದಯವನ್ನು ಮಿಡಿಯುವ ಕವಿಪರಂಪರೆ ಅಲ್ಲಿ ಇನ್ನೂ ಊರ್ಜಿತವಾಗಿದೆ.

ಪ್ರಾಚೀನ ಪರಂಪರೆಯ ಛಂದೋರಚನೆಗಳನ್ನು ನವೋನವವಾಗಿ ಸಜೀವ ಸ್ಪಂದನೆಯಿರುವಂತೆ ರಚಿಸುವ ಕಲೆ ಈ ಲೇಖಕರಿಗೆ ದೈವಕೃಪೆಯಿಂದ ಸಿದ್ಧಿ ಸಿದೆ. ಇದು ದೈವದತ್ತವಾದ ಪ್ರತಿಭಾಶಕ್ತಿ. ಇದನ್ನು ಇವರ ಬಹುಶ್ರುತ ಅಧ್ಯಯನ ಉಜ್ವಲತರವನ್ನಾಗಿ ಮಾಡಿದೆ. 'ಮಹಿಮ್ನ ಸ್ತೋತ್ರ', 'ಸೌಂದರ್ಯ ಲಹರಿ' ಎಂಬೂ ಸ್ತೋತ್ರಗಳನ್ನು ಕುರಿತು ಹಿಂದಿನ ಮಹನೀಯರ ವ್ಯಾಖ್ಯಾನ ಗಳಂತೆ ಇಂದಿನ ಸಂಶೋಧಕರ ವಿಚಾರಗಳನ್ನೂ ಇವರು ಆಳವಾಗಿ ಅಭ್ಯಾಸ ಮಾಡಿರುವುದನ್ನು ಇವರ ಟಿಪ್ಪಣಿಗಳು ಕನ್ನಡಿಸುತ್ತವೆ. ಛಂದೋಬಂಧದ ಅಂದ, ಗಹನ ವಿಚಾರಗಳ ಸನ್ನಿವೇಶದಲ್ಲೂ ಅಪಾರ್ಥಕ್ಕೆಡೆಯಿಲ್ಲದಂತಹ, ವಿವೇಕಪೂರ್ಣ ಪದಪ್ರಯೋಗಪ್ರಾವೀಣ್ಯ-ಎಲ್ಲಕ್ಕಿಂತ ಹೆಚ್ಚಾಗಿ, ಅಚ್ಚಕನ್ನಡ ಕ್ಕೊಪ್ಪುವ ನುಡಿಗಟ್ಟು ಈ ಮೂರೂ ಸಾಮರಸ್ಯಪಡೆದು ಕನ್ನಡ ಸ್ತೋತ್ರ ಸಾಹಿತ್ಯಕ್ಕೆ ಒಂದು ಹೊಸ ಅಯಾಮವೇ ತೆರೆಯುವಂತೆ ಮಾಡಿವೆ. ಪುಷ್ಪ ದಂತನ ಪ್ರಾಸಾದಿಕವಾಣಿಯಾಗಲಿ, ಆಚಾರ್ಯ ಶಂಕರರ ಸಿದ್ಧವಾಕ್ಪ್ರಕಾಶ ವಾಗಲಿ ಸಾಮಾನ್ಯರ ಈಡಲ್ಲ. ಅದನ್ನು ಅತ್ಯಂತ ಯಶಸ್ವಿಯಾಗಿ ಕನ್ನಡದಲ್ಲಿ ಪಡಿಮೂಡಿಸಿರುವುದಕ್ಕಾಗಿ ಮಾನ್ಯಲೇಖಕರು ಸತ್ಸಂಪ್ರದಾಯದಲ್ಲಿ ಆಸ್ಥೆ ಯುಳ್ಳ ಎಲ್ಲರ ಅಭಿನಂದನೆಗೂ ಪಾತ್ರರಾಗಿದ್ದಾರೆ. ಇದನ್ನು ಶ್ರದ್ಧೆಯಿಂದ ಪಠಿಸಿ ತಮ್ಮ ಬಾಳನ್ನು ಸಾರ್ಥಕಗೊಳಿಸುವ ಕಾರ್ಯ ಕನ್ನಡ ಸಜ್ಜನರದು. ಪಾಶ್ಚಾತ್ಯ ಭೌತಿಕವಾದಕ್ಕೆ ಹೃದಯವನ್ನು ಮಾರಿಕೊಳ್ಳದ ಸಜ್ಜನರು ಇನ್ನೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಇದ್ದಾರೆ. ಅವರ ಸೌಜನ್ಯದಿಂದ ಇಂತಹ ಶುಚಿ-ಸಾಹಿತ್ಯದ ಸುರುಚಿ ಬೆಳೆಯುಲೆಂದು ಹಾರೈಸುತ್ತೇನೆ. 'ಸೌಂದರ್ಯಲಹರಿ'ಯನ್ನು ಸಾಂಗತ್ಯದ ಥಾಟಿಯಲ್ಲಿ ತರುವುದೆಂದರೆ ಅದೊಂದು ಅದ್ಭುತ ಸಿದ್ಧಿಯೇ ಎಂದು ನನ್ನ ನಿಚ್ಚಳ ಅಭಿಪ್ರಾಯ. ಈ ಸ್ತೋತ್ರಗಳು ಫಲಕಾರಿಯಾಗಲು ನಿರಂತರ ಪಾರಾಯಣ ಅಗತ್ಯ; ಅವು ಹೃದ್ಗತವಾಗಲು ಈ ಛಂದೋರೂಪ ತುಂಬಾ ಸಹಾಯಕವಾಗಿದೆ; ಶಾಸ್ತ್ರೀಯಸಂಗೀತಕ್ಕೆ ಒಳವಡಿಸಿ ಹಾಡುವುದಕ್ಕೂ ಈ ಕನ್ನಡರೂಪ ಉತ್ತಮವಾಗಿದೆ.

ಕೆ. ಕೃಷ್ಣಮೂರ್ತಿ

—

ಡಾ॥ ಎಸ್. ಎಂ. ವೃಷಭೇಂದ್ರಸ್ವಾಮಿ
ಪ್ರಾಚಾರ್ಯರು ಮತ್ತು ಮುಖ್ಯಸ್ಥರು
ಕನ್ನಡ ಅಧ್ಯಯನಪೀಠ

ಕರ್ನಾಟಕ ವಿಶ್ವವಿದ್ಯಾನಿಲಯ,
ಧಾರವಾಡ.
೧೫-೧೨-೮೨

ಮೂಲದಷ್ಟೇ ಗಂಭೀರ ಅನುಭವ

ಪ್ರತಿಭಾ ಸಂಪನ್ನರೂ, ಸಮರ್ಥ ಸಾಹಿತಿಗಳೂ, ಪ್ರಸಿದ್ಧ ಪಂಡಿತರೂ ಆದ ಪೂಜ್ಯ ಶ್ರೀ ಬಿ. ಪುಟ್ಟಸ್ವಾಮಯ್ಯನವರು ಈ ಅಪರ ವಯಸ್ಸಿನಲ್ಲಿಯೂ ನಿತ್ಯಕ್ರಿಯಾಶೀಲರಾಗಿ ಸಂಸ್ಕೃತಿ, ಸಾಹಿತ್ಯ ಕ್ಷೇತ್ರದಲ್ಲಿ ನಿರಂತರ ಕಾರ್ಯಗೈಯುತ್ತಿರುವುದು ಒಂದು ಆಶ್ಚರ್ಯವೂ ಆದರ್ಶವೂ ಆದ ಸಂಗತಿ. ಪರಿಣತ ಅನುಭವ, ಪರಿಣತ ಪಾಂಡಿತ್ಯ, ಹಾಗೂ ನಿಷ್ಠೆಯ ಧರ್ಮ ಪ್ರೀತಿಯ ತ್ರಿವಿಧೋದ್ದೇಶಗಳಿಂದ ಪ್ರೇರಿತವಾದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಕಾದಂಬರಿಗಳು, ಹಾಗೂ ಸಾಹಿತ್ಯ ಸಂಸ್ಕೃತಿಯ ಸೌರಭವನ್ನು ಬಿಂಬಿಸುವ ಸಂಸ್ಕೃತಿ-ಧರ್ಮ-ತತ್ವ-ವಿವೇಚನೆಯ ಕೃತಿಗಳಿಂದ, ರಂಗದ ಮೇಲೆ ವಿಜೃಂಭಿಸಿದ ಪ್ರಭಾವಶಾಲೀ ನಾಟಕಗಳಿಂದ, ಅಂತೆಯೇ, ಸಮಕಾಲೀನ ಸಮಾಜದ ಅಗು ಹೋಗುಗಳನ್ನು ಪ್ರತಿನಿಧಿಸುವ ಬರಹಗಳಿಂದ ಪೂಜ್ಯ ಶ್ರೀ ಪುಟ್ಟಸ್ವಾಮಯ್ಯನವರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮೊದಲನೆಯ ಪಂಕ್ತಿಯ ಬರಹಗಾರರಲ್ಲೊಬ್ಬರಾಗಿದ್ದಾರೆ. ಕೇಂದ್ರ ಸಾಹಿತ್ಯ ಅಕೆಡೆಮಿಯ ಗೌರವ ಶ್ರೀಯುತರ ಮಹತ್ವದ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಧನೆಗಳ ಪ್ರತೀಕ. ಸೃಜನಶೀಲವಾದ ಪ್ರತಿಭೆ, ಬಹು ಶ್ರಮಾರ್ಜಿತವಾದ ಪಾಂಡಿತ್ಯ, ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುವ ಸಹೃದಯಗಳ ಮುಪ್ಪುರಿ ಶಕ್ತಿಯ ಕನ್ನಡಿಗರಲ್ಲಿ ಶ್ರೀ ಬಿ. ಪುಟ್ಟಸ್ವಾಮಯ್ಯನಂಥವರು ಬಹಳ ಜನರಿಲ್ಲ. 86ನೆಯ ವಯಸ್ಸನ್ನು ದಾಟಿ ನಿಂತ ಶ್ರೇಯುತರು ಶತಾಯುಷಿಗಳಾಗಿ ಬಾಳಲೆಂಬುದು ಕನ್ನಡಿಗರೆಲ್ಲರ ಹಾರೈಕೆ.

ಈಚೆಗೆ ಅವರು ಶಿವಮಹಿಮ್ನಸ್ತವ ಮತ್ತು ಸೌಂದರ್ಯಲಹರಿ ಎಂಬ ಜಗತ್ ಪ್ರಸಿದ್ಧ ಕೃತಿಗಳನ್ನು ಸರಳ ಭಾವಾನುವಾದ ಮತ್ತು ಮೂಲದ ಕನ್ನಡ ಅನುವಾದಗಳ ರೂಪದಲ್ಲಿ ಕನ್ನಡಿಗರಿಗೆ ನೀಡುತ್ತಿರುವುದು ಹೆಮ್ಮೆಯ ವಿಷಯ. ಸಂಸ್ಕೃತ ಪದ್ಯ ಶ್ಲೋಕಗಳನ್ನು ಕನ್ನಡಕ್ಕೆ ಅನುವಾದಿಸುವಲ್ಲಿ ಶ್ರೀ ಪುಟ್ಟಸ್ವಾಮಯ್ಯನವರ ವಿಶೇಷ ಪ್ರತಿಭೆ ಹಾಗೂ ಅವುಗಳ ಸರಳ ವ್ಯಾಖ್ಯಾನ ಮತ್ತು ಟಿಪ್ಪಣಿ (ಇವು ಭಾವಾನುವಾದದಿಂದ ಬೇರೆಯೇ ಆದ ಅಡಿಟಿಪ್ಪಣಿ ಅಥವಾ ಕುಡಿ ಟಿಪ್ಪಣಿಗಳಾಗಿ ಬಂದಿದ್ದರೆ ಚೆನ್ನಾಗಿತ್ತು) ನೀಡಿರುವಲ್ಲಿ ಅವರ ಸಹೃದಯತೆ ವ್ಯಕ್ತವಾಗುತ್ತಿದೆ. ಅಲ್ಲಲ್ಲಿ ಕಲ್ಪನೆ, ವಿಚಾರಗಳ ಸ್ಪಷ್ಟತೆಗಾಗಿ ನೀಡಿದ ವಿವರಣೆ ಅವರ ಅಭ್ಯಾಸ ಮನೋಭಾವ, ನಿರ್ದುಷ್ಟ ಪಾಂಡಿತ್ಯವನ್ನು ತೋರಿಸುತ್ತಿವೆ. 'ಶ್ರೀ ಲಲಿತಾ ಸಹಸ್ರ ನಾಂಗತ್ಯ'ವನ್ನು ಓದಿದ ಸುಸಂಸ್ಕೃತ ಕನ್ನಡಿಗರಿಗೆ ಇದೀಗ ಈ ಭಕ್ತಿ–ಭಾವ–ರಸರಂಜಿತ ಸ್ತೋತ್ರ ಕೃತಿ ಇನ್ನೊಂದು ಅಂಥ ಮಹತ್ವದ ಕೃತಿ. ಸುಪ್ರಸಿದ್ಧ ಶಿವಕವಿ ಪುಷ್ಪದಂತನ 'ಶಿವಮಹಿಮ್ನ ಸ್ತೋತ್ರ' ಭಾರತೀಯ ತತ್ವ ರಸಸೌಂದರ್ಯ ಕ್ಷೇತ್ರದಲ್ಲಿ ಜಗತ್‌ಪ್ರಸಿದ್ಧವಾಗಿದೆ. ಪಾಶ್ಚಾತ್ಯರು ನಿಬ್ಬೆರಗಾಗಿ ಕಂಡಿರುವ ಈ ಕೃತಿ ಕನ್ನಡದಲ್ಲಿ ಈಗಾಗಲೇ ಬಂದಿದ್ದರೂ ಸದ್ಯದ ಕೃತಿ ಶ್ರೀಸಾಮಾನ್ಯರಿಗೆ ಪ್ರಿಯವಾಗುವ ಅನುವಾದ–ವ್ಯಾಖ್ಯಾನವಾಗಿ ಬಂದಿರುವುದು ಅತ್ಯಂತ ಗಮನಾರ್ಹ ಸಂಗತಿ.

"ಗಗನವ ಕುಂಬಿ ತಾರಕೆಗಳಾದವು ನಿಮ್ಮ ಜಟಾಂತರಾಳದಿಂ।
ದೊಗೆದಿಹ ವಾರಿಬಿಂದು ಲಘುದಾರೆಯೆ ಬುದ್ಬುದಮಂತಿಳಾತಲಂ॥
ಸಗರಜವಾರಿ ಸಂಗಮನೊಳಾಯ್ತು ಜಲಾವೃತ ದೀಪಜಾಲಮಿ।
ವಿಗಡೆಮಹಾದ್ಭುತಂ ಗಿರಿಶ, ನಿಮ್ಮ ಪದದ್ವಯ ಘರ್ಷಣೋದ್ಭವಂ" ॥

ಇಲ್ಲಿನ ವಿಶ್ವವ್ಯಾಪಿ ದೃಷ್ಟಿ, ಭವ್ಯ ಕಲ್ಪನೆ ಮೂಲದಷ್ಟೇ ಗಂಭೀರವಾಗಿ ಕನ್ನಡ ಅನುವಾದದಲ್ಲಿ ಮೂಡಿ ನಿಂತಿದೆ. ಅಂತೆಯೇ ಪದ್ಯ 12ರಲ್ಲಿ ಚಿತ್ರಿತ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿರುವ 'ರಜತಾದ್ರಿಯನೆತ್ತುವೆನೆಂಬ ದೈತ್ಯಸಾಹಸಕೆ ದಶಾಸ್ಯಉಜ್ಜಗಿಸೆ' ಎಂಬಲ್ಲಿನ ಮನೋಭಾವದ ಚಿತ್ರಣ, ಪದ್ಯ 31ರ 'ಶರಧಿ ಬಟ್ಟಲೆಂದೆನಿಸೆ' ಎಂಬ ಮಹೋನ್ನತ ವರ್ಣನೆ ಕ್ರಿ.ಪೂ. ಯುಗದ ಪುಷ್ಪದಂತನ ಶಿವಭಕ್ತಿಯ ಪ್ರತೀಕವಾಗಿದೆ. ಹೆಜ್ಜೆ ಹೆಜ್ಜೆಗೂ ಶಿವಮಹಿಮ್ನಸ್ತೋತ್ರದ ಸಾಲುಸಾಲುಗಳ ಗಂಗಾ ಪ್ರವಾಹದಲ್ಲಿ ಇಂಥ ಭವ್ಯ ಬಂಧುರ, ಕಲ್ಪನಾಚಿತ್ರಗಳ ಹಿಮಪರ್ವತ ಗಳು ಸಂಚರಿಸುವ ಭವ್ಯ ದೃಶ್ಯ ಭಕ್ತಿ-ಭಾವ ತುಂಬಿದ ಸಹೃದಯನಲ್ಲಿ ಮೂಡದಿರದು.

ಶ್ರೀ ಶಂಕರಾಚಾರ್ಯರ 'ಸೌಂದರ್ಯಲಹರಿ' ಕನ್ನಡ ಅನುವಾದವನ್ನು ಲಕ್ಷ್ಮೀಧರವ್ಯಾಖ್ಯಾನದೊಡನೆ ನೀಡಿರುವುದು ಶ್ರೀ ಪುಟ್ಟಸ್ವಾಮಯ್ಯನವರ ಪ್ರತಿಭೆಗೆ ಸಾಕ್ಷಿ. 'ಸೌಂದರ್ಯಲಹರಿ'ಯ ವಿಚಾರ ಲಹರಿ, ಆರ್ಥಲಹರಿ, ಕಲ್ಪನಾ ಲಹರಿಗಳ ತ್ರಿವಿಧ ಸೌಂದರ್ಯಲಹರಿ, ಸಹೃದಯನನ್ನು ಭಕ್ತಿ ಪ್ರವಾಹದಲ್ಲಿ ಮಿಯಿಸುತ್ತದೆ. ವಿಶ್ವದ ಮೂಲಶಕ್ತಿ ಪಾರ್ವತಿ. ಶಿವ-ವಿಷ್ಣು-ರುದ್ರರು ಪಾರ್ವತಿಯ ಶಕ್ತಿಸ್ಫುರಣೆಯಿಂದ ಪ್ರಾಜ್ವಲ್ಯರಾದವರು.

"ಜರಮೃತ್ಯುಗಳ ಭೀತಿ ಹರಿಸುವಮೃತಪಾನ
ದೊರಕಿದರೇನು ? ವಿಫಲವು ?
ಸುರಪತಿ ಬ್ರಹ್ಮ ಕುಬೇರಾದಿ ದಿವಿಜರು
ಅವಧಿ ಮುಗಿಯೆ ಅಳಿವವರು,
ಕಾಲಕೂಟದ ನಂಜನುಂಡ ನಿನ್ನಯ ಪತಿ
ಕಾಲಕಲ್ಪನೆಯ ಭೇದಿಸುತೆ
ಲೀಲಾಜಾಲದೆ ಮೃತ್ಯುಂಜಯನೆನಿಸಿರಲದು
ದೇವಿ, ನಿನ್ನೋಲೆಯ ಮಹಿಮೆ"

CC-O. In Public Domain. Digitized by eGangotri

"ರವಿ ಶಶಿ ಸ್ತನಯುಗವೆನೆ ನೀನೆ ಶಿವನ ಶ–
ರೀರವೆಂಬರು ತತ್ವವಿದರು,
ನವಸಂಖ್ಯಾವರಣದೊಳೆಸವ ಆನಂದ ಭೈ
ರವನಾತ್ಮಸತ್ವ ನೀನೆನಲು,
ಸಮರಸಾನಂದದ ಭಾವದೊಳೊಂದಾಗಿ
ಬೆರೆದಿರೆ ನಿಮ್ಮ ಮಹತ್ವ
ಸಮನಿಸದೆಂದೆಂದು ಶೇಷಶೇಷಿಭಾವ.
ಕಲ್ಪನೆಗುಂಟೆ ಆಸ್ತಿತ್ವ ?"

"ನೀನೆ ಮನವು, ನೀನೆ ವ್ಯೋಮ, ವಾಯುವು ನೀನೆ
ವಾಯುಸಾರಥಿ ಅಗ್ನಿ ನೀನು
ನೀನೆ ಜಲವು, ಭೂಮಿ ನೀನು, ಇವೆಲ್ಲವು
ನಿನ್ನ ಪರಿಣಾಮ ರೂಪಗಳು–
ನೀನಲ್ಲದನ್ಯಮಿನ್ನೊಂದಿಲ್ಲ ವಿಶ್ವದೆ
ನೀನೆ ಸರ್ವವು ಶಿವದಯಿತೆ,
ನೀನೆ ಚಿದಾನಂದ ರೂಪಿಣಿ, ವಿಶ್ವ ವ–
ಪುಷ್ಮತಿ ಪರಿಣಮಿಸಿರುವೆ"

ಮುಂತಾದ ಸಾಲುಗಳಲ್ಲಿ ಮೂಡಿನಿಂತಿರುವ ವಿಶ್ವಶರೀರಿ ಶಿವೆಯ ಮಹಿಮೆಯನ್ನು ಸೌಂದರ್ಯಲಹರಿ ಬಣ್ಣಿಸುತ್ತದೆ. ಕಲ್ಪನಾವೈಭವವನ್ನು ಸೌಂದರ್ಯ ದೃಷ್ಟಿಯನ್ನು ಬಿಂಬಿಸಿರುವ ಭಗವತ್ಪಾದರ "ಭಾವುಕ ಕವಿಯ ಪ್ರತಿಭೆ, ಅನುಭಾವದ ವಾಗ್ವಿಲಾಸ....(ಪದ್ಯ—75)ವನ್ನು ನಿರೂಪಿಸುತ್ತವೆ. ಮೂಲದ ಗಮಕ ಸೌಂದರ್ಯ ಅನುವಾದದಲ್ಲಿ ಸರಳಗೊಂಡಂತೆ ತೋರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಶಿವಮಹಿಮ್ನಸ್ತೋತ್ರ ಹಾಗೂ ಸೌಂದರ್ಯಲಹರಿ ಕನ್ನಡದಲ್ಲಿ ಕೂಡಲ ಸಂಗಮವಾಗಿ ಹರಿದಿದೆ. ಶ್ರೀ ಬಿ. ಪುಟ್ಟಸ್ವಾಮಯ್ಯನವರ ಭಕ್ತಿ ಭಾವದಲ್ಲಿ, ನಿಷ್ಠೆಯು ಕಾವ್ಯದಲ್ಲಿ, ಸಮಷ್ಟಿಯು ಕಳಕಳಿಯಲ್ಲಿ, ರೂಪಿತವಾದ ಈ ಕೃತಿಗಳು ಶಿವಭಕ್ತಿಯು ನಾಡಾದ ಕರ್ನಾಟಕದ ಮನೆ ಮನೆಗಳಲ್ಲಿ ನಿತ್ಯಪಠಣಗೊಳ್ಳಲಿ, ಕನ್ನಡಿಗರ ಹೃದಯಗಳಲ್ಲಿ ನಿರಂತರವಾಗಿ ಅನುರಣನಗೊಳ್ಳಲೆಂದು ಹಾರೈಸುವೆ.

ಎಸ್. ಎಂ. ವೃ. ಸ್ವಾಮಿ
(ಡಾ॥ ಎಸ್.ಎಂ. ವೃಷಭೇಂದ್ರಸ್ವಾಮಿ)

ಶ್ರೀಮಾನ್ ಗೋರೂರು ರಾಮಸ್ವಾಮಿ ಐಯ್ಯಂಗಾರ್,
ಕನ್ನಡ ಸಾಹಿತ್ಯ ಸಂಮ್ಮೇಳನದ ಅಧ್ಯಕ್ಷರು ೧೯೬೨

ಪ್ರಸಾದ ಪೂರ್ಣ ಲಲಿತ ಶೈಲಿ

ನೀವು ರಚಿಸಿರುವ "ಶಿವಮಹಿಮ್ನಸ್ತವ ; ಸೌಂದರ್ಯಲಹರಿ' ಈ ಎರಡು ಸ್ತೋತ್ರರತ್ನಗಳ ಅನುವಾದವನ್ನು ಅಲ್ಲಲ್ಲಿ ಓದಿದೆ. ನೀವು ಈ ಮೂಲಕ ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ಇಂಥ ಕಾರ್ಯ ನಿಮ್ಮಿಂದ ಮಾತ್ರವೇ ಸಾಧ್ಯ.

ಶ್ರೀ ಶಂಕರಾಚಾರ್ಯರು ಮಹಾನ್ ತತ್ವದರ್ಶಿಗಳೂ, ತೀಕ್ಷ್ಣಮತಿಯ ಬ್ರಹ್ಮಜ್ಞಾನಿಗಳೂ ಆಗಿದ್ದರು. ಜೊತೆಗೆ ಅವರು ವರಕವಿ ಸಹ. ಜ್ಞಾನಿಗಳಾದರೂ ದೊಡ್ಡ ಭಕ್ತರೂ ಆಗಿದ್ದರು. ಅವರ ಕೃತಿಗಳು ಜ್ಞಾನಭಕ್ತಿಗಳ ಪ್ರಸಾರ ಹಾಗೂ ಜಗತ್ ಕಲ್ಯಾಣಕ್ಕಾಗಿ ರಚಿಸಲ್ಪಟ್ಟು ಅವರಲ್ಲಿ ಜ್ಞಾನ-ಭಕ್ತಿ ಕರ್ಮಗಳ ಸಮನ್ವಯ ಉಂಟಾಗಿತ್ತು.

ಶಂಕರಾಚಾರ್ಯರು ಅಷ್ಟು ದೊಡ್ಡ ಜ್ಞಾನಿಗಳಾದರೂ ಅವರಷ್ಟು ಹೆಚ್ಚು ಸಂಖ್ಯೆಯಲ್ಲಿ ಭಕ್ತಿಸ್ತೋತ್ರಗಳನ್ನು ರಚಿಸಿದವರು ಬೇರೆ ಯಾರೂ ಇಲ್ಲ. ಸಂಸ್ಕೃತ ಸಾಹಿತ್ಯದಲ್ಲಿ ಸ್ತೋತ್ರಶತಕಗಳೆಂದು ವಿಖ್ಯಾತವಾದ ಈ

Sri Vidyaranya Bharathi Book Centre, Sringeri

CC-O. In Public Domain. Digitized by eGangotri

ಎರಡು ಸ್ತೋತ್ರಗಳನ್ನು ಪ್ರಸಾದಪೂರ್ಣವಾದ ಲಲಿತಶೈಲಿಯಲ್ಲಿ, ಕನ್ನಡಕ್ಕೆ ಅನುವಾದಿಸಿ ಶ್ರೀಮಾನ್ ಪುಟ್ಟಸ್ವಾಮಯ್ಯನವರು ಭಕ್ತಿಸಾಹಿತ್ಯಕ್ಕೆ ಆದರ್ಶ ಪ್ರಾಯವಾಗಿ ಮಾಡಿದ್ದಾರೆ.

ಮಾನವೀಯ ಗುಣಗಳಲ್ಲಿ ಭಕ್ತಿಯಷ್ಟು ಉನ್ನತವಾದ ಸ್ವಭಾವ ಬೇರಾವುದೂ ಇಲ್ಲ. ಶ್ಲೋಕಗಳ ಅನುವಾದಗಳಿಗೆ ಕೆಲವು ವಿಶೇಷ ವ್ಯಾಖ್ಯಾನ ಗಳನ್ನು ಕೊಟ್ಟಿದ್ದಾರೆ. ಬಹುತೇಕ ವ್ಯಾಖ್ಯಾನಗಳು ಅರ್ಥವನ್ನು ಹೆಚ್ಚು ವಿಶದಪಡಿಸುವುದಕ್ಕೆ ವಿನಿಯೋಗವಾಗಿವೆ. ಈ ಪ್ರಯತ್ನದಿಂದ ಮೊದಲೆ ಕವಿ ಗಳಾಗಿದ್ದ ಶ್ರೀಮಾನ್ ಪುಟ್ಟಸ್ವಾಮಯ್ಯನವರು ಇನ್ನೂ ಹೆಚ್ಚಿನ ಕವಿಗಳೆಂದೂ ವೇದಾಂತಿಗಳೆಂದೂ ದಾರ್ಶನಿಕರೆಂದೂ ತೋರಿಸಿಕೊಂಡಿದ್ದಾರೆ. ಈ ಸ್ತೋತ್ರ ಗಳನ್ನು ಓದುವುದರಿಂದ ಮನಸ್ಸು ಭಕ್ತಿಯಿಂದ ತುಂಬುತ್ತದೆ.

ಈ ಕಾಲದಲ್ಲಿ ಸ್ತೋತ್ರಸಾಹಿತ್ಯವನ್ನು ಏಕೆ ಓದಬೇಕು ಎಂದು ಕೇಳ ಬಹುದು. ಒಳ್ಳೆಯ ಸಾಹಿತ್ಯ ಯಾವ ಕಾಲಕ್ಕೂ ಬೇಕು. ಒಳ್ಳೆಯ ಸಾಹಿತ್ಯ ವನ್ನು ಓದುವುದರಿಂದ ನಿರುತ್ಸಾಹಿಯಾದ ಮನಸ್ಸಿಗೆ ಚೈತನ್ಯ ಬರುತ್ತದೆ, ಸ್ಫೂರ್ತಿ ಚಿಗುರುತ್ತದೆ. ಕಷ್ಟಕಾರ್ಪಣ್ಯಗಳಲ್ಲಿಯೂ ಶಾಂತಿ ದೊರಕುತ್ತದೆ. ಕಷ್ಟಗಳನ್ನು ಎದುರಿಸುವ ಶಕ್ತಿ ಸಹ ಉಂಟಾಗುತ್ತದೆ. ಎಲ್ಲ ಒಳ್ಳೆಯದು ಕೆಟ್ಟದಕ್ಕೂ ಮನಸ್ಸು ಕಾರಣ. ಮನಸ್ಸನ್ನು ಸುಖ-ದುಃಖಗಳಲ್ಲಿ ಸಮಾನ ಭಾವದಿಂದ ದೃಢವಾಗಿ ನಿಲ್ಲಿಸಿದರೆ ನಾವು ಮಾಡುವ ಎಲ್ಲ ಕಾರ್ಯಗಳಲ್ಲಿಯೂ ನಮಗೆ ಜಯ ಲಭಿಸುತ್ತದೆ. ಭಕ್ತಿಯು ಮನಸ್ಸಿಗೆ ಒಂದು ಗುರಾಣಿ. ಆದುದ ರಿಂದ ಎಲ್ಲರೂ ಭಕ್ತಿ ಸಾಹಿತ್ಯವನ್ನು ಓದಬೇಕು. ಅನಿವಾರ್ಯವಾದುದನ್ನು ಸಹಿಸುವುದರಲ್ಲಿಯೂ, ಮನಸ್ಸನ್ನು ಸಮತೂಕದಲ್ಲಿಡುವುದರಲ್ಲಿಯೂ ಭಕ್ತಿ ಸಾಹಿತ್ಯದ ಸ್ಥಾನ ಹಿರಿದು. ಇಂಥ ಗ್ರಂಥವನ್ನು ರಚಿಸಿದುದಕ್ಕಾಗಿ ನಾನು ಪುಟ್ಟಸ್ವಾಮಯ್ಯನವರನ್ನು ಅಭಿನಂದಿಸುತ್ತೇನೆ.

ರಾಜಾಜಿನಗರ, ಬೆಂಗಳೂರು

18-11-82 ಗೋರೂರು ರಾಮಸ್ವಾಮಿ ಅಯ್ಯಂಗಾರ್

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಧ್ಯಾಪಕ ಶಂಕರ ಮೊಕಾಸೆ ಪೂನೇಕರ್
ಮುಖ್ಯಸ್ಥರು, ಇಂಗ್ಲಿಷ್ ವಿಭಾಗ

ಮೈಸೂರು ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ
೩-೧೨-೮೨

"ಶಿವಮಹಿಮ್ನಸ್ತವ" ಮತ್ತು ಸೌಂದರ್ಯಲಹರಿ" ಯ ನಿಮ್ಮ ಅನುವಾದಗಳನ್ನು ಓದಿದೆ. ಕಾವ್ಯ ರೂಪದಲ್ಲೇ ಅನುವಾದ ಮಾಡುವ ಕಠಿಣ ಕೆಲಸವನ್ನು ಶ್ರದ್ಧೆ-ಪ್ರೇಮ-ಕಳೆಗಳಿಂದ ಜರುಗಿಸಿದ್ದೀರಿ. ಆಯಾ ಸಂದರ್ಭಕ್ಕೆ ಉಚಿತವಾದ ಭಾವಗಳನ್ನು ಶ್ರೀಮಂತವಾಗಿ ಚಿತ್ರಿಸಿದ್ದೀರಿ.

"ಭ್ರಾಂತ ಅವಾಸ್ತವಾಂಶದೊಳನೀಶ್ವರ
ನಶ್ವರ ಶಕ್ತಿಯೋ ಎನಲ್
ಬೆಂತರದಾಟ ಕಿಟ್ಟಪರುನಿಮ್ಮ
ಮಹತ್ವವನಾ ನರಾಧಮರ್"

ಇಂಥ ವಿಷಾದ ವಾಕ್ಯಗಳು ನಮ್ಮ ಆಧುನಿಕ ಜೀವನದ ಯಥಾರ್ಥ ವರ್ಣನೆಯಾಗಿದೆ. ಆ ವಿಷಯಕ್ಕೆ ತಕ್ಕಂತೆ ಶಬ್ದಗಳ ಬಳಕೆಯು ಆಕ್ರೋಶ ಮಯವಾದದ್ದು ನಿಮ್ಮ ಕಾವ್ಯ ಶಕ್ತಿಯ ಹಿರಿಮೆ. ಮೂಲ ಸಂಸ್ಕೃತದಲ್ಲಿರುವ "ಶಿವಮಹಿಮ್ನಸ್ತವ"ವು ಈಗ ನಮ್ಮ ನೆನಪಿನಲ್ಲಿಲ್ಲ. ಆದರೆ ನಿಮ್ಮ ಅನುವಾದವನ್ನು ಸ್ವತಂತ್ರ ಕಾವ್ಯವೆಂದೇ ಓದಿದರೂ ಸಂದರ್ಭಕ್ಕೆ ಉಚಿತವೆಂದು ಮನವರಿಕೆಯಾಗುತ್ತದೆ.

ಹಾಗೆಯೇ "ಸೌಂದರ್ಯಲಹರಿ"ಯಲ್ಲಿ ಬಂದ ದೇವಿಯ ಸೌಂದರ್ಯದ ಲಲಿತ ಮಧುರ ವರ್ಣನೆ ವಸ್ತುವಿಗೆ ತಕ್ಕುದಾದ ಲಾಲಿತ್ಯವನ್ನು ತೋರುತ್ತದೆ.

"ಶ್ರವಣ ಪಥವ ದಾಟಿ ಮುಂದೆ ನಡೆಯುತಿಹ
ಆಪಾಂಗ ವ್ಯಾಸಂಗ ವಿಲಾಸ,
ಅವಣೆಸಿರೆ ರತಿಪತಿ ಶರಸಂಧಾನ
ಕಾದುದು ಪ್ರತಿಭೆ ಆದರ್ಶ"

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಓದಿದಾಗ ಬಂಗಾಳದ ಶ್ರೀದುರ್ಗೆಯ ವಿಗ್ರಹವನ್ನು ನೀವು ನೋಡಿರಲೇ ಬೇಕು ಎನಿಸುತ್ತದೆ. ಅದಿಲ್ಲದೆ ಇಂಥ ವರ್ಣನೆಯ ಯಥಾರ್ಥತೆ ಹುಟ್ಟಿರ ಲಾರದು, "ಸೌಂದರ್ಯಲಹರಿ" ನಂ. ೩೯,೪೦,೪೧,೪೨ನೆಯ ನುಡಿಗಳು ನಿಮ್ಮ ಸೌಂದರ್ಯ ಪ್ರಜ್ಞೆಯ ಪರಾಕಾಷ್ಠೆ ಎಂದೆನಿಸುತ್ತದೆ.

ನಿಮ್ಮ ಸಾಹಸ ಕನ್ನಡಿಗರ ಹೃದಯವನ್ನು ಮುಟ್ಟುವುದರಲ್ಲಿ ಸಂದೇಹವಿಲ್ಲ.

ಶಂಕರ ಮೊಕಾಸೆ ಪುನೇಕರ್

—

ಪ್ರೊ. ಸ. ಸ ಮಾಳವಾಡ
ನಿವೃತ್ತ ಪ್ರಾಧ್ಯಾಪಕರು

ಪ್ರಶಾಂತ, ಧಾರವಾಡ
೧೬-೧೧-೮೨

ಚೇತೋಹಾರಿ ಪದ್ಯಗಳು

ಕರ್ನಾಟಕದ ಅತಿ ಹಿರಿಯ ವಿದ್ವಾಂಸರಾದ ಬಿ. ಪುಟ್ಟಸ್ವಾಮಯ್ಯ ನವರು ಇಳಿಯ ವಯಸ್ಸಿನಲ್ಲಿಯೂ ಸಾಹಿತ್ಯ ರಚನೆಯ ಕಾರ್ಯದಲ್ಲಿ ಎಡೆಬಿಡದೆ ಮುಂದುವರಿಯುತ್ತಿದ್ದಾರೆ. ಬಹುಶ್ರುತರಾದ ಅವರು ಆಧುನಿಕ ಕನ್ನಡ ಸಾಹಿತ್ಯವನ್ನು ಬಗೆಬಗೆಯಾಗಿ ಸಿಂಗರಿಸಿದ್ದಾರೆ. ಈಚೆಗೆ ಶ್ರೀ ದುರ್ಗಾ ಬುಕ್ ಟ್ರಸ್ಟ್ ಮೂಲಕವಾಗಿ ಧಾರ್ಮಿಕ ಕೃತಿಗಳನ್ನು ಒದಗಿಸುತ್ತಿದ್ದಾರೆ.

"ಶಿವಮಹಿಮ್ನ ಸ್ತೋತ್ರ; ಸೌಂದರ್ಯಲಹರಿ"–ಈ ಕೃತಿಗಳಲ್ಲಿ ಅವರು ತಮ್ಮ ಬಹು ಶ್ರುತತ್ವವನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದ್ದಾರೆ. ಸಂಸ್ಕೃತದ ಮಹತ್ವಪೂರ್ಣ ಕೃತಿಗಳನ್ನು ಸುಗಮ ಸುಂದರ ಕನ್ನಡ ಭಾಷೆಯಲ್ಲಿ ಪದ್ಯ ರೂಪದಲ್ಲಿ ಒದಗಿಸಿದ್ದಾರೆ. ಈ ಪದ್ಯ ರಚನೆಯಲ್ಲಿ ಸಹಜತೆ ಪ್ರಾಸಾರಿಕತೆಗಳು ಎದ್ದು ಕಾಣುತ್ತಿವೆ. ಇಲ್ಲಿಯ ಪದ್ಯಗಳು ಚೇತೋಹಾರಿಯಾಗಿವೆ. ಸಂಸ್ಕೃತ ಕನ್ನಡ ಭಾಷೆಗಳ ಪ್ರಭುತ್ವ ಕಂಡುಬರುತ್ತಿದೆ. ಆ ಪದ್ಯಗಳನ್ನು ಕುರಿತ ಅವರ ವ್ಯಾಖ್ಯಾನವು ಸಾಮಾನ್ಯ ವಾಚಕರಿಗೆ, ವ್ಯಾಸಂಗಿಗಳಿಗೆ ಉಪಯುಕ್ತವಾಗಿದೆ. ವೇದ, ಪುರಾಣ, ವಿಶ್ವಕೋಶಗಳ ಹೊಳಹು ಹೊಂದಿರುವ ಈ ಕೃತಿಗಳನ್ನು ಬಳಸಿಕೊಂಡಿ

CC-O. In Public Domain. Digitized by eGangotri

CC-O. In Public Domain. Digitized by eGangotri

ರುವ ಈ ಬರೆಹವು ಮೌಲಿಕವಾಗಿದೆ. ವಯೋವೃದ್ಧ, ಜ್ಞಾನವೃದ್ಧ ಪುಟ್ಟಸ್ವಾಮಯ್ಯನವರ ಸಾಹಿತ್ಯ ರಚನೆ ಕನ್ನಡಿರಿಗೆ ಹೆಮ್ಮೆಯ ಸಂಗತಿಯಾಗಿದೆ.

"ಪ್ರಶಾಂತ" 16-11-82 ಸ. ಸ. ಮಾಳವಾಡ
ಧಾರವಾಡ-7

—

ಎಲ್. ಎಸ್. ಶೇಷಗಿರಿರಾವ್ ಜಯನಗರ, ಬೆಂಗಳೂರು.
ಖ್ಯಾತ ವಿಮರ್ಶಕರು ೫-೧೧-೮೨

ಅಭ್ಯಾಸವನ್ನು ಸರಳಗೊಳಿಸುವ ಅನುವಾದ

ಹಿರಿಯರಲ್ಲಿ ನಮಸ್ಕಾರಗಳು

ತಾವು ಬಂದಾಗ ನಾನು ಮನೆಯಲ್ಲಿ ಇರದಿದ್ದುದಕ್ಕೆ ನನಗೆ ಬೇಸರವಾಯಿತು. ಈಚೆಗೆ ಹಲವು ಕಾರ್ಯಕ್ರಮಗಳಿಗಾಗಿ ಶಿವಮೊಗ್ಗ, ಉಡುಪಿ, ಮೈಸೂರು ಮೊದಲಾದ ಸ್ಥಳಗಳಿಗೆ ಹೋಗಿಬರಬೇಕಾಯಿತು. ತಮಗೆ ಪತ್ರ ಬರೆಯಲು ತಡವಾಯಿತು, ಕ್ಷಮಿಸಿ. ತಾವು ವಿಶ್ವಾಸದಿಂದ ಕೊಟ್ಟ ಎರಡು ಪುಸ್ತಕಗಳೂ ನಿಧಾನವಾಗಿ ಅಧ್ಯಯನ ಮಾಡಬೇಕಾದ ಕೃತಿಗಳು. ಪ್ರತಿಯೊಬ್ಬ ವಿಚಾರವಂತನೂ ತನ್ನ ಸಮಾಜದ ಭೂತಕಾಲದೊಂದಿಗೆ, ಸಂಸ್ಕೃತಿ-ವಿಚಾರಗಳೊಂದಿಗೆ ಅರ್ಥವತ್ತಾದ ಸಂಬಂಧವನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ. ಯಾವುದನ್ನು ತ್ಯಜಿಸಬೇಕಾದರೂ ಇದನ್ನು ತಿಳಿದುಕೊಂಡು ಬೆಲೆ ಕಟ್ಟಿ ತ್ಯಜಿಸಬೇಕಾಗುತ್ತದೆ. ಹಲವು ದಶಕಗಳ ಹಿಂದೆ ಸಾಂಪ್ರದಾಯಿಕ ದೃಷ್ಟಿಯ ನಾಟಕಗಳು ಬಹುಮಟ್ಟಿಗೆ ಪ್ರದರ್ಶನವಾಗುತ್ತಿದ್ದಾಗ ತಾವು ಹೊಸ ದೃಷ್ಟಿಯ ನಾಟಕಗಳನ್ನು ಬರೆದಿರಿ. ಆಗಿನಿಂದ ಸ್ವತಂತ್ರ ಚಿಂತನೆಗೆ ಹಿಂದಿನ ಪುರಾಣ–ಕಾವ್ಯಗಳ ಅಧ್ಯಯನವನ್ನು ಬುನಾದಿಯನ್ನಾಗಿ ಮಾಡಿಕೊಂಡ ತಾವು, ಐತಿಹಾಸಿಕ ಕಾದಂಬರಿಗಳಲ್ಲಿ ಈ ಮನೋಧರ್ಮಕ್ಕೆ ಮತ್ತೊಂದು ಮಾಧ್ಯಮವನ್ನು ಕಂಡುಕೊಂಡ್ದು, ಅನುಭವದ ಸಮೃದ್ಧಿಯಿಂದ ಚಿಂತನೆ ಪರಿಪಕ್ವವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ದಿನಗಳಲ್ಲಿ 'ದುರ್ಗಾಸಪ್ತಶತಿ', 'ಸೌಂದರ್ಯಲಹರಿ' 'ಶಿವಮಹಿಮ್ನಸ್ತವ' ದಂತಹ ಕೃತಿಗಳನ್ನು ಸರಳಗನ್ನಡದಲ್ಲಿ ನಮಗೆ ಲಭ್ಯ ಮಾಡಿಕೊಡುತ್ತಿದ್ದೀರಿ. ವಿವರಣೆಗಳಿಂದ ಈ ಕೃತಿಗಳ ಅಭ್ಯಾಸವನ್ನು ಸರಳಗೊಳಿಸಿದ್ದೀರಿ. ಭಕ್ತಿ–ಭಾವ ದಿಂದಾಗಲಿ ಬೌದ್ಧಿಕ ಕುತೂಹಲದಿಂದಾಗಲಿ ಇಂತಹ ಕೃತಿಗಳನ್ನು ಓದ ಬಯಸುವವರಿಗೆ ಅಮೂಲ್ಯ ನೆರವು ನೀಡಿದ್ದೀರಿ. ತಮಗೆ ಅಭಿನಂದನೆಗಳು.

ತಾವು ಆರೋಗ್ಯವಾಗಿದ್ದೀರಿ ಎಂದು ನಂಬಿದ್ದೇನೆ, ನಮಸ್ಕಾರ

ವಿಶ್ವಾಸದ
ಎಲ್. ಎಸ್. ಶೇಷಗಿರಿರಾವ್

—

ಎಂ. ವಿ. ಸೀತಾರಾಮಯ್ಯ
ನಿವೃತ್ತ ಕನ್ನಡ ಪ್ರಾಧ್ಯಾಪಕ

ಜಯನಗರ-ಬೆಂಗಳೂರು
ತಾ॥ ೧೪-೧-೧೯೮೩

ಹಾಡುಗಬ್ಬಕ್ಕೆ ಹೊಂದುವ ಹೃದ್ಯ ಅನುವಾದ

ಪ್ರಾಚೀನ ಹಾಡುಗಬ್ಬಗಳಲ್ಲಿ (ವರ್ಣಕಕಾವ್ಯದಲ್ಲಿ) ಬಳಕೆಯಾಗಿರುವ ಅಚ್ಚಗನ್ನಡ ಛಂದಸ್ಸು ಎನಿಸಿಕೊಂಡಿರುವ ಸಾಂಗತ್ಯದಲ್ಲಿ ಸಂಸ್ಕೃತದ ಲಲಿತಾ ಸಹಸ್ರನಾಮವನ್ನೂ ದುರ್ಗಾಸಪ್ತಶತಿಯನ್ನೂ ಸವಿಯಾದ ತಿಳಿಯಾದ ಕನ್ನಡದಲ್ಲಿ ಅನುವಾದಮಾಡಿ ವಿದ್ವತ್‌ಕವಿಗಳ ಮನ್ನಣೆಗೂ ಆಸ್ತಿಕ ವಾಚಕ ಲೋಕದ ಕೃತಜ್ಞತೆಗೂ ಪಾತ್ರರಾದ ಸನ್ಮಾನ್ಯ ಬಿ. ಪುಟ್ಟಸ್ವಾಮಯ್ಯನವರು ಇದೀಗ ಸಂಸ್ಕೃತ ಸ್ತೋತ್ರ ಸಾಹಿತ್ಯದಲ್ಲಿ ಅತ್ಯಂತ ಗಣ್ಯವಾದ ಸ್ಥಾನವನ್ನು ಪಡೆದುಕೊಂಡಿರುವ, ಶ್ರೀ ಪುಷ್ಪದಂತಾಚಾರ್ಯವಿರಚಿತ "ಶಿವಮಹಿಮ್ನ ಸ್ತೋತ್ರ"ವನ್ನೂ ಶ್ರೀ ಶಂಕರ ಭಗವತ್ಪಾದರು ರಚಿಸಿದ್ದೆಂದು ಪ್ರಖ್ಯಾತ ವಾಗಿರುವ "ಸೌಂದರ್ಯಲಹರಿ"ಯನ್ನೂ ಆಸ್ತಿಕರಾದ ಕನ್ನಡಿಗರಿಗೆ ನೀಡಿ ದ್ದಾರೆ. ಈ ಅಪೂರ್ವ ಆಧ್ಯಾತ್ಮಿಕ ಸಂಪತ್ತನ್ನು ಸಂಸ್ಕೃತ ಸಾರಸ್ವತ ಭಂಡಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ದಿಂದ ಹೊರತೆಗೆದು ಕೊಟ್ಟಿರುವುದಕ್ಕಾಗಿ ಕನ್ನಡಿಗರು ಶ್ರೀಯುತರಿಗೆ ಕೃತಜ್ಞರಾಗಿರಬೇಕು.

'ಸೌಂದರ್ಯಲಹರಿ'ಯನ್ನು ಈಗಾಗಲೇ ಹಲವರು ಗದ್ಯಪದ್ಯಗಳಲ್ಲಿ ಅನುವಾದ ಮಾಡಿದ್ದಾರೆ. ಕೆಲವು ವರ್ಷಗಳ ಹಿಂದೆ ನನ್ನ ಲೇಖನ ಒಂದರಲ್ಲಿ ಉದಾಹರಣಾರ್ಥ ಸೌಂದರ್ಯಲಹರಿಯಲ್ಲಿ ನವರಸ ಪ್ರಸಕ್ತಿಯುಳ್ಳ ಎರಡು ಶ್ಲೋಕಗಳನ್ನು ವಾರ್ಧಕ ಷಟ್ಪದಿಯಲ್ಲಿ ಅನುವಾದ ಮಾಡಿದ್ದೆ. ಅವುಗಳನ್ನು ಗಮನಿಸಿದ ನನ್ನ ಮಿತ್ರರೊಬ್ಬರು ಸೌಂದರ್ಯಲಹರಿಯನ್ನು ಪೂರ್ತಿಯಾಗಿ ಅನುವಾದ ಮಾಡಬೇಕೆಂದು ಪ್ರೋತ್ಸಾಹಿಸಿದರು. 1980ರ ಮಾರ್ಚಿ ತಿಂಗಳಲ್ಲಿ ನನ್ನ ಅನುವಾದ ಕಾರ್ಯ ಮುಗಿಯಿತು. ಅಲ್ಲಿಯವರೆಗೂ ಇತರರು ಈ ಉದ್ಗ್ರಂಥಕೃತಿಯನ್ನು ಅನುವಾದ ಮಾಡಿರುವರೆಂಬ ಕಡೆಗೆ ನನ್ನ ಲಕ್ಷ್ಯ ಹೋಗಿರಲಿಲ್ಲ. ಸೌಂದರ್ಯಲಹರಿಗೆ ಜಕ್ಕಣಾಮಾತ್ಯನು ಸಂಸ್ಕೃತ ವ್ಯಾಖ್ಯಾನಗಳನ್ನು ಆಧರಿಸಿ ಕನ್ನಡದಲ್ಲಿ ಒಂದು ಟೀಕನ್ನು ಬರೆದಿದ್ದಾನೆ. ಈ ಟೀಕನ್ನುಳ್ಳ ಸೌಂದರ್ಯಲಹರಿ ಮೈಸೂರು ಪ್ರಾಚ್ಯ ಸಂಶೋಧನಾಲಯದಿಂದ ಪ್ರಕಟವಾಗಿದೆ. ಅನುವಾದ ಕಾರ್ಯದಲ್ಲಿ ಈ ಟೀಕಿನಿಂದ ನಾನು ನೆರವು ಪಡೆದಿದ್ದೇನೆ. ಅನುವಾದ ಕಾರ್ಯ ಮುಗಿದಮೇಲೆ ಇತರರ ಅನುವಾದಗಳನ್ನು ನೋಡುವ ಕುತೂಹಲ ಉಂಟಾಯಿತು. ಮೂರು ನಾಲ್ಕು ಅನುವಾದಗಳು ದೊರೆತವು. ಒಂದೊಂದರಲ್ಲಿ ಒಂದೊಂದು ಬಗೆಯ ವೈಶಿಷ್ಟ್ಯ ಇದೆ. ಬೇಂದ್ರೆಯವರೂ ಕೆಲವು ಶ್ಲೋಕಗಳನ್ನು ಮಾತ್ರ ಅನುವಾನ ಮಾಡಿರುವರಂತೆ ಈ ಹನ್ನೆಲೆಯಲ್ಲಿ, ಶ್ರೀಪುಟ್ಟಸ್ವಾಮಯ್ಯನವರ ಅನುವಾದ ನನ್ನ ಕೈಗೆ ಬಂದಾಗ, ಎಷ್ಟುಮಂದಿ ಅನುವಾದಕರನ್ನು ಸೌಂದರ್ಯಲಹರಿ ಆಕರ್ಷಿಸಿದೆ ಎಂಬ ಸಂಗತಿ ಅತ್ಯಂತ ಸೋಜಿಗವಾಗಿ ಕಂಡಿತು. ಸೌಂದರ್ಯಲಹರಿ ಅನೇಕ ದೃಷ್ಟಿಗಳಿಂದ ಮಹತ್ವವುಳ್ಳ ಕೃತಿ ಎಂಬುದನ್ನು ನೆನೆದರೆ, ಸಾರ್ವಕಾಲಿಕ ಮೌಲ್ಯವುಳ್ಳ ಈ ಕೃತಿಯನ್ನು ಇನ್ನು ಮುಂದೂ ಅನುವಾದ ಮಾಡುವವರು ಹುಟ್ಟಿಕೊಳ್ಳುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ, ಎಂದು ಹೇಳಬಹುದು.

ಶ್ರೀ ಪುಟ್ಟಸ್ವಾಮಯ್ಯನವರ ಅನುವಾದಿತ ಪದ್ಯಗಳಲ್ಲಿ ಎದ್ದುಕಾಣುವ ಲಕ್ಷಣ ಎಂದರೆ ಆದಿಪ್ರಾಸ ಅಂತ್ಯಪ್ರಾಸಗಳ ಪಾಲನೆ; ಇನ್ನೊಂದು ಸ್ಪಷ್ಟ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುಣ–ಹಾಡುಗಬ್ಬಕ್ಕೆ ಹೊಂದುವಂತಹ ಹೃದ್ಯವಾದ ಭಾಷಾ ಶೈಲಿ. ಸಾಂಗತ್ಯದ ಬಂಧುರ ಛಂದೋ ಬಂಧದಲ್ಲಿ ಮೂಲದ ಪದ್ಯಗಳ ಆಶಯಕ್ಕೆ ಭಂಗಬಾರದಂತೆ ಅವುಗಳನ್ನು ಕನ್ನಡಿಸಿದ್ದಾರೆ. ಯಾವುದೇ ಮೂಲ ಕೃತಿಯ ಭಾಷೆಯ, ಶೈಲಿಯ ಅಂದಚೆಂದಗಳನ್ನು ಪದಗಳ ಪೋಣಿಭಾವಣೆ ಪಲುಕುಗಳನ್ನು ಬೇರೊಂದು ಭಾಷೆಯಲ್ಲಿ, ಅದರ ನುಡಿಗಟ್ಟಿನಲ್ಲಿ ಹಿಡಿ ಮೂಡಿಸುವುದು ಬಹಳ ಕಷ್ಟಸಾಧ್ಯ. ಈ ಕಾರ್ಯದಲ್ಲಿ ಸಂಸ್ಕೃತ ಕನ್ನಡಕ್ಕೆ ಒದಗಿಬರುವ ಹಾಗೆ ಇತರ ಭಾಷೆಗಳು ಅಷ್ಟಾಗಿ ಒದಗಿಬಾರವು. ಕನ್ನಡದ ಸೋದರ ಭಾಷೆಗಳಾದ ತಮಿಳು, ತೆಲುಗು ಭಾಷೆಗಳ ಪದಪುಂಜಗಳನ್ನು ಕೂಡ ಹಾಗೆ ಹಾಗೆಯೇ ಅನಾಮತ್ತಾಗಿ ಎತ್ತಿಕೊಳ್ಳಲು ಸಾಧ್ಯವಾಗುವುದಿಲ್ಲ. ಮೂಲದ ಕೆಲವು ಭಾಗಗಳನ್ನು ತರ್ಜಿಮೆಮಾಡಿಕೊಳ್ಳುವುದಕ್ಕಿಂತ ಅವುಗಳನ್ನು ಸ್ವಸ್ವರೂಪದಲ್ಲಿಯೇ ಉಳಿಸಿಕೊಳ್ಳುವುದು ವಾಸಿ ಎನ್ನಿಸಿದಾಗ ಶ್ರೀಯುತರು ಹಾಗೆ ಮಾಡಿದ್ದಾರೆ. ಮೂಲದ ಪದಪುಂಜಗಳನ್ನು ಉಳಿಸಿಕೊಂಡು ಅವಕ್ಕೆ ಹೊಂದಿಕೊಳ್ಳುವಂತೆ ಇನಿಯದಾದ ಕನ್ನಡ ನುಡಿಗಳನ್ನು ಪವಣಿಸಿದ್ದಾರೆ. ಆದರೆ ಬಹುತೇಕ ಲಲಿತ ಕನ್ನಡದ ಕಡೆಗೇ ಶ್ರೀಯುತರ ಒಲವು. ಇದು ಅನುವಾದದ ಯಶಸ್ಸಿನ ಗುಟ್ಟೂ ಆಗಿದೆ. ನನ್ನ ಮನಸ್ಸನ್ನು ಒಲಿಸಿಕೊಂಡಿರುವ ಅನೇಕ ಪದ್ಯಗಳಲ್ಲಿ ಒಂದನ್ನು ಮಾತ್ರ ಇಲ್ಲಿ ಉದಾಹರಿಸಿ ತೃಪ್ತಿಪಟ್ಟುಕೊಳ್ಳುತ್ತೇನೆ.

ಸೆಳೆಮಿಂಚಿನಂತೆ ತೆಳ್ಳನೆ ತನು ಬೆಳಗಿರೆ
ಶಶಿಸೂರ್ಯವಹ್ನಿ ತತ್ವಗಳ
ತಳೆದು ತನ್ನಲ್ಲಿ ತಾವರೆಗಳಾರರ ಮೇಲೆ
ಕುಳಿತು ಶೋಭಿಸುವ ನಿನ್ನತುಳ
ಶಕ್ತಿರೂಪದ ಕುಂಡಲಾಕೃತಿ ಕಲೆಯನು
ಕಾಣುವ ಮಹಿತರಿಗಹುದು
ಮುಕ್ತಿಸಾಧನೆಗನುವಹ ಪರಮಾಹ್ಲಾದ–
ಲಹರಿಯೊಳ್ ಆತ್ಮಾನುಭವವು ॥೨೧॥

ಮೇಲಿನ ಪದ್ಯದಲ್ಲಿ ಎದ್ದುಕಾಣುವ ಆದಿಪ್ರಾಸ, ಅಡಗಿಕೊಂಡು ಅಭಿವ್ಯಕ್ತವಾಗುವ ಅಂತ್ಯಪ್ರಾಸ, ಇವುಗಳ ಜೊತೆಗೆ ತಕಾರ, ಕಕಾರ, ಮಕಾರಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಪ್ರಾಸ ಇವು ಅನುಗೂಡಿ ಪರಿಣಾಮ ರಮಣೀಯವಾದ ಕಾವ್ಯ ಶರೀರದ ಸೊಬಗು ಶ್ರವ್ಯಕಾವ್ಯಕ್ಕೆ ಉಚಿತವಾದುದು. ಇಂಥ ಹಲವು ನಿದರ್ಶನಗಳು ಈ ಕೃತಿಯಲ್ಲಿ ದೊರಕುತ್ತವೆ. ಈ ಕಾರಣದಿಂದಾಗಿ, ಈ ಕನ್ನಡ ಸೌಂದರ್ಯಲಹರಿ ಗೇಯಕ್ಕೆ ಚೆನ್ನಾಗಿ ಒದಗಿಬರುತ್ತದೆ.

ಮೇಲಿನ ಪದ್ಯದಲ್ಲಿ "ಮಹಿತರಿಗೆ" ಎನ್ನುವುದಕ್ಕೆ ಮೂಲದಲ್ಲಿ "ಮೃದಿತ ಮಲ ಮಾಯೇನ ಮನಸಾ ಮಹಾನ್ತಃ" ಎಂದು ಮಾತುಗಳಿವೆ. ಮಹಾನ್ತರ ಮಹತ್ವವನ್ನು ವರ್ಣಿಸುವ ವಿಶೇಷಣ (ಮೂಲರೂಪದ ಮಾಯೆಯನ್ನು ಎಂದರೆ ಅವಿದ್ಯೆಯನ್ನು, ಅಜ್ಞಾನವನ್ನು, ನಿಗ್ರಹಿಸಿದ) ಬಿಟ್ಟುಹೋಗಿದೆ. ಇಂಥ ಸಂದರ್ಭಗಳು ಅನುವಾದದಲ್ಲಿ ಹಲವು ಉಂಟು. ಹಾಗೆಯೇ ಮದವತಿ ರತಿ (ಪದ್ಯ ೫), "ಸೋಗಿನ ಸಚಿವ ವಸಂತ" (ಪದ್ಯ ೬) ಎಂಬಂತಹ ಕಡೆಗಳಲ್ಲಿ ಮೂಲಾರ್ಥವನ್ನು ವ್ಯತ್ಯಾಸಗೊಳಿಸುವ ಸಂದರ್ಭಗಳು ಕೆಲವು ಉಂಟು. ಮುಖ್ಯವಾದ ಕೆಲವು ಅರ್ಥಪೂರ್ಣ ಪದಗಳು, ಪದಪುಂಜಗಳು ಬಿಟ್ಟು ಹೋಗಿರುವ ನಿದರ್ಶನಗಳೂ ಕೆಲವು ಉಂಟು. ಇವೆಲ್ಲ ತೀರ ಗೌಣವಾದ ಸಂದರ್ಭಗಳು. ಸೌಂದರ್ಯಲಹರಿಯಂತಹ ಅರ್ಥನಿಬಿಡ, ನಿಗೂಢ ಸಂಕೇತಪರ, ತಂತ್ರಶಾಸ್ತ್ರ ಪರಿಭಾಷಾಯುಕ್ತ, ಅಧ್ಯಾತ್ಮಪ್ರವಣ–ಆದರೂ ಕಾವ್ಯ ಶೋಭೆಯಿಂದ ಕಾವ್ಯರಸಿಕರ ಮನಸ್ಸನ್ನೂ ಸೆಳೆಯುವ ಕೃತಿಯನ್ನು ಭಾಷಾಂತರ ಮಾಡುವವನು ವ್ಯುತ್ಪನ್ನಮತಿಯಾಗಿರಬೇಕು. ವಯೋವೃದ್ಧರೂ ಜ್ಞಾನವೃದ್ಧರೂ, ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿಮಾಡಿ ಶ್ರೀ ಬಸವೇಶ್ವರರ ಬದುಕು ಮತ್ತು ಕಾಲವನ್ನು ಬಿತ್ತರಿಸುವ 'ಕಲ್ಯಾಣ ಕ್ರಾಂತಿ'ಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದಿರುವವರೂ ಆದ ಶ್ರೀ ಪುಟ್ಟಸ್ವಾಮಿಯವರು ವ್ಯುತ್ಪನ್ನಮತಿಗಳಾಗಿರುವುದರ ಜೊತೆಗೆ ವಿಶಾಲ ಮತಿಗಳೂ ಸಹೃದಯರೂ ಆಗಿದ್ದಾರೆ. ಇವರ ಕನ್ನಡ ಸೌಂದರ್ಯಲಹರಿ ಸ್ವತಂತ್ರ ಕೃತಿ ಎನ್ನುವ ಮಟ್ಟಿಗೆ ಸಮರ್ಥವಾದ, ಸುಂದರವಾದ ಅನುವಾದವಾಗಿದೆ.

ಸೌಂದರ್ಯಲಹರಿಯ ಬಗೆಗೆ ಹೇಳಿದ ಮಾತು ಎಲ್ಲವೂ ಶ್ರೀಯುತರ 'ಶಿವಮಹಿಮ್ನ'ಕ್ಕೂ ಅನ್ವಯಿಸುತ್ತದೆ. ಇದರ ಬಗೆಗೆ ಹೇಳಬಹುದಾದ ಹೆಚ್ಚಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾತು ಎಂದರೆ, ಇದರಲ್ಲಿಯ ೩೩ ಪದ್ಯಗಳು ಸಂಸ್ಕೃತ ವರ್ಣವೃತ್ತಗಳಾದ ಚಂಪಕಮಾಲೆ, ಉತ್ಪಲ ಮಾಲೆಗಳಲ್ಲಿ ಮೈದಳೆದಿವೆ. ನವೋದಯ ಯುಗದ ಪ್ರಾರಂಭದ ದಿನಗಳಲ್ಲಿಯೇ ಕಂದವೃತ್ತ ರಚನೆಗಳು ಕನ್ನಡದಲ್ಲಿ ಕಣ್ಮರೆಯಾಗಿ ಹೋದುವು, ಬೆಳ್ಳಾವೆ ನರಹರಿಶಾಸ್ತ್ರಿ. ಡಿ ವಿ.ಜಿ., ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ, ಮುಂತಾದ ಕೆಲವು ವಿದ್ವಾಂಸರು ಕಂದ ವೃತ್ತಗಳನ್ನು ವಿರಳವಾಗಿ ರಚಿಸಿರುವುದುಂಟು. ಶ್ರೀಯುತರು ಈ ನಷ್ಟಪ್ರಾಯವಾದ ರಚನಾ ಪದ್ಧತಿಯನ್ನು ಪುನರುಜ್ಜೀವನ ಗೊಳಿಸುವ ಪ್ರಯತ್ನವನ್ನು ವಿದ್ವನ್ಮಂಡಲಿ ಸ್ವಾಗತಿಸಬಹುದಾದರೂ ಸಾಂಗತ್ಯದಲ್ಲಿಯೋ ಯಾವುದಾದರೂ ಷಟ್ಪದಿ ಯಲ್ಲಿಯೋ ಶಿವಮಹಿಮ್ನವನ್ನು ಅನುವಾದ ಮಾಡಿದ್ದರೆ ಸಾಮಾನ್ಯ ಓದು ಗರಿಗೆ ಹೆಚ್ಚು ಪ್ರಿಯವಾಗುತ್ತಿತ್ತೇನೋ.

ಸ್ತುತ್ಯವಾದ ಇಂಥ ಅನುವಾದ ಕಾರ್ಯವನ್ನು ಶ್ರೀ ಪುಟ್ಟಸ್ವಾಮಯ್ಯ ನವರು ಮುಂದುವರಿಸಿ ಸಂಸ್ಕೃತಸ್ತೋತ್ರ ಸಾಹಿತ್ಯ ಭಂಡಾಗಾರದಿಂದ ಇನ್ನೂ ಹಲವು ರತ್ನಗಳನ್ನು ಆಯ್ದು ಕನ್ನಡಿಗರಿಗೆ ನೀಡಲಿ ಎಂದು ಹಾರೈಸುತ್ತೇನೆ.

ಬೆಂಗಳೂರು–೧೯
೧೪-೧-೧೯೬೩

ಎಂ. ವಿ. ಸೀತಾರಾಮಯ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಿನ್ನಹ

ಮಾನ್ಯ ವಾಚಕರಲ್ಲಿ ಅನುವಾದಕನ ಆತ್ಮೀಯ ವಚನಗಳು

ಸಂಸ್ಕೃತ ಸ್ತೋತ್ರ ಸಾಹಿತ್ಯದಲ್ಲಿ ಪಂಡಿತರ ಮೆಚ್ಚುಗೆ, ಭಕ್ತರ ಆಸಕ್ತಿ, ವ್ಯಾಖ್ಯಾನಕಾರರ ಆಳವಾದ ಅಧ್ಯಯನ, ವಿಮರ್ಶಕರ ವಿನಯಾರಾಧನೆ, ಈ ಎಲ್ಲ ಪ್ರಶಸ್ತಿ ಪ್ರಶಂಸೆಗಳಿಗೆ ಪಾತ್ರವಾದ ಪುಷ್ಪದಂತ ಗಂಧರ್ವ ರಾಜನ "ಶಿವ ಮಹಿಮ್ನಸ್ತವ" ಆಚಾರ್ಯವರ್ಯ ಶಂಕರ ಭಗವತ್ಪಾದರ "ಸೌಂದರ್ಯ ಲಹರಿ" ಈ ಎರಡು ಸ್ತೋತ್ರರತ್ನಗಳ ಪದ್ಯ ರೂಪ ಭಾವಾನುವಾದಗಳನ್ನು ಕನ್ನಡಿಗರ ಮುಂದಿಡುವ ನನ್ನ ಸಾಹಸವನ್ನು ಅಭಿನಂದಿಸಿ ಆರ್ಥಿಕ ನೆರವು ಪ್ರೋತ್ಸಾಹಗಳನ್ನು ನೀಡಿದ ಸಾಹಿತ್ಯಾಭಿಮಾನಿ ವರಿಷ್ಠರಲ್ಲಿ ಕರ್ನಾಟಕ ರಾಜ್ಯದ ಮಾಜಿ ಮುಖ್ಯ ಮಂತ್ರಿ ಸನ್ಮಾನ್ಯ ಆರ್. ಗುಂಡೂರಾಯರಿಗೆ ಈ ಸಂದರ್ಭದಲ್ಲಿ "ಕೃತಜ್ಞತೆಗಳನ್ನು ಸಲ್ಲಿಸುವುದು ನನ್ನ ಆದ್ಯ ಕರ್ತವ್ಯ ವಾಗಿದೆ.

೧೯೮೨ನಲ್ಲಿ ಸನ್ಮಾನ ಸಮಿತಿ ಏರ್ಪಡಿಸಿದ್ದ ಸಮಾರಂಭದ ಆನಂತರ ಆಗ ಅಧಿಕಾರದಲ್ಲಿದ್ದ ಶ್ರೀರಾಯರನ್ನು ಭೇಟಿ ಮಾಡಿ ಮುದ್ರಣಕ್ಕೆ ಸಿದ್ಧವಾಗುತ್ತಿದ್ದ ಅನುವಾದದ ಕರಡು ಪ್ರತಿಯನ್ನು ಮುಂದಿಟ್ಟಾಗ ಅವರು ಹಸನ್ಮುಖದಿಂದ ನನ್ನ ಕಡೆ ತಿರುಗಿ "ಈ ಇಳಿ ವಯಸ್ಸಿನಲ್ಲಿ ನಿಮ್ಮ ಸಾಹಿತ್ಯ ಸೇವೆ, ಧರ್ಮ ತತ್ವ ಶಾಸ್ತ್ರಗಳ ಕಡೆ ತಿರುಗಿದುದು ಕನ್ನಡ ನುಡಿಯ ಸೌಭಾಗ್ಯ. ನಿಮ್ಮ ಕಾರ್ಯ ವನ್ನು ಮುಂದುವರೆಸಿ. ನಿಮ್ಮ ಆರೋಗ್ಯ ಸರಿಯಾಗಿಲ್ಲವೆಂದು ನನಗೆ ತಿಳಿದಿದೆ. ನಿಮ್ಮ ವಿಶೇಷ ಚಿಕಿತ್ಸೆ ಮತ್ತು ಗ್ರಂಥ ಪ್ರಕಟನೆಗಾಗಿ ಹತ್ತು ಸಹಸ್ರ ಸಹಾಯ ಧನವನ್ನು ನೀಡಲಾಗುವುದು" ಎಂದು ಭರವಸೆಯಿತ್ತರು. ಇದಾದ ಕೆಲವೇ ದಿನಗಳಲ್ಲಿ ಧನಸಹಾಯದ ನಿರ್ಧಾರ ಸಚಿವ ಸಂಪುಟದ ಸಭೆಯಲ್ಲಿ ಅಂಗೀಕೃತ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದ ವಾರ್ತೆ ಪತ್ರಿಕೆಗಳಲ್ಲಿ ಪ್ರಕಟವಾಯಿತು. ನಿರ್ಣಯ ಕಾರ್ಯರೂಪಕ್ಕೆ ಬರುವ ಮುನ್ನ ಹಠಾತ್ತಾಗಿ ಚುನಾವಣೆಗಳು ಒದಗಿ ಬಂದು ರಾಜಕೀಯ ಪಕ್ಷಗಳ ಚುನಾವಣಾ ಪ್ರಚಾರ ಬಿರುಸಾದಂತೆ ಆಡಳಿತ ವ್ಯವಸ್ಥೆ ಪ್ರತಿನಿತ್ಯದ ಶಿಸ್ತು ಶಾಂತಿಗಳ ರಕ್ಷಣೆಗೆ ಸೀಮಿತವಾಯಿತು. ಜನತಾ ಮತ್ತು ವಿರೋಧಿ ಪಕ್ಷಗಳ ಸಂಯೋಜಿತ ಪ್ರಚಾರದ ಫಲವಾಗಿ ಕಾಂಗ್ರೆಸ್ (ಐ) ಪರಾಭವ, ಪದಚ್ಯುತಿ, ವಿರೋಧಿ ಪಕ್ಷಗಳ ಬೆಂಬಲದಿಂದ ಜನತಾ ಪಕ್ಷ ಅಧಿಕಾರ ವಹಿಸಿಕೊಂಡದ್ದು ಮುಖ್ಯ ಮಂತ್ರಿಯಾಗಿ ಆಯ್ಕೆ ಆದ ಸನ್ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರಿಂದ ಮಂತ್ರಿ ಮಂಡಲದ ರಚನೆ, ಈ ಐತಿಹಾಸಿಕ ಘಟನೆಗಳಿಂದ ಪ್ರಕಟನೆಗೆ ಒದಗಬಹುದಾದ ಬಿಕ್ಕಟ್ಟಿನ ಭೀತಿಯಿಂದ ನಾನು ಹತಾಶನಾಗದಿದ್ದುದರ ಮುಖ್ಯ ಕಾರಣವೆಂದರೆ, ಕನ್ನಡನಾಡಿನ ಧರ್ಮ ಸಂಸ್ಕೃತಿ ಹಾಗೂ ಸಾಹಿತ್ಯ ಪರಂಪರೆಯಲ್ಲಿ ನನಗಿದ್ದ ವಿಶ್ವಾಸ ಭರವಸೆಗಳು. ಘಟನಾಕ್ರಮದಲ್ಲಿ ಯಾವ ರಾಜಕೀಯ ಪಕ್ಷ ಆಡಳಿತಕ್ಕೆ ಬಂದರೂ ಧರ್ಮ, ಸಂಸ್ಕೃತಿ ಕಲೆ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಹಿಂದಿನ ಪ್ರಭುತ್ವ ಅನುಷ್ಠಾನಕ್ಕೆ ತಂದ ಪ್ರಗತಿಪರ ಅಭ್ಯುದಯ ಕಾರ್ಯಕ್ರಮಗಳನ್ನು ಮುಂದುವರೆಸುವ ಸತ್ ಸಂಪ್ರದಾಯ ಕನ್ನಡ ನಾಡಿನ ಪರಂಪರೆಯ ವೈಶಿಷ್ಟ್ಯ ವೆಂಬ ದನ್ನು ಇತಿಹಾಸ ಅಂಗೀಕರಿಸಿದೆ. ಸನ್ಮಾನ್ಯ ಮುಖ್ಯ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆ ಮಹಾಶಯರ ನೇತೃತ್ವದಲ್ಲಿ ಜನತಾ ಸರಕಾರ ಈ ಪರಂಪರೆಯನ್ನು ರಕ್ಷಿಸುತ್ತಿದೆ ಎಂಬುದಕ್ಕೆ ವಿಶ್ವ ಕನ್ನಡ ಸಮ್ಮೇಳನಕ್ಕೆ ಸಂಬಂಧಿಸಿದ ಕಾರ್ಯಕಲಾಪಗಳು ನಿದರ್ಶನ. ಪ್ರಸ್ತುತ ಈ ಲೇಖಕರ ನೆನಪಿಗಾಗಿ ಅಭಿಮಾನಿಗಳು ರಚಿಸಿಕೊಂಡಿರುವ ಸನ್ಮಾನ ಸಮಿತಿಯ ಪ್ರಯತ್ನದ ಫಲವಾಗಿ ಕಾಂಗ್ರೆಸ್ (ಐ) ಸರ್ಕಾರ ಮಂಜೂರು ಮಾಡಿದ್ದ ಸಹಾಯಧನದ ಮೊದಲ ಕಂತಾಗಿ ಐದು ಸಹಸ್ರ ರೂಗಳನ್ನು ಬಿಡುಗಡೆ ಮಾಡಿದೆ ಇದಕ್ಕಾಗಿ ಮಾನ್ಯ ಮುಖ್ಯ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆ ಅವರಿಗೆ, ಮಂತ್ರಿ ಮಂಡಲಿಯ ಸಹ ಸಚಿವರಿಗೆ ಸಮಿತಿಯು, ವೈಯಕ್ತಿಕವಾಗಿ ಈ ಲೇಖಕನು ಆಭಾರಿಯಾಗಿರುತ್ತಾನೆ.

ಪ್ರಕಟನಾ ಲೋಕದ ಆಧುನಿಕ ಕಾರ್ಯವಿಧಾನದಂತೆ ಮುದ್ರಣ ಮುಗಿಯುತ್ತಿದ್ದಂತೆ ಪ್ರತಿಭೆ, ಪಾಂಡಿತ್ಯ, ವಿಸ್ತೃತ ಅಧ್ಯಯನ. ವಿಶಾಲ

Sri Vidyabharathi Book Centre, Sringeri

CC-O. In Public Domain. Digitized by eGangotri

ದೃಷ್ಟಿಯ ವಿಮರ್ಶೆ, ಇದಕ್ಕೆ ಹೆಸರಾದ ವಿದ್ವನ್ಮಣಿಗಳಿಗೆ ಅಭಿಪ್ರಾಯಕ್ಕಾಗಿ ಕಳುಹಿಸಲಾಯಿತು. ಮನವಿಯನ್ನು ಮನ್ನಿಸಿ ಅವರಲ್ಲಿ ಅನೇಕರು ಉತ್ತರ ಕೊಟ್ಟು ನನಗೆ ಸಮಾಧಾನ ತಂದಿದ್ದಾರೆ.ಅವರೆಲ್ಲರಿಗೆ ನನ್ನ ಹಾರ್ದಿಕ ಕೃತಜ್ಞತೆಗಳು.

ಮನಃಶ್ಯಾಸ್ತ್ರಜ್ಞರೂ, ವೇದಾಂತ ಯೋಗ,ತಂತ್ರ ಶಾಸ್ತ್ರ ಗ್ರಂಥಗಳನ್ನು ಆಸಕ್ತಿಯಿಂದ ಅಧ್ಯಯನ ಮಾಡಿದವರೂ, ಶ್ರೀವಿದ್ಯೆಗೆ ಆಧಾರ ಭೂತವಾದ ಮೌಲಿಕ ಕೃತಿಗಳ ಕರ್ತೃಗಳೂ ಆದ ಪ್ರೊಫೆಸರ್ ಎಸ್. ಕೆ. ರಾಮಚಂದ್ರ ರಾಯರು ವಿಸ್ತೃತ್ ಪೂರ್ಣ ಮುನ್ನುಡಿಯಿಂದ ನನ್ನ ಕೃತಿಗೆ ಕಲಶವಿಟ್ಟಿದ್ದಾರೆ. ಕನ್ನಡ ಸಾಹಿತ್ಯದ ಇತಿಹಾಸ ನಿರ್ಮಾಪಕರೂ, ಸಮದೃಷ್ಟಿಯ ವಿಮರ್ಶಕರೂ ಕನ್ನಡ ಸಾಹಿತ್ಯದ ಬಗೆಗೆ ಅಧಿಕಾರವಾಣಿಯಿಂದ ನುಡಿಯ ಬಲ್ಲವರೂ ಆದ ಪ್ರಾಧ್ಯಾಪಕ ರಂ. ಶ್ರೀ ಮುಗುಳಿ ಅವರು ಅನುವಾದ ಸಾಹಿತ್ಯಗಳ ಸ್ಥಾನ ಮಾನಗಳನ್ನು ನಿರ್ಣಯಿಸುವ ಪ್ರಸ್ತಾವನೆಯ ತಿಲಕವಿಟ್ಟಿದ್ದಾರೆ. ಸಾಹಿತ್ಯಾಕಾಶದಲ್ಲಿ ಗುರುಶುಕ್ರರಂತೆ ಬೆಳಗುತ್ತಿರುವ ಈ ವಿದ್ವನ್ಮಣಿಗಳಿಗೆ ನಾನು ವಿಶೇಷರೀತಿಯಿಂದ ಆಭಾರಿ, ಋಣಿ ಹಾಗೂ ಉಪಕೃತ.

ಅನುವಾದದ ಬಗೆಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವ ಪರಿಣತ ಪಂಡಿತ, ವಿಮರ್ಶಕ, ವಿದ್ವನ್ಮಣಿಗಳ ದೃಷ್ಟಿ ಪ್ರತ್ಯೇಕ ದಿಕ್ಕುಗಳಲ್ಲಿ ಹರಿದು, ಕೃತಿಯ ಬೇರೆ ಬೇರೆ ಮುಖಗಳನ್ನು ವಾಚಕರ ಮುಂದಿಡುತ್ತವೆ. ಡಾ॥ ಹಾ. ಮಾ. ನಾಯಕರು ಕೆಲವೇ ನುಡಿಗಳಲ್ಲಿ ಕೃತಿಯ ಬಗೆಗೆ ತಮ್ಮ ವಿಶಾಲ ದೃಷ್ಟಿ ವಿಸ್ತೃತ ಅಧ್ಯಯನ ಸಹೃದಯತೆಗಳನ್ನು ಒಳಸಿದ್ದಾರೆ. ಡಾ॥ ಕೃಷ್ಣ ಮೂರ್ತಿಯವರು ಸಂಸ್ಕೃತ ಸಾಹಿತ್ಯದಲ್ಲಿ ತಮ್ಮ ಪರಿಣತ ಅನುಭವ, ಮೌಲ್ಯಮಾಪಕದಲ್ಲಿ ತಮ್ಮ ವಿಶೇಷ ಪ್ರಜ್ಞೆ. ಇವುಗಳಿಂದ ಕೃತಿಗೇ ತೀರ್ಥ ಸ್ನಾನ ಮಾಡಿಸಿದ್ದಾರೆ. ಪ್ರಾಧ್ಯಾಪಕ ವೃಷಭೇಂದ್ರಸ್ವಾಮಿ ಅವರ ವಿಮರ್ಶಾ ದೃಷ್ಟಿ ಕನ್ನಡಕ್ಕೆ ಸೀಮಿತವಾಗಿ ಕೃತಿಯ ಸ್ಥಾನಮಾನಗಳನ್ನು ನಿಚ್ಚಳ ಗೊಳಿಸಿದೆ. ಶ್ರೀ ಗೋರೂರರ ಸಮಯಪ್ರಜ್ಞೆ, ಸಹೃದಯ ಸ್ನೇಹ ಕೃತಿಯನ್ನು ಅಲಂಕರಿಸಿದೆ. ತಜ್ಞ ವಿಮರ್ಶಕ, ಪ್ರತಿಭಾಸ್ವಿತ ಪಬಂಧಕಾರ ಶ್ರೀ ಶೇಷಗಿರಿರಾಯರು ಕಳತಿ ಬೆಳೆದ ಹೆಸ್ಸೆಲೆಯನ್ನು ಸಮರ್ಥವಾಗಿ ರೂಪಿಸಿದ್ದಾರೆ. ಪ್ರಾಧ್ಯಾಪಕ ಶಂಕರಮೊಕಾಸಿ ಪೂನೇಕರ್ ಅವರು ಶಿವಮ್ಮಹಿದ ತತ್ವ ಪ್ರತಿಪಾದ, ಶಕ್ತಿ·

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂರ್ಣ ಶೈಲಿಯು, ಸೌಂದರ್ಯಲಹರಿಯ ಲಾಲಿತ್ಯ ಹಾಗೂ ಶೃಂಗಾರ ಪ್ರಜ್ಞೆಯ ಮೇಲೆ ವಿಶೇಷಜ್ಞಾನದ "ಕ್ಷ". ಕಿರಣಗಳನ್ನು ಚೆಲ್ಲಿದ್ದಾರೆ. ಇವರೆಲ್ಲರಿಗೆ ಅನು ವಾದಕನು ಚಿರಋಣಿ.

ಕನ್ನಡ ಪ್ರಾಧ್ಯಾಪಕ ಎಂ. ವಿ ಸೀತಾರಾಮಯ್ಯನವರ ಸುದೀರ್ಘ ಅಭಿ ಪ್ರಾಯ ವೈಶಿಷ್ಟ್ಯಗಳಿಂದ ಕೂಡಿದೆ. ಹತ್ತನೆಯ ಶತಮಾನದಲ್ಲಿ ಪ್ರಾರಂಭವಾಗಿ ಪ್ರಸ್ತುತ ಶತಮಾನದ ಪ್ರಾರಂಭದ ವರೆಗೆ ಪಂಡಿತ ಪ್ರಿಯವಾಗಿ ಈಗ ಕಾಣೆ ಯಾಗಿರುವ ಅಕ್ಷರ ವೃತ್ತಗಳನ್ನು ಮತ್ತೆ ಪ್ರಚಾರಕ್ಕೆ ತರುವ ಪ್ರಯತ್ನವನ್ನು ಸ್ವಾಗತಿಸಿ "ಸೌಂದರ್ಯಲಹರಿ"ಯ ಅನುವಾದದಲ್ಲಿ ಕಾಣುವ ಲೋಪ ದೋಷ ಗಳನ್ನು ಗುರುತಿಸಿ ಮೂಲ ಅನುವಾದಗಳನ್ನು ವಿಮರ್ಶೆಯ ಅಗ್ನಿ ಪರೀಕ್ಷೆಗೆ ಗುರಿಪಡಿಸಿದ್ದಾರೆ. ಇದಕ್ಕಾಗಿ ಅವರು ಆರಿಸಿಕೊಂಡ ೨೧ ನೆಯ ಮೂಲ ಮುಂದೆ ಕೊಟ್ಟಿದೆ.

ತಟಿಲ್ಲೇಖಾ ತನ್ವೀಂ ತಪನಶಶಿ ವೈಶ್ವಾನರ ಮಯೀಂ ।
ನಿಷಣ್ಣಾಂ ಷಣ್ಣಾಮಪ್ಯುಪರಿ ಕಮಲಾನಾಂ ತವಕಲಾಂ
ಮಹಾ ಪದ್ಮಾಟವ್ಯಾಂ ಮೃದಿತ ಮಲಮಾಯೇನ ಮನಸಾ
ಮಹಾಂತಃ ಪಶ್ಯಂತೋ ದಧತಿ ಪರಮಾಹ್ಲಾದ ಲಹರೀಂ ॥

೭೩ ನೆಯ ಪುಟದಲ್ಲಿ ಅನುವಾದವನ್ನು ಮೂಲ ದೊಡನೆ ತುಲನಾ ದೃಷ್ಟಿಯಿಂದ ನೋಡಿದಾಗ ಎಂ. ವಿ. ಸಿ. ಯವರು ಮಹಂತ ಶಬ್ದದ ವಿಶೇ ಷಣವಾದ "ಮೃದಿತಮಲಮಾಯೇನಮನಸಾ ಎಂಬುದಲ್ಲದೆ. ನೋಡಬೇಕಾದ ಸ್ಥಾನವನ್ನು ನಿರ್ದೇಶಿಸುವ "ಮಹಾ ಪದ್ಮಾಟವ್ಯಾಂ" ಎಂಬ ನುಡಿಯೂ ಅನು ವಾದದಲ್ಲಿ ಇಲ್ಲವೆಂದೂ, ಮೂಲದಲ್ಲಿಲ್ಲದ "ಶಕ್ತಿ ರೂಪದ ಕುಂಡಲಾಕೃತಿ" ಎಂದು ಕಲೆಯ ವಿಶೇಷಣವೂ ಸಾಧಕನು ಪರಮಾಹ್ಲಾದ ಲಹರಿಯು" ಮುಕ್ತಿ ಸಾಧನೆಗನುವಾಗುವುದು. ಆತ್ಮಾನುಭವವೇ ಎಂಬ ವಿವರಣೆಯೂ ಕಂಡು ಬರು ತ್ತದೆ. ಮೂಲದ ಅರ್ಥವನ್ನು ಸ್ಪಷ್ಟಗೊಳಿಸುವುದೇ ವಿವರಣೆಯ ಉದ್ದೇಶ ವೆಂಬುದರ ಅರಿವಾಗದಿರದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಪರಿಸ್ಥಿತಿಯಲ್ಲಿ ನಾನು ಅನುವಾದವನ್ನು ಮೂಲದೊಡನೆ ಪುನರ್ವಿಮರ್ಶೆಗೆ ತೊಡಗಿದಾಗ ಸುಮಾರು ಹತ್ತಿಪ್ಪತ್ತು ಪದ್ಯಗಳಲ್ಲಿ ಈ ಅಧ್ಯಾಹಾರ ಅನುದಾನಗಳು, ಐಚ್ಛಿಕವಾಗಿಯೋ ಪ್ರಾಸಂಗಿಕವಾಗಿಯೋ ನಡೆದಿರುವುದು ಕಂಡುಬಂದಿತು. (ನೋಡಿ ೪, ೬, ೭, ೧೦, ೧೨) ಈ ಪ್ಯತಿಕ್ರಮ ಹೇಗಾಯಿತು. ನಾನು ಎಡವಿದನೆ ? ಎಂದು ಉದ್ವಿಗ್ನನಾದಾಗ ಅದೇ ಸ್ತೋತ್ರದ ಮುಂದಿನ ಪದ್ಯ ಮಾರ್ಗದರ್ಶನ ನೀಡಿ ಮನಃ ಶಾಂತಿಯನ್ನು ತಂದಿತು.

ಪದನ್ಯಾಸಕ್ರೀಡಾ ಪರಿಚಯಮಿವಾರಬ್ಧ ಮನಸ
ಸ್ಖಲಂತೇ ತೇ ಖೇಲಂ ಭವನ ಕಲಹಂಸಾ ನಜಹತೆ
ಅತಃತೇಷಾಂ ಶಿಕ್ಷಾಂ ಸುಭಗಮಣಿ ಮಂಜೀರ ರಣಿತಃ
ಫಲಾ ದಾಚಕ್ಷಾಣಂ ಚರಣಕಮಲಂ ಚಾರುಚರಿತೆ ॥ ೯ ॥

ಈ ಪದ್ಯದಲ್ಲಿ ಶಂಕರಭಗವತ್ ಪಾದರು ಪದನ್ಯಾಸ ಕ್ರೀಡಾ–ಕವಿ ಪರಿಚಯ ವಿಧಾನ, ಭವನ ಕಲಹಂಸಾ–ಭಕ್ತಕವಿಗಳು, ಸ್ಖಲಂತಃ–ಎಡವಿದಾಗ ಸುಭಗಮಣಿಮಂಜೀರ–ಸೌಭಾಗ್ಯ ಸೂಚಿತನಾದ ಕಾಲ್ಗೆಜ್ಜೆಗಳ ರಣಿತದಿಂದ ಶಿಕ್ಷಾ–ವಿದ್ಯಾ ಪ್ರದಾನವನ್ನು ಆಚ್ಕ್ಷಾಣ–ಆಚಾರ್ಯ ಸ್ಥಾನದಿಂದ ದೇವಿಯು ಓಡುತ್ತಿರುವಳು. ಭಕ್ತರನ್ನು ಅನುಗ್ರಹಿಸುವ ಚಾರು–ಉದಾರ ರಮ್ಯವಾದ ಚರಿತೆ–ಕಾರ್ಯ ವಿಧಾನ ಇದು ಸಮರ್ಪಕ ಎಂದು ಸಂಕೇತ ಧ್ವನ್ಯಾರ್ಥಗಳಿಂದ ಕೂಡಿದ ಈ ಪದ್ಯದಲ್ಲಿ ಧ್ವನಿಸಿರುವರೆಂದು ತಿಳಿದೆ. ಭಕ್ತಕವಿಗಳು ರಚನೆಯಲ್ಲಿ ಎಡವಿದರೂ ಪ್ರಯತ್ನವನ್ನು ಬಿಡದಿರುವುದನ್ನು ಕಂಡಾಗ ದೇವಿಯ ಚರಣಗಳು ಆಚಾರ್ಯ ಸ್ಥಾನದಿಂದ ಮಾರ್ಗದರ್ಶನ ನೀಡುತ್ತದೆ ಶಿಷ್ಟ ಸಾಹಿತ್ಯದ ಗೌರವ ಘನತೆ ಮೌಲ್ಯಗಳು ನಷ್ಟಪ್ರಾಯವಾಗುತ್ತಿರುವ ಇಂದಿನ ದಿನಗಳಲ್ಲಿ ಸ್ತೋತ್ರ ಸಾಹಿತ್ಯ ಪ್ರಕಟನೆಯಲ್ಲಿ ತೊಡಗಿರುವ ನನ್ನ ಸಾಹಸದ ಪ್ರೇರಕ ಶಕ್ತಿಯು "ಚಾರು ಚರಿತೆ"ಯಾದ ದೇವಿಯ ಅನುಗ್ರಹದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನ ದೃಢ ವಿಶ್ವಾಸ ಭರವಸೆಗಳು ಹಾಗೂ ಸಾಹಿತ್ಯ ಕ್ಷೇತ್ರವನ್ನು ಬೆಳಗುತ್ತಿರುವ ಹತ್ತು ಜನ ವಿದ್ವನ್ಮಣಿಗಳ ಹರಕೆ ಹೊತ್ತು ಪ್ರಕಟವಾಗುತ್ತಿರುವ ಅನುವಾದದ ಔಚಿತ್ಯಕ್ಕೆ ಶಂಕರ ಭಗವತ್ಪಾದರ ಶುಭಾಶಿಸ.

ಭಯತ್ ತ್ರಾತುಂ ಧಾತುಂ ಫಲಮಪಿತ
ವಾಂಛಾಸಮಧಿರಂ
ಶರಣ್ಯೌ ಲೋಕಾನಾಂ ತವಹಿ ಚರಣೌ
ಪವನಿಪುಣೌ ॥

CC-O. In Public Domain. Digitized by eGangotri

ಶಿವಮಹಿಮ್ನಸ್ತವ

(ಭಾವಾನುವಾದ)

೧

ಚಂಪಕಮಾಲಾವೃತ್ತ

ಗಿರಿಶ, ಮಹೇಶ, ನಿಮ್ಮ ಮಹಿಮಾತಿಶಯಂ
ಮತಿಹೀನನೆನ್ನ ಕೀ
ಳರಿಮೆಗೆ ನಿಲ್ಕಲೆಂತು ? ವಿಧಿ ವಿಷ್ಣುಸು
ರಾದ್ಯರಿಗಾಗೆ ದುರ್ಲಭಂ.
ಪರಿಮಿತ ಬುದ್ಧಿ ನಿರ್ವಹಿಸೆ ನಾನಸ
ಮರ್ಥನೆನಲ್ಕೆ ದೋಷಮೇಂ —?
ಅರಿತವೊಲಿಂತು ವಾಚಿಸುವೆ ನಿಮ್ಮನು
ಭಾವ ಮಹಾ ಪ್ರಸಾದದಿಂ.

ಓ, ಗಿರಿಶ, ಮಹೇಶ, ನಿಮ್ಮ ಮಹಿಮೆಯ ಅತಿಶಯ-ವಿಶೇಷ ಗುಣಗಳು, ವಿಧಿ-ಬ್ರಹ್ಮ-ವಿಷ್ಣು-ಸುರಾದಿ-ದೇವತೆಗಳಿಗೂ ದುರ್ಲಭಂ-ಕಷ್ಟದಿಂದ ತಿಳಿಯುವಂತಹುದಾಗಿರುವಾಗ, ಮತಿಹೀನ-ಬುದ್ಧಿಹೀನನಾದ ನನ್ನ ಕೀಳರಿಮೆಗೆ-ಕೆಳಮಟ್ಟದ ಅರಿವಿಗೆ ನಿಲ್ಕಲೆಂತು?-ನಿಲುಕುವುದು ಹೇಗೆ ಸಾಧ್ಯ? ಪರಿಮಿತ-ಅಳತೆಗೆ ಒಳಪಟ್ಟ ಬುದ್ಧಿಯುಳ್ಳವನಾದ-ನಾನು ಆ ಕಾರ್ಯವನ್ನು ನಿರ್ವಹಿಸಲು ಅಸಮರ್ಥನೆನ್ನುವಲ್ಲಿ ತಪ್ಪೇನಿದೆ? ನಿಮ್ಮ ಅನುಭಾವ-ಅತೀಂದ್ರಿಯವಾದ-ವಿಶೇಷವಾದ ಅನುಭವದ ಮಹಾಪ್ರಸಾದದಿಂದ ಅರಿತವೊಲಿಂತು-ಎಷ್ಟು ತಿಳಿದುಕೊಂಡಿರುವೆನೋ ಅಷ್ಟನ್ನು ವಾಚಿಸುವೆ-ಅರ್ಥಬದ್ಧವಾಗಿ ವಿವರಿಸುತ್ತೇನೆ.

ಮಹಿಮ್ನಸ್ತವದ ಕವಿ ಪುಷ್ಪದಂತ ಗಂಧರ್ವನು ಈ ಪದ್ಯದಲ್ಲಿ ತನ್ನ ಆತ್ಮ ಕಥೆಯನ್ನು ಸೂಚ್ಯವಾಗಿ ಹೇಳಿಕೊಂಡಿದ್ದಾನೆ. ಮತಿಹೀನ, ಪರಿಮಿತ ಮತಿ, ಅನುಭಾವ ಮಹಾಪ್ರಸಾದ ಈ ಹೆಸರುಗಳು ಕ್ರಮವಾಗಿ ಮೇಲೇರುವ ಏಣಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಂತೆ ಮತಿ-ಬುದ್ಧಿಯ ಅಂತಸ್ತುಗಳನ್ನು ಸೂಚಿಸುತ್ತವೆ. ಇಂದ್ರಿಯ
ವ್ಯಾಪಾರಗಳಲ್ಲಿ ಮಗ್ನನಾಗಿ ಪರದ ಚಿಂತೆಯೇ ಇಲ್ಲದಿರುವವನು, ಪಶು-ಮ
ಹೀನ, "ಆತ್ಮಾತ್ವಂ ಗಿರಿಜಾಮತಿ" ಎಂಬ ಆದಿಶಂಕರರ (ದೇವೀಮಾನ
ಪೂಜಾ ೫) ಮಾನವ ಜೀವನದಲ್ಲಿ "ಮತಿ"ಯ ಸ್ಥಾನವನ್ನು ಸೂಚಿಸುತ್ತದೆ
ಗುರು ಕರುಣೆಯಿಂದ, ಶಾಸ್ತ್ರಾಭ್ಯಾಸದಿಂದ ಬುದ್ಧಿ ಎಚ್ಚೆತ್ತವನು ಪರಿಮಿ
ಮತಿ, ಶಿವನ ಮಹಾಪ್ರಸಾದದಿಂದ (ಕರುಣೆ) ಪೂರ್ಣಪ್ರಜ್ಞನಾದವನು
ಅನುಭಾವೀ ಶರಣ,

ಸಂಸ್ಕೃತ ಸ್ತೋತ್ರ ಸಾಹಿತ್ಯದಲ್ಲಿ ಶಿವ ಮಹಿಮ್ನಸ್ತವಕ್ಕೆ ಭಗವದ್ಗೀ
ಯಷ್ಟೇ ಪ್ರಮುಖ ಸ್ಥಾನವಿರುತ್ತದೆ, ವಿಶ್ವದ ದೃಷ್ಟಿಯನ್ನು ಭಾರತದ ತ
ಶಾಸ್ತ್ರದ ಕಡೆಗೆ ತಿರುಗಿಸಿದ ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ (1893
ಭಾರತದ ಪ್ರತಿನಿಧಿಯಾಗಿ ಸ್ವಾಮಿ ವಿವೇಕಾನಂದರು ಮಾಡಿದ ಭಾಷಣ
ವಸ್ತು ಮಹಿಮ್ನಸ್ತವ ಮತ್ತು ಭಗವದ್ಗೀತೆಯ ಒಂದೊಂದು ಪದ್ಯಗಳ ಅರ್ಥ
ವಿವರಣೆಯಾಗಿತ್ತು, ಆ ಅವಿಸ್ಮರಣೀಯ ಘಟನೆಯನ್ನು ರಾಷ್ಟ್ರಕವಿ ಕುವೆಂಪ
ಅವರು ತಮ್ಮ "ವಿವೇಕಾನಂದ" ಜೀವನ ಚರಿತ್ರೆಯಲ್ಲಿ ವಿವರಿಸಿದ್ದಾರೆ.

೨

ಉತ್ಪಲಮಾಲಾವೃತ್ತ

ನಿಮ್ಮ ಮಹಿಮ್ನದಾಯತಿ ಅತೀತಮೆ
ನಲ್ ಮನಕಂತೆ ಮಾತಿಗಂ
ಬಿಮ್ಮನೆ ನಿಂತುದಚ್ಚರಿಗೆ ಸಂದಿರೆ
ವೇದ ವಿಶಾಲ ವಾಜ್ಮಯಂ.
ಕಮ್ಮನಿಪಂತೆ ಬಣ್ಣಿಸಲದಂ ಫಲ
ಮಾರ್ಗೆ ಗುಣಂಗಳಿಷ್ಟೆನು
ತ್ತೊಮ್ಮೆ ಮನಂಗೊಡಲ್ ಸಲದ ಸಜ್ಜನ
ರುಂಟೆ ಸಮಸ್ತ ಲೋಕದೋಳ್

ಓ ಪರಮೇಶ್ವರ, ನಿಮ್ಮನ್ನು ಸ್ತುತಿಸುವ ಮಹಿಮ್ನಸ್ತವದ ಆಯತಿ
ಸಾಮರ್ಥ್ಯವು ಮನಸ್ಸು ಮಾತುಗಳಿಗೆ ಅತೀತ-ಹಿಡಿತಕ್ಕೆ ಸಿಕ್ಕದಷ್ಟು . ದೂ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದವು, ಈ ಕಾರಣದಿಂದ ವಿಶಾಲವಾದ ವೇದಸಾಹಿತ್ಯವು ಆಶ್ಚರ್ಯದಿಂದ ಗಂಭೀರವಾಗಿ ನಿಂತು ನೋಡುತ್ತಿದೆ. ಮೂಲದ "ಚಕಿತಮಭಿಧತ್ತೇ ಶ್ರುತಿರಪಿ" ಎಂಬುದು ಸಂಸ್ಕೃತ ಭಾಷೆಯ ಶಕ್ತಿ, ಮಾಧುರ್ಯ ಗಾಂಭೀರ್ಯಗಳಿಗೆ ನಿದರ್ಶನ. ಆ ನಿನ್ನ ಮಹಿಮೆಯನ್ನು ಕವ್ಮನೆ-ಇನಿದಾಗುವಂತೆ, ವರ್ಣಿಸುವ ಛಲ ಯಾರಿಗಾದರೂ ಇಹೆಯೆ? ಆ ಮಹಿಮೆಯ ಗುಣಗಳಿಷ್ಟು? ಎಂಬುದನ್ನು ಮನದಲ್ಲಿ ಚಿಂತಿಸಲು ಸಲ್ಲದ ಸಜ್ಜನರು ಲೋಕದಲ್ಲಿರುವರೇ? ಇಲ್ಲವೆಂದು ಕವಿಯ ಮತ.

೩

ಚಂಪಕಮಾಲಾ

ಶ್ರುತಿ ಮಧುವಾಗಿ ಶಾಶ್ವತ ಸುಖಕ್ಕೆಡೆ
ಮಾಡುವ ವೇದ ರಾಶಿಗು
ನ್ನತಿಯನಮರ್ಚೆ ನಿನ್ಮನುತಿ, ವಿಸ್ಮಯ
ಕೇರ್ದುದು ಬೋಧಿರಾಟ್ಬೃಹ
ಸ್ಪತಿಯ ವಿಚಾರಧಾರೆ, ತ್ರಿಪುರಾರಿ, ಭ
ವದ್ಗುಣ ಕೀರ್ತನೋತ್ಸುಕಂ
ಮತಿ ಉದಿಸಿರ್ದುದೆನ್ನಮನದೋಳ್ ಬಹು
ಪುಣ್ಯ ಪ್ರಲೋಭ ಚೇಷ್ಟಿತಂ

ಓ ತ್ರಿಪುರಾರಿ, ಶ್ರುತಿಮಧುವಾಗಿ-ಕವಿಗಳಿಗೆ ಜೇನಿನಂತೆ ಮಧುರವಾಗಿ ಶಾಶ್ವತವಾದ, ಸುಖ-ಆನಂದಕ್ಕೆ ಅವಕಾಶ ಕಲ್ಪಿಸುವ ವೇದರಾಶಿಗೆ ನಿನ್ಮನುತಿ-ನಿನ್ನ ಸ್ತೋತ್ರವಾದ ಶತರುದ್ರೀಯವು, ಉನ್ನತಿ-ಹಿರಿಮೆಯನ್ನು ಅಮರ್ಚೆ-ಉಂಟುಮಾಡಲು, ಬೋಧಿರಾಟ್-ಬೋಧಕರಲ್ಲಿ ರಾಜನಂತಿದ್ದ ಬೃಹಸ್ಪತಿಯ ವಿಚಾರಧಾರೆ, ವಿಸ್ಮಯಕೆ-ಆಶ್ಚರ್ಯಕ್ಕೆ ಏರಿತು. ನನ್ನ ಮನಸ್ಸಿನಲ್ಲಿ ಬಹು ಪುಣ್ಯದ ಪ್ರಲೋಭದಿಂದ ಪ್ರಚೋದಿತವಾದ ಭವತ್-ನಿನ್ನ ಗುಣಗಳನ್ನು ಹೊಗಳಲು ಉತ್ಸುಕವಾದ ಬುದ್ಧಿಯ ಉದಯವಾಯಿತು.

Sri Vidyabharathi Book Centre, Sringeri

 CC-O. In Public Domain. Digitized by eGangotri

೪

ಚಂಪಕಮಾಲಾ

ಜಗದುದುಯಕ್ಕೆ ರಕ್ಷೆಗೆ ಲಯಕ್ಕನು
ವಾಗೆ ತ್ರಿಮೂರ್ತಿ ರೂಪಗಳ್
ತ್ರಿಗುಣದೆ ಭಿನ್ನವಾದ ತನು ನಿಮ್ಮದ
ದೆನ್ನುತೆ ಘೋಷಿಸಲ್‌ತ್ರಯೀ
ನಿಗಮಮದಂ ತಿರಸ್ಕರಿಸಿ, ರಮ್ಯಮು
ರಮ್ಯಮೆನ್ನುತೆ ವೈರಮಂ
ಬಗೆದು ವಿತಂಡವಾದಕಿಳಿವರ್ ಜಡ
ಚಿತ್ತದ (ಅ)ಮಂಗಳಾರ್ಥಿಗಳ್.

ಜಗತ್ತಿನ ಉದಯಕ್ಕೆ, ರಕ್ಷೆಗೆ, ಲಯಕ್ಕೆ ಅನುಕೂಲವಾಗಲು ಬ್ರಹ್ಮ ವಿಷ್ಣು ಮಹೇಶ್ವರರ ರೂಪಗಳು ಸತ್ವ ರಜ ತಮ ಈ ಮೂರು ಗುಣಗಳಿಂದ ವಿಭಿನ್ನವಾದ ನಿಮ್ಮ ಅಂಶಗಳೇ ಎಂದು ಮೂರು ವೇದಗಳು ಘೋಷಿಸಿದರೂ ಅದನ್ನು ತಿರಸ್ಕರಿಸಿ ತ್ರಿಮೂರ್ತಿಗಳಲ್ಲಿ ಪರ ವೈರಭಾವವನ್ನು ಕಲ್ಪಿಸಿಕೊಂಡು ಜಡಚಿತ್ತದ-ಜಡವಾದ ಮನಸ್ಸಿನ ಅಮಂಗಳಾರ್ಥಿಗಳ್-ಅಮಂಗಳವನ್ನು ಅಪೇಕ್ಷಿಸುವವರು ವಿತಂಡ-ದೋಷದೃಷ್ಟಿಯ ವಾದಕ್ಕೆ ಪ್ರಾರಂಭಿಸುವರು.

೫

ಚಂಪಕಮಾಲಾ

ಬಯಸಿದುದೇನು ? ಪದ್ಮಭವನಂದದೆ
ಸೃಷ್ಟಿಸಲೆಂದೆ ಈ ಜಗತ್
ತ್ರಯವನೆನಲ್ ತಮವ್ಯಮಕೆ ಸಲ್ವ ಉ
ಪಸ್ಕರಮೆಲ್ಲಿ ? ವಸ್ತುಸಂ
ಚಯಮಿಹುದೆಷ್ಟು ? ನಿಲ್ಲೆನೆಲೆಯಾವುದೆ
ನುತ್ತೆ ಕುತರ್ಕವಾಡಿ ಸಂ
ಶಯಕೆಡೆವಾಡುವರ್ ಗಿರಿಶ, ನಿಮ್ಮಸ
ಮಾನ ಮಹದ್ವಿಭೂತಿಯಂ

ವಿತಂಡ ವಾದದ ಇನ್ನೊಂದು ರೂಪವನ್ನು ಕವಿ ಈ ಪದ್ಯದಲ್ಲಿ ಹೇಳುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಮ್ಮ ಗಿರಿಶ ಬಯಸಿದುದೇನು? ನಿಮ್ಮ ಶಿವನು ಅಪೇಕ್ಷಿಸಿದ್ದೇನು? ಪದ್ಮಭವನಾದ ಬ್ರಹ್ಮನಂತೆ ಈ ಮೂರು ಲೋಕಗಳನ್ನು ಸೃಷ್ಟಿಸಲೆಂದೆ, ಹಾಗಿದ್ದರೆ ಆ ಉದ್ಯಮಕ್ಕೆ ಸಲ್ಲುವ-ಬೇಕಾಗುವ ಉಪಸ್ಕರ-ಉಪಕರಣಗಳೆಲ್ಲಿ? ವಸ್ತುಸಂಗ್ರಹ ಎಷ್ಟಿದೆ? ಸೃಷ್ಟಿಸಿದ ಜಗತ್ತು ನಿಲ್ಲುವ ಸ್ಥಳ ಯಾವುದು ಎಂದು ಕುತರ್ಕವಾಡಿ ಓ ಗಿರಿಶ, ನಿಮ್ಮ ಅಸಮಾನವಾದ ಮಹತ್ ವಿಭೂತಿ-ಮಹಿಮೆಯನ್ನು ಸಂಶಯಕ್ಕೆ ಗುರಿಪಡಿಸುತ್ತಾರೆ.

೬

ಉತ್ಪಲಮಾಲಾ

ಇಂತು ಕುತರ್ಕಗಳ್ ಸುರಗಣಾರ್ಚಿತ,
ನಿಂದಿಸೆ ನಿಮ್ಮ ಶೂನ್ಯತಾ-
ಕ್ರಾಂತಮೆನಿಪ್ಪ ಲೋಕಗಳ ಸೃಷ್ಟಿ ಅ
ಕರ್ತೃಕ ಕರ್ಮಕೃತ್ಯನೋ?
ಭ್ರಾಂತ ಅವಾಸ್ತವಾಂಶದೊಳನೀಶ್ವರ
ನಶ್ವರ ಶಕ್ತಿಯೋ ಎನಲ್
ಬೆಂತರನಾಟಕಿಟ್ಟಪರು ನಿಮ್ಮ ಮ
ಹತ್ವವನಾ ನರಾಧಮರ್

ಓ ಸುರಗಣಾರ್ಚಿತ-ದೇವತೆಗಳಿಂದ ಪೂಜಿಸಲ್ಪಡುವ ಶಿವನೆ, ಈ ರೀತಿಯಾಗಿ ಕುತರ್ಕಿಗಳು ನಿಮ್ಮನ್ನು ನಿಂದಿಸುವುದಾದರೆ ಈ ಜಗತ್ತು ಹೇಗೆ ನಿರ್ಮಾಣವಾಯಿತು, ಶೂನ್ಯತೆ-ಬಯಲಿನಿಂದ ಆವರಿಸಲ್ಪಟ್ಟ ಈ ಲೋಕಗಳ ಸೃಷ್ಟಿ, ಕರ್ತೃವೇ ಅಲ್ಲದ ಕರ್ಮವಿನ ಕಾರ್ಯದಿಂದ ಆದದ್ದೊ? ಭ್ರಾಂತಿ ಮೂಲವಾದ ವಾಸ್ತವವಲ್ಲದ ಎಲ್ಲಿಯೋ ಇರಬಹುದಾದ ಈಶ್ವರನ ಅನೀಶ್ವರ ಶಕ್ತಿಯೋ ಏಂದು ಹೇಳುತ್ತಾ ಆ ನರಾಧಮರು ನಿಮ್ಮ ಮಹಾತ್ಮೆಯನ್ನು ಬೆಂತರನಾಟಕ್ಕೆ-ಮಾಯದಾಟಕ್ಕೆ ಇಡುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೭

ಚಂಪಕಮಾಲಾ

ಭುವನದೊಳಾದಿ ವೈದಿಕಮತಂ, ತದ
ನಂತರ ಸಾಂಖ್ಯಯೋಗದು
ದ್ಭವಂ, ಅದು ಮುಂದೆ ಪಾಶುಪತ ವೈಷ್ಣವ
ಧರ್ಮಗಳಾದವು, ಇಂತು ಮಾ
ನವರುಚಿ ಭೇದದಿಂ ನುತಗಳಾಗೆ ವಿ
ಭಿನ್ನ ವಿಚಿತ್ರ ಕೊಂಕುಗಳ್
ತವರೆನೆ, ನೀವೆ ಗಮ್ಯರವುಗಳ್ಗೆ ನ
ದೀನದಕೆಂತೊ ಸಾಗರಂ.

ಓ, ದೇವ, ಈ ಜಗತ್ತಿನಲ್ಲಿ ಅತ್ಯಂತ ಪುರಾತನವಾದ ಮತವೆಂದರೆ ಯಜ್ಞಯಾಗಾದಿಗಳನ್ನು ಆಧರಿಸಿದ ವೇದಗಳ ಕರ್ಮಕಾಂಡ, ಅನಂತರ ಸಾಂಖ್ಯ ಯೋಗದರ್ಶನಗಳು ಹುಟ್ಟಿದವು. ಕಾಲಕ್ರಮದಲ್ಲಿ ಅವು ಅನುಕ್ರಮವಾಗಿ ಪಾಶುಪತ ವೈಷ್ಣವ ಧರ್ಮಗಳಾಗಿ ರೂಪುಗೊಂಡವು. ಹೀಗೆ ಮಾನವರ ಅಭಿರುಚಿ–ಅಭಿಪ್ರಾಯಗಳ ಭೇದದಿಂದ ಉದ್ಭವಿಸಿದ ಮತಧರ್ಮಗಳು ವಿಭಿನ್ನವೂ ವಿಚಿತ್ರವೂ ಆದ ಕೊಂಕು–ಉದ್ವೇಗದ ವಕ್ರ ವ್ಯಂಗ್ಯ, ಕಟಕಿ ಮಾತುಗಳು ಹುಟ್ಟಿಕೊಂಡು ಕೊಂಕಿನ ತವರು–ಜನ್ಮಗೃಹವೇ ಆದವು. ನದೀ ನದಗಳೆಲ್ಲಕ್ಕೆ ಸಾಗರವೇ ಗುರಿಯಾಗಿ ಹರಿಯುವಂತೆ ಈ ಮತ ಧರ್ಮದರ್ಶನಗಳಿಗೆ ನೀವೇ ಗಮ್ಯ-ಗುರಿ ಆಗಿರುವಿರಿ.

ಮತ, ಧರ್ಮ, ದರ್ಶನ ಈ ಮಾತುಗಳ ಅರ್ಥಭೇದವನ್ನು ಈ ಪದ್ಯದಲ್ಲಿ ಸೂಚಿಸಿದೆ. ಮತ ಶಬ್ದಕ್ಕೆ ವಿಚಾರ, ಆಲೋಚನೆ, ಒಟ್ಟಿಗೆ ಮುಂತಾಗಿ ಅನೇಕಾರ್ಥಗಳಿದ್ದರೂ ಅದು ಒಬ್ಬ ವ್ಯಕ್ತಿಯ, ಅಥವಾ ಸಮೂಹದ ಅಭಿಪ್ರಾಯ ಎಂದು ಸೀಮಿತವಾಗುತ್ತದೆ. ಧರ್ ಧಾತುವಿನಿಂದ ಹುಟ್ಟುವ ಧರ್ಮಶಬ್ದಕ್ಕೆ ಧಾರಣ, ಮಾಡಿದುದು, ನಿಯಮ, ನ್ಯಾಯ, ಕರ್ತವ್ಯ, ನೀತಿ ಮುಂತಾದ ಅರ್ಥಗಳಿವೆ. ವ್ಯಕ್ತಿಯ ಅಭಿಪ್ರಾಯವನ್ನು ಸಮೂಹ ಅಂಗೀಕರಿಸಿ ಆಚರಣೆಗೆ ತಂದಾಗ ಧರ್ಮವಾಗುತ್ತದೆ. ದರ್ಶ ಶಬ್ದಕ್ಕೆ ನೋಡುವುದು ಎಂಬ ಸಾಮಾನ್ಯಾರ್ಥವನ್ನು ಬದಿಗಿಟ್ಟು ವಿಚಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿ, ಆಲೋಚಿಸಿ ತೀರ್ಮಾನಕ್ಕೆ ಬರುವುದು ಎಂಬ ವಿಶಿಷ್ಟಾರ್ಥದಲ್ಲಿ ದರ್ಶನ ಶಬ್ದವು ಪ್ರಯೋಗವಾಗುತ್ತದೆ. ಭಾರತೀಯ ಅರ್ಥಾತ್ ಹಿಂದೂ ಧರ್ಮದ ರೀತ್ಯಾ ದರ್ಶನಗಳು ಆರು. ವೈಶೇಷಿಕ, ನ್ಯಾಯ, ವೇದಾಂತ, ಸಾಂಖ್ಯ, ಯೋಗ ಮತ್ತು ಮೀಮಾಂಸ ಎಂದು.

ವೈಶೇಷಿಕ-ಕಣಾದನಿಂದ ಪ್ರತಿಪಾದಿತವಾದ ತತ್ವ. ಅವನ ನಿಜವಾದ ಹೆಸರು ತಿಳಿಯದು. ವಸ್ತುವಿನ ಅತ್ಯಂತ ಸೂಕ್ಷ್ಮವಾದ ಅಂಶ ಕಣ-ಅಣು, ಅದನ್ನು ಕುರಿತು ವಿಶೇಷವಾದ ಸಂಶೋಧನೆ ನಡೆಸಿದವನನ್ನು ಕಣ-ಅದ. ಕಣವನ್ನು ತಿನ್ನುವವನು ಕಣಾದ ಎಂದು ಕರೆದರು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅಣು ಸಂಶೋಧನೆ ಪ್ರಾರಂಭವಾಗುವುದಕ್ಕೆ ಮೂರು ನಾಲ್ಕು ಸಾವಿರ ವರ್ಷಗಳ ಮೊದಲೇ ಭಾರತೀಯರು ಈ ಕಾರ್ಯಕ್ಕೆ ತೊಡಗಿದರೆಂಬುದಕ್ಕೆ "ವೈಶೇಷಿಕ" ದರ್ಶನ ನಿದರ್ಶನ.

ನ್ಯಾಯ—ತರ್ಕ ಎಂಬುದು ಇದರ ಇನ್ನೊಂದು ಸಮರ್ಪಕ ನಾಮ. ಯಾವೊಂದು ವಿಚಾರವನ್ನೇ ಆಗಲಿ, ಚರ್ಚಿಸಿ ತೀರ್ಮಾನಕ್ಕೆ ಬರುವಾಗ ಅನುಸರಿಸಬೇಕಾದ ನಿಯಮ ನಿಬಂಧನೆಗಳನ್ನು ವಿಶ್ಲೇಷಿಸಿ ನಿರ್ಧರಿಸುವ ಶಾಸ್ತ್ರ. ಎಲ್ಲ ಮತ ಧರ್ಮ ಚರ್ಚೆ ನಿರ್ಧಾರಗಳಿಗೆ ತರ್ಕಶಾಸ್ತ್ರ ಉಪಯುಕ್ತ.

ವೇದಾಂತ—ವೇದ ಸಾಹಿತ್ಯದ ಪರಿಣತ ರೂಪವಾದ ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದ ಅದ್ವೈತದ, ಬೇರೆ ಬೇರೆ ರೂಪಗಳು. ಇದನ್ನು ಉತ್ತರ ಮೀಮಾಂಸ ಎಂದೂ ಕರೆಯುತ್ತಾರೆ. ವೇದಾಂತವನ್ನು ಕುರಿತ ಸಂಸ್ಕೃತ ಗ್ರಂಥರಾಶಿ, ಜಗತ್ತಿನ ಎಲ್ಲ ಪ್ರಾಚೀನ ಭಾಷೆಗಳಿಗಿಂತ ವಿಸ್ತಾರವೂ ವಿಪುಲವೂ ಆಗಿದ್ದು, ಆಧುನಿಕ ತತ್ವಶಾಸ್ತ್ರಗಳಲ್ಲಿ ಅತಿ ಮುಖ್ಯವಾದ ಪ್ರತಿಷ್ಠಿತ ಸ್ಥಾನ ಪಡೆದಿದೆ.

ಸಾಂಖ್ಯ—ಕಪಿಲ ಮುನಿಯಿಂದ ಪ್ರತಿಪಾದಿತವಾಗಿ ವಸ್ತುಗಳ ಸಂಖ್ಯೆಯನ್ನು ನಿರ್ಧರಿಸುವ ತತ್ವಶಾಸ್ತ್ರ. ಇದು ವೈಶೇಷಿಕದ ಪರಿಣತ ರೂಪವೆಂದು ಕೆಲವರ ಅಭಿಮತ. ಅತೀಂದ್ರಿಯ ಅನುಭವ ಅನುಭಾವಗಳಿಗೆ ಆಧಾರವಾದ ಮನೋವಿಜ್ಞಾನ ಸಾಂಖ್ಯ ದರ್ಶನದಲ್ಲಿ ಮೊದಲು ಕಾಣಿಸಿಕೊಳ್ಳುತ್ತದೆ. ಭಾರತೀಯ ತತ್ವಶಾಸ್ತ್ರದ ಮೂಲವೂ ಸಾಂಖ್ಯದಲ್ಲಿದೆ.

ಯೋಗ—ಪತಂಜಲಿಯಿಂದ ಸೂತ್ರ ರೂಪದಲ್ಲಿ ಸಂಕಲಿತವಾದ ಯೋಗ ದರ್ಶನದ ಮೂಲ, ವೇದ ಸಾಹಿತ್ಯಕ್ಕೂ ಹಿಂದಿನ ಆರ್ಯಪೂರ್ವ ದ್ರಾವಿಡ

 CC-O. In Public Domain. Digitized by eGangotri

ಸಂಸ್ಕೃತಿಯಲ್ಲಿ ಯೋಗದರ್ಶನ ಇತ್ತೆಂಬುದು ಬಹು ಮಂದಿ ಸಂಶೋಧಕರ ಅಭಿಪ್ರಾಯ. ಮಹೆಂಜೋದೊರೋ ಸಂಸ್ಕೃತಿ ಅವಶೇಷಗಳಲ್ಲಿ ಯೋಗದ ಗುರುತುಗಳು ದೊರಕುತ್ತವೆ. ಸಾಂಖ್ಯ ಯೋಗ ದರ್ಶನಗಳ ಮಿಳನದಿಂದ ಶೈವ, ಜೈನ, ಬೌದ್ಧ, ವೈಷ್ಣವ ಧರ್ಮಗಳು ರೂಪುಗೊಂಡವೆಂಬುದನ್ನು ಈಗ ಎಲ್ಲ ಸಂಶೋಧಕರು ಒಪ್ಪುತ್ತಾರೆ.

ಮೀಮಾಂಸ—ವೇದಕಾಲೀನ ಯಜ್ಞಗಳನ್ನು ಆಧರಿಸಿ ರಚಿತವಾದ ತತ್ವಶಾಸ್ತ್ರಕ್ಕೆ ಪೂರ್ವಮೀಮಾಂಸಾ ಎಂದೂ ಹೆಸರಿದೆ. ಭಾರತ ಸಂಸ್ಕೃತಿಯಲ್ಲಿ ವೇದ ಪುರಾಣ ಯುಗಗಳ ಪ್ರತೀಕವಾದ ಆಚಾರ ವಿಚಾರ ಪೂಜೆ ಪುರಸ್ಕಾರಗಳು ಉಳಿದಿರುವುದು ಪೂರ್ವಮಿಾಮಾಂಸೆಯ ಪ್ರಭಾವದಿಂದಲೇ ಆಗಿರುತ್ತದೆ. ಕ್ರಿಸ್ತಪೂರ್ವದಲ್ಲಿ ಜೈನ, ಬೌದ್ಧ ಧರ್ಮಗಳೂ, ಕ್ರಿಸ್ತಶಕಾನಂತರ ಶೈವ ವೈಷ್ಣವ ಧರ್ಮಗಳೂ ಈ ಬಂಧನದಿಂದ ಬಿಡಿಸಿಕೊಳ್ಳಲು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದವು.

ಲ

ಮಹಾಸ್ರಗ್ಧರ

ಮುದಿ ಎತ್ತಾಗಲ್ ಮಹೋಕ್ಷಂ, ಕರದೆ ವಿಧಿ ಕಪಾ
ಲಂ ಋತ ಸ್ವಪ್ರತಿಷ್ಠಾ
ಪದನಾಯ್ತು, ಅಂಗಾಂಗಮೆಲ್ಲಂ ಫಣಿಪುಟಿತ ಚಿತಾ
ಭಸ್ಮಮ್, ಅಂತೆ ಆಳ್ವ ತಂತ್ರಂ,
ತ್ರಿದಶರ್ ಲೋಕೇಶ್ವರರ್ ನಿಮ್ಮ ಭ್ರುಕುಟಿ ಕಡೆಗಣ್
ನೋಟದಿಂದೆನ್ನಲ್ ಅಂತಾ
ದುದು ನಿಮ್ಮಾತ್ಮಾಭಿರಾಮ ಪ್ರಶಮಿತ ವಿಷ
ಯಾಪೇಕ್ಷ ವೈರಾಗ್ಯದಿಂದಂ.

ಓ ವಿಶ್ವೇಶ್ವರ, ಪರಮಶಿವ, ನಿಮ್ಮ ವಾಹನವೆಂಬ ಕಾರಣದಿಂದ ಮುದಿ ಎತ್ತು ಮಹೋಕ್ಷಂ–ಬಲಿಷ್ಠವಾದ ವೃಷಭವಾಗಿರಲು, ನಿಮ್ಮ ಕೈಯಲ್ಲಿರುವ ಬ್ರಹ್ಮದೇವನ ಕಪಾಲಂ-ತಲೆಬುರುಡೆಯು, ಋತ-ಸತ್ಯ ಧರ್ಮ ನ್ಯಾಯಗಳಿಗೆ ಸ್ವಪ್ರತಿಷ್ಠಾಪದಮಾಯ್ತು–ಆತ್ಮಗೌರವವನ್ನು ಕೊಡುವ ಪದ-ಸ್ಥಾನ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಯಿತು. ನಿಮ್ಮ ಸರ್ವಾಂಗವೂ ಫಣಿವುಟಿತ–ಹಾವುಗಳಿಂದ ಕಾವೇರಿದ ಸ್ಮಶಾನದ ಬೂದಿಯಿಂದಕೂಡಿ ಅಂತೆ-ಹಾಗೆಯೇ ಆಳ್ವತಂತ್ರಂ–ನಿಮ್ಮ ಆಳ್ವಿಕೆಯ ಕಾರ್ಯವಿಧಾನವೂ ಆದುವು. ತ್ರಿದಶರ್–ಇಂದ್ರ ವರುಣಾದಿ ದೇವತೆಗಳು ನಿಮ್ಮ ಭ್ರುಕುಟಿ-ಗಂಟು ಹುಬ್ಬು ಮತ್ತು ಕಡೆಗಣ್ನೋಟದಿಂದ –ಕೃಪಾದೃಷ್ಟಿಯಿಂದ ಲೋಕೇಶ್ವರರ್-ಲೋಕಗಳ ಅಧಿನಾಯಕರು ಎನ್ನಲ್ –ಎನ್ನಲು ಅಂತಾದುದು–ಹಾಗಾದದ್ದು ನಿಮ್ಮ ಆತ್ಮಾಭಿರಾಮ-ಆತ್ಮರೂಪವಾದ ಪರಾಜೈತನ್ಯವನ್ನು ಕುರಿತ ಚಿಂತನೆಯಿಂದಾದ ಆನಂದದಿಂದ, ಪ್ರಶಮಿತ –ಶಾಂತವಾದ ವಿಷಯ ಸುಖಾಪೇಕ್ಷೆಯ ವೈರಾಗ್ಯದಿಂದ–ವಿರಕ್ತಿಯಿಂದ.

ಈ ಪದ್ಯದಲ್ಲಿ ಪುಷ್ಪದಂತನು ಪರಶಿವನ ವೈರಾಗ್ಯಮೂರ್ತಿಯನ್ನು ಧ್ವನಿಪೂರ್ಣವಾದ ಚತುರತೆಯಿಂದ ವರ್ಣಿಸಿದ್ದಾನೆ. ಮೂಲದ ಖಟ್ವಾಂಗ-ಖಟ್ವಾಯುಧ, ಪರಶು-ಗಂಡುಗೊಡಲಿ, ಅಜಿನ–ಮೃಗಚರ್ಮಗಳ ಉಲ್ಲೇಖ ಅನುವಾದದಲ್ಲಿ ಬಿಟ್ಟುಹೋಗಿದ್ದರೂ, ಬ್ರಹ್ಮಕಪಾಲ ಚಿತಾಭಸ್ಮಗಳ ವರ್ಣನೆ ಅತಿಶಯವಾಗಿ ಬಂದಿದೆ.

ಹಿಂದೊಂದು ದಿನ ಬ್ರಹ್ಮದೇವನು ಧ್ಯಾನದಲ್ಲಿದ್ದಾಗ ಇಂದ್ರಾದಿ ದೇವತೆಗಳು ಬ್ರಹ್ಮನ ನಿಷ್ಠೆಯನ್ನು ಪರೀಕ್ಷಿಸಲು ಮೇನಕೆಯನ್ನು ಕಳುಹಿಸುತ್ತಾರೆ. ಅವಳು ಎದುರಿಗೆ ಬಂದು ನರ್ತಿಸುತ್ತ ಪಾರ್ಶ್ವಕ್ಕೆ ಹೋದಾಗ ಬ್ರಹ್ಮನು ಆ ಪಾರ್ಶ್ವದಲ್ಲಿ ತಲೆಯೊಂದನ್ನು ಸೃಷ್ಟಿಸಿಕೊಳ್ಳುತ್ತಾನೆ. ನರ್ತನದ ಆಸಕ್ತಿಯಿಂದ ಬ್ರಹ್ಮನಿಗೆ ದಿಕ್ಕಿಗೊಂದರಂತೆ ನಾಲ್ಕು ತಲೆಗಳಾದಾಗ ಹಾಸ್ಯಪ್ರಿಯೆಯಾದ ಮೇನಕೆ ಗಗನಕ್ಕೆ ಹಾರಿ ನರ್ತನ ಮುಂದುವರಿಸುತ್ತಾಳೆ. ಬ್ರಹ್ಮ ಅಲ್ಲಿಯೂ ಒಂದು ತಲೆ ರಚಿಸಿಕೊಳ್ಳುತ್ತಾನೆ. ಈ ರಸಿಕತೆಯ ಪರಾಕಾಷ್ಠೆಯನ್ನು ದೂರದಿಂದ ನೋಡುತ್ತಿದ್ದ ಶಿವನು ಐದನೆಯ ತಲೆಯನ್ನು ಉಗುರಿನಿಂದ ಚಿವುಟಿಹಾಕುತ್ತಾನೆ. ಬ್ರಹ್ಮ "ಆ ತಲೆಬುರುಡೆ ನಿನ್ನ ಭಿಕ್ಷಾಪಾತ್ರವಾಗಲಿ" ಎಂದು ಶಪಿಸುತ್ತಾನೆ. ದೇವತೆಗಳು ನಗುತ್ತಾರೆ. ಶಿವನು ಭುವಸ್ವರ್ ಲೋಕಗಳನ್ನು ತ್ಯಜಿಸಿ ಭೂಲೋಕದ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸುತ್ತಾ ಕಾಶಿ ಕ್ಷೇತ್ರಕ್ಕೆ ಬಂದಾಗ ಕಪಾಲ ತಾನಾಗಿ ಕಳಚಿಬೀಳುತ್ತದೆ. ಇದು ಪುರಾಣ ಕಥೆ.

CC-O. In Public Domain. Digitized by eGangotri

೯

ಚಂಪಕಮಾಲಾ

ಜಗವಿದು ನಿತ್ಯವೆಂದೆನಲದೋರ್ವನ್ ಆ
ನಿತ್ಯಮೆನುತ್ತೆ ವಾದಕು
ಜ್ಜಗಿಸಿರಲ್ ಅನ್ಯನ್ ಈರ್ವರನು ರಂಜಿಸೆ
ನಿತ್ಯಮನಿತ್ಯಮೆಂಬ ವಾ
ಗ್ಮಿಗಳೆದುರಾಗೆ ವಂದಿಸುತೆ ವಿಸ್ಮಯ
ಮಾದುದು ಹಾಸ್ಯಮೆಂಬಿನಂ
ಒಗುವಿಗೆ ನಿಮ್ಮನಾಂ ನುತಿಸಿ ಬಣ್ಣಿಸ
ಲಾದುದು ಮಾತಿನಾರ್ಭಟಂ

೫-೬ನೇ ಪದ್ಯಗಳಲ್ಲಿ ಬೇಳಿದ ಕುತರ್ಕಿಗಳಿಂದ ತನಗಾದ ಅನುಭವವನ್ನು ಕವಿ ಇಲ್ಲಿ ವಿವರಿಸುತ್ತಾನೆ,

ಈ ಜಗತ್ತು ನಿತ್ಯ-ಶಾಶ್ವತ ಎಂದೊಬ್ಬನು ಹೇಳಲು ಅನ್ಯನ್-ಇನ್ನೊಬ್ಬನು ಜಗತ್ತು ಅನಿತ್ಯ ಎಂಬು ವಾದಕ್ಕೆ ನಿಲ್ಲಲು ಆ ಇಬ್ಬರನ್ನು ರಂಜಿಸಲು "ನಿತ್ಯಮನಿತ್ಯಂ" ನಿತ್ಯವು ಪ್ರತಿದಿನ ಅನಿತ್ಯ–ನಾಶವಾಗುವುದನ್ನು ನಾವು ಕಾಣುವುದಿಲ್ಲವೇ ? ಜಗತ್ತು ಎರಡೂ ಅಲ್ಲ ಎನ್ನುವ ವಾಗ್ಮಿಗಳು ಎದುರಿಗೆ ಬರಲು ನಾನು ಮೊದಲು ಗೌರವದಿಂದ ಅವರಿಗೆ ನಮಸ್ಕಾರ ಮಾಡಿ ವಿಸ್ಮಯವು ಹಾಸ್ಯಕ್ಕೆ ತಿರುಗಿತೋ ಎಂಬಂತೆ ನಿಮ್ಮನ್ನು (ಶಿವನನ್ನು) ಒಗುವಿಗೆ-ಅಳತೆ ಮೀರಿ ನುತಿಸಿ–ಸ್ತೋತ್ರ ಮಾಡಿ ಬಣ್ಣಿಸೆ-ವರ್ಣಿಸುವಾಗ ಮಾತುಗಳ ಶೈಲಿ ವೀರರಸಪ್ರಧಾನವಾದ ಆರ್ಭಟೀಶೈಲಿಯಾಗಿ ಪರಿಣಮಿಸಿ ಮಾತಿನ ಆರ್ಭಟವೇ ಆಯಿತು.

ಕವಿ ಪುಷ್ಪದಂತ ಗಂಧರ್ವನ ಕಾಲ ಯಾವುದು ಎಂದು ಖಚಿತವಾಗಿ ಹೇಳಲು ಆಧಾರವಿಲ್ಲ. ಆದರೆ ಇತ್ತೀಚಿನ ಸಂಶೋಧಕರ ಅಭಿಪ್ರಾಯದಂತೆ ಕ್ರಿ. ಪೂರ್ವ ೨ನೆಯ ಶತಮಾನದಲ್ಲಿದ್ದನೆಂದೂ ಆದಿಶಂಕರರಿಗೂ ಅದೇ ಶತಮಾನದ ಉತ್ತರಾರ್ಧದಲ್ಲಿದ್ದ ಮಹಾಕವಿ ಕಾಳಿದಾಸನಿಗೂ ಮಹಿಮ್ನಸ್ತವದ ಪರಿಚಯವಿತ್ತೆಂದೂ ಈ ಮೂವರ ಶೈಲಿ ಮತ್ತು ನಿರೂಪಣಾವಿಧಾನ

Sri Vidyabharathi Book Centre, Sringeri

CC-O. In Public Domain. Digitized by eGangotri

ದಿಂದ ತಿಳಿಯಬಹುದು. ಕುಮಾರಸಂಭವದ ೫ನೆಯ ಸರ್ಗದಲ್ಲಿ ಶಿವನು ಕಪಟ ಬ್ರಹ್ಮಚಾರಿಯ ರೂಪದಲ್ಲಿ ಪಾರ್ವತಿಯನ್ನು ಸಂಧಿಸಿದಾಗ ನಡೆಯುವ ಸಂಭಾಷಣೆಯಲ್ಲಿ ಆರ್ಥಟೇಶೈಲಿಯ ಛಾಯೆಯಿದೆ. ಕೆಲವು ಪದ್ಯಗಳಲ್ಲಿ ಮಹಿಮ್ನಸ್ತವದ ಹೋಲಿಕೆ ಇದೆ. "ಶೂನ್ಯಸಂಪಾದನೆ" (ಕರ್ನಾಟಕ ವಿಶ್ವ ವಿದ್ಯಾಲಯದ ಪ್ರಕಟನೆ) ೩–೪ನೆಯ ಸಂಪಾದನೆಯ ಪ್ರಭು-ಸಿದ್ಧರಾಮರ ಸಂಭಾಷಣೆಯಲ್ಲಿ ವೀರರಸಪ್ರಧಾನ ಆರ್ಥಟೇಶೈಲಿಯ ನಿದರ್ಶನಗಳನ್ನು ಕಾಣ ಬಹುದು. ಪುಷ್ಪದಂತನ ಕಾಲಕ್ಕೆ "ವೀರಶೈವ"ದ ಉದಯವಾಗಿರಬೇಕೆಂಬ ವಾದಕ್ಕೆ ಇದು ಪುಷ್ಟಿ ಕೊಡುತ್ತದೆ.

೧೦

ಮತ್ತೇಭವಿಕ್ರೀಡಿತಂ

ಅನಲಸ್ತಂಭದವೋಲ್ ಮಹೇಶ, ಭವದೀ
ಯೋದ್ಯತ್ ಪ್ರಭಾರಾಶಿ ಮುಂ
ದೆ ನಿಲಲ್ ಬೆಬ್ಬರಗಾಗಿ ನೋಡುತದರೊಂ
ದಂತಸ್ತಮುಂ ಶೋಧಿಸಲ್,
ಅನುವಾದಂ ಹರಿ ಸೂಕರಾಕೃತಿಯೋಳ್,
ಅಂತು ಅಜ್ಞೋದ್ಭವಂ ಹಂಸಶಾ
ನೆನೆ. ಸುಳ್ಳಾಡುತೆ ಅಪೂಜ್ಯನೋರ್ವನು, ನಿಜಂ
ಪೇಳ್ದು ಅನ್ಯನ್‌ಂತೆ ಅಚ್ಯುತಂ

ಬಹು ಅರ್ಥಗಳನ್ನು ಸೂಚಿಸುವ ಕೆಲವೇ ಶಬ್ದಗಳ ಪ್ರಯೋಗದಿಂದ ಗುರಿ ಸಾಧಿಸುವ ಧ್ವನಿ ಕಾವ್ಯಕ್ಕೆ ಈ ಪದ್ಯ ಉತ್ತಮ ಉದಾಹರಣೆ. ಪದ್ಯದ ಅನ್ವಯ ಶಬ್ದಾನುವಾದವಿದು.

ಓ ಮಹೇಶ, ಭವದೀಯ–ನಿಮ್ಮ ಉದ್ಯತ್ ಪ್ರಭಾರಾಶಿ–ಉದಯಿಸು ತ್ತಿರುವ ಪ್ರಭೆಯ ಸಮೂಹವು, ಅನಲಸ್ತಂಭದವೋಲ್-ಅಗ್ನಿಯ ಕಂಬದಂತೆ ಲಿಂಗಾಕಾರವಾಗಿ ಮುಂದೆ ನಿಂತಿರಲು ಬೆಬ್ಬೆರಗಾಗಿ ನೋಡುತ್ತಾ ಅದರೊಂದ ತಸ್ತಮಂ-ಅದರ ಆಳ ಎತ್ತರಗಳನ್ನು, ಶೋಧಿಸಲ್ಕೆ–ಕಂಡುಹಿಡಿಯಲು ಹರಿ-

CC-O. In Public Domain. Digitized by eGangotri

ವಿಷ್ಣುವು ಸೂಕರಾಕೃತಿಯೋಳ್–ಹಂದಿಯ ರೂಪದಿಂದ ಅನುಪಾದಂ-ಸಿದ್ಧನಾದನು. ಅಂತೆ-ಹಾಗೆಯೆ ಅಬ್ಜೋದ್ಭವಂ-ವಿಷ್ಣುವಿನ ನಾಭಿಕಮಲದಲ್ಲಿ ಜನಿಸಿದ ಬ್ರಹ್ಮದೇವನು ಹಂಸತಾನನೆ ಅನುವಾದಂ ಸಿದ್ಧನಾದನು, ಅವರಲ್ಲಿ ಒಬ್ಬನು ಸುಳ್ಳಾಡುತ (ಅ)ಪೂಜ್ಯನು ಸುಳ್ಳು ಹೇಳಿ ಪೂಜೆಗೆ ಅನರ್ಹನಾದನು, ಬ್ರಹ್ಮ. ಅನ್ಯನ್–ಇನ್ನೊಬ್ಬನು ನಿಜಂ ಪೇಳ್ದ್ದ-ನಿಜವನ್ನು ಹೇಳಿ ಅಚ್ಯುತಂ–ಚ್ಯುತಿ-ಹಾನಿ ಪತನವಿಲ್ಲದವನಾದನು.

ಶಿವಪುರಾಣಗಳಲ್ಲಿ ವಿಸ್ತಾರವಾಗಿ, ಶಾಕ್ತ ವೈಷ್ಣವ ಪುರಾಣಗಳಲ್ಲಿ ಸೂಚ್ಯವಾಗಿ ಹೇಳಲ್ಪಟ್ಟು "ಲಿಂಗೋದ್ಭವಾಖ್ಯಾನ"ವೆಂದು ಹೆಸರಾದ ಸಾಂಕೇತಿಕ ಉಪಾಖ್ಯಾನದ ಮುಖ್ಯ ಘಟ್ಟಗಳವು.

ಹಿಂದೊಂದು ಕಾಲದಲ್ಲಿ "ಸೃಷ್ಟಿಯು ದೊಡ್ಡದೊ? ರಕ್ಷಣೆಯು ದೊಡ್ಡದೊ?" ಎಂಬ ಪ್ರಶ್ನೆ ಉದ್ಭವಿಸಿ ವಿಷ್ಣುವೂ ಬ್ರಹ್ಮದೇವನೂ ವಾದ ಹೂಡಿ ಕೊನೆಗೆ ಶಸ್ತ್ರಾಸ್ತ್ರಗಳಿಂದ ಹೋರಾಡಿದರು. ಇದು ಬಹುಕಾಲ ನಡೆದರೆ ಮೂರು ಲೋಕಗಳೂ ನಾಶವಾಗುವುದೆಂದು ಭೀತರಾದ ದೇವತೆಗಳು, ನಡುವೆ ನಿಂತು "ಓ ಹರಿ ಬ್ರಹ್ಮರೇ, ಹೋರಾಟ ನಿಲ್ಲಿಸಿ ಹೇಳುವುದನ್ನು ಕೇಳಿರಿ. ಮಹಾತೇಜಸ್ಸೊಂದು ಉದ್ಭವಿಸಿ ಭೂಮಿ ಆಕಾಶಗಳನ್ನು ವ್ಯಾಪಿಸಿ ಬೆಳೆಯುತ್ತಿದೆ. ಅದರ ಆದಿ ಅಂತ್ಯಗಳನ್ನು ಯಾರು ನಿರ್ಧರಿಸುವರೋ ಅವರು ದೊಡ್ಡವರೆನಿಸುವರು. ಮೂರು ಲೋಕಗಳಿಗೆ ವಿನಾಶಕಾರಿಯಾದ ಹೋರಾಟವನ್ನು ನಿಲ್ಲಿಸಿ ಆ ಸಂಶೋಧನಾ ಕಾರ್ಯಕ್ಕೆ ತೊಡಗಿರಿ" ಎಂದು ವಿನ್ನವಿಸಿಕೊಂಡರು. ಆಗ ಅವರು ಯುದ್ಧವನ್ನು ನಿಲ್ಲಿಸಿ ಲಿಂಗಾಕಾರದಿಂದ ಬೆಳೆಯುತ್ತಿದ್ದ ಆ ಬೃಹತ್ ತೇಜೋರಾಶಿಯನ್ನು ಬೆಬ್ಬೆರಗಾಗಿ ನೋಡಿದರು. ವಿಷ್ಣುವು ಅದರ ಮೂಲವನ್ನು ಹುಡುಕಲು ಸೂಕರ ರೂಪದಿಂದ ನೆಲವನ್ನು ಅಗೆಯತೊಡಗಿದನು. ಬ್ರಹ್ಮನು "ಹಂಸದ ರೂಪದಿಂದ ಸ್ತಂಭದ ಶಿರವನ್ನು ನೋಡಿ ಬಂದಿದ್ದೇನೆ. ಅದಕ್ಕೆ ಸಾಕ್ಷಿ ಈ ಕೇತಕಿ ಪುಷ್ಪ" ಎಂದು ಹೇಳಿದನು. ವಿಷ್ಣುವು "ನನ್ನ ಶಕ್ತಿಯಿರುವಷ್ಟು ಆಳ ಭೂಮಿಯನ್ನು ಅಗೆದು ನೋಡಿದೆ, ಲಿಂಗದ ಮೂಲ ಸಿಕ್ಕಲಿಲ್ಲ" ಎಂದನು. ಸೋಲು ಗೆಲುವುಗಳನ್ನು ನಿರ್ಧರಿಸಲು ದೇವತೆಗಳು ಯೋಚಿಸುತ್ತಿದ್ದಾಗ ಲಿಂಗದ ಮಧ್ಯದಲ್ಲಿ ಶಿವನು ಪ್ರತ್ಯಕ್ಷನಾದನು. ಬ್ರಹ್ಮನ ಮುಖ ತೇಜೋಹೀನವಾಯಿತು. ಸುಳ್ಳು ಸಾಕ್ಷಿ ಹೇಳಿದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೇತಕೀ ಪುಷ್ಪ ಸುಟ್ಟಿತು. ಬ್ರಹ್ಮನ ಸುಳ್ಳು ಹೇಳದುದಾಗಿ ಒಪ್ಪಿಕೊಂಡು ಭಕ್ತಿನವ್ರನಾಗಿ ಶಿವನನ್ನು ಬೇಡಿಕೊಂಡನು; ಶಿವನು ಪ್ರಸನ್ನನಾಗಿ ಬುದ್ಧಿಹೇಳ ಹಿಂದಿನಂತೆ ಸೃಷ್ಟಿ ಕಾರ್ಯಕ್ಕೆ ನೇಮಿಸಿದನು. ನಿಜ ಹೇಳದ ವಿಷ್ಣುವನ್ನು ನೀನು ಅಚ್ಯುತನೆಂಬ ಉಪಾಧಿಯನ್ನು ಪಡೆದು ಲೋಕಗಳನ್ನು ರಕ್ಷಿಸು ಎಂದು ಅನುಗ್ರಹಿಸಿದನು. ದೇವತೆಗಳಲ್ಲಿ ವಿಷ್ಣುವಿನ ಪ್ರಭಾವ ಬೆಳೆಯಿತು. ಬ್ರಹ್ಮನು ಪೂಜಾನರ್ಹನಾದನು.

೧೧

ಚಂಪಕಮಾಲಾ

ಶ್ರಮಮಿನಿತಿಲ್ಲದಸ್ತರಿಪು ಮೂಜಗ
ಮುಂ ಪಡೆದಾಳ್ವದೊಂದು ಸಂ
ಭ್ರಮದೆ ದಶಾನನಂ ಕದನಕಾದ ಭು
ಜಾಳಿಯ ತೀಡುತಿರ್ದೊಡೇಂ
ಪ್ರಮುದಿತ ಭಕ್ತಿಯಿಂ ನಿಜಶಿರಃ ಸರ
ಸೀರುಹ ಮಾಲೆಯಿಂದೆ ನಿ
ಮ್ಮಮಿತ ವಿಭೂತಿಗಾಳ್ದ ಪದಪೀಠವ
ಪೂಜಿಸಿ ಧನ್ಯನಾಗನೇ !

ಅಸ್ತರಿಪು—ವೈರಿಗಳಿಲ್ಲದ ಮೂರು ಲೋಕಗಳನ್ನು ಶ್ರಮವಿಲ್ಲದೆ ಆಳುತ್ತಿರುವೆನೆಂಬ ಸಂಭ್ರಮದಿಂದ ರಾವಣನು ಯುದ್ಧಕ್ಕೆ ಸನ್ನದ್ಧವಾದ ತೋಳುಗಳನ್ನು ತೀಡಿದರೇನಾಯಿತು ? ವಿಶೇಷವಾದ ಭಕ್ತಿಯಿಂದ ತನ್ನ ತಲೆಗಳನ್ನು ಕಡಿದು ಶಿವನ ಪಾದಪೀಠದಲ್ಲಿ ತಾವರೆ ಮುಕುಳಗಳ ಮಾಲೆಯಂತೆ ಅರ್ಪಿಸಿ ಧನ್ಯನಾಗಲಿಲ್ಲವೆ ?

ಶಿವನ ಮಹಿಮೆಯನ್ನು ವರ್ಣಿಸುವ ಈ ಉಪಾಖ್ಯಾನ ಗೋಕರ್ಣ ಕ್ಷೇತ್ರ ಮಹಾತ್ಮ್ಯೆಯಲ್ಲಿ, ಲಿಂಗಪುರಾಣದಲ್ಲಿ ಹೀಗೆ ಉಲ್ಲಿಖಿತವಾಗಿದೆ: ಲಂಕಾಧಿಪತಿ ರಾವಣನು ಯಾವ ಶ್ರಮವೂ ಇಲ್ಲದೆ ಬ್ರಹ್ಮನಿಂದ ವರ ಪಡೆದು ಮೂರು ಲೋಕವನ್ನು ಆಳುವ ಸಂಭ್ರಮದಲ್ಲಿ ವಿಮಾನದಲ್ಲಿ ವಿಹರಿಸುತ್ತಿದ್ದಾಗ ವಿಮಾನ ಹಠಾತ್ತನೆ ನಿಂತಿತು. ಸಾರಥಿ ಹೇಳುತ್ತಾನೆ, "ನಾವು ಗೋಕರ್ಣ ಕ್ಷೇತ್ರಕ್ಕೆ ಬಂದಿದ್ದೇವೆ. ಗೋಕರ್ಣೇಶ್ವರ ಶಿವನು ನಿಮ್ಮ ಪೂಜೆಯನ್ನು ಬಯಸಿದಂತಿದೆ."

CC-O. In Public Domain. Digitized by eGangotri

ರಾವಣನು ವಿಮಾನದಿಂದಿಳಿದು ಭಕ್ತಿಯಿಂದ ಶಿವಲಿಂಗವನ್ನು ಪೂಜಿಸುತ್ತಾನೆ. ಎಷ್ಟು ಹೊತ್ತಾದರೂ ಶಿವನು ಅನುಗ್ರಹಿಸದಿದ್ದಾಗ ರಾವಣನು ನಿರಾಶನಾಗಿ ಕತ್ತಿಯಿಂದ ತನ್ನ ಒಂಭತ್ತು ತಲೆಗಳನ್ನು ಕತ್ತರಿಸಿ ಲಿಂಗದ ಪಾದಪೀಠದಲ್ಲಿ ತಾವರೆಯ ಮಾಲೆಯಂತೆ ಸಾಲಾಗಿ ಇಡುತ್ತಾನೆ. ಆಗ ಶಿವನು ಪ್ರತ್ಯಕ್ಷನಾಗಿ ಮೂರು ಲೋಕಗಳ ಆಡಳಿತದಲ್ಲಿ ರಾವಣನನ್ನು ಸ್ಥಿರಗೊಳಿಸುತ್ತಾನೆ. ನರವಾನರರ ಹೊರತಾಗಿ ಮತ್ತಾರಿಂದಲೂ ಮರಣವಿಲ್ಲದಂತೆ ವರ ಕೊಡುತ್ತಾನೆ. ಇಂದ್ರಾದಿ ದೇವತೆಗಳಿಗಿಂತ ಶಿವಭಕ್ತನ ಶಕ್ತಿ ಸಾಮರ್ಥ್ಯ ಪ್ರತಾಪಗಳು ಹೆಚ್ಚಿನದೆಂಬುದನ್ನು ಲೋಕಕ್ಕೆ ತಿಳಿಸುವ ಉದ್ದೇಶದಿಂದ ಈ ಪುರಾಣ ಕಥೆಗಳು ಪ್ರಚಾರಕ್ಕೆ ಬಂದವೆಂಬ ಆಧುನಿಕ ವಿಮರ್ಶಕರ ಅಭಿಪ್ರಾಯದಲ್ಲಿ ವಿಶ್ವಾಸವಿದ್ದರೂ ಈ ಆಖ್ಯಾನಗಳನ್ನು ಸಾಂಕೇತಿಕವಾಗಿ ವಿವೇಚಿಸಿ ಗ್ರಹಿಸಿದರೆ ಕಟ್ಟುಕಥೆಗಳೆಂದು ತಿರಸ್ಕರಿಸುವುದು ಬುದ್ಧಿಜೀವಿಗಳಲ್ಲದವರ ಹಿತದೃಷ್ಟಿಯಿಂದ ಉಚಿತವೆನಿಸದು. ಸಗುಣೋಪಾಸನೆಯೇ ನೀತಿ ಧರ್ಮಗಳ ಅಸ್ತಿವಾರವೆಂದೂ, ನಾಸ್ತಿಕ್ಯವು ವಿನಾಶದ ಒಂದು ರೂಪವೆಂದೂ ಅನುಭಾವಿಗಳು ಹೇಳುತ್ತಾರೆ.

೧೨

ಚಂಪಕಮಾಲಾ

ಪಶಪತಿ, ನೀವನುಗ್ರಹಿಸಿಕೊಟ್ಟ ಭು
ಜಾಳಿಯ ಶಕ್ತಿಯಂ ಪರೀ
ಕ್ಷಿಸಲೆನೆ ನಿಮ್ಮವಾಸ ರಜತಾದ್ರಿಯ
ನೆತ್ತುವೆನೆಂಬ ದೈತ್ಯ ಸಾ
ಹಸಕೆ ದಶಾಸ್ಯನುಜ್ಜಗಿಸೆ, ನೋಡುತೆ
ಬಿಟ್ಟತು ಬಿಟ್ಟನೊಂದನಾ
ಡಿಸುತವನಂ ರಸಾತಲಕೆ ತಳ್ಳಿರ
ಲಾದುದು ಶಿಕ್ಷೆಸಾದೃಶಂ.

ರಾವಣನ ದರ್ಪದಳನದ ಇನ್ನೊಂದು ಪ್ರಸಂಗವನ್ನು ಈ ಪದ್ಯದಲ್ಲಿ ಸೂಚ್ಯವಾಗಿ ಸಂಗ್ರಹವಾಗಿ ಹೇಳಿದೆ. ಇದನ್ನು ಸಮಗ್ರವಾಗಿ ಕಲಾತ್ಮಕವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ರೂಪಿಸುವ ಶಿಲ್ಪಕೃತಿಯೊಂದು ಎಲ್ಲೋರದ ಕೈಲಾಸ ಗುಹಾಲಯದಲ್ಲಿ ದೊರಕಿದೆ.

ಓ ಪಶುಪತಿ, ನೀವು ಅನುಗ್ರಹಿಸಿಕೊಟ್ಟ ಹತ್ತು ಭುಜಗಳ ಶಕ್ತಿ ಸಾಮರ್ಥ್ಯವನ್ನು ಪರೀಕ್ಷಿಸಲು ರಾವಣನು ನಿಮ್ಮ ವಾಸಸ್ಥಾನವಾದ ರಜತಾದ್ರಿ —ಬೆಳ್ಳಿ ಬೆಟ್ಟವೆಂದು ಹೆಸರಾದ ಕೈಲಾಸವನ್ನು ಎತ್ತುತ್ತೇನೆ ಎಂಬ ದೈತ್ಯ ಸಾಹಸಕ್ಕೆ ಉಜ್ಜಗಿಸುತ್ತಾನೆ—ತೊಡಗುತ್ತಾನೆ. ಇದನ್ನು ಕಂಡ ಈಶ್ವರನು ತನ್ನ ಬೆಟ್ಟತು—ದೊಡ್ಡದಾದ ಬೆಟ್ಟೊಂದನ್ನು ಆಡಿಸಿ ರಾವಣನನ್ನು ರಸಾತಲಕ್ಕೆ ತಳ್ಳುತ್ತಾನೆ. ತಪ್ಪಿಗೆ ತಕ್ಕ ಶಿಕ್ಷೆ ಆಗುತ್ತದೆ.

ಶಿವಪುರಾಣ, ರಾಮಾಯಣಗಳಲ್ಲಿ ಮುಂದಿನ ಕಥೆ ಇದೆ. ಮೂರು ಲೋಕಗಳನ್ನು ಜಯಿಸಲು ರಾವಣನು ವಿಮಾನದಲ್ಲಿ ಹೋಗುತ್ತಿದ್ದಾಗ ಕೈಲಾಸ ಶಿಖರವು ಅಡ್ಡ ಬಂದು ವಿಮಾನ ನಿಲ್ಲುತ್ತದೆ. "ಏಕೆ ನಿಂತಿತು" ಎಂದು ಕೇಳಿದಾಗ ಸಾರಥಿ "ಶಿವನ ವಾಸಸ್ಥಾನವಾದ ಕೈಲಾಸ ಶಿಖರ ಅಡ್ಡ ನಿಂತಿದೆ. ಅನುಮತಿ ಇಲ್ಲದೆ ಅದನ್ನು ದಾಟಲಾಗುವುದಿಲ್ಲ" ಎಂದು ಹೇಳುತ್ತಾನೆ. ರಾವಣನು ಕೋಪದಿಂದ "ಶಿವನೆಷ್ಟರವನು, ಕೈಲಾಸಗಿರಿಯನ್ನೇ ಎತ್ತಿ ಅಡ್ಡ ಸರಿಸಿ, ವಿಮಾನಕ್ಕೆ ದಾರಿ ಮಾಡಿಕೊಡುತ್ತೇನೆ" ಎಂದು ವಿಮಾನದಿಂದಿಳಿದು, ಶಿಖರದ ತಳದಲ್ಲಿ ನಿಂತು ಎತ್ತಲು ಪ್ರಯತ್ನಿಸುತ್ತಾನೆ. ಬೆಟ್ಟ ತುಸು ಕದಲಿದಾಗ ಶಿವನು ತನ್ನ ಹೆಬ್ಬೆಟ್ಟನ್ನು ಆಡಿಸಿ ರಾವಣನನ್ನು ಪಾತಾಳಕ್ಕೆ ತಳ್ಳುತ್ತಾನೆ, ೧೧ನೆಯ ಪದ್ಯದಲ್ಲಿ ವರ್ಣಿತವಾದ ಗೋಕರ್ಣದ ಘಟನೆ ಇದರ ಅನಂತರ ನಡೆದದ್ದಾಗಿರಬೇಕು.

ಕೈಲಾಸ ಗುಹಾಲಯದಲ್ಲಿನ ಈ ಘಟನೆಯು ಕಥಾಶಿಲ್ಪ ಭಾರತೀಯ ಶಿಲ್ಪಕಲೆಯಲ್ಲಿ ನಿರೂಪಣೆ, ಪಾತ್ರಗಳ ಔಚಿತ್ಯ ಮತ್ತು ಸ್ಥಾನಗಳ ಹಂಚಿಕೆಯ ದೃಷ್ಟಿಯಿಂದ ವಿಶಿಷ್ಟವೂ ಮಹತ್ವವೂ ಆದ ಸ್ಥಾನ ಪಡೆದಿರುತ್ತದೆ, ಭಾರತದಲ್ಲಿ ೨೦ ವರ್ಷಗಳು ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದು, ಶಿಲ್ಪಕಲೆಯನ್ನು ಅಧ್ಯಯನಮಾಡಿ ಅನೇಕ ಉದ್ಗ್ರಂಥಗಳನ್ನು ರಚಿಸಿರುವ ಶ್ರೀಮತಿ STELLA KRAMARISCH (ಸ್ಟೆಲಾಕ್ರಮರಿಷ್) ಅವರು 1981ರ ಪ್ರಾರಂಭದ ಆರು ತಿಂಗಳಲ್ಲಿ ಫಿಲ್ಡಾಫಿಯಾಮ್ಯೂಸಿಯಂ ಆರ್ಟ್ ಸಂಸ್ಥೆ ಅಮೇರಿಕ ಸಂಯುಕ್ತ ಸಂಸ್ಥಾನದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಡೆಸಿದ "Siva Exhibition" ಶಿವಾಯನ ಪ್ರದರ್ಶನದ ಸಂಬಂಧದಲ್ಲಿ ಪ್ರಕಟವಾದ "The Presence of Siva" (ಶಿವಸಾಕ್ಷಾತ್ಕಾರ) ಎಂಬ ಸಂಶೋಧಕ ಗ್ರಂಥದಲ್ಲಿ (467-ಕ) ಈ ಶಿಲ್ಪವನ್ನು ಹೀಗೆ ವರ್ಣಿಸಿದ್ದಾರೆ.

"ಧರ್ಮಾಧಿಕರಣದ ಲಕ್ಷಣದಿಂದ ಕೂಡಿ, ಎರಕಹೊಯ್ದ ಬೃಹದಾಕಾರದ ಇಟ್ಟಿಗೆಗಳಿಂದ ರಚಿತವಾದಂತೆ ಕಾಣುವ ಒಂದು ಗುಹೆಯಲ್ಲಿ ರಾವಣೇಶ್ವರನ ಈ ದೈತ್ಯ ಸಾಹಸದ ಕಾರ್ಯ ಶಿಲಾಬದ್ಧವಾಗಿ ಚಿತ್ರಿಸಲ್ಪಟ್ಟಿದೆ.

ಗುಹೆಯ ಕೆಳಗಿನ ಅರ್ಧಭಾಗದ ಎರಡು ಪಾರ್ಶ್ವಗಳು ಇಟ್ಟಿಗೆ ಆಕಾರದ ದೊಡ್ಡ ಬಂಡೆಗಳಿಂದ ರಚಿಸಲ್ಪಟ್ಟಿಂತೆ ಕಂಡು ಹಿಂಭಾಗ ಅಂಧಕಾರದಲ್ಲಿ ತುಂಬಿದೆ. ಮಧ್ಯದಲ್ಲಿ ರಾವಣನು ಮುಂಡಿಯೂರಿ ವೀರಾಸನದಲ್ಲಿ ಕುಳಿತಿದ್ದಾನೆ. ತನ್ನ ಇಪ್ಪತ್ತು ಕೈಗಳನ್ನು ಚಾಚಿ ಮೇಲೆತ್ತಿ ಪರ್ವತದ ಆದಿಭಾಗವನ್ನು ಮುಟ್ಟಿದ್ದಾನೆ.

ಅವನ ದೈತ್ಯಾಕಾರದ ಹತ್ತು ಮುಖಗಳಲ್ಲಿ ಮುಂದಿನ ಮೂರು ಮುಖಗಳು ಕೆತ್ತಲ್ಪಟ್ಟು ಉಳಿದ ಏಳು ಮುಖಗಳು ಗುಹೆಯ ಅಂಧಃಕಾರದಲ್ಲಿ ಲೀನವಾದಂತೆ ಕಾಣುವ ಭ್ರಮೆಯನ್ನುಂಟುಮಾಡಲು ಪ್ರಯತ್ನಿಸಿ ರೂವಾರಿ ಸಫಲನಾಗಿದ್ದಾನೆ.

ಗುಹೆಯ ಮೇಲಿನ ಅರ್ಧಭಾಗ, ಕೆಳಗಿನ ಭಾಗಕ್ಕಿಂತ ಹೆಚ್ಚು ವಿಶಾಲವಾಗಿದ್ದು ಶಿವನ ವಾಸಗೃಹ ಒಡ್ಡೋಲಗದ ರೂಪದಲ್ಲಿದೆ. ಮಧ್ಯದಲ್ಲಿ ಎತ್ತರದ ವೇದಿಕೆಯಂತಿರುವ ಶಿಲಾಸನದಲ್ಲಿ ದೇವತಾ ದಂಪತಿ Devine couple) ಮಂಡಿಸಿದ್ದಾರೆ. ವೇದಿಕೆಯ ಎರಡೂ ಪಾರ್ಶ್ವಗಳಲ್ಲಿ ಮತ್ತು ಅಡಿಯಲ್ಲಿ ನಂದಿ ಭೃಂಗಿ ಮುಂತಾದ ಗಣನಾಯಕರೂ ಗಣಗಳೂ ವಿವಿಧ ಭಂಗಿಗಳಲ್ಲಿ ಕಾಣುತ್ತಾರೆ. ಗಣಗಳು ಕುಳಿತಿರುವ ಭಂಗಿ ಶಾಂತಿ ಸಮಾಧಾನಗಳ ವಾತಾವರಣವು ರಾವಣನ ಸಾಹಸ ವ್ಯರ್ಥಶ್ರಮವೆಂದು ಭವಿಷ್ಯ ನುಡಿಸುವಂತಿದೆ.

ವೇದಿಕೆಯ ಮೇಲೆ ಶಿವನು ಎಡಗೈಯನ್ನು ಊರಿ ಮಂಡಿಸಿದ್ದಾನೆ ಎತ್ತಿದ ಬಲಗೈಯಲ್ಲಿ ಪರಶು (ಗಂಡುಗೂಡಲಿ) ಶಿವನ ಎಡಗಡೆ ಲತೆಯಂತ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಳುಕುವ ತೆಳುವೈಯ ಪಾರ್ವತಿ ಉತ್ಸಾಹ ಸೂಚಿಸುವ ಎಳೆನಗೆಯ ಮುಖವನ್ನು ಶಿವನತ್ತ ತಿರುಗಿಸಿ ಕಾಲು ಚಾಚಿ ತುಸು ಸರಿದು ತನ್ನ ಬಲಗೈಯಿಂದ ಪತಿಯ ಬಲತೋಳನ್ನು ಹಿಡಿದು ಮಂಡಿಸಿದ್ದಾಳೆ. ಮುಖದಲ್ಲಿ ಶಾಂತಿ ಉತ್ಸಾಹಗಳನ್ನು ಸೂಚಿಸುವ ಮಿದುನಗೆಯ ಛಾಯೆ, ವೇದಿಕೆಯ ಹಿಂಭಾಗದಲ್ಲಿ, ಗುಹಾಂತರಾಳಕ್ಕೆ ಹೋಗುವ ಬಾಗಿಲಲ್ಲಿ ರುದ್ರಕನ್ಯೆಯೊಬ್ಬಳು ನಡೆಯುತ್ತಾ ಹಿಂದಿರುಗಿ ನೋಡುತ್ತಿದ್ದಾಳೆ. ಅವಳ ಬೆನ್ನಿನ ನಿಲವು, ಮುಖದಲ್ಲಿ ಬೆದರಿದ ನೋಟ, ಎತ್ತಿದ ಮುಂಗಾಲು, ಇವುಗಳಲ್ಲಿ ಮಾತ್ರವೇ ಭಯದ ಸೂಚನೆ ಕಂಡುಬರುತ್ತದೆ. ಶಿವನು ಗಂಭೀರ ಮುಖಮುದ್ರೆಯಿಂದ ದೃಷ್ಟಿಯನ್ನು ಕೆಳಗೆ ಬಾಗಿಸಿ ಎಡಗಾಲ ಹೆಬ್ಬೆಟ್ಟಿನಿಂದ ಗುಹೆಯ ತಲಭಾಗವನ್ನು ಸ್ಪರ್ಶಿಸುತ್ತಾನೆ. ಶಿಖರದ ಅಲುಗಾಟ ನಿಂತು ರಾವಣನು ರಸಾತಲಕ್ಕೆ ಬಿದ್ದುದನ್ನು ಕಂಡರೋ ಎನ್ನುವಂತೆ ಗುಹೆಯ ಸೂರಿನ ಮೇಘಾಕಾರದ ಬಂಡೆಗಳಲ್ಲಿ ಕೆತ್ತಲ್ಪಟ್ಟಿರುವ ಯಕ್ಷ ರಕ್ಷ ಗಂಧರ್ವರು ಶಿವನಿಗೆ ಕೈಯೆತ್ತಿ ಮುಗಿದು ಜಯಕಾರ ಮಾಡುತ್ತಿರುವಂತೆ ಕಾಣುತ್ತದೆ."

ಅನುಭಾವಿ ಸೃಜನಶೀಲ ಲೇಖಕಿಯವರ ವಿಮರ್ಶೆ ಹೀಗೆ ಕೊನೆಗೊಂಡಿದೆ : "ಈ ಪ್ರಸಂಗದ ಪ್ರಮುಖ ಮತ್ತು ಪೋಷಕ ಪಾತ್ರಗಳಿಗೆ ಶಿಲ್ಪದಲ್ಲಿ ಉಚಿತ ಸ್ಥಾನಗಳನ್ನು ನಿರ್ಧರಿಸುವುದರಲ್ಲಿ ಶಿಲ್ಪಿಗಳು ಅಸಾಧಾರಣ ದಕ್ಷತೆ ಹಾಗೂ ಕಲಾಭಿಜ್ಞತೆಯನ್ನು ತೋರಿದ್ದಾರೆ. ಪರಮಶಿವನ ಅಚ್ಚುಕಟ್ಟಾದ ವಾಸಗೃಹದ ರಚನೆಯಲ್ಲಿ ಅರಮನೆಯ ಠೀವಿ, ಗುರು ಮನೆಯ ಕರ್ತವ್ಯ ಪ್ರಜ್ಞೆ, ಮಹಾಮನೆಯ ವೈರಾಗ್ಯದಿಂದ ಪ್ರೇರಿತವಾದ ಅನುಗ್ರಹ, ಅಭಿವ್ಯಕ್ತವಾಗಿ, ಪ್ರೇಕ್ಷಕರಮೇಲೆ ಪ್ರಭಾವ ಬೀರಿ, ಪರಮಶಿವನ ಪರಿವಾರಕ್ಕೆ ಉಚಿತವಾದ, ಸಂಭಾವನೀಯವಾದ Tableau (ರೂಪಚಿತ್ರ), ಕಲ್ಲನ್ನು ಕಡೆದು ಕೆತ್ತಲ್ಪಟ್ಟಿದೆ. ದೃಶ್ಯದ ಶಾಂತ ಗಂಭೀರ ವಾತಾವರಣವು ರಾವಣನ ಆಪ ರಾಧಕ್ಕೆ ತಿಕ್ಕೆ ತಾತ್ಕಾಲಿಕ, ಕ್ಷಮೆ ಮತ್ತು ಅನುಗ್ರಹ ಶಾಶ್ವತ ಎಂಬುದರ ಸೂಚನೆ ಕಾಣುವಂತಿದೆ. ಶಿಲ್ಪದ ಕಲಾಪರಿಣತಿ, ಈ ರೂಪಶಿಲ್ಪಕ್ಕೆ ಕೊಟ್ಟಿರುವ "ರಾವಣಾನುಗ್ರಹ" ಎಂಬ ಹೆಸರು ಅನ್ವರ್ಥವಾಗುವಂತಿದೆ. ಶಿವನ ಸಾಕ್ಷಾತ್ಕಾರವನ್ನು ಶಿಲಾಬದ್ಧವಾಗಿ ಮಾಡುವ ಕಲಾತ್ಮಕ ಮಹತ್‌ಕಾರ್ಯದಲ್ಲಿ ಎಲಿಫಾಂಟಾ ಗುಹಾಲಯದ ಶಿಲ್ಪಿಗಳು ತೋರಿದ ಅನುಪಮ ಕಲಾಪ್ರಜ್ಞೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿಲ್ಪಶಕ್ತಿ, ಮೂರು ಶತಮಾನಗಳ ಅನಂತರ ಎಲ್ಲೋರದ ಕೈಲಾಸ ಗುಹಾಲಯದಲ್ಲಿ ಅವತರಿಸಿತೆಂಬುದಕ್ಕೆ ಈ ರೂಪಕಥಾಶಿಲ್ಪ ಉತ್ತಮ ನಿದರ್ಶನ."

(ಬೊಂಬಾಯಿ ಹತ್ತಿರದ ''ಎಲಿಫಾಂಟಾ'' ಗುಹಾಲಯವನ್ನು ಕಟ್ಟಿದ ಅರಸರು ೭-೮ನೆಯ ಶತಮಾನಗಳಲ್ಲಿ ಆ ಪ್ರಾಂತವನ್ನು ಆಳುತ್ತಿದ್ದ ಕನ್ನಡಿಗ ಕಲಚುರಿ ರಾಜರು ಎಂಬುದು ಕನ್ನಡಿಗರಿಗೆ ಅಭಿಮಾನಾಸ್ಪದವಾದ ವಿಚಾರ.)

೧೩

ಚಂಪಕಮಾಲಾ

ಸುರಪತಿ ಇಂದ್ರನೊಂದಮಿತ ವೈಭವ
ಮಂ ತೃಣಮೆಂದು ಕಾಣುತಂ
ಸುರರಿಪು ಬಾಣ ದೈತ್ಯನದಟಿಂದೆ ವಿ
ಜೃಂಭಿಸೆ ಹೇತುವೇನೆನಲ್
ಪರತರ ಭಕ್ತಿಯಿಂದೆ ಪರಮೇಶ್ವರ,
ನಿಮ್ಮ ಪದಾಬ್ಜ ಪೀಠದೊಳ್
ಶಿರಮಿಡುತಂ ಪ್ರಸನ್ನತೆಗೆ ಸಂದ, ಸ
ಮಗ್ರ ತಪೋಗ್ನಿ ಭಾಜನಂ.

ದೇವರಾಜ ಇಂದ್ರನ ವೈಭವವನ್ನು ಹುಲ್ಲಿಗೆ ಸಮಾನ ಎಂದು ದೇವತೆಗಳ ಶತೃ ಬಾಣಾಸುರನು ಅಹಂಕಾರದಿಂದ ಮೆರೆಯಲು ಕಾರಣವೇನು ಎಂಬ ಪ್ರಶ್ನೆಗೆ ಕವಿಯ ಉತ್ತರ: ಓ ಪರಮೇಶ್ವರ, ನಿಮ್ಮ ಪಾದಪೀಠದಲ್ಲಿ ಭಕ್ತಿಯಿಂದ ತಲೆಯಿಟ್ಟು ನೀವು ಪ್ರಸನ್ನರಾಗುವವರೆಗೆ ಏಳದಿದ್ದುದರಿಂದ ಅವನ ದೇಹವೇ ತಪೋಗ್ನಿಭಾಜನ—ತಪಸ್ಸಿನ ಅಗ್ನಿಕುಂಡವಾದದ್ದರಿಂದ ಬಾಣನು ಇಂದ್ರ ವೈಭವವನ್ನು ಅಲ್ಲಗಳೆಯಲು ಶಕ್ತನಾದನು. ತಾರಕ ವಧಾನಂತರ ಷಣ್ಮುಖನ ಪರಾಕ್ರಮದಿಂದ ಪ್ರಭಾವಿತನಾದ ಬಾಣನು ತಾನೂ ಶಿವನ ಕರಸಂಜಾತ ಪುತ್ರನಾಗಲೆಂದು ತಪಸ್ಸಿಗೆ ತೊಡಗಿದನೆಂಬುದು ಪೂರ್ವಕಥೆ. ಶಿವನ ಅನುಗ್ರಹ ಪಡೆದವರು 'ದೀನ'ರಾಗಿಯೇ ಇರಬೇಕೆಂಬುದು ಅನುಭಾವಿಗಳ ಅಗ್ರಹಪೂರ್ವಕ ಹಿತೋಕ್ತಿ.

Sri Vidyabharathi Book Centre, Sringeri

CC-O. In Public Domain. Digitized by eGangotri

೧೪

ಮತ್ತೇಭವಿಕ್ರೀಡಿತಂ

ಸುಡೆ ಲೋಕಂಗಳ ಕಾಲಕೂಟಮುದಿಸಲ್
ಕಂಡಂಜಿ ದೇವಾಸುರರ್
ನಡುಗಲ್ ನೀವದ ಪಾನಮಾಡುತೆ ಕೂರಳ್
ಕಪ್ಪಾಗಲಾದೋಷಮೇ
ಕಡುಚಲ್ವಿಂಗೆಡೆಯಾದುದಚ್ಚರಿಯೆ ? ಲೋ
ಕಾನುಗ್ರಹಾಪೇಕ್ಷೆಯಿಂ
ನಡೆಯಲ್ಕಾದ ವಿರೂಪಮುಪ್ಪುದು ಶುಭಂ
ಶ್ಲಾಘ್ಯಂ ಪವಿತ್ರಂ ಪ್ರಿಯಂ.

ರತ್ನಗಳನ್ನು ಪಡೆಯಲು ದೇವತೆಗಳು ದಾನವರು ಒಂದಾಗಿ ಸಮುದ್ರವನ್ನು ಕಡೆಯುತ್ತಿದ್ದಾಗ ಲೋಕಗಳನ್ನು ಸುಡಬಲ್ಲ ಕಾಲಕೂಟ ಮೇಲೆ ಬರುತ್ತದೆ. ದೇವಾಸುರರು ಹೆದರುತ್ತಾರೆ; ಶಿವನು ನೀಲಮಣಿ ರೂಪದಿಂದ ಕಾಲಕೂಟವನ್ನು ಅಂಗೈಯಲ್ಲಿ ಹಿಡಿದು ಪಾನಮಾಡುತ್ತಾನೆ. ಪಾರ್ವತಿ ಕೊರಳನ್ನು ಹಿಡಿದದ್ದರಿಂದ ಅದು ಅಲ್ಲಿಯೇ ನಿಲ್ಲುತ್ತದೆ. ಇದು ದೋಷವಾದರೂ ಮುಂದೆ ಶಿವನ ಚಲ್ವಿಕೆಗೆ ಕಾರಣವಾಗುತ್ತದೆ. ಲೋಕಾನುಗ್ರಹದ ಉದ್ದೇಶದಿಂದ ಮಾಡಿದ ಕಾರ್ಯದಿಂದ ಆದ ವಿರೂಪವೂ ಪರಿಣಾಮದಲ್ಲಿ ಶುಭಕಾರಕ, ಸ್ತೋತ್ರಾರ್ಹ, ಪವಿತ್ರ, ಪ್ರಿಯ. ಭಕ್ತರಿಗೆ ಪ್ರಿಯವಾದ ಶಿವನ ನಾಮಗಳಲ್ಲಿ 'ನೀಲಕಂಠ' ಎಂಬುದು ಬಹಳಪ್ರಿಯ. ಸಮುದ್ರ ಮಂಥನದ ಈ ಉಪಾಖ್ಯಾನವು ಎಲ್ಲ ಪುರಾಣಗಳಲ್ಲಿ ವಿಸ್ತಾರವಾಗಿಯೋ ಸೂಚ್ಯವಾಗಿಯೋ ದೊರಕುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೧೫

ಚಂಪಕಮಾಲಾ

ಸುರನರ ದಾನವರ್ಗೆ ನೆಲೆ ವಿಶ್ವದೊ
ಳೆನ್ನಯ ಬಾಣಕಾವಗುಂ
ಪರಿಭವಮಾದುದಿಲ್ಲೆನುತೆ ದರ್ಪದೆ
ದುರ್ಮತಿ ಮನ್ಮಥಂ ಮಹೇ
ಶ್ವರ ಹರ, ನಿಮ್ಮನಿನ್ನುಳಿದ ದೇವತ
ರಂದದೆ ಕಾಣುತಲ್ಲೆಕ
ಣ್ಣುರಿಯನನಂಗನಾದನಿದು ಶಿಷ್ಟರೊ
ಳಾದುಪಸರ್ಗ ದುಷ್ಕಲಂ.

ಸುರನರದಾನವರ್ಗೆ–ದೇವತೆಗಳು ಮಾನವರು ಇವರೆಲ್ಲರಿಗೆ ನೆಲೆ–ಆಶ್ರಯ
ವಾದ ಈ ವಿಶ್ವದಲ್ಲಿ ನನ್ನ ಬಾಣಗಳಿಗೆ ಪರಿಭವ—ಸೋಲು ಯಾವಾಗಲೂ
ಆದುದಿಲ್ಲ ಎಂಬ ಗರ್ವದಿಂದ ಮನ್ಮಥನು ಬುದ್ಧಿಕೆಟ್ಟವನಾಗಿ ಓ ಮಹೇಶ್ವರ
ಹರ, ನಿಮ್ಮನ್ನು ಬೇರೆ ದೇವತೆಗಳಂತೆ ಕಂಡು ಬಾಣ ಹೂಡಿ ಪ್ರತಿಕ್ಷಣದಲ್ಲಿ
ನಿಮ್ಮ ಕಣ್ಣುರಿಯಿಂದ ಸುಡಲ್ಪಟ್ಟು ಅನಂಗನಾದನು. ಶಿಷ್ಟರಲ್ಲಿ-ಯಾರನ್ನು ಗೌ
ವದಿಂದ ಕಾಣಬೇಕೋ ಅವರಲ್ಲಿ ತೋರಿದ ಉಪಸರ್ಗ–ಅಪಮಾನದ ದುಷ್ಫಲ

ಕನ್ನಡದ ವರಕವಿ ಹರಿಹರದೇವನ ಗಿರಿಜಾಕಲ್ಯಾಣ ಮಹಾಪ್ರಬಂಧದಲ್ಲಿ
ಕಾಮದಹನವನ್ನು ಹೀಗೆ ವರ್ಣಿಸಿದ್ದಾನೆ.

ಚಂ. ಮಾ ॥ ಪೊಗೆಯದು ಪೊತ್ತಿದತ್ತು, ಕುಡಿಯಿಟ್ಟುದು
ನಾಲ್ದೆಸೆದೋರಿದತ್ತು, ಬಾನ್
ಗೊಗೆದುದು, ನಿಂದು ಪೊಂಬೆಳಗುಮಂ ಪೊರ
ಪೊತ್ತದು ಧಂ ದಗಿಲ್ ದಗಿಲ್
ಭುಗಿಲೆನುತಟ್ಟಿತಟ್ಟಿದುದು ಮುಟ್ಟಿತು
ಸುಟ್ಟಿತು ತಿಂದು ತೇಗಿದ
ತ್ತಗಿಯದೆ ನಿಂದ ಪೂಗೆಣೆಯನಂ ಪಣೆ
ಗಣ್ಣುರಿ ಹಂಪೆಯಾಳ್ ನಾ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಕಂ|| ಇಟ್ಟೈನಿಸಿ ಘಂಡುಘೂಡಿಸಿ ಕಿಡಿ
ಗುಟ್ಟಿಕನಲ್ದಡಿಸಿ ಸಿಡಿಲ ಬಳಗದ ಮುನಿಸಂ
ತೊಟ್ಟುದು ಬಿಸುಗಣ್ಣುರಿ ಪೂರ
ಮಟ್ಟುದು ಸುಟ್ಟುದು ರತೀಶನಂ ನಿಮಿಷಾರ್ಧಂ

ಕಂ|| ಗಗನದೆ ಹರಿಸುರ ಪತಿಗಳ್
ಜಗತ್ ಹಿತಾರ್ಥಂ ಮಹೇಶ ಕರುಣಿಪುದೆಂಬ
ನ್ನಗ ಮಿತ್ತಲ್ ಘರಿ ಘರಿ ಭುಗಿ
ಭುಗಿಲೆನೆ ಕಾಮನುರಿದು ಕರಿಮುರಿವೋದಂ.

೯೮ನೆ ಆಶ್ವಾಸ, ಪ ೪೭ ೪೮ ೪೯

೧೬

ಜಂಪಕಮಾಲಾ

ನಟವರ, ನೀವು ನರ್ತಿಸಿರೆ ಕಂಪಿಸಿ
ತುರ್ವರೆ, ತಾರಕಾಕುಲಂ
ಅಟಮಟಮಾಗೆ ಶ್ರೀ ಪತಿಗೆ ಪಂಕಿಲ
ಮಂಬರಮ್, ಅಂತೆ ಸ್ವರ್ಧುನೀ
ತಟಕಪಘಾತಮಿಂತಿದು ಜಗತ್‌ಸೃಜ
ನಸ್ಥಿತಿನಾಶದಾರ್ಭಟೀ
ನಟನದ ರೀತಿ ಎಂದೆನೆ ಪ್ರಭುತ್ವಮೆ
ದುರ್ಭರಮಲ್ತೆ ಲೋಕದೊಳ್.

ಓ ನಟವರ, ನಟರಾಜ, ಸೃಷ್ಟಿ ಸ್ಥಿತಿ ಲಯಗಳನ್ನು ರೂಪಿಸುವ ತಾಂಡವ ನೃತ್ಯದಲ್ಲಿ ನೀವು ತೊಡಗಿದಾಗ ಉರ್ವರೆ—ಭೂಮಿಯು ಕಂಪಿಸಿತು ತಾರಕಾಕುಲಂ ನಕ್ಷತ್ರಸಮೂಹ ಅಟಮಟಮಾಗೆ–ಚಲಿಸಿ ಸ್ಥಾನಾಂತರವಾಗಲು ಶ್ರೀಪತಿಯಾದ ವಿಷ್ಣುವಿನ ಅಂಬರಂ- ವಾಸಸ್ಥಾನವಾದ ಆಕಾಶ ಹಾಗೂ ಹೊದೆದಿದ್ದ ವಸ್ತ್ರವು, ಪಂಕಿಲಂ–ಕೊಳೆಯಾಯಿತು, ಆಕಾಶ ಅಸ್ತವ್ಯಸ್ತವಾಗಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ಕಂಡಿತು. ಸ್ವರ್ಧುನೀ–ದೇವಗಂಗೆಯ ತಟ–ತೀರಪ್ರದೇಶ ಪರಿಮರ್ಧನಂ–ತೀವ್ರವಾದ ಹೊಡೆತಕ್ಕೆ ಗುರಿಯಾಯಿತು. ಈ ಎಲ್ಲಾ ಘಟನಾವಳಿಯ ಕಾರಣವು ಸೃಜನ ಸ್ಥಿತಿ ನಾಶಗಳನ್ನು ಸಂಕೇತಗಳಿಂದ ಸೂಚಿಸುವ ನಿಮ್ನ ನೃತ್ಯದ ಆರ್ಭಟದಲ್ಲಿ ಪ್ರತೀಕ–ಸಂಕೇತ ರೂಪದಲ್ಲಿ ಅಭಿವ್ಯಕ್ತವಾಗಿರುವುದು. ಕೆಲವು ಸಂದರ್ಭಗಳಲ್ಲಿ ಪ್ರಭುತ್ವವೆ—ಪ್ರಭುವಿನ ಆಡಳಿತವೇ, ದುರ್ಭರ ಹೊರಲು ಕಷ್ಟವಾಗುತ್ತದೆ. ಈ ಘಟನೆಗಳಲ್ಲಿ ಭೂಕಂಪನವು ಸೃಷ್ಟಿಯ, ಸುರಗಂಗೆ ತಟಮರ್ದನವು ಸ್ಥಿತಿಯ, ನಕ್ಷತ್ರದ ಆಟಮಟವು ವಿನಾಶದ ಸಂಕೇತ ಎಂದು ತಿಳಿಯಬೇಕು. ತಾಂಡವನೃತ್ಯದಲ್ಲಿ ಈ ಪ್ರತೀಕಗಳ ಪ್ರತ್ಯೇಕವಾಗಿಯೂ ಸಂಮಿಳಿತರಾಗಿಯೂ ಅಡಕವಾಗಿರುತ್ತದೆ.

ಶಿವತಾಂಡವದ ಒಗೆಗೆ ಪುರಾಣಗಳಲ್ಲಿ ಅರ್ಥಪೂರ್ಣವಾದ ವಿವರಗಳ ದೊರಕುತ್ತವೆ. ಮುಂದೆ ಅವುಗಳನ್ನು ಸಂಗ್ರಹಿಸಿದೆ.

ಶಿವನು ತನ್ನ ನಿಜರೂಪವನ್ನು ಹೀಗೆ ವಿವರಿಸುತ್ತಾನೆ, "ಮೂರು ಲೋಕಗಳನ್ನು ಸೃಷ್ಟಿಸಿದ ಆದಿಪುರುಷನು ನಾನು, ಯೋಗಿಯಾಗಿ ಅನಂತ ಕಾಲವು ನೃತ್ಯಮಾಡುತ್ತೇನೆ. ಹೀಗೆ ಹೇಳಿ ದೇವದೇವ ಮಹಾದೇವನು ತನ್ನ ವಿಶ್ವವ್ಯಾಪೀ ಮಹಾತ್ಮ್ಯವನ್ನು ಬೆಳಗಿಸಿ ನರ್ತಿಸಿದನು. ವಿಶ್ವವನ್ನು ಚಾಲನ ಮಾಡುವ ಸತ್ಯರೂಪಿ ಚೈತನ್ಯವೇ ಶಿವನು. ವಿಶ್ವಸೃಷ್ಟಿ ಶಿವನ ಮಾಯೆ. ಶಿವನು ಮಾಯಾವಿ. ಅವಿದ್ಯೆಯ ಪಶುಭಾವದಿಂದ ಜೀವನನ್ನು ಬಿಡುಗಡೆ ಮಾಡುವ ರುದ್ರಶಿವನು ಆಕಾಶದಲ್ಲಿ ನರ್ತಿಸುವುದನ್ನು ಮುನಿಗಳು ನೋಡಿದರು. ಲೋಕರಕ್ಷಕನಾದ ವಿಷ್ಣುವು ಉಮೆಯ ರೂಪದಲ್ಲಿ ರುದ್ರಶಿವನ ವಾಮಶರೀರವನ್ನು ಆಶ್ರಯಿಸಿ ನರ್ತಿಸುವುದನ್ನು ಅವರು ಕಂಡರು.

ಕೂರ್ಮ ಪುರಾಣ ೨-

ಶಿವತಾಂಡವವು ಸೃಷ್ಟಿ,ಸ್ಥಿತಿ,ಲಯ, ತಿರೋಧಾನ, ಅನುಗ್ರಹ ಈ ಐದು ವೃತ್ತಿಗಳನ್ನು ಕೈಕಾಲುಗಳ ಮುದ್ರೆಯಿಂದ ನಿರೂಪಿಸುವುದೆಂದು ಎ. ಕೆ. ಕುಮಾರಸ್ವಾಮಿ, Dance of Siva ಗ್ರಂಥದಲ್ಲೂ, ಟಿ.ಎ. ಗೋಪೀನಾಥರಾಯರು Elements of Hindu Iconagraphy ಗ್ರಂಥದಲ್ಲೂ

Sri Vidyabharathi Book Centre, Sringeri

 CC-O. In Public Domain. Digitized by eGangotri

(Part 1 page 23-51) ಡಾ॥ ಇ. ಶಿವರಾಮಮೂರ್ತಿಯವರು Nataraja in Art, Thought and Literature ಗ್ರಂಥದಲ್ಲೂ ಸಾಧಾರವಾಗಿ ನಿರೂಪಿಸಿದ್ದಾರೆ.

೧೭

ಚಂಪಕಮಾಲಾ

ಗಗನವ ತುಂಬೆ ತಾರಕೆಗಳಾದವು
ನಿಮ್ಮ ಜಟಾಂತರಾಳದಿಂ
ದೊಗೆದಿಹ ವಾರಿಬಿಂದು ಲಘುಧಾರೆಯಿ
ಬುದ್ಬುದಮಂತಿಳಾತಲಂ
ಸಗರಜವಾರಿ ಸಂಗಮದೊಳಾಯ್ತು ಜ
ಲಾವೃತ ದೀಪಜಾಲಮೀ
ವಿಗಡಮಹಾದ್ಭುತಂ ಗಿರಿಶ, ನಿಮ್ಮ ಪ
ದದ್ವಯ ಘರ್ಷಣೋದ್ಭವಂ.

ವಿಶಾಲ ಜಗತ್ತು ಶಿವನ ರೂಪ; ಶಿವನ ಒಡೆತನವು cosmic ವಿಶ್ವ ವ್ಯಾಪಿ ಎಂಬುದನ್ನು ಈ ಪದ್ಯದಲ್ಲಿ ಪ್ರತಿಪಾದಿಸಿದೆ.

ಓ ಗಿರಿಶ, ಗಗನದ ಎಲ್ಲ ಕಡೆಯೂ ತುಂಬಿರುವ ನಕ್ಷತ್ರಗಳು ನಿಮ್ಮ ಜಟಾಂತರಾಳದಿಂದ ಒಗೆದಿಹ, — ಉದುರುತ್ತಿರುವ ವಾರಿಬಿಂದು ಲಘು ದಾರೆಯ—ನೀರಿನ ಹನಿಗಳ ಅಷ್ಟಪ್ರಮಾಣದ ಧಾರೆಯ ಬುದ್ಬುದ—ಬುರುಗೆ ಆಗಿರುತ್ತದೆ ಅಂತೆ—ಹಾಗೆಯೇ ಇಳಾತಲಂ—ಭೂಭಾಗವು ಸಗರಜವಾರಿ ಸಂಗಮದೆ—ಸಗರ ಚಕ್ರವರ್ತಿ ತಪಸ್ಸಿನಿಂದ ಭೂಮಿಗೆ ತಂದ ಸಾಗರದ ನೀರಿ ನೊಡನೆ ಜಟೆಯ ಲಘುಧಾರೆಯು ಸೇರಿಕೊಂಡದ್ದರಿಂದ ಭೂಭಾಗವು, ಜಲಾವೃತ—ನೀರಿನಿಂದ ಸುತ್ತಲ್ಪಟ್ಟ ದೀಪಮಾಲೆ — ದ್ವೀಪಗಳಮಾಲಿಕೆಯಾಗಿ ಪರಿಣಮಿಸಿತು. ವಿಕಟ—ಭೀಕರವಾದ ಮಹಾದ್ಭುತವು ನಿಮ್ಮ ಪಾದಗಳ ಘರ್ಷಣ—ತಾಡನದಿಂದ ಆದದ್ದು.

ಸೃಷ್ಟಿಯ ಆದಿಯಲ್ಲಿ ಭೂಮಿಯ ಎಲ್ಲಕಡೆ ನೀರು ತುಂಬಿತ್ತೆಂದು, ಕಾಲಾಂತರದಲ್ಲಿ ನಡೆದ ಸಂಘರ್ಷಣದಿಂದ ಭೂಭಾಗವು ಮೇಲೆದ್ದು ನವಖಂಡ

Sri Vidyabharathi Book Centre, Sringeri

 CC-O. In Public Domain. Digitized by eGangotri

ಗಳಾಗಿ ರೂಪಗೊಂಡು ಆಮೇಲೆ ಜೀವಿಗಳೂ ಮಾನವನೂ ಕಾಣಿಸಿಕೊಂಡರೆಂದು ಪುರಾಣಗಳ ಸೃಷ್ಟಿಕಾಂಡದಲ್ಲಿ ಹೇಳಿದೆ. ಆಧುನಿಕ ಭೂವಿಜ್ಞಾನ ಇದನ್ನು ಬಹು ಅಂಶಗಳಲ್ಲಿ ಒಪ್ಪಿಕೊಳ್ಳುತ್ತದೆ.

೧೮

ಚಂಪಕಮಾಲಾ

ಧರೆಯೆ ರಥಂ, ವಿರಂಚಿ ಅದಕೊಪ್ಪುವ
ಸಾರಥಿ, ಸೂರ್ಯ ಚಂದ್ರರಾ
ದರು ರಥಚಕ್ರಮಂತೆ, ಧನುವಾದುದು
ಮೇರು, ಶರಂ ಮುರಾರಿ, ಈ
ಪರಿಯ ಆಡಂಬರೇತಕೆ ತೃಣೋಪಮ
ತ್ರೈಪುರದಾಹಕೆಂದೆನಲ್
ಪರಿಜನರುತ್ಸವ ಪ್ರಿಯತೆ ಆಳದೆ
ನಾಯಕರಂ ರಣಾಜಿಯೋಳ್ ?

ಕುಮಾರ ಷಣ್ಮುಖನಿಂದ ವಧಿಸಲ್ಪಟ್ಟ ತಾರಕಾಸುರನ ಮಕ್ಕಳಾದ ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿ ಇವರು ಕಬ್ಬಿಣ, ಚಿನ್ನ, ಬೆಳ್ಳಿ ಈ ಲೋಹಗಳಿಂದ ನಗರಗಳನ್ನು ರಚಿಸಿಕೊಂಡು ಮಂತ್ರಗಳ ಸಹಾಯದಿಂದ ಈ ನಗರಗಳು ಬೇಕಾದಲ್ಲಿಗೆ ಹೋಗಿ ನಿಲ್ಲುವಂತೆ ಮಾಡಿಕೊಂಡು ಲೋಕೇಶ್ವರರಾಗಿ ದೇವತೆಗಳಿಗೆ ವಿರೋಧಿಗಳಾಗುತ್ತಾರೆ. ಆ ಮೂರು ನಗರಗಳು ಒಂದೆಡೆ ಸೇರಿದಾಗ ಪ್ರಯೋಗಿಸಲ್ಪಡುವ ಒಂದೇ ಬಾಣದಿಂದ ಮಾತ್ರವೆ ತಮ್ಮ ಮರಣವೆಂದು, ಅವರು ಬ್ರಹ್ಮದೇವನಿಂದ ವರ ಪಡೆದಿರುವುದರಿಂದ ದೇವತೆಗಳಿಗೆ ಅವರನ್ನು ನಾಶಮಾಡಲು ಸಾಧ್ಯವಾಗುವುದಿಲ್ಲ. ಕಾಲಾನಂತರ ದೇವತೆಗಳು ಶಿವನ ಮೊರೆಹೊಕ್ಕು ಈ "ಕಾರ್ಯ ನಿಮ್ಮಿಂದ ಮಾತ್ರ ಸಾಧ್ಯ. ನಾರದನ ಸಹಾಯದಿಂದ ಅಸುರರ ಮೂರು ಮಹಾನಗರಗಳನ್ನೂ ಒಂದೆಡೆ ಸೇರುವಂತೆ ಏರ್ಪಡಿಸಿದ್ದೇವೆ. ರಥ, ಸಾರಥಿ, ಬಿಲ್ಲು ಬಾಣ, ಸಿದ್ಧವಾಗಿದೆ. ನೀವು ಅಸುರರನ್ನೂ ಅವರ ಮಹಾನಗರಗಳನ್ನೂ ನಾಶಮಾಡಿ ಲೋಕಗಳನ್ನು ಉದ್ಧರಿಸಬೇಕು" ಎಂದು ಬೇಡಿಕೊಳ್ಳುತ್ತಾರೆ. ಆದರಂತೆ ತ್ರಿಪುರ ಸಂಹಾರ ನಡೆಯು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತದೆ. ಇದು ಪುರಾಣಗಳಲ್ಲಿ ಉಕ್ತವಾದ 'ತ್ರಿಪುರ ದಾಹ'ದ ಕತೆ. ಪರಮ ಶಿವನ ದೃಷ್ಟಿಯಲ್ಲಿ ತೃಣೋಪಮ–ಹುಲ್ಲು ಕಡ್ಡಿಗೆ ಸಮಾನವಾದ ತ್ರಿಪುರದ ನಾಶಕ್ಕೆ ಇಷ್ಟೊಂದು ಆಡಂಬರೇತಕೆ ? ಆಡಂಬರದ ಸಿದ್ಧತೆ ಏಕೆ ಎಂಬ ಪ್ರತಿವಾದಿ ಪಕ್ಷಕ್ಕೆ ಕವಿಪುಷ್ಪದಂತನ ಉತ್ತರ: "ಪರಿಜನರ ಉತ್ಸವ ಪ್ರಿಯತೆ ಆಳದೆ ನಾಯಕರಂ ರಣಾಜಿಯೋಳ್"–ಸಹಾಯಕರ ಉತ್ಸಾಹ, ಮೆರೆಯುವ ಹಂಬಲ, ಸ್ಪರ್ಧೆಯಿಂದ ನಡೆಯುವ ಯುದ್ಧದಲ್ಲಿ ನಾಯಕರನ್ನು ಆಳದೆ, ನಾಯಕರ ಮೇಲೆ ಪ್ರಭಾವ ಬೀರುವುದಲ್ಲವೆ" ಎಂದು. ೧೨ ನೆಯ ಶತಮಾನದ ಕವಿ ಅಮಾತ್ಯ ವತ್ಸರಾಜನು ರಚಿಸಿದ 'ತ್ರಿಪುರ ದಾಹ' (ಡಿಮ=ನಾಟಕದ ಒಂದು ರೂಪ) ದಲ್ಲಿ ಈ ಭಾವವನ್ನು ಶಿವನಿಂದಲೆ ನುಡಿಸಿದ್ದಾನೆ. ಆ ಪದ್ಯ ಹೀಗಿದೆ. ರಥವೇರುವ ಮುನ್ನ ಶಿವನು ನಾರದನಿಗೆ ಹೇಳುತ್ತಾನೆ.

ತಾ॥ ಸ್ವೈನೈವೇಷ ಪಥೇ ಭವಂತಿಯದಮೀ
ದರ್ಪಜ್ವರೋನ್ಮೋಹಿತಾ ;
ಪಾಣಿಂ ಕಸ್ಯ ಧನು ಗ್ರಹೀಷ್ಯತಿ ಹಹಾ !
ಹಂತುಂ ತದೇತಾನ್ ಅಪಿ ;
ತುಚ್ಛೇ ಕರ್ಮಣಿ ಭೂರಿಡಂಬರ ಧರಂ
ಧಿಕ್ ಧನ್ವಿನಂ ! ದಿಕ್ ಧನುಂ !
ಧಿಕ್ ಬಾಣಂ ಧಿಕ್ ಅಮುಂ ರಣವ್ಯತಿಕರಂ
ದಿಕ್ ಸಾರಥಿಂ ! ದಿಕ್ ರಥಂ !

ಪುಷ್ಪದಂತನು "ತ್ರಿಪುರತೃಣಮಾಡಂಬರವಿಧಿ" ಎಂದು ಹೇಳಿದುದನ್ನು ನಾಟಕಕಾರ ವತ್ಸರಾಜ ವಿಸ್ತರಿಸಿ ಹೇಳಿದ್ದಾನೆ. ಪದ್ಯದ ತಾತ್ಪರ್ಯ ಇದು.

ಶಿವ ನಾರದನಿಗೆ ಹೇಳುತ್ತಾನೆ :

ಶಿವ—ಅಯಿನಾರದ, ಕೋಯಂ ಅವಸರ ಪರಾಕ್ರಮಸ್ಯ ? (ಎಲೈ ನಾರದ, ಪರಾಕ್ರಮಕ್ಕೆ ಇಲ್ಲಿ ಅವಕಾಶವೇನಿದೆ).

ದರ್ಪಜ್ವರದಿಂದ ಉನ್ಮೋಹಿತರಾದ ಈ ತ್ರಿಪುರಾಸುರರು ಸ್ವೈಚ್ಛೆಯಿಂದ ತಾವಾಗಿಯೇ, ಬಾಣದ ಗುರಿಗೆ ಸರಿಯಾಗಿ ಒಂದು ಕಡೆ ಸೇರುತ್ತಾರೆ. ತಾವಾಗಿ ಬಾಣದ ಗುರಿಗೆ ಎದುರಾಗುತ್ತಿರುವ ಇವರನ್ನು ಸಂಹರಿಸಲು ಧನುಸ್ಸು ಯಾರ ಕೈ ಹಿಡಿದರೇನು ? ಈ ತುಚ್ಛಕಾರ್ಯಕ್ಕೆ ಇಷ್ಟೊಂದು

 CC-O. In Public Domain. Digitized by eGangotri

ಆಡಂಬರದ ಸಿದ್ಧತೆಯೇ ? ಈ ಧನುಸ್ಸನ್ನು ಹಿಡಿಯುವವನಿಗೆ ಧಿಕ್ಕಾರ ! ಧನುಸ್ಸಿಗೆ ಧಿಕ್ಕಾರ ! ಬಾಣಕ್ಕೆ ಧಿಕ್ಕಾರ ! ಇಂತಹ ರಣದ ವೃತಿಕರ–ಪ್ರಸಂಗಕ್ಕೆ ಧಿಕ್ಕಾರ ! ಸಾರಥಿಗೆ ಧಿಕ್ಕಾರ ! ರಥಕ್ಕೆ ಧಿಕ್ಕಾರ !

ಅನಂತರ ಶಿವನನ್ನು ಒಪ್ಪಿಸಲು ವಿಷ್ಣುವೂ ದೇವತೆಗಳೂ ಶ್ರಮಿಸ ಬೇಕಾಯಿತು.

೧೯

ಚಂಪಕಮಾಲಾ

ಹರಿ ಭವದೀಯ ಪಾದಗಳ ಸಾಸಿರ
ಪದ್ಮಗಳಿಂದೆ ಪೂಜಿಸಲ್
ಪರತರಭಕ್ತಿಯಿಂ ಕೊನೆಗೆ ಸಾಲದಿ
ರಲ್ ಕೊನೆಮುಟ್ಟಲೊಂದು ಹೂ,
ತಿರಿದು ನಿಜಾಕ್ಷಿ ಪದ್ಮವ, ಪುರಾಂತಕ,
ನಿಮ್ಮಡಿಗಿಟ್ಟ ನಿಷ್ಠೆಯಿಂ
ದೊರಕಿತು ಚಕ್ರರಾಜಮದರಿಂ ಪಡೆ
ದಂ ಭುವನಾಧಿಪತ್ಯಮಂ.

ಓ ಪುರಾಂತಕ, ಶ್ರೀಹರಿಯು ನಿಮ್ಮ ಚರಣಗಳನ್ನು ಒಂದು ಸಾವಿರ ಪದ್ಮಗಳಿಂದ ಪೂಜಿಸಲು ಭಕ್ತಿಪರಾಕಾಷ್ಟೆಯಿಂದ ಪ್ರಾರಂಭಿಸಿದಾಗ ಕೊನೆಯಲ್ಲಿ ಒಂದು ಹೂ ಸಾಲದೆ ಹೋಯಿತು. ಕಮಲಾಕ್ಷನಾದ ಹರಿಯು ತನ್ನ ಒಂದು ಕಣ್ಣನ್ನು ಕಿತ್ತು ನಿಮ್ಮ ಚರಣಗಳಿಗಿಟ್ಟ ನಿಷ್ಠೆಯಿಂದ ವಿಷ್ಣುವಿಗೆ ಚಕ್ರರಾಜ ಸುದರ್ಶನ ದೊರಕಿತು. ಅದರ ಸಾಮರ್ಥ್ಯದಿಂದ ವಿಷ್ಣು ಹದಿನಾಲ್ಕು ಲೋಕಗಳ ಅಧಿಪತ್ಯವನ್ನು ಪಡೆದನು.

ಈ ಪ್ರಸಂಗ ಬ್ರಹ್ಮಪುರಾಣದಲ್ಲಿ ಹೇಳಲ್ಪಟ್ಟಿದೆ. ಶಿವ ಸಹಸ್ರನಾಮವನ್ನು ವಿಷ್ಣುವು ಪೂಜಿಸುತ್ತಿದ್ದಾಗ ಪರೀಕ್ಷೆಗಾಗಿ ಶಿವನು ಒಂದು ಹೂ ಅದೃಶ್ಯವಾಗುವಂತೆ ಮಾಡುತ್ತಾನೆ. ಶಿವನ ಅನುಗ್ರಹ ಚಕ್ರವನ್ನು ಕೊಡುತ್ತದೆ. ದೈತ್ಯ ಸಂಹಾರ ಸುಲಭವಾಗಿ ಲೋಕಾಧಿಪತ್ಯ ದೊರಕುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೨೦

ಮತ್ತೇಭವಿಕ್ರೀಡಿತಂ

ಕ್ರತು ನಿದ್ರಾವಶವಾಗೆ ಕರ್ಮ ವಿಫಲಂ
ತದ್ಧಾತೃ ನೀವಾಗ ಜಾ
ಗ್ರತರಾಗಿರ್ದೊಡೆ ಕರ್ತೃ ಧನ್ಯನೆನಿಪಂ.
ನೀವಿಲ್ಲದಾ ಯಜ್ಞಮೂ
ರ್ಜಿತಮುಲ್ಲೇಂದರಿತಃತ್ಪದುನ್ನತಿಗೆ, ಉಮಾ
ನಾಥ, ತ್ವದೀಯಾರ್ಚನಂ
ಶ್ರುತಿಸಿದ್ಧಾರ್ಥಮೆನಲ್ ತದುಕ್ತ ಕ್ರಿಯೆಯೋಳ್
ವಿಶ್ವಾಸಮಕ್ಕುಂಧೃಡಂ.

ಓ ಉಮಾನಾಥ, ಋತ್ವಿಕ್ಕುಗಳ ಆಸಡ್ಡೆಯಿಂದ ಕ್ರತು–ಯಜ್ಞವು ನಿದ್ರಾವಶವಾಗೆ—ಜಡವಾಗಲು ಮಾಡಿದ ಕರ್ಮವೆಲ್ಲ ವಿಫಲವಾಗುತ್ತದೆ. ಯಜ್ಞಫಲವನ್ನು ಕೊಡುವ ನೀವು ಆಗ ಜಾಗ್ರತರಾಗಿದ್ದರೆ ಫಲವನ್ನು ಪಡೆದು ಧನ್ಯನಾದ ಕರ್ತೃ–ಯಜಮಾನನು ನೀವಿಲ್ಲದ ಯಜ್ಞವು ಊರ್ಜಿತವಾಗುವುದಿಲ್ಲವೆಂದೂ, ನಿಮ್ಮನ್ನು ಉಪಾಸಿಸಲು ವೇದಗಳು ಹೇಳಿರುವವೆಂದೂ ತಿಳಿದುಕೊಂಡಾಗ ವೇದೋಕ್ತ ಕ್ರಿಯೆಗಳಲ್ಲಿ ವಿಶ್ವಾಸ ಧೃಡವಾಗುತ್ತದೆ. ನಿದ್ರೆ ಜಾಗ್ರತ ಶಬ್ದಗಳು ವಿಶೇಷಾರ್ಥದಲ್ಲಿ ಉಪಯುಕ್ತವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೨೧

ಚಂಪಕಮಾಲಾ

ಯಜನದೆ ದೀಕ್ಷಿತಂ, ಯಜನಕರ್ತೃ, ಕ್ರಿ
ಯಾಪಟು ದಕ್ಷನಾಜಿಯಂ
ಯಜನ ಫಲಕ್ಕೆ ಧಾತೃ ಗಿರಿಜಾಧವ
ನೇತಕೆ ಮಾಣ್ದನೆಂದೆನಲ್;
ಋಜುಗತಿಯಂ ನಿರಾಕರಿಸಿ, ಶ್ರದ್ಧೆಯ
ನೋಡಿಸಿ, ಕೂಡಿದೆಲ್ಲ ಋ
ತ್ವಿಜರ ಹಿತೋಕ್ತಿಗೊಪ್ಪದಿಹ ಯಜ್ಞಮ
ದೇನಭಿಚಾರಮಾಗದೇ !

ದಕ್ಷಯಜ್ಞದ ಬಗೆಗೆ ವಿರೋಧಿಗಳ ಆಭಿಪ್ರಾಯ ಹೇಳಿ ಅದಕ್ಕೆ ಉತ್ತರ ಕೊಡುತ್ತಾನೆ ಕವಿ ಈ ಪದ್ಯದಲ್ಲಿ.

ಯಜ್ಞದಲ್ಲಿ ದೀಕ್ಷಿತನೂ, ಯಜನಕರ್ತೃವೂ, ಯಜ್ಞಕ್ರಿಯೆಗಳಲ್ಲಿ ಪಟುವೂ ಆದ ದಕ್ಷನ ಆಜಿ—ಯಜ್ಞರೂಪವಾದ ಯುದ್ಧವನ್ನು ಯಜ್ಞ ಫಲವನ್ನು ಕೊಡುವ ಶಿವನೇಕೆ ಮಾಣ್ದನು—ನಾಶಮಾಡಿದನು ಎಂಬುದು ಪೂರ್ವಪಕ್ಷದ ಆಕ್ಷೇಪ. ಅವಕ್ಕೆ ಕವಿ ಕೊಡುವ ಉತ್ತರ: ನ್ಯಾಯವಾದ ಮಾರ್ಗವನ್ನು ನಿರಾಕರಿಸಿ, ಯಜ್ಞದಲ್ಲಿ ಶ್ರದ್ಧೆಯಿಲ್ಲದೆ, ಸಭೆಯಲ್ಲಿದ್ದ ಮುತ್ಸದ್ದಿಕ್ಕುಗಳ ಹಿತೋಕ್ತಿಯನ್ನು ತಿರಸ್ಕರಿಸಿ ಮಾಡಿದ ಯಜ್ಞವು ಯಜ್ಞವಲ್ಲ. ಅದನ್ನು "ಅಭಿಚಾರ" ಕೇಡಿನ ಯಜ್ಞ ಎನ್ನುವರಲ್ಲವೆ?

Sri Vidyabharathi Book Centre, Sringeri

CC-O. In Public Domain. Digitized by eGangotri

೨೨

ಮತ್ತೇಭವಿಕ್ರೀಡಿತಂ

ವಿಧಿತಾಂ ಸೃಷ್ಟಿಸಿದೋರ್ವಕನ್ಯೆ ಪರಿಣೇ
ರೂಪಾಗೆ ತಾನುಂ ಚುರಂ
ಗದವೋಲ್ ಕೂಡಿರೆ ಕಂಡು ಧೂರ್ಜಟಿ ಮೃಗ
ವ್ಯಾಧೋಗ್ರ ಋಕ್ಷಂ ಪಿನಾ
ಕದೆ ಬಾಣಂಬಿಡಲೀರ್ವರುಂ ನಭಕೆ ಹಾ
ರುತ್ತಲ್ಲಿ ನಕ್ಷತ್ರಮಾ
ಗುದಿಸುತ್ತಸ್ತಮಿಪರ್ ನಿರಂತ ವಿರಹೋ
ತ್ಕಂಠ ತ್ರುಟಿತ್ ಕಾಂತಿಯಿಂ.

ಬಗಟೆಯಂತೆ ಕಾಣುವ ಈ ಪದ್ಯದ ಹಿನ್ನೆಲೆ, ವೇದಪುರಾಣಗಳಲ್ಲಿ ಆ ಸಂಬಂಧವಾಗಿ ದೊರಕುವ ಕಥೆಗಳು ಕುತೂಹಲಕಾರಿ, ಅಸದೃಶ, ವೈವಿಧ್ಯ ಪೂರ್ಣ ! ಮೊದಲಿಗೆ ಪದ್ಯದ ಸ್ಪಷ್ಟ ಅರ್ಥ ಇದು.

ಬ್ರಹ್ಮದೇವನು ತಾನು ಸೃಷ್ಟಿಸಿದ ಒಬ್ಬ ಕನ್ಯೆ ಹರಿಣೀರೂಪಾಗೆ—ಹೆಣ್ಣು ಜಿಂಕೆಯ ರೂಪದಿಂದ ಕಾಣಿಸಿಕೊಳ್ಳಲು, ತಾನೂ ಕುರಂಗದವೋಲ್—ಗಂಡುಜಿಂಕೆಯ ರೂಪದಿಂದ ಅದನ್ನು ಕೂಡಿರಲು ಧೂರ್ಜಟಿ—ರುದ್ರಶಿವನು ಕಂಡು ಮೃಗವ್ಯಾಧ—ಬೇಟಿಗಾರನ—ಉಗ್ರಋ ಕ್ಷಂ—ಉಗ್ರ ನಕ್ಷತ್ರವಾಗಿ ಗಗನದಲ್ಲಿ ಕಾಣಿಸಿಕೊಂಡು ಪಿನಾಕದೆ, ಬಾಣಂ ಬಿಡಲ್—ಪಿನಾಕವೆಂದು ವಿಖ್ಯಾತವಾದ ಧನುಸ್ಸಿನಲ್ಲಿ ಬಾಣ ಹೂಡಿ ಬ್ರಹ್ಮದೇವನಿಗೆ ಗುರಿಯಿಟ್ಟು ಹೊಡೆದನು. ಬಾಣದ ಆಘಾತದಿಂದ ಆಗಲಿದ ಬ್ರಹ್ಮನೂ ಕನ್ಯೆಯೂ ಅಂತರಿಕ್ಷಕ್ಕೆ ಹಾರಿ ನಕ್ಷತ್ರರೂಪದಿಂದ ಕಾಣಿಸಿಕೊಳ್ಳುತ್ತಾರೆ. ಪರಸ್ಪರ ಸಮೀಪದಲ್ಲಿದ್ದರೂ ಕೂಡಲಾಗದ ಪರಿಸ್ಥಿತಿಯಲ್ಲಿ, ನಿರಂತ—ಕೊನೆಯಿಲ್ಲದ ವಿರಹದ ಉತ್ಕಂತ – ಉತ್ಕಟ ಬಾಧೆಯಿಂದ ಅವರು ತ್ರುಟಿತ್ — ತಡವರಿಸುವ ಕಾಂತಿಯಿಂದ ಉದಯಿಸಿ ಅಸ್ತರಾಗುತ್ತಾರೆ.

ಕವಿಯು ಧ್ವನಿಯನ್ನಾಶ್ರಯಿಸಿ ಸಂಗ್ರಹವಾಗಿ ಹೇಳಿರುವ ಈ ಉಪಾಖ್ಯಾನವು ವಿತರೇಯ ಶತಪಥ ಬ್ರಾಹ್ಮಣಗಳಲ್ಲಿ, ಸ್ಕಾಂದ, ಮತ್ಸ್ಯ, ಶಿವಪುರಾಣ

Sri Vidyabharathi Book Centre, Sringeri

 CC-O. In Public Domain. Digitized by eGangotri

ಗಳಲ್ಲಿ ವಿಸ್ತಾರವಾಗಿ ನಿರೂಪಿತವಾಗಿದೆ. ಈ ಆಕ್ರಮ ಘರ್ಷಣೆಯು ನಾಯಿಕೆಯರಾಗಿ ದ್ಯಾ, ಸಾವಿತ್ರಿ, ಗಾಯಿತ್ರಿ, ಸರಸ್ವತಿ ಹೀಗೆ ಒಂದೊಂದು ಮೂಲದಲ್ಲಿಯೂ ಬೇರೆ ಬೇರೆ ಹೆಸರುಗಳು ಬರುವುದರಿಂದ ಕವಿಯು ಯಾರ ಹೆಸರನ್ನೂ ಹೇಳದೆ, "ಸ್ವಾಂ ದುಹಿತರಂ" "ತಾನು ಸೃಷ್ಟಿಸಿದೋರ್ವ ಕನ್ಯೆ," ಎಂದಿದ್ದಾನೆ.

ಋಗ್ವೇದಸಂಹಿತೆಯ ೧೦ನೆ ಮಂಡಲದ ೬೧ನೆಯ ಸೂಕ್ತದಲ್ಲಿ ಈ ಉಪಾಖ್ಯಾನವನ್ನು ಕುರಿತು ದೊರಕುವ ಮಂತ್ರಗಳನ್ನು ಇಲ್ಲಿ ಸಂಗ್ರಹಿಸಿದೆ.

ಇದಮಿತ್ಥಾ ರೌದ್ರಂ ಗೂರ್ತವಚಾ
ಬ್ರಹ್ಮಕೃತ್ವಾ ಶಚ್ಯಾಂ ಅಂತರಾಜೌ
ತ್ರಾಣಾ ಯದಸ್ಯ ಪಿತರಾ ಮಂಹನೇಷ್ಠಾ
ಆ ಪರ್ಷತ್ ಪಕ್ಥ್ಯೇ ಅಹನ್ ಸಪ್ತ ಹೋತ್ರೂನ್.॥ ೧ ॥

ಪ್ರತಿಪದಾರ್ಥ: ತ್ರಾಣಾ—ಭಾಗಮಾಡಿಕೊಳ್ಳಲು ಆಸಕ್ತರಾದ ನಾಭಾನೇದಿಷ್ಠನ ತಾಯಿ ತಂದೆಯರೂ, ಮಂಹನೇಷ್ಠಾ—ಭಾಗ ಪಡೆಯಲು ಆತುರರಾಗಿದ್ದ ಅವನ ಸಹೋದರರೂ. ಯತ್-ಯಾವ ಸ್ತೋತ್ರವನ್ನು ಗೋಲಾಭ ಸಾಧನವಾಗಿ ಮಾಡಿಕೊಂಡರೋ ಅಂತಹ ರೌದ್ರಂ-ರುದ್ರನನ್ನು ಸ್ತುತಿಸುವ, ಇದಂ ಬ್ರಹ್ಮ—ಈ ಸ್ತೋತ್ರವನ್ನು ಗೂರ್ತವಚಾ—ಉಚ್ಚ ಸ್ವರಗಳುಳ್ಳ ನಾಭಾನೇದಿಷ್ಠನು, ಇತ್ತ ಮುಂದೆ ತಿಳಿಸುವಂತೆ ಕೃತ್ವ * ರಚಿಸಿ, ಶಚ್ಯಾಂ ಅಂತ–ಕರ್ಮದ ಮಧ್ಯಭಾಗದಲ್ಲಿ, ಆಜೌ–ಆಂಗೀರಸರ ನಡುವೆ ಸೇರಿಸಿದನು, (ನೇದಿಷ್ಠನು ರಚಿಸಿದ ಈ ಮಂತ್ರಗಳ ಪ್ರಭಾವದಿಂದ, ಪಕ್ಥ್ಯೇ ಅಹನ್—ಕರ್ಮವು ಪೂರ್ಣಗೊಳ್ಳುವ ಆರನೆಯ ದಿನ, ಸಪ್ತಹೋತ್ರೂನ್–ಕರ್ಮದಲ್ಲಿ ಭಾಗಿಗಳಾಗಿದ್ದ ಏಳುಮಂದಿ ಋತ್ವಿಕ್ಕುಗಳನ್ನು ಆ ಪರ್ಷತ್—ಯಜ್ಞವನ್ನು ಪೂರ್ಣಗೊಳಿಸಲು ಸಿದ್ಧಪಡಿಸಿದನು.

ಮುಂದಿನ ಮೂರು ಮಂತ್ರಗಳಲ್ಲಿ ನಾಭಾನೇದಿಷ್ಠನು ಯಜ್ಞವನ್ನು ಪುಷ್ಟಿಗೊಳಿಸುವ ಅಶ್ವಿನೀ ದೇವತೆಗಳನ್ನು ಆಹ್ವಾನಿಸಿ ತೃಪ್ತಿಗೊಳಿಸುತ್ತಾನೆ. ಧರ್ಮಚ್ಯುತಿಯನ್ನು ತಪ್ಪಿಸಲು ರುದ್ರನು ಅನುಸರಿಸಿದ ಕ್ರಮವು ೫ನೆಯ ಮಂತ್ರದಲ್ಲಿ ಹೀಗೆ ಪಠಿತವಾಗಿದೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಪೃಥಿಷ್ಟ ಯಸ್ಯ ವೀರ ಕರ್ಮಂ ಇಷ್ಣತ್
ಅನುಷ್ಠಿತಂ ಸು ನರ್ಯೋ; ಅಪಾಹತ್
ಪುನಃ ತತ್ ಆವೃಹತಿ ಯತ್ ಕನಾಯಾ
ದುಹಿತುರಾ ಅನುಭೃತಂ ಅನರ್ವಾ ॥ ೫ ॥

ಪ್ರತಿಪದಾರ್ಥ : ಯಸ್ಯ—ಯಾವ ಪ್ರಜಾಪತಿಯು ಇಷ್ಣತ್ ಪ್ರಜೋತ್ಪಾದಕವಾದ ವೀರಕರ್ಮಂ—ರೇತೋ ರೂಪವಾದ ಕರ್ಮವು, ಪೃಥಿಷ್ಟ—ವೃದ್ಧಿಯಾಗಿ ಹರಡುವುದರಲ್ಲಿದ್ದಿತೊ, ಅಂತಹ, ಅನುಷ್ಠಿತಂ—ಸಂತತಿಗಾಗಿ ಪ್ರಯುಕ್ತವಾದ ರೇತಸ್ಸನ್ನು, ನರ್ಯ ಮಾನವರಿಗೆ ಹಿತಕಾರಣನಾದ ರುದ್ರನು. ಅಪಾಹತ್—ತಡೆದು ನಿಲ್ಲಿಸಿದನು. ಯತ್—ಯಾವ ರೇತಸ್ಸು, ಕನಾಯಾ—ಕನ್ಯಾರೂಪಿಯಾದ ದುಹಿತ್ರ—ಪುತ್ರಿಗೆ ಅಗುಭೃತಂ ಅನುದಾನವಾಗಬೇಕಾಗಿತ್ತೊ, ತತ್ ರೇತ; ಆ ರೇತಸ್ಸನ್ನು ಅನರ್ವಾ—ಅಪ್ರತಿಹತನಾದ ರುದ್ರನು, ಪುನಃ ಆವೃತಿ—ಮಾನವರಿಗೆ ಹಿತವಾಗುವಂತೆ ಪುನರಾವರ್ತಿಸಿದನು. ಐತರೇಯ ಬ್ರಾಹ್ಮಣದಲ್ಲಿ ಹೊರಕುವ ಹೆಚ್ಚಿನ ವಿವರಗಳನ್ನು ಮುಂದೆ ಸಂಗ್ರಹಿಸಿದೆ.

ಸೃಷ್ಟಿಯ ಆದಿಯಲ್ಲಿ ಪ್ರಜಾಪತಿಯು ತಾನು ಸೃಷ್ಟಿಸಿದ ಕನ್ಯೆಯೊಬ್ಬಳಲ್ಲಿ ಅನುರಕ್ತನಾಗಿ ಜಿಂಕೆಯ ರೂಪದಲ್ಲಿ ರೋಹಿತ ಕೆಂಪು ಜಿಂಕೆಯ ರೂಪದಲ್ಲಿದ್ದ ಆ ಕನ್ಯೆಯನ್ನು ಕೂಡಿದನು. ಇದನ್ನು ನೋಡಿ ದೇವತೆಗಳು ಪರಸ್ಪರ ಈ ರೀತಿ ಮಾತಾಡಿಕೊಂಡರು. ''ಈ ಪ್ರಜಾಪತಿಯು ಯಾರೂ ಯಾವಾಗಲೂ ಮಾಡದಿದ್ದ ನಿಷಿದ್ಧ ಕಾರ್ಯದಲ್ಲಿ ತೊಡಗಿದ್ದಾನೆ. ಈ ಕಾರ್ಯ ನಡೆಯದಂತೆ ತಡೆಗಟ್ಟಲು ನಮ್ಮಲ್ಲಿ ಯಾರು ಸಮರ್ಥರು'' ಎಂದು ಯೋಚಿಸಿ ಯಾರೂ ದೊರಕದಿರಲು ತಮ್ಮಲ್ಲಿ ಅದೃಶ್ಯವಾಗಿದ್ದ ಘೋರಾಕಾರಗಳನ್ನು ಕೇಂದ್ರೀಕರಿಸಿ ಋತುಧರ್ಮಗಳ ರಕ್ಷಣೆಗಾಗಿ ರುದ್ರನೆಂಬ ತೇಜಃಶಾಲಿ, ಬಲಶಾಲಿ, ನ್ಯಾಯಶೀಲ ಪುರುಷನೊಬ್ಬನನ್ನು ಸೃಷ್ಟಿಸಿದರು. ರುದ್ರನು ತನ್ನ ಪಿನಾಕವೆಂಬ ಬಿಲ್ಲಿಗೆ ಬಾಣ ಹೂಡಿ ಪ್ರಜಾಪತಿಗೆ ಗುರಿಯಿಟ್ಟು ಹೊಡೆದನು. ಜಿಂಕೆಯ ರೂಪದಲ್ಲಿದ್ದ ಪ್ರಜಾಪತಿಗೆ ಆ ಬಾಣವು ತಗಲಿ ಅವನು ಊರ್ಧ್ವಾಭಿಮುಖನಾಗಿ ಅಂತರಿಕ್ಷಕ್ಕೆ ನೆಗೆದನು. ಆ ರೀತಿ ನೆಗೆಯುತ್ತಿರುವ ಪ್ರಜಾಪತಿಯನ್ನು ಜನರು ರೋಹಿಣೀ ಆರಿದ್ರಾ ನಕ್ಷತ್ರಗಳ ಮಧ್ಯದಲ್ಲಿರುವ ಮೃಗಶಿರಾ

Sri Vidyabharathi Book Centre, Sringeri

 CC-O. In Public Domain. Digitized by eGangotri

ನಕ್ಷತ್ರವೆಂದು ಕರೆಯುತ್ತಾರೆ. ರೋಹಿತ–ಕೆಂಪು ಬಣ್ಣದ ಹೆಣ್ಣು ಜಿಂಕೆಯ ರೂಪದಲ್ಲಿದ್ದ ಕನ್ಯೆಯು ರೋಹಿಣಿ ನಕ್ಷತ್ರ ರೂಪದಿಂದ ಗೋಚರಿಸುತ್ತಾಳೆ. ಮೃಗರೂಪದಲ್ಲಿದ್ದ ಪ್ರಜಾಪತಿಯನ್ನು ಬಾಣದಿಂದ ಹೊಡೆದ ರುದ್ರನು ಮೃಗವ್ಯಾಧ ಎಂಬ ಹೆಸರಿನಿಂದ ನಕ್ಷತ್ರಪುಂಜವಾಗಿ ಗೋಚರಿಸುತ್ತಾನೆ.

ಈ ಆಖ್ಯಾಯಿಕೆಯನ್ನು ವಿವರಿಸುವಲ್ಲಿ 'ಐತ್ತರೇಯ ಬ್ರಾಹ್ಮಣ'ವು ಸೃಷ್ಟಿಯು ಆದಿಯಲ್ಲಿ ಮಾನವರು ಹೇಗೆ ಉತ್ಪನ್ನರಾದರೆಂಬುದನ್ನು ವಿವರಿಸುತ್ತದೆ. ಅದನ್ನು ಮುಂದೆ ಸಂಗ್ರಹಿಸಿದೆ.

ಆದ್ಯಸೃಷ್ಟಿ—ರುದ್ರನ ಬಾಣಾಘಾತದಿಂದ ಪ್ರಜಾಪತಿಯು ಕನ್ಯೆಯ ಆಲಿಂಗನದಿಂದ ಅಗಲಿದಾಗ ಅವನ ರೇತಸ್ಸು ಭೂಮಿಯ ಮೇಲೆ ಧಾರಾಕಾರವಾಗಿ ಬಿದ್ದು ಸರೋವರವಾಗುತ್ತದೆ. ಅದನ್ನು ಕಂಡ ದೇವತೆಗಳು, ಅನೈತಿಕ ಸಂಬಂಧದ ದೋಷವು ಅದಕ್ಕೆ ತಟ್ಟದಂತೆ ''ಮಾದುಷ'' ದೋಷವಿಲ್ಲದ್ದು ಎಂದು ಕರೆದು ಸರೋವರದ ಸುತ್ತ ಅಗ್ನಿದೇವನನ್ನು ಕಾವಲುಗಾರನಾಗಿ ಗೊತ್ತುಮಾಡುತ್ತಾರೆ. ವಾಯುವಿನ ಸಹಾಯದಿಂದ ಸರೋವರದ ದ್ರವಾಂಶವು ಹೀರಲ್ಪಟ್ಟು ಗೋಳಾಕಾರದ ಪಿಂಡಗಳಾಗಿ ಬದಲಾವಣೆ ಹೊಂದುತ್ತದೆ. ಇದರಲ್ಲಿ ಮೊದಲನೆ ಪಿಂಡರೂಪವಾದ ತೇಜೋರಾಶಿಯೇ ಆಕಾಶದಲ್ಲಿ ಕಾಣುವ ಆದಿತ್ಯ (ಸೂರ್ಯ) ಆಯಿತು. ಎರಡನೆಯ ಪಿಂಡವು ಭೃಗು ಋಷಿಯಾಯಿತು. ಈ ಭೃಗುವನ್ನು ವರುಣನು ಪುತ್ರನಾಗಿ ಸ್ವೀಕರಿಸಿದ್ದರಿಂದ ಅವನ ಅಡ್ಡ ಹೆಸರು ವಾರುಣಿ ಎಂದಾಯಿತು. ಹೆಚ್ಚು ಪ್ರಕಾಶದಿಂದ ಬೆಳಗುತ್ತಿದ್ದ ಮೂರನೆಯ ಪಿಂಡವು ಅದಿತಿಯ ಪುತ್ರರಾಗಿ ರೂಪುಗೊಂಡಿತು. ಮತ್ತೆ ಕೆಲವು ಕೆಂಡಗಳು ಉರಿದು ಪಿಂಡವಾಗಿ ಆಂಗಿರ ಎಂಬ ಋಷಿಗಳು ಉತ್ಪನ್ನರಾದರು. ಹೆಚ್ಚು ಪ್ರಕಾಶಿಸುತ್ತಿದ್ದ ಇನ್ನೊಂದು ಪಿಂಡವು ಬೃಹಸ್ಪತಿ ಆಯಿತು.

ಅನಂತರ ಕೆಂಡಗಳು ಆರಿ ಅಂಗಾರ–ಇದ್ದಲು ಕಪ್ಪುಬಣ್ಣದ ಪಶುಗಳಾಗಿಯೂ ತಳದಲ್ಲಿ ಉಳಿದ ಮೃತ್ತಿಕೆಯು ಕೆಂಪು ಬಣ್ಣದ ಪಶುಗಳಾಗಿಯೂ ಮಾರ್ಪಟ್ಟವು. ಬೂದಿಯಿಂದ ಪುರುಷ್ಯ ಪಶುಗಳು, ಅಂದರೆ ಗೌರ, ಗವಯ, ಕಾಯುಷ್ಯ, ಆರಣ್ಯ ಮೃಗಗಳೂ, ಒಂಟೆ, ಕತ್ತೆ ಮುಂತಾದವೂ ಉತ್ಪನ್ನವಾದವು.

Sri Vidyabharathi Book Centre, Sringeri

 CC-O. In Public Domain. Digitized by eGangotri

ವಾಸ್ತುಷ್ಪತಿರುದ್ರ—ನೀತಿ ಧರ್ಮಗಳನ್ನು ರಕ್ಷಿಸಿ, ಸೃಷ್ಟಿಯ ಆದಿಯಲ್ಲಿ ಆಗಬಹುದಾಗಿದ್ದ ಅನೈತಿಕ ದೋಷವನ್ನು ತಪ್ಪಿಸಿದ್ದಕ್ಕಾಗಿ ದೇವತೆಗಳು ರುದ್ರನನ್ನು " ವಾಸ್ತೋಷ್ಪತಿ"–ಯಾಗಶಾಲೆಯ ಅಧಿಪತಿಯಾಗಿ ಮಾಡಿದುದನ್ನು ಹೇಳುವ ೭ನೆಯ ಮಂತ್ರ ಇದು.

ಪಿತಾಯತ್ ಸ್ವಾಂ ದುಹಿತರಮಧಿಕ್ಷನ್
ಕ್ಷ್ಮಯಾವರೇತಃ ಸಂಜಿಗ್ಮಾನೋ ನಿಷಿಂಚತ್
ಸ್ವಾಧ್ಯೋ ಅರ್ಜಯನ್ ಬ್ರಹ್ಮ ದೇವಾ !
ವಾಸ್ತೋಷ್ಪತಿಂ ವ್ರತಪಾಂ ನಿರತಕ್ಷನ್ ॥ ೭ ॥

ಪ್ರ. ಥ್ರ :–ತಂದೆಯಾದ ಪ್ರಜಾಪತಿಯು, ಯತ್ ಯಾವಾಗ, ಸ್ವಾಂ ದುಹಿತರಂ ತನ್ನ ಕನ್ಯೆಯನ್ನು, ಅಧಿಕ್ಷನ್–ಅತಿಕ್ರಮ ಸಂಗದಲ್ಲಿ ಕ್ಷ್ಮಯಾಂ—ಭೂಮಿಯಲ್ಲಿ ರೇತ ;–ರೇತಸ್ಸನ್ನು–ನಿಷಿಚತ್–ಸುರಿಸಿದನೋ ಆಗ ಸ್ವಾಧ್ಯ — ಉತ್ತಮ ಕರ್ಮಕರ್ತರಾದ, ದೇವಾ: — ದೇವತೆಗಳು ಧರ್ಮರಕ್ಷಣೆಗೆ ಕರ್ತವಾದ ರುದ್ರನನ್ನು, ವಾಸ್ತೋಷ್ಪತಿಂ—ಯಜ್ಞಶಾಲೆಯ ಅಧಿಪತಿಯಾಗಿ, ವ್ರತಪಾಂ—ಅಲ್ಲಿ ನಡೆಯುವ ಕರ್ಮಗಳು ನಿಯಮದಂತೆ ನಡೆಯುವಂತೆ ನೋಡಿಕೊಳ್ಳುವ ವ್ರತಪಾಲಕನಾಗಿ, ನಿರತಕ್ಷನ್—ಗೊತ್ತು ಮಾಡಿಕೊಂಡರು.

೮ನೆಯ ಮಂತ್ರದಲ್ಲಿ ಪ್ರಜಾಪತಿಯೂ ಕನ್ಯೆಯೂ ಏನಾದರೆಂಬುದನ್ನು ಹೇಳಿ, ೯ನೆಯ ಮಂತ್ರದಲ್ಲಿ ವಾಸ್ತೋಷ್ಪತಿಯ ಕರ್ತವ್ಯವನ್ನು ಹೀಗೆ ನಿರ್ದೇಶಿಸಿದೆ.

ವರ್ಷ್ಮನ ವಹ್ನಿಃ ಪ್ರಜಾಯಾ ಉಪಲಬ್ಧಿರಗ್ನಿಂ
ನ ನಗ್ನ ಉಪಸೀದತ್ ಊಧಃ
ಸನಿತೇಧ್ಮಂ ಸನಿತೋತ ವಾಜಂ ಸಧರ್ತಾ
ಜಜ್ಞೇ ಸಹಸಾ ಯವೀಯುತ್ ॥ ೯ ॥

ಪ್ರ. ಥ್ರ. (ರುದ್ರನು ಯಜ್ಞಶಾಲೆಯನ್ನು ರಕ್ಷಿಸುವ ಕಾಲದಲ್ಲಿ) ವಹ್ನಿ–ಬೆಂಕಿಯಂತೆ ದಹಿಸಬಲ್ಲ ರಾಕ್ಷಸನು, ನ ಉಪಸೀದತ್–ಸಮೀಪಕ್ಕೆ ಬರಲಾರನು. ಪ್ರಜಾಯಾ—ಯಜ್ಞದಲ್ಲಿ ಭಾಗವಹಿಸುವ ಪ್ರಜೆಗಳಿಗೆ ಹಿಂಸಕ

Sri Vidyabharathi Book Centre, Sringeri

 CC-O. In Public Domain. Digitized by eGangotri

ನಾದವನೂ, ನಗ್ನ-ಬೆತ್ತಲೆಯಾದವನೂ, ಆದ ರಾಕ್ಷಸನು, ಅಗ್ನಿಂ—ಯಾಗ ಶಾಲೆಯು ಅಗ್ನಿಕುಂಡವನ್ನು ಊಧ :–ರಾತ್ರಿ ಕಾಲದಲ್ಲಿ ನ (ಉಪಸೀದತ)—ಸಮೀಪಿಸಲಾರನು, ಇಧ್ಮಂ-ಬೇಕಾಗುವ–ಉರುವಲು ಮೊದಲಾದವುಗಳನ್ನು ಕೊಡುವ ದೇವತೆಗಳು ಜಿಜ್ಞೋ —ಸಿದ್ಧರಾಗಿರುತ್ತಾರೆ. ವಾಜಿಂ–ಅನ್ನವನ್ನು ಕೊಡುವವನೂ. ಯವೀಯತ್ ವಿರೋಧಿಗಳನ್ನು ಓಡಿಸಬಲ್ಲವನೂ ಧರ್ತಾ–ರಕ್ಷಕನೂ ಆದ ವಾಜೋಸ್ಪತಿಯು ಸಹಸಾ–ಎಲ್ಲ ಕಾಲಗಳಲ್ಲಿಯು ಜಿಜ್ಞೋ—ಸಿದ್ಧನಾಗಿರುತ್ತಾನೆ.

ಮುಂದಿನ ಮಂತ್ರಗಳಲ್ಲಿ ಅಂಗೀರಸರ ಯಜ್ಞವು ನಾಭಾನೇದಿಷ್ಠನ ಸಹಕಾರದಿಂದ ಹೇಗೆ ಯಶಸ್ವಿಯಾಗಿ ನಡೆಯಿತು ಎಂಬುದನ್ನು ವರ್ಣಿಸಿದೆ.

೨೩

ಚಂಪಕಮಾಲಾ

ಮಸಣದೆ ನಿಮ್ಮ ಕ್ರೀಡೆ, ಸಹವಾಸಕೆ
ಪ್ರೇತ ಪಿಶಾಚ ಸಂಕುಲಂ
ಪಸದನಮಂಗಕಾಯ್ತು ಚಿತೆ ಬಿಟ್ಟಿಹ
ಭಸ್ಮದ ರಾಶಿ, ಕೈಯೊಳಂ
ತೆಸೆವ ಕಪಾಲಮಿಂತಶುಭಕಾಶ್ರಯ
ರಾಗೆ ಮಹೇಶ, ನಿಮ್ಮ ಪೂ
ಜಿಸೆ ಕಡುಭಕ್ತಿಯಿಂ ಕೊಡುವಿರೆಲ್ಲವ
ನೆನ್ನಲದೇ ಮಹಾದ್ಭುತಂ

ಓ ಮಹೇಶ, ಸ್ಮಶಾನವು ನಿಮ್ಮ ಕ್ರೀಡಾಸ್ಥಾನ, ಪ್ರೇತ ಪಿಶಾಚ ಸಂಕುಲ—ಸಮೂಹವು ನಿಮ್ಮ ಸಹಚರರು, ಚಿತೆಯ ಭಸ್ಮರಾಶಿ ನಿಮ್ಮ ಅಂಗಗಳ ಪಸದನ—ಪ್ರಸಾಧನ—ಅಲಂಕಾರದ ಅಂಗಲೇಪ, ನೀವು ಕೈಯಲ್ಲಿ ಹಿಡಿದಿರುವುದು ಬ್ರಹ್ಮಕಪಾಲ, ಹೀಗೆ ನಿಮ್ಮ ಬಾಹ್ಯರೂಪವು ಲೋಕದ ದೃಷ್ಟಿಯಲ್ಲಿ ಅಶುಭವಾಗಿ ಕಂಡರೂ, ಭಕ್ತಿಯಿಂದ ನಿಮ್ಮನ್ನು ಪೂಜಿಸುವವರಿಗೆ ಎಲ್ಲವನ್ನೂ ಕೊಡುವಿರಿ ಎಂಬುದು ಮಹಾದ್ಭುತವಲ್ಲವೆ ?

Sri Vidyabharathi Book Centre, Sringeri

 CC-O. In Public Domain. Digitized by eGangotri

ಪುರಾಣಗಳು ಶಿವನನ್ನು ವರ್ಣಿಸುವಲ್ಲಿ ಚಂದ್ರ, ಗಂಗೆ, ಡಮರುಗ ಇವು ಲೋಕಕಲ್ಯಾಣಕ್ಕಾಗಿ, ಪೀತಾಂಬರ ಹೂಮಾಲೆಗಳು ಭಕ್ತರ ಒತ್ತಾಯದಿಂದ. ಅವುಗಳಲ್ಲಿ ಶಿವನಿಗೆ ಲೇಶವೂ ಆಸಕ್ತಿ ಇರುವುದಿಲ್ಲ. ಪುರಾಣಗಳ ಮತದಂತೆ ಸ್ಮಶಾನ ವಾಸವು ಶಿವನ ನಿತ್ಯಮುಕ್ತ ಸ್ವರೂಪವನ್ನೂ, ಪಿಶಾಚಗಳ ಸಹಚರ್ಯೆ ದಳಿತ ಪತಿತರ ಉದ್ಧಾರವನ್ನೂ, ಭಸ್ಮಧಾರಣವು ವೈರಾಗ್ಯವನ್ನೂ, ಬ್ರಹ್ಮಕಪಾಲವು ಸೃಷ್ಟಿಸ್ಥಿತಿ ಲಯಗಳ ಏಕಾಧಿಪತ್ಯವನ್ನೂ ಸೂಚಿಸುತ್ತದೆ.

ಈ ಸಂದರ್ಭದಲ್ಲಿ ವಿಶ್ವಕವಿ ರವೀಂದ್ರನಾಥಠಾಗೂರರ 'ನರಕ ವಾಸ' ಎಂಬ ಕಥನ ಕಾವ್ಯದ ಕೆಲವು ಸಾಲುಗಳು ಉಲ್ಲೇಖಾರ್ಹ. ಪತಿತದಳಿತರ ಉದ್ಧಾರಕ್ಕಾಗಿ ನರಕವಾಸಿಯಾದ ಮಹಾರಾಜ ಸೋಮಿಕನನ್ನು ಪ್ರೇತಗಳು ಸ್ತುತಿಸಿ ಬೀಳ್ಕೊಡುವ ಮಾತುಗಳಿವು.

ಜಯ ಜಯ ಮಹಾರಾಜ, ಪುಣ್ಯಫಲಕಾಗಿ
ನಿಷ್ಪಾಪ ನರಕವಾಸಿ, ಹೇ ಮಹಾ ವೈರಾಗಿ,
ಪಾಪಿಮನದೊಳಾಗಲಿ ನಿಮ್ಮಿಂದೆ ಗೌರವದುದಯ
ನಿಮ್ಮ ಸಹವಾಸದಿಂದಾಗಲಿ ನರಕದುದ್ಧಾರ !

ಉಗ್ರತರ ದುಃಖದ ನವಾಗ್ನಿ ಮಸ್ತಕದೆ,
ಜ್ವಲಂತ ಮೇಘದೆ ಬೆಳಗಿರೆ ಸೂರ್ಯಪ್ರಭೆ,
ಕಾಣುತಿದೆ ನಮಗೆ ನಿಮ್ಮ ಯುಗಳ ಮೂರ್ತಿ
ನಿತ್ಯಕಾಲ ಉದ್ಭಾಸಿತ ಅನಿರ್ವಾಣಜ್ಯೋತಿ

Sri Vidyabharathi Book Centre, Sringeri

CC-O. In Public Domain. Digitized by eGangotri

೨೪

ಚಂಪಕಮಾಲಾ

ತನ್ನಸಮಾನ ಚೆಲ್ವಿಕೆಯನಾಧರಿ
ಸುತ್ತೆ ಸುಮೇಷು ಬಾಣಮಂ
ತನ್ನಯ ಬಿಲ್ಲಿಗಿಟ್ಟು ನಿಮಿಷಾರ್ಧದೆ
ಸುಟ್ಟುದ ಕಂಡು ಕೋಪದಿಂ
ಕನ್ಯೆ[ತಪಕ್ಕೆ ಸಂದು ಪಡೆದರ್ಧ ಶ
ರೀರವ ನಿಮ್ಮನಂಗನಾ
ಮಗ್ನನೆನಲ್ಕದಾಕೆಯರ ಮೌಢ್ಯದ
ಸೂಳ್ನುಡಿ ಎನ್ನಲಾಗದೆ ?

ನನ್ನ ಅಸಮಾನ–ಸರಿಸಾಟಿಯಿಲ್ಲದ ಚಲ್ವಿಕೆಯನ್ನು ಆಧಾರವಾಗಿಟ್ಟು ಕೊಂಡು ಸುಮೇಷು–ಕಾಮದೇವನು ಬಿಲ್ಲಿಗೆ ಬಾಣ ಹೂಡಿದ ಪ್ರತಿಕ್ಷಣದಲ್ಲಿ ಸುಟ್ಟುಹೋದುದನ್ನು ಕಂಡು ಕೋಪದಿಂದ ಗಿರಿರಾಜಕನ್ಯೆ ಪಾರ್ವತಿಯು ತಪವನ್ನಾಚರಿಸಿ ನಿಮ್ಮ ಶರೀರಾರ್ಧದಲ್ಲಿ ಸ್ಥಾನ ಪಡೆದ ಮೇಲೆ ನಿಮ್ಮನ್ನು "ಸ್ತ್ರೀಲೋಲ" ಎಂದು ಕರೆಯುವುದಾದರೆ ಅದು ಸ್ತ್ರೀಸಹಜವಾದ ಮೌಢ್ಯದ ಸೂಳ್ನುಡಿ–ಸೂಚಿಸುವ ಮಾತು ಎನ್ನಲಾಗದೆ ? ಎಂದು ಕವಿಯ ಪ್ರಶ್ನೆ.

ತಾತ್ಪರ್ಯ—ಲೋಕೈಕ ಸುಂದರಿಯಾದ ಪಾರ್ವತಿಯು ಶಿವನನ್ನು ಪತಿಯಾಗಿ ಪಡೆಯಲು ಕಾಮದೇವನ ಸಹಾಯವನ್ನು ಅಂಗೀಕರಿಸಿ ಅವನು ತನ್ನ ಸೌಂದರ್ಯವನ್ನು ಆಧರಿಸಿ ಬಾಣವನ್ನು ತೊಟ್ಟ ಪ್ರತಿಕ್ಷಣ ಸುಟ್ಟು ಬೂದಿಯಾದುದನ್ನು ಕಂಡು ಕೋಪದಿಂದಲೋ ಎಂಬಂತೆ ತಪಸ್ಸನ್ನಾಚರಿಸಿ ಮೆಚ್ಚಿಸಿ ಶಿವನ ಶರೀರಾರ್ಧದಲ್ಲಿ ಸ್ಥಾನ ಪಡೆದಳು. ಆನಂತರ ಆ ಶಿವನನ್ನು "ಸ್ತ್ರೀಲೋಲ" ಎಂದು ಹೇಳಿದರೆ ಅದು ಸ್ತ್ರೀಸಹಜವಾದ ಮೌಢ್ಯದ ಸೂಚನೆ ಶಿವನ ನಿಜವಾದ ಗುಣವಲ್ಲ ಎಂಬುದನ್ನು ಸೂಚಿಸಲು ಕವಿಯು ಈ ಪದ್ಯದಲ್ಲಿ ಶಕ್ತಿರೂಪಿಣಿಯಾದ ಪಾರ್ವತಿಗೆ ಮೌಢ್ಯವನ್ನು ಆರೋಪಿಸಿದ್ದಾನೆ.

ಕಾಲಿದಾಸನ "ಕುಮಾರಸಂಭವ" (ಸಂಸ್ಕೃತ) ಹರಿಹರದೇವನ "ಗಿರಿಜಾ ಕಲ್ಯಾಣ" ಇವುಗಳಲ್ಲಿ ಈ ಪ್ರಸಂಗದ ಆದರಣೀಯ ಪಠನಾರ್ಹ ವಿವರ ದೊರಕುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೨೫

ಉತ್ಪಲಮಾಲಾ

ಬಂಧಿಸಿ ಪ್ರಾಣವಾಯುವ ಮನಂಸ್ಥಿರ
ಮಾಗಿರೆ ಪ್ರತ್ಯಗಾತ್ಮನೋಳ
ಸಂದ ಸುಖಕ್ಕೆ ಪೊಂಪುಳಿಗಳೇಳ್ದಿರೆ,
ನೇತ್ರಗಳಶ್ರುಸಿಕ್ತಮಾ
ನಂದದೆ, ಮುಜ್ಜನಕ್ಕಮರ ಸಿಂಧುವ
ಸೇರ್ದವೋರಾಗೆ ಸಚ್ಚಿದಾ
ನಂದನಿಧಾನ, ರಕ್ಷಣೆಗೆ ನೀವಿರ
ಲೇಕೆಮಗನ್ಯ ದೈವತಂ,

ಯೋಗಿಗಳ "ಸಮಾಧಿ" ಪೂರ್ಣಾವಸ್ಥೆಯನ್ನು ಕವಿ ಈ ಪದ್ಯದಲ್ಲಿ ಭಾವಾತಿರೇಕದಿಂದ ಕೂಡಿದ್ದರೂ ಹಿತ ಮಿತವಾಗಿ ವರ್ಣಿಸಿದ್ದಾನೆ. ಪ್ರಾಣ ವಾಯುವನ್ನು ಬಂಧಿಸುವುದರಿಂದ ಸ್ಥಿರವಾದ ಮನಸ್ಸನ್ನು, ಪ್ರತ್ಯಗಾತ್ಮನೊಳ್ —ವಾಸನಾರಹಿತನಾದ ಪರಮಾತ್ಮನಲ್ಲಿ ನಿಲ್ಲಿಸುವುದರಿಂದ ಆನಂದ ರೂಪವಾದ ಪೊಂಪುಳಿಗಳೇಳ್ದಿರೆ–ದೇಹ ರೂಮಾಂಚಿತವಾಗಿರಲು, ಕಣ್ಣುಗಳಲ್ಲಿ ಆನಂದಾಶ್ರು ತುಂಬಿರಲು, ಹೇ ! ಸಚ್ಚಿದಾನಂದದ ನಿಧಾನ !—ಅಕರ ಸ್ವರೂಪನೆ, ನಮ್ಮ ರಕ್ಷಣೆಗೆ ನೀವಿರಲಾಗಿ ಬೇರೆ ದೈವದ ಚಿಂತೆ ನಮಗೇಕೆ ? ಎಂದು ಕವಿಯ ಉದ್ಗಾರ.

ಭಕ್ತರು ಶಿವನನ್ನು ಚಂದ್ರನನ್ನು ಶಿರದಲ್ಲಿ ಧರಿಸಿದವನು ಚಂದ್ರಶೇಖರ, ಗಂಗಾಧರ, ಮದನಾರಿ, ಕಾಲಕೂಟ ವಿಷವನ್ನು ಪಾನಮಾಡಿದ ನೀಲಕಂಠ, ಜಟಾಧಾರಿಯಾದ್ದರಿಂದ ಭೂರ್ಜಟಿ ಮುಂತಾದ ರೂಪಗಳಿಂದ ಆರಾಧಿಸಿದರೂ ಯೋಗಿಗಳು ಅವೆಲ್ಲವನ್ನೂ ಬಿಟ್ಟು ಶಿವನನ್ನು ಸಚ್ಚಿದಾನಂದ ನಿಧಾನ-ಸತ್ ಚಿತ್ ಆನಂದಗಳ ಆಕಾರನೆಂದು ಧ್ಯಾನಿಸಿ, ವಾಸನಾರಹಿತವಾದ ಪ್ರತ್ಯಾಗಾತ್ಮ ನಲ್ಲಿ ಆವಾಹಿಸಿಕೊಂಡು, ಅದರಿಂದಲಭಿಸುವ ಸಾಕ್ಷಾತ್ಕಾರದಿಂದ ಪುಳಕಿತರಾಗಿ, ಆನಂದಭಾಷ್ಪಗಳನ್ನು ಸುರಿಸುತ್ತಾರೆ ಎನ್ನುವಲ್ಲಿ ಕವಿಯು ಯೋಗಸಮಾಧಿಯ ಉನ್ನತಾವಸ್ಥೆಯನ್ನು ಸೂಚಿಸುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಷ್ಪದಂತ ಗಂಧರ್ವನು ಸ್ವಯಂ ಯೋಗಿಯಾಗಿ ತನ್ನ ಅನುಭವವನ್ನು ಹೇಳುತ್ತಿರುವನೆಂದು ತಿಳಿಯತಕ್ಕದ್ದು, ಶಿವನ ಸಚ್ಚಿದಾನಂದ ಸ್ವರೂಪಕ್ಕೆ "ಶಿವ ಏಕೋಧ್ಯೇಯಃ", ಶಿವನೊಬ್ಬನೆ ಧ್ಯಾನಕ್ಕೆ ಯೋಗ್ಯನು. ಎಂಬುದಕ್ಕೆ "ಶಿವಮದ್ವೈತಂ ಚತುರ್ಥಮುಚ್ಯಂತೆ" ತ್ರಿಮೂರ್ತಿಗಳಿಂದ ಬೇರೆಯಾದ ಅದ್ವೈತಂ—ಅದ್ವಿತೀಯನಾದ ಪರಮಶಿವನನ್ನು ಚತುರ್ಥ—ತುರೀಯ—ನಾಲ್ಕನೆಯವನು" ಎಂಬ ವಾಕ್ಯಗಳು ಪ್ರಮಾಣ.

೨೬

ಚಂಪಕಮಾಲಾ

ರವಿಶಶಿ ನೀವು, ವಾಯು ಜಲಅಗ್ನಿಯು
ನೀವೆ, ಮುಗಿಲ್, ತಿರೆ, ನೀವೆ ಚೇ
ತನವೆನಲಷ್ಟಮೂರ್ತಿಯನಭಿನ್ನನಂ
ಭಿನ್ನನೆನುತ್ತೆ ವಾಗ್ಮಿಗಳ್
ವಿವರಿಸಲೆಂತದಂ ತಿಳಿವುದೆನ್ನುತೆ
ವಿಶ್ವದೊಳಿರ್ಪುದೆಲ್ಲಮಂ
ಭವ, ಭವದೀಯರೂಪಗಳೆನಲ್ಕದು
ಸತ್ಯಮವಂದ್ಯಮಚ್ಯುತಂ

ಪರಮಶಿವನ ಅಷ್ಟಮೂರ್ತಿಯನ್ನು ಕವಿ ಈ ಪದ್ಯದಲ್ಲಿ ಸ್ತುತಿಸಿದ್ದಾನೆ. ಸೂರ್ಯ ಚಂದ್ರರು ನೀವು, ವಾಯು ಜಲ ಅಗ್ನಿಯು ಸಹ ನೀವೆ, ಮುಗಿಲು-ಆಕಾಶ, ತಿರೆ–ಭೂಮಿಯು ನೀವೆ, ಇವುಗಳಿಂದ ಬೇರೆಯಾದ ಚೈತನ್ಯ ರೂಪ ಆತ್ಮತತ್ವವೂ ನೀವೇ ಎಂದು ವಾಗ್ಮಿಗಳು, ಪಂಡಿತರು ಅಭಿನ್ನರಾದ ನಿಮ್ಮನ್ನು ಎಂಟು ಪ್ರತೀಕ ರೂಪಗಳಾಗಿ ಹೇಳುತ್ತಾರೆ. "ಸರ್ವಂ ಶಿವಮಯಂ ಜಗತ್" "ವಿಶ್ವದೊಳಹುದೆಲ್ಲವು ಹೇಭವ, ನಿಮ್ಮ ರೂಪಗಳೇ" ಎಂದು ಭಾವಿಸಿದರೆ ಅದು ಅವಂದ್ಯ–ಬಂಜೆಯಲ್ಲದ, ಅಚ್ಯುತ–ಚ್ಯುತಿಯಿಲ್ಲದ ಸತ್ಯವಾಗುತ್ತದೆ.

ಸೂರ್ಯ, ಚಂದ್ರ, ವಾಯು, ಜಲ, ಅಗ್ನಿ, ಆಕಾಶ, ಭೂಮಿ, ಯಜ್ಞಪತಿ – ಚೈತನ್ಯರೂಪನಾದ ಆತ್ಮ ಈ ಅಷ್ಟಮೂರ್ತಿ ಸ್ವರೂಪವೇ ಶಿವ ನೆಂದು ಆಗಮ ಸಿದ್ಧಾಂತ ಸ್ಥೂಲವಾಗಿ ಹೇಳಲ್ಪಟ್ಟ ಕ

Sri Vidyabharathi Book Centre, Mysuru. Digitized by eGangotri

CC-O. In Public Domain. Digitized by eGangotri

ಸಿದ್ಧಾಂತವು ಶಿವನನ್ನು ವಿಶ್ವಾತ್ಮಕನೆಂದು ತಿಳಿಯುವ ಭಕ್ತರಿಗೆ ಸೀಮಿತವಾಗಿ ಕಂಡದ್ದು ಆಶ್ಚರ್ಯವೇನಲ್ಲ. ಚರಾಚರಾತ್ಮಕವಾದ ಸಮಗ್ರ ವಿಶ್ವವೂ ಶಿವನ ರೂಪಾಂತರವೇ ಎಂದು ಅವರ ವಿಶ್ವಾಸ. ಹಾಗಲ್ಲದಿದ್ದರೆ ಜಡ ಪ್ರಂಚಕ್ಕೆ ಪ್ರಕಾಶ–ಬೆಳಕು ದೊರಕುವುದಾದರೂ ಹೇಗೆ ? ಎಂದು ಅವರ ಪ್ರಶ್ನೆ. ಶ್ವೇತಾಶ್ವತರ ಉಪನಿಷತ್ತಿನಲ್ಲಿ ಶಿವತತ್ವ ಹೀಗೆ ಪ್ರತಿಪಾದಿಸಲ್ಪಟ್ಟಿದೆ.

ಏಕೋದೇವ : ಸರ್ವಭೂತೇಷು ಗೂಢಃ-
ಸರ್ವವ್ಯಾಪೀ ಸರ್ವಭೂತಾಂತರಾತ್ಮಾ
ಕರ್ಮಾಧ್ಯಕ್ಷಃ ಕರ್ಮಭೂತಾಧಿವಾಸಃ
ಸಾಕ್ಷೀಚೇತಃ ಕೇವಲೋ ನಿರ್ಗುಣಃಶ್ಚ॥

ಎಲ್ಲ ಭೂತಗಳಲ್ಲಿಯೂ ರಹಸ್ಯವಾಗಿರುವವನೇ, ಸರ್ವವ್ಯಾಪಿಯೂ, ಅಂತರಾತ್ಮನೂ, ಕರ್ಮಾಧ್ಯಕ್ಷನೂ, ಸರ್ವಸಾಕ್ಷಿಯೂ, ಕೇವಲಿಯೂ ನಿರ್ಗುಣನೂ, ಆದ ಒಬ್ಬನೇ ದೇವನು.

೨೭

ಚಂಪಕಮಾಲ

ಶರಣದ ಶಂಭು, ನಿಮ್ಮ ಪರಿಪೂರ್ಣತೆ
ಯಂ ತಳೆದಾತ್ಮ ಚಿತ್ರದೋಳ್
ಮೆರಸೆ ಶ್ರುತಿತ್ರಯಂ ಪ್ರಣವಮಾಯ್ತು ತ್ರಿ
ಲೋಕಕೆ ದೇವತರ್ಗೆ ತ್ರ್ಯ
ಕ್ಷರ ಅ ಉ ಮಾನಿನಾದದೆ ಮನಂಲಯ
ಮಾಗೆ ತುರೀಯಕೊಯ್ದನು
ತ್ತರದನುಭಾವದಗ್ಗಳಿಕೆಯಿಂ ಸು
ಲಭ್ಯ ಸಮರ್ಥ ಸಾಧನಂ

ಓಂಕಾರ "ಪ್ರಣವ"ದ ಮಹತ್ವವನ್ನು ಕವಿ ಈ ಪದ್ಯದಲ್ಲಿ ಲಲಿತವೂ, ಪ್ರಬೋಧಕವೂ ಆಗುವಂತೆ ವಿವರಿಸುತ್ತಾನೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಓ ಶರಣದ—ಶರಣರ ರಕ್ಷಕನೆ, ಓ ಶಂಭುವೇ ಶ್ರುತಿತ್ರಯಂ–ಋಕ್ ಯಜು; ಸಾಮವೇದಗಳು ನಿಮ್ಮ ಪರಿಪೂರ್ಣತೆಯನ್ನು ತನ್ನಲ್ಲಿ ಪ್ರತಿಬಿಂಬಿ ಸುವ ಆತ್ಮತತ್ವದ ಚಿತ್ರದಲ್ಲಿ ಪ್ರಣವವನ್ನು, ಮೆರೆಸೆ–ಅಧಿಕವಾಗಿ ಹೊಗಳಿದ ರಿಂದ ಅದು ಮೂರುಲೋಕಗಳಿಗೆ, ದೇವತೆಗಳಿಗೆ ಆ ಉ ಮಾಸ್ವರಗಳ ಸಂಮಿಳಿತ ಘೋಷದಿಂದ ಸಾಧಕನನ್ನು ಯೋಗದಲ್ಲಿ ಸಮಾಧಿರೂಪವಾದ ತುರೀಯ-ಕೊನೆಯ ಸ್ಥಾನಕ್ಕೇರಿಸಿ, ಅನುತ್ತರ ಅತಿಶಯವೂ ಎಣೆಯಿಲ್ಲದ್ದೂ ಆದ ಅನು ಭಾವ—ಅತೀಂದ್ರಿಯ ಅನುಭವವನ್ನು ಕೊಡುವ, ಅಗ್ಗಳಿಕೆಯ ಸಮರ್ಥವೂ, ಸುಲಭವಾಗಿ ದೊರಕುವುದೂ ಆದ ಸಾಧನವಾಯಿತು.

ಓಂಕಾರವು ಮುಖ್ಯವಾಗಿ ಕಲ್ಯಾಣ ಸ್ವರೂಪವಾದದ್ದು. ಬ್ರಹ್ಮ ದೇವನು ಶಿವನಿಂದ ಕಲಿತ ವೇದಾಗಮಗಳನ್ನು ಅಭ್ಯಾಸ ಮಾಡಿ ಶಿಷ್ಯರಿಗೆ ಬೋಧಿಸುವಂಗ ಪ್ರಾರಂಭದಲ್ಲಿ ಶಿವನ ರೂಪವಾದ "ಓಂ"ಕಾರವು ಬ್ರಹ್ಮನ ಕಂಠವನ್ನು ಭೇದಿಸಿಕೊಂಡು ಹಠಾತ್ತಾಗಿ ಹೊರಗೆ ಬಂದಿತು. ಅದು ಮೊದಲು ವೇದಪಠನವನ್ನು "ಓಂ"ಕಾರದಿಂದ ಪ್ರಾರಂಭಿಸುವುದು ಅಭ್ಯಾಸಕ್ಕೆ ಬಂದಿತು.

ಓಂಕಾರಶ್ಚ ಅಥಶಬ್ದಶ್ಚ
ದ್ವಾವೇತೌ ಬ್ರಹ್ಮಣಃ ಪುರಾ
ಕಂಠಂಭಿತ್ವಾ ವಿನಿರ್ಯಾತೌ
ತಸ್ಮಾನ್ ಮಾಂಗಲಿಕಾ ಉಭೌ ॥

ಎಂಬುದು ಇದಕ್ಕೆ ಆಧಾರ.

ತಸ್ಯವಾಚಕಂ ಪ್ರಣವ: ಶಿವನನ್ನು ಗುರುತಿಸುವ ಮಾತೆ ಪ್ರಣವ ಎಂಬ ಆಧಾರವೂ ಇದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೨೮

ಚಂಪಕಮಾಲಾ

ಶಿವ, ಭವದೀಯ ನಾಮಗಳೊಳೆಂಟು ವಿ
ಶಿಷ್ಟಮನುತ್ತರಾರ್ಥದಿಂ-
ದವುಗಳನುಕ್ರಮಕ್ಕೆ ಶರಣಾಗುತೆ
ಛಾಂದಸ ಕಾವ್ಯ ಬಂಧಮಂ
ತ್ಯಜಿಸಿ ವಚೋವಿಲಾಸ ಲಘುಶೈಲಿಯ
ನಾತ್ರಯಿಸುತ್ತೆ ಭಕ್ತಿಯಿಂ
ಸೃಜಿಸಿದ ನಾಮ ಮಾಲಿಕೆಯ ನಿಮ್ಮಡಿ
ಗರ್ಪಿಸಿ ಧನ್ಯನಾಗುನೆಂ

ವಚನ : ಓಂ ನಮೋ ಭವ, ಶರ್ವ, ರುದ್ರ, ಪಶುಪತಿ, ಉಗ್ರ, ಮಹಾದೇವ, ಭೀಮ, ಈಶಾನ ಎಂಬೆಂಟು

ಶುಭನಾಮಗಳ ನುಡಿಯುತ್ತೆ
ನಮಿಸುವೆನು ನಿಮ್ಮಡಿಗೆ
ಅವಧಾರು ಓ ಶಿವ, ರಕ್ಷಿಸುವುದೆನ್ನಂ
ಓಂ ನಮಃ ಶಿವಾಯ, ಶಿವತರಾಯ ನಮಃ

ವ್ಯಾಖ್ಯಾನ : ಪರಮಶಿವನ ನಾಮಾಷ್ಟಕವನ್ನು ಈ ಪದ್ಯದಲ್ಲಿ ಸೂಚಿಸಿದೆ. ಸಂಸ್ಕೃತ ಮೂಲದಲ್ಲಿ ಪುಷ್ಪದಂತ ಗಂಧರ್ವ ರಾಜನು ಅನುಸರಿಸಿದ ಅನುಕ್ರಮವನ್ನು ಯಥಾವತ್ತಾಗಿ ಕನ್ನಡದಲ್ಲಿ ತರುವುದು ಛಂದಸ್ಸಿನ ನಿಯಮಗಳ ಪ್ರಕಾರ ಸಾಧ್ಯವಲ್ಲದ್ದರಿಂದ ವಚನವನ್ನು ಆಶ್ರಯಿಸಿದುದಾಗಿ ಅನುವಾದ ಕರ್ತೃ ಈ ಪದ್ಯದಲ್ಲಿ ಹೇಳಿಕೊಂಡಿದ್ದಾನೆ. ಶಬ್ದದಲ್ಲಿ ಕಾಣುವ ಅರ್ಥಕ್ಕಿಂತ ಉತ್ತಮವಾದ ಬೇರೆ ಅರ್ಥವಿಲ್ಲದಿರುವುದು ಅನುತ್ತರ.

ವಚನದಲ್ಲಿ ನಾಮಾಷ್ಟಕವನ್ನು ಮೂಲದ ಅನುಕ್ರಮದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಟ್ಟಾಗಿ ಹೇಳಿದೆಯಾದರೂ ಪ್ರಯೋಗದಲ್ಲಿ ಓಂ ಶಿವಾಯ ನಮಃ, ಓಂ ಭವಾಯ ನಮಃ, ಓಂ ಶರ್ವಾಯ ನಮಃ, ಓಂ ರುದ್ರಾಯ ನಮಃ, ಓಂ ಪಶುಪತೆಯೇ ನಮಃ, ಓಂ ಉಗ್ರಾಯ ನಮಃ, ಓಂ ಮಹಾದೇವಾಯ ನಮಃ, ಓಂ ಭೀಮಾಯ ನಮಃ, ಓಂ ಈಶಾನಾಯ ನಮಃ, ಎಂದು ಪ್ರಣವಸಹಿತವಾದ ನವೋಕಾರಗಳನ್ನು ಪಠಿಸುವುದು ಪದ್ಧತಿ.

ಈ ಅಷ್ಟನಾಮಗಳಲ್ಲಿ ಶಿವನ ಅಷ್ಟಮೂರ್ತಿಗಳ ಸೂಚನೆ ಇದೆ, ಉತ್ಪನ್ನ ಕಾರಣನು ಭವ–ಪೃಥ್ವಿಮೂರ್ತಿ, ಸಂಹರಿಸುವುದರಿಂದ ಶರ್ವ–ಜಲ ಮೂರ್ತಿ, ರೋಧನ—ದುಃಖವನ್ನು ಪರಿಹರಿಸುವುದರಿಂದ ರುದ್ರ, ವಾಯುಮೂರ್ತಿ, ದೇವ ದಾನವ ಮಾನವರ ಪಶುಭಾವವನ್ನು ಕಳೆಯುವುದರಿಂದ ಪಶುಪತಿ, ಯಜ್ಞಮೂರ್ತಿ, ಅಧಿಕವಾದ ತೇಜಸ್ಸಿನಿಂದ ಉಗ್ರ, ತೇಜೋಮೂರ್ತಿ, ಪರಿಪೂರ್ಣತೆಯಿಂದ ಮಹಾದೇವ, ಸೋಮಮೂರ್ತಿ,ಭಕ್ತರ ಇಷ್ಟಾರ್ಥಗಳನ್ನು ಪೂರೈಸುವುದರಿಂದ ಈಶಾನ–ಅರ್ಕಮೂರ್ತಿ, ಈ ಅನುಕ್ರಮದ ಬಗೆಗಿರುವ ಭಿನ್ನಾಭಿಪ್ರಾಯಗಳು ಮುಖ್ಯವಲ್ಲ. ಮಹಾಕವಿ ಕಾಲಿದಾಸನು, ಶಾಕುಂತಲದ ನಾಂದೀ ಪದ್ಯದಲ್ಲಿ ಜಲ, ಅಗ್ನಿ, ಯಜ್ಞಪುರುಷ, ಸೂರ್ಯ, ಚಂದ್ರ, ವಾಯು, ಪೃಥ್ವಿ, ಆಕಾಶ ಈ ಅನುಕ್ರಮವನ್ನು ಹೇಳಿದ್ದಾನೆ. ಅನುಕ್ರಮವು ಬೇರೆಯಾದರೂ ತತ್ವಗಳು ಒಂದೇ.

Sri Vidyabharathi Book Centre, Sringeri

CC-O. In Public Domain. Digitized by eGangotri

೨೯

ನಮೋ ನೇದಿಷ್ಠಾಯ, ಪ್ರಿಯದವನ,
ದವಿಷ್ಠಾಯಚ ನಮಃ
ಕಂದ ಸನಿಹವಿರೆ ನೀವು ಪ್ರಿಯದವ,
ಅನಭಿಜ್ಞರಿಗನಿತೆ ದೂರ, ವನಮಧ್ಯಗತಂ

ನಮೋ ಕ್ಷೋದಿಷ್ಠಾಯ ಸ್ಮರಹರ,
ಮಹಿಷ್ಠಾಯಚ ನಮಃ
ಅಣುವಿಗೆ ಕರಿದು, ಮದನಾರಿ,
ಮಣಿ ಮಹಿತರೊಳು, ಮಹತೋ ಮಹಿಯರ್ಗೆ

ನಮೋ ವರ್ಷಿಷ್ಠಾಯ, ತ್ರಿನಯನ,
ಯವಿಷ್ಠಾಯಚ ನಮಃ
ಪುರಾಣ ಪುರುಷರೊಳರಸಿರೆ
ಪುರಾತನರು ನೀವು, ನವ್ಯರೊಳತಿಶಯನವ್ಯರ್

ನಮೋ ಸರ್ವಸ್ಮೈತೇ ತದಿದಮಿತಿ
ಸರ್ವಾಯಚ ನಮಃ
ಹರಿಯಾಗಿ ವಿಶ್ವರೂಪದೆ
ಹರನೆನೆ ನಿಮಗೆಣೆಯೆ ವಿಶ್ವ, ವಿಶ್ವಾತೀತ !

ಸಂಸ್ಕೃತ ಮೂಲದ ಶಿಖರಿಣಿ ವೃತ್ತವನ್ನು ಎರಡು ಭಾಗ ಮಾಡಿ ಮೊದಲೆರಡರಲ್ಲಿ ಸಂಸ್ಕೃತ ಮೂಲವನ್ನು ಕೊನೆಯೆರಡರಲ್ಲಿ ಅದರ ಭಾವಾನುವಾದವನ್ನು ಸೇರಿಸಿ ಎರಡು ಅಷ್ಟ ಪದಿಗಳಾಗಿ ರೂಪಿಸಿದೆ. ಎರಡು ಭಾಷೆಗಳನ್ನು ಮಿಶ್ರ ಮಾಡುವ ಈ ಬಂಧವನ್ನು ಛಂಧಶ್ಶಾಸ್ತ್ರ "ಪ್ರವಾಳ" ಎಂದು ಕರೆದಿದೆ.

ಕಠಿಣ ಪದಗಳ ಅರ್ಥ. ನೇದಿಷ್ಠಾಯ ಸಮೀಪದಲ್ಲಿರುವವನು. ಪ್ರಿಯದವ—ಅರಣ್ಯ ಪ್ರಿಯ, ಅನಭಿಜ್ಞ —ದೈವವನ್ನು ಗುರುತಿಸಲಾರದವನು

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ಷೋದಿಷ್ಠ—ಅಣು ಸ್ವರೂಪದಲ್ಲಿರುವವನು, ಮಣಿಮಹತರಲ್ಲಿ—ದೊಡ್ಡವರಲ್ಲಿ ಅಗ್ರಮಣಿ, ವರ್ಷಿಷ್ಠ—ವಯಸ್ಸಿನಲ್ಲಿ ದೊಡ್ಡವನು, ಯುವ—ಯುವಕ, ಅನುವಾದದಲ್ಲಿ ಇದನ್ನು ಪುರಾತನ–ನವ್ಯ ಎಂದು ಸೂಚಿಸಿದೆ. ಹರಿಯಾಗಿ ವಿಶ್ವರೂಪವನ್ನು, ಹರನಾಗಿ ವಿಶ್ವಾತೀತನೂ ಆಗಿರುವನೆಂದು ಭಾವಾರ್ಥ, ಹರಿಹರಾಭೇದವನ್ನು ಇಲ್ಲಿ ಸೂಚಿಸಿದೆ.

ಈ ಶ್ಲೋಕದ ಭಾಷೆ ವೇದೋಪನಿಷತ್ತುಗಳ ಭಾಷೆಯಂತಿರುವುದರಿಂದ ಕರ್ತೃ ಪುಷ್ಪದಂತ ಗಂದರ್ವನನ್ನು ಪ್ರಮಥ ಪುಂಗವ, ಮಹರ್ಷಿ ಎಂದು ಕರೆಯಲ್ಪಡುತ್ತಾನೆ. ಈ ಶ್ಲೋಕದಲ್ಲಿ ಶಿವನ ಅಷ್ಟಸಿದ್ಧಿಗಳು ಪಠಿತವಾಗಿವೆ. ಅವುಗಳೆಂದರೆ ಅಣಿಮ, ಮಹಿಮ, ಗರಿಮ, ಲಘಿಮ, ವ್ಯಾಪ್ತಿ, ವಿಸ್ತಾರ, ಈಶಿತ್ವ, ವಶಿತ್ವ. ಶಿವನ ಮಹಿಮಾತಿಶಯವನ್ನು ಸಂಗ್ರಹವಾಗಿ ಸೂಚ್ಯವಾಗಿ ಗಂಭೀರವಾಗಿ ಹೇಳುವ ಈ ಪದ್ಯ ಮಹಿಮ್ನಸ್ತವದ ಮಹತ್ ಜನಪ್ರಿಯತೆಯ ಕಾರಣ.

Sri Vidyabharathi Book Centre, Sringeri

ಶಿವಮಹಿಮ್ನ ಸ್ತೋತ್ರ-O. In Public Domain. Digitized by eGangotri

೩೦

ಚಂಪಕಮಾಲಾ

ಪರಮಶಿವನ ತ್ರಿಮೂರ್ತಿತ್ವವನ್ನು ಉಲ್ಲೇಖಿಸಿ ಪುಷ್ಪಾದಂತಾಚಾರ್ಯನು ಸ್ತವನವನ್ನು ಉಪಸಂಹರಿಸುತ್ತಾನೆ. ಹಿಂದಿನ ಪದ್ಯದಂತೆ ಇದರಲ್ಲಿಯೂ ಮೂಲ ಮತ್ತು ಅನುವಾದಗಳನ್ನು ಒಟ್ಟಿಗೆ ಕೊಟ್ಟಿದೆ.

ಬಹುಳ ರಜಸೇ ವಿಶ್ವೋತ್ಪತ್ತೌ ಭವಾಯ ನಮೋ ನಮಃ
ಕಂ। ವಿಶ್ವದುದಯಾವಸರದೋಳ
ಬಹ್ವಂಶಂ ತುಂಬಿರಲ್ ರಜೋಗುಣದಿಂದಂ
ವಿಶ್ವಾಧಿಕನೀವಿರ್ದ ನು
ಹೈಶ್ವರ್ಯವಿಧಾತೃವಿಗೆ ಭವಂಗೀ ನಮನಂ

ಜನಹಿತಕೃತೇ ಸತ್ತ್ವೋತ್ಪತ್ತೌ ಮೃಡಾಯ ನಮೋನಮಃ
ಕಂ। ಜನಕುಪಕೃತಿಯಂ ಚಿಂತಿಸಿ
ಸನುಮತ ಸತ್ವಂಗಳುದಯಿಸುತ್ತಿರೆನೀವುಂ
ಮುನಿವರ ಪೂಜಿತರೆನಿಸುತೆ
ಜನಹಿತಕೃತ್ ದಯಾಮೂರ್ತಿ ಮೃಡಂಗೀ ನಮಃ

ಪ್ರಬಲತಮಸೇ ತತ್ಸಂಹಾರೇ ಹರಾಯ ನಮೋ ನಮಃ
ಬಳಿಕ ಜಗದಸ್ತ ಕಾಲದೆ
ತಳೆಯುತೆ ಸಂಹಾರ ಮೂರ್ತಿಯಂ ನೀವಾಗಲ್
ತುಳುಕಿಸುವೆ ತಮವನೆಲ್ಲೆಡೆ
ಬೆಳಗಿಸಿದಪುರಾಂತಕಗೆ ಹರಂಗೀ ನಮನಂ

ಪ್ರಮಹಸಿಪದೇ ನಿಸ್ತ್ರೈಗುಣ್ಯೇ ಶಿವಾಯ ನಮೋ ನಮಃ
ಕಂ। ನಡಸುತಿಂತೆಲ್ಲಕೃತ್ಯವ
ನಡಿಯಿಡೆ ಮಹಿಮಾತಿಶಯದೆ ನಿಸ್ತ್ರೈಗುಣ್ಯಂ
ಪಡೆದುದು ನಿಮ್ಮಿಂದನಘಂ
ಮೃಡಾದಧಿಕ ಪದವನೆನ ಶಿವಂಗೀನಮನಂ

ನಿಸ್ತ್ರೈಗುಣ್ಯೇ—ಸತ್ವರಜತಪೋಗುಣಗಳಿಗೆ ಅತೀತವಾದ, ಪ್ರಮಹಸಿಪದೇ, ಅತ್ಯಂತ ಮಹತ್ವದ ಸ್ಥಾನದಲ್ಲಿರುವ ಶಿವನಿಗೆ ನಮಸ್ಕಾರಗಳು ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಗಿಯುವ ಈ ಪದ್ಯವೂ ಶೈಲಿಬಂಧ ನಿರೂಪಣೆಗಳಲ್ಲಿ ರುದ್ರಾಧ್ಯಾಯದ ನಮಕ ಚಮಕಗಳನ್ನು ಹೋಲುತ್ತದೆ. ಕಾವ್ಯದ ಸರ್ಗಗಳ, ಸ್ತೋತ್ರಗಳ ಕೊನೆಯ ವೃತ್ತಗಳನ್ನು ಬದಲಾಯಿಸುವುದು ಸಂಪ್ರದಾಯ. ಮಹಿಮ್ನ ಸ್ತವದ ೩೦ ಪದ್ಯಗಳನ್ನು ಶಿವಖರಿಣಿ ವೃತ್ತದಲ್ಲಿ ರಚಿಸಿದ ಪುಷ್ಪದಂತ ಗಂಧರ್ವನು ಕೊನೆಯಲ್ಲಿ ಹರಿಣೀ ಮಾಲಿನೀ ವೃತ್ತಗಳನ್ನು ಆಶ್ರಯಿಸಿದ್ದಾನೆ.

೩೧

ಚಂಪಕಮಾಲಾ

ಶರನಿಧಿ ಬಟ್ಟಲೆಂದೆನಿಸಲಂಜನ
ಶೈಲಮೆ ಕಜ್ಜಲಂ, ಸ್ಫುರತ್
ಸುರತರುಶಾಖೆ ಲೇಖನಿ, ವಿಶಾಲಧ
ರಿತ್ರಿ ಅಲೇಖ ಮಾಗಿರಲ್

ಸ್ಮರಹರ, ನಿಷ್ಠೆಯಿಂದೆ ಪರಿಭಾವಿಸಿ
ಶಾರದೆ ಸರ್ವಕಾಲಮುಂ

ಬರೆದೊಡಮಿನ್ನು ತೀರದಿಹ ನಿಮ್ಮ ಮ
ಹಾತ್ಮ್ಯೆಯೆ ವಿಶ್ವದದ್ಭುತಂ.

ಪರಮಶಿವನ ಮಹಾತ್ಮೆಯನ್ನು ಕವಿ ಈ ಪದ್ಯದಲ್ಲಿ ರೂಪಕಾಲಂಕಾರಲ್ಲಿ ಹೀಗೆ ಚಿತ್ರಿಸಿದ್ದಾನೆ. ಬರೆಯಲು ನವುಗೆ ಶಾಯಿ ಕಾಗದ, ಲೇಖನಿ ಇವು ಬೇಕು, ವಿದ್ಯಾದೇವತೆಯಾದ ಶಾರದೆಯೇ ಶಿವ ಮಹಾತ್ಮ್ಯವನ್ನು ವರ್ಣಿಸಿ ಬರೆಯುವಾಗ ಮೇಲಿನ ಸಾಮಾನ್ಯಉಪಕರಣಗಳಿಂದ ಸಾಧ್ಯವೇ. ಅದಕ್ಕೆ ತಕ್ಕ ವಸ್ತುಗಳನ್ನು ಕವಿ ಹೀಗೆ ಗುರುತಿಸುತ್ತಾನೆ. ಶರನಿಧಿ–ಸಮುದ್ರವು ಬಟ್ಟಲು ಅಂಜನ ಶೈಲವೇ ಕಜ್ಜಲ–ಕರಿಯ ಬಣ್ಣದ ಶಾಯಿ, ಕಲ್ಪವೃಕ್ಷದ ಕೊಂಬೆಯು ಲೇಖನಿ, ಭೂಮಿಯೆ ಅಲೇಖ—ಬರೆಯುವ ಪತ್ರ, ನಿಷ್ಠೆಯಿಂದ ಯೋಚಿಸಿ ವಿದ್ಯಾಧಿದೇವತೆ ಶಾರದೆಯು ಎಲ್ಲ ಕಾಲಗಳಲ್ಲಿಯೂ ಬರೆಯುತ್ತಿದ್ದರೂ

Sri Vidyabharathi Book Centre, Sringeri

 CC-O. In Public Domain. Digitized by eGangotri

ಇನ್ನೂ ಮುಗಿದಿಲ್ಲವೆಂದರೆ, ಹೇ ಸ್ಮರಹರ, ನಿಮ್ಮ ಮಹಾತ್ಮ್ಯವು ವಿಶ್ವದ ಒಂದು ಅದ್ಭುತವೇ ಸರಿ,

ಕ್ರಿಸ್ತಪೂರ್ವ ೨ನೇ ಶತಮಾನದ ಅಂತ್ಯದಲ್ಲಿ ಜೀವಿಸಿರಬಹುದಾದ ಪುಷ್ಪದಂತ ಗಂಧರ್ವನ ಈ ಮುನ್ನೋಟ ಶಿವ ಮಹಾತ್ಮ್ಯೆ ವಿಶ್ವದ ಒಂದು ಅದ್ಭುತವೆಂಬ ಮಾತು ೨೦ನೆಯ ಶತಮಾನದಲ್ಲಿ ವಾಸ್ತವ ಸತ್ಯವಾಗುತ್ತಿದೆ. ವೇದ ದರ್ಶನ ಸಾಹಿತ್ಯಕ ಸಂಸ್ಕೃತ ಗ್ರಂಥಗಳನ್ನು ಆಂಗ್ಲ, ಜರ್ಮನ್, ಮತ್ತು ಫ್ರೆಂಚ್ ಭಾಷೆಗಳಿಗೆ ಭಾಷಾಂತರಿಸುವ ಕಾರ್ಯ ಮ್ಯಾಕ್ಸ್ ಮುಲ್ಲರ್, ಡ್ಯೂಸನ್ ಮುಂತಾದ ಪಂಡಿತ ಸಂಶೋಧಕರಿಂದ ೧೮ನೆಯ ಶತಮಾನದಲ್ಲಿ ಪ್ರಾರಂಭಿಸಲ್ಪಟ್ಟಿತಾದರೂ ಅವುಗಳ ಪ್ರಭಾವ ವಿದ್ಯಾವಂತ ಮಧ್ಯಮ ವರ್ಗವನ್ನು ತಲಪಲು ಕೆಲವು ದಶಕಗಳು ಬೇಕಾದವು. ಭಾರತೀಯ ಧರ್ಮಗಳ ಬಗೆಗೆ ಪಾಶ್ಚಾತ್ಯರ ಅಜ್ಞಾನಮೂಲವಾದ ತಿರಸ್ಕಾರ ಭಾವ ಬೆಳೆಯುತ್ತಾ ಬಂದಿತು. ಅದು ಕೊನೆಗಾಣಲು ಒಂದು ಪವಾಡವೇ ನಡೆಯಬೇಕಾಗಿತ್ತು, ದೈವ ಸಂಕಲ್ಪದಿಂದ ನಡೆದೂ ನಡೆಯಿತು. ಅದೆಂದರೆ ಕ್ರಿ.ಶ. ೧೮೯೩ನೆಯ ಸೆಪ್ಟೆಂಬರ್ ೧೫ ರಂದು ಅಮೇರಿಕದ ಚಿಕಾಗೋ ನಗರದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನ. ಅಂದು ಬೆಳಗಿನಿಂದ ಧಾರ್ಮಿಕನಾಯಕರು ಒಬ್ಬೊಬ್ಬರಾಗಿ ಬಂದು ವೇದಿಕೆಯ ಮೇಲೆ ನಿಂತು ತಮ್ಮ ಮತಗಳನ್ನು ಪ್ರತಿಪಾದಿಸಿದರು. ಅಂದಿನ ಸಂಜೆ ಕೊನೆಯ ಭಾಷಣ ಬಂದಿತು. ಕಾವಿಯ ನಿಲುವಂಗಿ ತೊಟ್ಟು ಅದೇ ಬಣ್ಣದ ಪೇಟವನ್ನು ಸುತ್ತಿದ್ದ ಸುಂದರ ಗಂಭೀರ ಪುರುಷನೊಬ್ಬನು ಬಂದು ನಿಂತು ನೆರೆದಿದ್ದ ಶ್ರೋತೃಗಳನ್ನು ಗಂಭೀರ ಮಧುರ ಕಂಠದಲ್ಲಿ ಆಂಗ್ಲ ಭಾಷೆಯಲ್ಲಿ "ಅಮೇರಿಕದ ಸೋದರ ಸೋದರಿಯರೆ" ಎಂದು ಸಂಭೋದಿಸಿದಾಗ ನೆರದಿದ್ದವರೆಲ್ಲ ಚಪ್ಪಾಳೆ ತಟ್ಟಿದರು. ಸಭಿಕರ ಹರ್ಷ ಧ್ವನಿ ಗದ್ದಲದ ರೂಪ ತಾಳುವಷ್ಟರಲ್ಲಿ ಆತನು ಹಿಂದೂಧರ್ಮದ ಪರವಾಗಿ ಸಭಿಕರನ್ನು ವಂದಿಸಿ, ಹಿಂದೂ ಧರ್ಮದ ಮೂಲ ತತ್ವಗಳನ್ನು ಸರಳ ಶೈಲಿಯಲ್ಲಿ, ಸಾಮಾನ್ಯರಿಗೂ ಅರ್ಥವಾಗುವಂತೆ ವಿವರಿಸಿದರು. ಭಾಷಣ ಎಲ್ಲರನ್ನು ಆಕರ್ಷಿಸಿತು. ಭಾಷಣ ಮುಗಿದಾಗ ಕರತಾಡನದ ಸುರಿಮಳೆ, ಹರ್ಷೋದ್ಗಾರದ ಮಹಾಪೂರ. ಈ ಭಾವ ಪರಿವರ್ತನೆಗೆ, ಧಾರ್ಮಿಕ ಅಭಿವ್ಯಕ್ತಿಗೆ ಕಾರಣನಾದ ಮಹಾವ್ಯಕ್ತಿಯೇ ಸ್ವಾಮಿ ವಿವೇಕಾನಂದರು. ಸಭೆಯ ಅನಂತರ ಎಲ್ಲರ ಬಾಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಲ್ಲಿಯೂ ವಿವೇಕಾನಂದರ ಮಾತೇ. ಎಲ್ಲ ಪತ್ರಿಕೆಗಳಲ್ಲಿಯೂ ಅವರ ಭಾವ ಚಿತ್ರವೇ. ಕೋಟ್ಯಾಧೀಶರು ಅವರನ್ನು ತಮ್ಮ ಮನೆಗೆ ಕರೆಯುವುದಕ್ಕೆ ನಾನು ತಾನೆಂದು ಮುಂದಾದರು.

(ಆಧಾರ ಸ್ವಾಮಿ ಸೋಮಾನಂದನಾಥರ "ಸ್ವಾಮಿ ವಿವೇಕಾನಂದ, ಸಂಕ್ಷಿಪ್ತ ಪರಿಚಯ, ಹೆಚ್ಚಿನ ವಿವರಗಳಿಗೆ ಪ್ರಸ್ತಾಪನೆ ನೋಡಿ")

ವಿವೇಕಾನಂದರ ಗುರುಗಳಾದ ರಾಮಕೃಷ್ಣ ಪರಮಹಂಸರು ತಮ್ಮ ಶಿಷ್ಯನನ್ನು ಮೊದಲ ಸಾರಿ ಕಂಡಾಗ "ನೀನು ಸಪ್ತರ್ಷಿಗಳಲ್ಲಿ ಒಬ್ಬನಾದ ನರನು. ಈಗ ಧರ್ಮವನ್ನು ಉದ್ಧರಿಸಲು ಬಂದಿರುವೆ" ಎಂದು ಹೇಳಿದ್ದರು. ವಾಸ್ತವವಾಗಿ ಆಧುನಿಕರಿಗೆ ಇದು ಉತ್ಪ್ರೇಕ್ಷೆಯಂತೆ ಕಾಣಬಹುದಾದರೂ ಆ ತರುವಾಯ ವಿವೇಕಾನಂದರ ಧಾರ್ಮಿಕ ಭಾಷಣಗಳಿಗೆ, ಪ್ರಬಂಧಗಳಿಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ, ಭಾರತದಲ್ಲಿ ದೊರಕಿದ ಆದರ, ಅಭಿಮಾನ ಜನಪ್ರಿಯತೆ ಸನ್ಮಾನ ಗೌರವಗಳು ಪರಮಹಂಸರ ವಾಣಿಯು ವಾಸ್ತವ ಸತ್ಯವೆಂಬುದನ್ನು ಪ್ರತಿಪಾದಿಸಿದೆ. ಈಚಿನ ದಶಕಗಳಲ್ಲಿ ಭಾರತದ ಹಾಗೂ ಪಾಶ್ಚಾತ್ಯ ರಾಷ್ಟ್ರಗಳ ಅರ್ವಾಚೀನ, ನವೋದಯ, ನವ್ಯ ಸಂಶೋಧಕರು ಕೆಲವೆಡೆ ಅಂಶಿಕವಾಗಿ, ಕೆಲವೆಡೆ ಸಂಪೂರ್ಣವಾಗಿ ಶೈವಶಾಕ್ತ ಧರ್ಮಗಳಿಗೆ ಸಂಬಂಧಿಸಿದಂತೆ ಪ್ರಕಟಿಸಿರುವ ಗ್ರಂಥರಾಶಿ ಅಚ್ಚರಿಗೊಳಿಸುವಷ್ಟು ವಿಪುಳವಾಗಿರುತ್ತದೆ. ಮಾನ್ಯ ವಾಚಕರ ಅಧ್ಯಯನ ಅವಗಾಹನೆಗಳಿಗಾಗಿ ಅವುಗಳಲ್ಲಿ ಕೆಲವನ್ನು ಮುಂದೆ ಕೊಟ್ಟಿದೆ.

೧. ಕನ್ನಡದ ವಿಖ್ಯಾತ ಕವಿ ರಾಮಾನುಜಂ ಅವರ 'Speaking of Siva' ಶಿವಶರಣ ಶರಣಿಯರ ವಚನಗಳ ಸಮರ್ಥ ಆಂಗ್ಲ ಅನುವಾದ. ಇದು ಪಾಶ್ಚಾತ್ಯ ಪಂಡಿತರನೇಕರ ಮಾನ್ಯತೆ ಪಡೆದಿದ್ದರೂ ಕನ್ನಡಿಗರ ಅವಜ್ಞೆ ಎನಿಸುವಷ್ಟು ಅನಾದರಕ್ಕೆ ಪಾತ್ರವಾಗಿದೆ. ಇದೊಂದು ದುರ್ದೈವ,

Sir John Woodroffe (Artheer Avalon-)

1. Shakti and Shakta
2. Garland of Letters

Sri Vidyabharathi Book Centre, Sringeri

CC-O. In Public Domain. Digitized by eGangotri

3. The World as Power.
4. Maha Maya.
5. Greating of Siva, (ಮಹಿಮ್ನಸ್ತವದ ಆಂಗ್ಲ ಭಾಷಾಂತರ)
Mouni Sadhu–(ಆಂಗ್ಲ ಭಾಷೆಯಲ್ಲಿ)

1. Samadi–ಯೋಗವನ್ನು ಕುರಿತ ಮಹಾಪ್ರಬಂಧ
Dr. Radha Krishnan
An Idealist Veiw of Life
Pro. B. Bhatta charaya
Saivisam and The Phalic World in Two Volumes
(Oxford & I. B. H. Prakasana)
Sivarama Murti, S.

1) Nataraja in Art Thought and Litarature (New Delhi 1976)
2) Shatha Rudriya–Vibhuti of Siva.

Dr. Stella Kramrisch, The Presence of Siva

ಅಮೇರಿಕದ ಫಿಲೆಡೆಲ್ಫಿಯ ಮ್ಯೂಸಿಯಂ ಆಫ್ ಆರ್ಟ್ಸ್ ಇವರು 1981ರ ಆದಿಭಾಗದಲ್ಲಿ ಆರು ತಿಂಗಳ ಕಾಲ ನಡೆಸಿದ ಸಂಚಾರಿ ಶಿವಪ್ರದರ್ಶನ, ಸಭೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪ್ರಕಟವಾದ ಈ ಬೃಹತ್ ಗ್ರಂಥ ರುದ್ರ ಶಿವನಿಗೆ ಸಂಬಂಧಿಸಿದ ವೇದ, ಬ್ರಾಹ್ಮಣ, ಪುರಾಣ ಆಖ್ಯಾಯಿಕೆಗಳ ಆಳವಾದ ಅಧ್ಯಯನ ವಿವೇಚನೆಗಳಿಂದ ಕೂಡಿದ ಸಚಿತ್ರ ಪ್ರಕಟನೆ. ಶೈವ ಧರ್ಮ, ಶಿವನನ್ನು ಕುರಿತ ಆಖ್ಯಾಯಿಕೆಗಳ ಪ್ರತೀಕ ಉದ್ದೇಶಗಳನ್ನು ಕುರಿತ ಉಪನ್ಯಾಸ, ವಿಚಾರ ವಿನಿಮಯ, ಸಂಗೀತ ನಾಟ್ಯ ಪ್ರದರ್ಶನಗಳು ನಡೆದವು. ಈ ಕಾರ್ಯಕ್ರಮಗಳು, ಅಮೇರಿಕದಲ್ಲಿ ಹಿಂದೂ ಧರ್ಮ ಪ್ರಚಾರ ಅಧ್ಯಯನ ಗಳಿಗೆ ಪ್ರೋತ್ಸಾಹಕವಾದವೆಂಬುದು ಪ್ರವಾಸಿಗಳ ಅಭಿಪ್ರಾಯ. ಈ ಚಟು ವಟಿಕೆಗಳ ಬಗೆಗೆ ಕನ್ನಡ ವಾರ್ತಾ ಪತ್ರಿಕೆಗಳು ಸಾಮಾನ್ಯವಾಗಿ ಮೌನ

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ರತಾಚಾರಿಗಳಾಗಿದ್ದವೆಂಬುದು ಕರ್ನಾಟಕದಲ್ಲಿ ಈಚೆಗೆ ಕಾಣಬರುತ್ತಿರುವ ''ಧರ್ಮಗ್ಲಾನಿ''ಯ ನಿದರ್ಶನವೇ ಎಂಬುದು ನಿಗೂಢ ಸಮಸ್ಯೆ.

ಚಂಪಕಮಾಲಾ

೩೨

ಮತಿ ಜಡವಾಗಲರ್ತಿ ಬೆಳೆಯುತ್ತಿದೆ.
ದುರ್ಬಲನಿಂದು ನಿಮ್ಮ ನಾಂ
ನುತಿಸುವುದೆಂತೆನಲ್ ತವ ಪದಾಬ್ಜದೊ
ಳೆನ್ನವಿಭಕ್ತ ಭಕ್ತಿಯೊಂ
ದತಿಶಯ ಶಕ್ತಿ ಕಾಯ್ದಿರೆ ನಿರಾಪದ
ನಾಗಿ ಗಿರೀಶ, ನಿಮ್ಮನೀ
ಸ್ತುತಿಕುಸುಮಾಂಜಲೀ ಪುಟದೆ ಪೂಜಿಸಿ
ವಂದಿಸಿ ಧನ್ಯನಾಗುವೆಂ.

ಮತಿ-ಬುದ್ಧಿಶಕ್ತಿಯು, ಜಡವಾಗಿ-ಮಂದವಾಗಿ ಅರ್ತಿ—ನೋವು ಹೆಚ್ಚುತ್ತಿರಲು, ದುರ್ಬಲನಾದ ನಾನು (ಮಹಾ ಮಹಿಮರಾದ) ನಿಮ್ಮನ್ನು ಗುರ್ತಿಸುವುದೆಂತು? ತವ-ನಿಮ್ಮ ಸ್ತವವನ್ನು ಮುಗಿಸುವುದು ಹೇಗೆ ಎಂದು ಯೋಚಿಸುತ್ತಿದ್ದಾಗ, ನಿಮ್ಮಲ್ಲಿ ನನ್ನ, ಅವಿಭಕ್ತವಾದ-ಏಕೈಕ ನಿಷ್ಠೆಯ ಭಕ್ತಿಯ ಅತಿಶಯ ಅಸಮಾನವಾದ ಶಕ್ತಿಯು ನನ್ನನ್ನು ಕಾಯ್ದಿರಲು-ರಕ್ಷಿಸಿರಲು ನಿರಾಪದನಾಗಿ ಯಾವ ವಿಧವಾದ ವಿಪತ್ತು ಇಲ್ಲದೆ ಓ ಗಿರಿಶ—ಓ ಪರ್ವತವಾಸಿಯಾದ ರುದ್ರ ಶಿವನೆ! ಸ್ತುತಿ ಕುಸುಮಾಂಜಲೀ ಪುಟದೆ-ಸ್ತುತಿ ರೂಪವಾದ ಹೂಗಳನ್ನು ಅಂಗೈಯ ಸಂಪುಟದಲ್ಲಿಟ್ಟುಕೊಂಡು ನಿಮ್ಮನ್ನು ಪೂಜಿಸಿ ವಂದಿಸಿ ಧನ್ಯನಾಗುತ್ತೇನೆ ಎಂದು ಪುಷ್ಪದಂತ ಗಂಧರ್ವರಾಜ ಮಹಿಮ್ನಸ್ತವವನ್ನು ಮುಗಿಸುತ್ತಾನೆ.

ಮಹಿಮ್ನಸ್ತವದ ಕೆಲವು ಪ್ರತಿಗಳಲ್ಲಿ ಮುಂದೆ ಕೆಲವು ಪದ್ಯಗಳಿದ್ದರೂ ಶೈಲಿ, ನಿರೂಪಣೆಯ ದೃಷ್ಟಿಯಿಂದ ಅವು ಪುಷ್ಪದಂತ ಕೃತವಲ್ಲವೆಂಬುದು ಸ್ಪಷ್ಟವಾಗುತ್ತದೆ. ಭಾರತದ ಮೈಸೂರು ರಾಜ್ಯದ ಚಾಮರಾಜನಗರ ಜಿಲ್ಲೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಓಂಕಾರೇಶ್ವರ ಜ್ಯೋತಿರ್ಲಿಂಗ ಕ್ಷೇತ್ರದ ಪುರಾತನ (ಶಾಲಿ. ಶಕ ೯೮೫ ಕ್ರಿ.ಶ. 1063) ದೇವಾಲಯದ ಗೋಡೆಯಲ್ಲಿ ಶಿಲಾಶಾಸನವಾಗಿ ಕೆತ್ತಲ್ಪಟ್ಟಿರುವ ಮಹಿಮ್ನಸ್ತವದಲ್ಲಿ ೩೨ ಪದ್ಯಗಳಿದ್ದು ಮೇಲಿನ ಪದ್ಯದಿಂದ ಶಾಸನ ಕೊನೆಗೊಳ್ಳುತ್ತದೆ. ಪುಷ್ಪದಂತ ಕವಿಯ ಬಗೆಗೆ ಹೆಚ್ಚಿನ ವಿವರಗಳಿಗೆ ಪ್ರಸ್ತಾವನೆಯನ್ನು ನೋಡಿ.

॥ ಓಂ ನಮಃ ಶಿವಾಯ ಶಿವೇತರಾಯಚ ॥

Sri Vidyabharāthi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಸೌಂದರ್ಯ ಲಹರಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರ ಭಗವತ್ ಪೂಜ್ಯಪಾದ ವಿರಚಿತ

ಸೌಂದರ್ಯ ಲಹರಿ

(ಕನ್ನಡ ಅನುವಾದ)

ಶಿವಶಕ್ತಿತತ್ವಗಳೆರಡು ಕೂಡಿರಲಾಗ
ತಿವನು ಶಕ್ತನು ಪ್ರಭವಿಸಲು,
ಭುವನಕಧೀಶನಾದರು ಶಕ್ತಿ ಒಡನಿಲ್ಲ
ದಿರೆ ಶಕ್ತನಲ್ಲ ಸ್ಪಂದಿಸಲು.
ಇಂತು ಹರಿ ಹರ ವಿರಿಂಚಾದಿ ದೇವತ
ರೆಲ್ಲ ಪೂಜಿಪ ದೈವ ನೀನು
ಎಂತು ನರನು ಪೂರ್ವಪುಣ್ಯವಿಲ್ಲದೆ ನಿನ್ನ
ನುತಿಸಿ ನಮಿಸೆ ಶಕ್ತನಹನು ? ॥ ೧ ॥

ಲಕ್ಷ್ಮೀಧರ ವ್ಯಾಖ್ಯಾ

ಸಮಯ ಮತತತ್ವನನ್ನರಿತ ಶಂಕರ ಭಗವತ್ ಪೂಜ್ಯಪಾದರು ಸಮಯಾ ಎಂಬ ಶುಭನಾಮದಿಂದ ವಿಖ್ಯಾತ ಚಂದ್ರಕಲೆಯನ್ನು ನೂರು ಶ್ಲೋಕಗಳಿಂದ ಸ್ತುತಿಸುವ "ಸೌಂದರ್ಯ ಲಹರಿ"ಗೆ ಲಕ್ಷ್ಮೀಧರ ದೇಶಿಕರು ರಚಿಸಿದ ಲಕ್ಷ್ಮೀಧರ ವ್ಯಾಖ್ಯೆಯಿಂದ ಆಯ್ದ ಭಾಗಗಳನ್ನು ಕನ್ನಡದಲ್ಲಿ ಅನುವಾದಿಸಿದೆ.

ಶಿವಶಬ್ದದ ಉತ್ಪತ್ತಿ— ಕಾಂತಿ ಎಂಬರ್ಥ ವಶಧಾತುವಿನಿಂದ ಶಿವ ಶಬ್ದ ನಿಷ್ಪನ್ನವಾಗುತ್ತದೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಹಿಸಿಧಾತೋ ಸಿಂಹ ಶಬ್ದೋವಶಕಾಂತಿ ಶಿವಸ್ಮೃತ
ವರ್ಣ ವ್ಯತ್ಯಯತ; ಸಿದ್ದೌ ಪಶ್ಯಕಃ ಕಶ್ಯಪೋ ಯಥಾ

ಹಿಸಿ (ಹಿಂಸೆ) ಧಾತುವಿನಿಂದ ಸಿಂಹ ಶಬ್ದವೂ ಕಾಂತಿ ಎಂಬ ಅರ್ಥ
ವಸ ಧಾತುವಿನಿಂದ ಶಿವಶಬ್ದವೂ ಉತ್ಪನ್ನವಾಗುತ್ತದೆ. ಪಶ್ಯಕವು ವರ್ಣ
ವ್ಯತ್ಯಯ—ಹಿಂದು ಮುಂದು ಮಾಡುವುದರಿಂದ ಕಶ್ಯಪ ಆಗುವಂತೆ ಹಿಸಿ-
ವಶಧಾತುಗಳ ಉತ್ಪನ್ನವೆಂದು ತಿಳಿಯಬೇಕು.

ವಶಧಾತುವನ್ನು ತುದಾದಿ, ಅದಾದಿ ಎಂದು ಎರಡು ರೀತಿಯಲ್ಲಿ ಸಂಗ್ರ
ಹಿಸಿದೆ. ತುದಾದಿಯಲ್ಲಿ ವಶ-ದೀಪ್ತಿ-ಪ್ರಕಾಶ ಎಂದೂ ಅದಾದಿಯಲ್ಲಿ ವಷ್ಟಿ
ಕಾಮನೆ ಎಂಬರ್ಥದಲ್ಲಿಯೂ ಇಚ್ಛಾಶಕ್ತಿಯ ಆಶ್ರಯದಿಂದ ಈಶ್ವರನ ಶಿವತ್ವ
ಸಿದ್ಧಿಯಾಗುತ್ತದೆ, ಸ್ವಯಂ ಪ್ರಕಾಶ ಸ್ವರೂಪನು ಎಂದು ಅಥವಾ ಜಗತ್ತಿಗೆ
ಪ್ರಕಾಶ–ಬೆಳಕನ್ನು ಕೊಡುವವನು ಎಂದು. ಸ್ವಪ್ನ ಎಂಬರ್ಥದ ಶೀದ್ ಧಾತು
ವಿನಿಂದ ಶಿವಶಬ್ದ ಉತ್ಪನ್ನವನ್ನು ಹೇಳುವುದಾದರೆ ಸ್ವಪ್ನಂ—ಕನಸನ್ನು
ಅವಿದ್ಯಾ ರೂಪವಾದ ಜಾಡ್ಯವನ್ನು ಹರಿಸುತ್ತಾನೆ ಎಂದು ಅರ್ಥ.

ಪರಮಶಿವನು ಜಗತ್ತನ್ನು ನಿರ್ಮಿಸುವ ಶಕ್ತಿ ತತ್ವದಿಂದ ಕೂಡಿದಾಗ
ಮಾತ್ರವೆ ಪ್ರಭವಿಸಲು-ಪ್ರಭಾವವನ್ನು ಬೀರಲು ಶಕ್ತನಾಗುತ್ತಾನೆ. ಭುವನೇ
ಧೀಶ—ಮೂರು ಲೋಕಗಳಿಗೆ ಒಡೆಯನಾದರೂ ಶಕ್ತಿಯ ಸಂಪರ್ಕವಿಲ್ಲದಿದ್ದರೆ
ಶಿವನು ಸ್ಪಂದ—ಅಲುಗಾಡಲೂ ಶಕ್ತನಲ್ಲ.

ಶಿವಶಕ್ತಿ ತತ್ವಗಳು ಶ್ರೀಚಕ್ರವನ್ನು ಪ್ರತಿನಿಧಿಸುತ್ತದೆ. "ಶಿವಕೋಣ
ನಾಲ್ಕೆನೆ" ಎಂದು ಪ್ರಾರಂಭವಾಗುವ ೧೧ನೆ ಶ್ಲೋಕದ ವ್ಯಾಖ್ಯೆಯಲ್ಲಿ ಇದರ
ವಿವರಗಳನ್ನು ಕೊಡಲಾಗುವುದು. ಹರಿಹರ ಬ್ರಹ್ಮಾದಿ ಎಲ್ಲ ದೇವತೆಗಳ ಶಕ್ತಿ
ನೀನೇ ಆದ್ದರಿಂದ ನಿನ್ನನ್ನು ಗುರ್ತಿಸಿ ನಮಸ್ಕರಿಸಲು ಮಾನವನಿಗೆ ಪೂರ್ವ
ಪುಣ್ಯವಿರಬೇಕು ಎಂದು ಭಾವಾರ್ಥ. ॥೧॥

Sri Vidyabharathi Book Centre, Sringeri

ಸೌಂದರ್ಯ ಲಹರಿ. In Public Domain. Digitized by eGangotri

ದೇವಿ, ನಿನ್ನಯ ಪಾದ ಪದ್ಮದಿಂದುದುರಿದ
ರಜದೊಂದು ಕಣವ ಸಂಗ್ರಹಿಸಿ,
ಈರೇಳು ಲೋಕವ ಸೃಷ್ಟಿಸಿದನು ಬ್ರಹ್ಮ-
ದೇವನು ಅವಿರತ ಶ್ರಮಿಸಿ,
ಹರಿ ಶೇಷರೂಪದೆ ಅದ ಧರಿಸಿರುವನು
ಸಾವಿರ ಹೆಡೆಗಳ ಮೇಲೆ,
ಹರನದ ದಹಿಸುತೊಡನೆ ತನ್ನ ದೇಹಕೆ
ಬಳಿದುಕೊಂಡನು ಭಸ್ಮದಂತೆ ॥ ೨ ॥

ಸೃಷ್ಟಿಸ್ಥಿತಿಲಯಗಳು ದೇವಿಯ ಪಾದಪದ್ಮಗಳಿಂದ ಉದುರಿದ ರಜ; ಕಣ ಗಳಿಂದ ನಡೆಯುವುದೆಂದು ಪದ್ಯದ ಭಾವಾರ್ಥ. ಅವಿರತ—ವಿರಾಮವಿಲ್ಲದೆ, ಈ ರೇಳು–ಹದಿನಾಲ್ಕು, ಭೂಮಿ ಆದಿ ಏಳು ಊರ್ಧ್ವಲೋಕಗಳು, ಅತಲಾದಿ ಏಳು ಅಧೋಲೋಕಗಳು.

ಅವಿದ್ಯಾತಮಂಧವ ಹರಿಸುವ ರವಿಗುದ-
ಯಾದ್ರಿ ನಿನ್ನಯ ಪಾದರೇಣು,
ಮನುಜರ ಜಡತೆಯ ಕಳೆದು ಚೇತನವೀವ
ಪುಷ್ಪರಸದ ಸ್ರುತಿ ಝರಿಯು,
ಬಡವರ ಬಂಧು ಚಿಂತಾಮಣಿಗುಣನಿಕೆ
ಭವಾಬ್ಧಿಯೋಳ್ ಮುಳುಗಿದವರನು
ಕಡೆ ಹಾಯಿಸುವರೆ ಮುರಾರಿ ವರಾಹದ
ಕೋರೆದಾಡೆಗಳೆನಿಸುವವು ॥ ೩ ॥

ದೇವಿಯ ಪಾದರೇಣುವಿಗೆ ಮೂರ್ತಿರೂಪವನ್ನು ಆರೋಪಿಸಿ ವರ್ಣಿಸಿರು ವುದರಿಂದ ಮಂಕಕನ ಸೂತ್ರದಂತೆ "ಆರೋಪ್ಯಮಾಣಸ್ಯ ಪ್ರಕೃತೋಪಯೋ ಗಿತ್ವೆ ಪರಿಣಾಮ", ಆರೋಪಿಸಿದ ಗುಣಗಳು ವಸ್ತುವಿಗೆ ಉಪಯುಕ್ತವಾಗುವು ದರಿಂದ ಪರಿಣಾಮಾಲಂಕಾರ, ಅವಿದ್ಯಾ—ಅಜ್ಞಾನ, ಸ್ರುತಿಝರಿ—ಸೋರುವ ಗಿರಿನದಿ. ಚಿಂತಾಮಣಿ ಗುಣನಿಕ—ಕೋರಿದ್ದನ್ನು ಕೊಡುವ ದಿವ್ಯರತ್ನದ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುಣವುಳ್ಳದ್ದು, ಭವಾಬ್ಧಿ—ಸಂಸಾರ ಸಾಗರ, ಮುರಾರಿವರಾಹ—ವಿಷ್ಣುವಿನ ಅವತಾರಗಳಲ್ಲಿ ಒಂದಾದ ವರಾಹದ.

ಅಭಯ ಹಸ್ತವ ತೋರಿ ಭಕ್ತರ ರಮಿಸುವ
ದೈವಗಳೆಷ್ಟೋ ಲೋಕದಲಿ,
ಅಭಿನಯವಾಯ್ತುದು ದೇವಿ. ಕೈಗಳಿಗೆನೆ,
ವರ ಅಭಯುಗಳ ಮಾತಿರಲಿ,
ಬಿಡಿಸಿ ಭಯವ ರಕ್ಷಿಸುತೆ ಬೇಡಿದುದಕಿಂತ
ಅಧಿಕ ಫಲವನಿತ್ತು ಪೊರೆಯೆ
ಮೃಡನರಸಿಯೆ, ನಿನ್ನ ಚರಣಯುಗವೆ ಸಾಕು
ಬೇರೇಕೆ ಲೋಕ ಶರಣ್ಯೆ ? ॥ ೪ ॥

ದೇವಿಯಚರಣಗಳನ್ನು ಈ ಪದ್ಯದಲ್ಲಿ ಸ್ತುತಿಸಿದೆ. ದೇವತಾ ಪ್ರತಿಮೆಗಳ ಅಭಯ ವರದ ಹಸ್ತಗಳನ್ನು ವಿಡಂಬಿಸಿ ಕವಿಯು ಅದೆಲ್ಲವೂ ನಾಟ್ಯದಲ್ಲಿ ಪ್ರಕಟವಾಗುವ ಹಸ್ತಮುದ್ರೆಗಳಂತೆ. ಹೀಗೆ ರೂಪಿತರಾದ ದೇವತೆಗಳದೆಷ್ಟೋ, ಓ ಲೋಕಶರಣ್ಯೆ, ಮೃಡನರಸಿ, ಭಯಬಿಡಿಸಿ ಬೇಡಿದುದಕ್ಕಿಂತ ಹೆಚ್ಚಿನ ಫಲವನ್ನು ಕೊಡಲು ನಿನ್ನ ಚರಣಯುಗಳೆ ಸಾಕು ಎನ್ನುತ್ತಾನೆ ಕವಿ.

ಪ್ರಣತಜನಕೆ ಸೌಭಾಗ್ಯ ಜನನಿ ನೀನು,
ಭಜಿಸುತೆ ನಿನ್ನ ಮಾಧವನು
ವನಿತಾರೂಪವ ತಾಳ್ದು ತ್ರಿಪುರ ದಾಹಕನ ಚಿ–
ತ್ತ ಕ್ಷೋಭೆಗಾದ ಕಾರಣನು.
ಮದವತಿರತಿನಯನಕ್ಕೆ ಮುದವನೀವ
ಕಾಮದೇವನು ಮುನ್ನ ನಿನ್ನ
ಪದಕೆರಗುತೆ ಮುನಿ ಮಾನಸಕಾದನು
ಮೋಹ ಕಾರಕನು ಸಂಪನ್ನ ॥ ೫ ॥

ಪ್ರಣತಜನ–ಕಾಯಿಕ ವಾಚಿಕ ಮಾನಸಿಕವಾಗಿ ನಮಸ್ಕಾರ ಮಾಡುವ ಭಕ್ತರ ಸೌಭಾಗ್ಯಕ್ಕೆ ಜನನೀ ರೂಪಳಾದ ಓ ದೇವಿಯೆ, ಶ್ರೀಹರಿಯು ನಿನ್ನನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಧ್ಯಾನಿಸಿ, ಸ್ತ್ರೀರೂಪಧಾರಿಯಾಗಿ ತ್ರಿಪುರಾಂತಕನಾದ ಶಿವನ ಮನಕ್ಷೋಭೆಗೆ ಕಾರಣನಾದನು. (ಸಮುದ್ರ ಮಥನ ಕಾಲದಲ್ಲಿ ವಿಷ್ಣು ಮೋಹಿನಿಯಾಗಿ ಕಂಡುದರ ಸೂಚನೆ) ರತಿ ಪತಿಯು ನಿನ್ನ ಪಾದಗಳಿಗೆರಗಿ ಮುನಿಗಳ ಮನಸ್ಸನ್ನು ಚಲಿಸುವಂತೆ ಮಾಡಿದನು.

ವಾಮಕೇಶ್ವರ ತಂತ್ರದಲ್ಲಿ ಈ ಘಟನೆಗಳನ್ನು ಹೀಗೆ ವರ್ಣಿಸಿದೆ:

ಏತಾಮೇವ ಪುರಾರಾಧ್ಯ ವಿದ್ಯಾಂ ತ್ರೈಲೋಕ್ಯ ಮೋಹಿನೀಂ
ತ್ರೈಲೋಕ್ಯಂ ಕಾಮಯಾಮಾಸ ಕಾಮಾರಿಂ ಭಗವಾ ಹರಿಃ
ಕಾಮದೇವೋಪಿ ದೇವೇಶಿ, ದೇವೀಂ ತ್ರಿಪುರ ಸುಂದರೀಂ
ಸಮಾರಾಧ್ಯಾಭವನ್ ಲೋಕೇ ಸರ್ವಸೌಭಾಗ್ಯ ಸುಂದರಃ

ಭಗವಾನ್ ಶ್ರೀಹರಿಯು ದೇವಿಯನ್ನು ತ್ರೈಲೋಕ್ಯ ಮೋಹಿನೀ ವಿದ್ಯೆಯಾಗಿ ಆರಾಧಿಸಿ ಮೂರು ಲೋಕಗಳಂತೆ ಶಿವನನ್ನೂ ಕಾಮವಶನಾಗಿ ಮಾಡಿದನು. ಕಾಮದೇವನು ತ್ರಿಪುರಸುಂದರೀ ರೂಪದಲ್ಲಿ ನಿನ್ನನ್ನು ಆರಾಧಿಸಿ ಲೋಕದಲ್ಲಿ ಸೌಭಾಗ್ಯ ಶಾಲಿಯಾದ ಸುಂದರ ಪುರುಷನಾದನು.

ಹೂಗಳೆ ಬಿಲ್ಲು, ಹೆದೆಯೆ ತುಂಬಿ ಬಂಬಲ,
ಎಣೆಸಿದಂತೈದು ಬಾಣಗಳು,
ಸೋಗಿನ ಸಚಿವ ವಸಂತ, ಸಂಯೋಧನ
ರಥವೆ ಆ ಮಲಯಮಾರುತವು,
ಆದೊಡೇನಚ್ಚರಿ, ಹಿಮಗಿರಿತನಯೆ, ನಿ–
ನ್ನೊಂದು ಕಟಾಕ್ಷದ ಬಲದೆ
ಸಾಧಿಸಿದನು ಮೂರು ಲೋಕದ ವಿಜಯವ,
ಮದನನೊಬ್ಬನೆ ಲೀಲೆಯಿಂದೆ ॥ ೬ ॥

ಮನ್ಮಥನ ತ್ರಿಲೋಕ ವಿಜಯವನ್ನು ವರ್ಣಿಸುವ ಈ ಪದ್ಯವು ಸರಳವೂ ಸುಲಭವೂ ಆಗಿ ಕಂಡರೂ ಕಾಮದೇವನ ಯುದ್ಧ ಸಿದ್ಧತೆಯನ್ನು ಹೇಳುವಲ್ಲಿ ಬಳಸಿಕೊಂಡ ಉಪಮೆಗಳು ಸಿದ್ಧತೆಯ ಲೋಪಗಳನ್ನು ಎತ್ತಿಹಿಡಿದು ದೇವಿಯ ಅನುಗ್ರಹದ ಮಹತ್ವವನ್ನು ಹೆಚ್ಚಿಸುತ್ತದೆ. ಧನುಸ್ಸು ಪುಷ್ಪಮಯ, ಹಗ್ಗ

Sri Vidyabharathi Book Centre, Sringeri

 CC-O. In Public Domain. Digitized by eGangotri

ತುಂಬಿಗಳ ಹಿಂಡು, ಬಾಣಗಳು ಐದು ಮಾತ್ರ, ಅಲ್ಪಜೀವಿ ವಸಂತನು ಮಂತ್ರಿ, ಮಂದಗತಿಯ ಮಲಯ ಮಾರುತನು ರಥ, ಹೀಗೆ ದುರ್ಬಲ ಸಾಧನಗಳಾದರೂ ಕಾಮದೇವನು ಮೂರು ಲೋಕಗಳನ್ನು ಜಯಿಸಲು ಸಮರ್ಥನಾದದ್ದು ದೇವಿಯ ಅನುಗ್ರಹದಿಂದ ಎಂದು ತಾತ್ಪರ್ಯ.

ಒಡ್ಯಾಣದೊಳು ಕಿರುಗೆಜ್ಜೆ ಕ್ವಣಿಸೆ, ಕುಚ–
ಕುಂಭ ಭಾರದೆ ನಸುಬಾಗಿ
ನಡೆಯುವ ತನು ಮಧ್ಯೆ, ನಿನ್ನ ವದನ ಶಶಿ
ಬೆಳಗಿರೆ ಪರಿಪೂರ್ಣನಾಗಿ
ಪುರಮಥನನ ಪೌರುಷದ ಪುರುಷಿಕೆಯಾಗಿ
ತೋರುವಂದದೆ ಕರಗಳಲಿ
ಧರಿಸಿ ಧನುರ್ಬಾಣ ಪಾಶ ಅಂಕುಶಗಳ
ನಿಲ್ಲು ದೇವಿ, ನನ್ನೆದುರಿನಲಿ ॥ ೭ ॥

ಉಪಾಸಕನು ಧ್ಯಾನಕ್ಕೆ ಕುಳಿತಾಗ ಮೂರನೆಯದಾದ ಮಣಿಪೂರ ಚಕ್ರದಲ್ಲಿ ಕಾಣುವ ದೇವೀ ಮೂರ್ತಿಯ ಲಕ್ಷಣಗಳನ್ನು ಭಗವತ್‌ಪಾದರು ಈ ಶ್ಲೋಕದಲ್ಲಿ ವರ್ಣಿಸಿದ್ದಾರೆ.

ದೇವಿಯು ನಡುವಿಗೆ ಹಾಕಿಕೊಂಡಿರುವ ಒಡ್ಯಾಣ—ಡಾಬು–ಮೇಖಲೆಯ ಕಿರುಗೆಜ್ಜೆಗಳು ಕ್ವಣಿಸುತ್ತಿರಲು, ಸ್ತನಭಾರದಿಂದ ನಸುಬಾಗಿ ನಡೆವ, ಸೆಳಿನೆಡುವಿನ, ಶರತ್ಕಾಲದ ಚಂದ್ರನಂತೆ ಹದಿನಾರು ಕಲೆಗಳಿಂದ ಪರಿಪೂರ್ಣನಾದ ಚಂದ್ರನನ್ನು ಹೋಲುವ ತುಂಬುಮುಖದ ನೀನು, ಪುರಮಥನ—ತ್ರಿಪುರಾಂತಕನ ಪೌರುಷವು ಪುರುಷಿಕಾ-ಪುರುಷಾಕಾರಸ್ತ್ರೀಯಂತೆ ಕೈಗಳಲ್ಲಿ ಧನುಸ್ಸು, ಬಾಣ, ಪಾಶ ಅಂಕುಶಗಳನ್ನು ಹಿಡಿದು ಮಣಿಪೂರ ಚಕ್ರದಿಂದ ಹೊರಬಂದು ನನ್ನ ಹೃದಯ ಕಮಲದಲ್ಲಿ ಪ್ರತ್ಯಕ್ಷಳಾಗು ಎಂದು ಉಪಾಸಕನು ದೇವಿಯನ್ನು ಪ್ರಾರ್ಥಿಸುತ್ತಾನೆ. ಪುರುಷಿಕಾ–ಪುರುಷಾಕೃತಿಯ ಹೆಣ್ಣು ಎಂಬ ವಿಶೇಷ ಪ್ರಯೋಗವನ್ನು ಗಮನಿಸದೆ, ಪೌರುಷ-ಅಹಂಕಾರ ಎಂದು ಅರ್ಥೈಸಿರುವುದು ಉಚಿತವೆನಿಸದು. ಮಾಳವಿಕಾಗ್ನಿ ಮಿತ್ರದ ನಾಂದಿ ಶ್ಲೋಕದಲ್ಲಿ "ಅಷ್ಟಾಭಿಃ ಯಶ್ಚಕೃತ್ಸ್ನಂ ಜಗದಪಿ ತನುಭಿಃ ಭಿಭ್ರತ್ತೋನಾಭಿಮಾನಃ" ಸುಗುಣ

Sri Vidyabharathi Book Centre, Sringeri

CC-O. In Public Domain. Digitized by eGangotri

ದುರ್ಗುಣ ಕೂಡಿದ ಪಂಚ ಭೂತಾತ್ಮಕವಾದ ಜಗತ್ತನ್ನು ಅಷ್ಟತನುಗಳಿಂದ ಧರಿಸಿದರೂ, ಸ್ವಲ್ಪವು ಅಭಿಮಾನವಿಲ್ಲದವನು ಎಂದು ಕಾಳಿದಾಸನು ವರ್ಣಿಸಿರುವ ಶಿವನು ತ್ರಿಪುರ ದಾಹದಿಂದ ಅಹಂಕಾರ ವಶನಾದನೆಂಬುದು ಯುಕ್ತವೆ ? ವ್ಯಾಖ್ಯಾನಕಾರ ಲಕ್ಷ್ಮೀಧರನ ಸಮಕಾಲೀನನಾದ ವತ್ಸರಾಜನು "ತ್ರಿಪುರ ದಾಹ ಡಿಮ"ನಾಟಕದಲ್ಲಿ ಚಿತ್ರಿಸಿರುವ ನಿರಭಿಮಾನಿ ನಿರಹಂಕಾರಿ ಶಿವನ ಪಾತ್ರ ಸೃಷ್ಟಿ ಶ್ಲಾಘನೀಯ, ಮನನಾರ್ಹ. ಶೀಘ್ರದಲ್ಲಿ ಪ್ರಕಟವಾಗಲಿರುವ "ತ್ರಿಪುರ ದಾಹ"ದ ಕನ್ನಡ ಅನುವಾದಕ್ಕಾಗಿ ಕಾದು ನೋಡಿ.

ನಡುವೆ ಸುಧಾಸಿಂಧು, ಸುತ್ತ ಕಲ್ಪವೃಕ್ಷ–
ಗಳ ಸಾಲೆಸವ ಮಣಿದ್ವೀಪ
ಅದರ ಮಧ್ಯದೊಳು ಕದಂಬವನದೆ ಚಿಂತಾ–
ಮಣಿ ಗೃಹಮಸಮಾನ ರೂಪ,
ಅಲ್ಲಿ ನೀನಿರುವೆ, ಶಿವಾಕಾರ ಮಂಚದೆ
ಪರಮಶಿವನೆ ತಲ್ಪವೆನಿಸೆ
ಧನ್ಯರು ನಿನ್ನ ಪೂಜಿಸುತಲ್ಲಿ ಪಡೆವರಾ–
ನಂದ ಲಹರಿಯ ಪೇರೊಸಗೆ ॥ ೮ ॥

ಶ್ರೀ ಚಕ್ರದ ಬೈಂದವಸ್ಥಾನದಲ್ಲಿ ದೇವಿಯ ಧ್ಯಾನ ವಿಧಿಯನ್ನು ಈ ಈ ಪದ್ಯದಲ್ಲಿ ವಿವರಿಸಿದೆ. ಸಂಕೇತಾರ್ಥಕ್ಕೆ ಪ್ರಾಧಾನ್ಯತೆ ಕೊಡುವ ಈ ವಿವರಣೆಯ ಹಿನ್ನೆಲೆಯನ್ನು ಮುಂದೆ ಹೇಳಿದೆ. ಸಮಯ ಮತವನ್ನು ಚೆನ್ನಾಗಿ ಅರಿತವರೂ, ಸಮಯಾಚಾರ ಪ್ರವೀಣರೂ ಆದ ಭಗವತ್ ಪಾದರು ಸಮಯ ರೂಪಳಾದ ದೇವಿಯನ್ನು ಈ ಶ್ಲೋಕದಲ್ಲಿ ಸ್ತುತಿಸಿದ್ದಾರೆ. ದೇವಿಯನ್ನು ಮಾನಸಿಕವಾಗಿ ಉಪಾಸಿಸುವ ಅಂತರ ಪೂಜಾದಿ ವಿಧಿಯೇ ಸಮಯಾಚಾರ. ಬಾಹ್ಯ ಪೂಜಾವಿಧಿಯು ಕುಲಾಚಾರ. ಆಕಾಶದಲ್ಲಿ ಕಾಣಿಸಿಕೊಳ್ಳಲ್ಪಡುವುದರಿಂದ ಶ್ರೀಚಕ್ರಕ್ಕೆ ವಿಯತ್ ಚಕ್ರ ಎಂಬ ಹೆಸರಿದೆ. ವಿಯತ್‌ಪೂಜೆಯಲ್ಲಿಯೂ ಎರಡು ವಿಧ, ದಹರಾಕಾಶಜ, ಬಾಹ್ಯಾಕಾಶಜ ಎಂದು. ಹೊರಗೆ ಬಯಲಲ್ಲಿ. ಭೂರ್ಜಪತ್ರ,ಶುದ್ಧವಸ್ತ್ರ, ಚಿನ್ನ, ಬೆಳ್ಳಿ, ತಾಮ್ರದ ತಗಡುಗಳ ಮೇಲೆ ಶ್ರೀಚಕ್ರವನ್ನು ಬರೆದು ಪೀಠದ ಮೇಲಿಟ್ಟು ಪೂಜಿಸುವುದು ಬಾಹ್ಯಾಕಾಶಜ, ಇದನ್ನು

Sri Vidyabharathi Book Centre, Shigeri

CC-O. In Public Domain. Digitized by eGangotri

ಕ್ಕಾಲ ಎಂದು ಕರೆಯತ್ತಾರೆ. ದಹರಾಕಾಶ – ಹೃದಯಾಕಾಶ ಮಧ್ಯದಲ್ಲಿ ಶ್ರೀಚಕ್ರವನ್ನು ಪೂಜಿಸುವುದು ದಹರಾಕಾಶಜ ಇದೆ ಸಮಯಾಚಾರ. ಶ್ರೀಚಕ್ರದಲ್ಲಿ ಅಧೋಮುಖವಾದ ನಾಲ್ಕುಕೋಣಗಳನ್ನು ಶಿವಕೋಣಗಳೆಂದೂ ಊರ್ಧ್ವಮುಖವಾದ ಪಂಚ ಕೋಣಗಳನ್ನು ಶಕ್ತಿ ಕೋಣಗಳೆಂದೂ ಕರೆಯುತ್ತಾರೆ. ಈ ಒಂಭತ್ತು ಕೋಣಗಳ ಕೇಂದ್ರ ಸ್ಥಾನವೇ ಸುಧಾ ಸಿಂಧು, ಅಮೃತಸಾಗರ. ಅದರ ಮಧ್ಯದಲ್ಲಿ ಕಲ್ಪವೃಕ್ಷದ ಸಾಲುಗಳಿಂದ ಕೂಡಿದ ಮಣಿದ್ವೀಪದಲ್ಲಿ ಮಣಿಗೃಹದಲ್ಲಿ ಶಿವಾಕಾರದ ಮಂಚದ ಮೇಲೆ ಪರಮಶಿವ ರೂಪವಾದ ಪರ್ಯಂಕದಲ್ಲಿ ಪವಡಿಸಿದ ನಿನ್ನನ್ನು ಆರಾಧಿಸುವ ಧನ್ಯರು ಪಡೆಯುವ ಚಿದಾನಂದ ಲಹರಿ-ಉತ್ಪ್ರೇಕವೇ ಪೇರೊಸಗೆ—ದೊಡ್ಡ ಶುಭ ಕಾರ್ಯ.

ಆಧಾರ ಪದ್ಮದೆ ಪೃಥ್ವಿ ಶತ್ವನ, ಮಣಿ
ಪೂರದೆ ಸಲಿಲ ತತ್ವವನು,
ಸ್ವಾಧಿಷ್ಠಾನದೆ ವಹ್ನಿ, ಹೃದಯದೆ ವಾಯು, ವಿ–
ಶುದ್ಧಿಯೊಳಾಕಾಶವನ್ನು,
ಭ್ರೂಮಧ್ಯದೊಳು ಮನಸ್ತತ್ವವ ಭೇದಿಸಿ
ಮುಂದೆ ನೆಡೆದು ಕುಲಪಥದೆ,
ಸಾಮರಸ್ಯದೆ ಪತಿಯೊಡನೆ ರಹಸ್ಯದೊ
ಳಿರುವೆ ಸಹಸ್ರಾರಾಂಬುಜದೆ. ॥ ೯ ॥

ಮಾನವ ದೇಹದ ಆರು ಚಕ್ರಗಳಲ್ಲಿ ಪಂಚಭೂತಗಳ ಸಮಾವೇಶವನ್ನು ದೇವಿಯ ವಿಶಿಷ್ಟ ರೂಪವಾದ ಕುಂಡಲಿನಿ ಶಕ್ತಿಯ ಚಲನ ಕ್ರಮವನ್ನು ಈ ಶ್ಲೋಕದಲ್ಲಿ ವಿವರಿಸಿದೆ. ಅನುವಾದವು ಸ್ಪಷ್ಟವಾಗಿದ್ದರೂ ಕೆಲವು ವಿಶೇಷಗಳನ್ನು ಮುಂದೆ ಕೊಟ್ಟಿದೆ.

ಎಲ್ಲಕ್ಕೂ ಆಧಾರವಾದದ್ದು ಮೂಲಾಧಾರ ಚಕ್ರ, ರುದ್ರ ರಹಸ್ಯದಲ್ಲಿ ಮೂಲಾಧಾರದ ವಿವರ :

ಸರ್ವಾಧಾರ ಮಹೀ ಯಸ್ಮಾತ್ ಮೂಲಾಧಾರತಯಾ ಸ್ಥಿತಂ
ತದಭಾವೇತು ದೇಹಸ್ಯ ಪಾತನಾತ್ ಅಗ್ನಿನೋಪಿ ವಾ ॥

Sri Vidyabharathi Book Centre, Bangalore

CC-O. In Public Domain. Digitized by eGangotri

೧. ಪೃಥ್ವಿತತ್ವಾತ್ಮಕವಾದ ಮೂಲಾಧಾರವು ಎಲ್ಲಕ್ಕೂ ಆಧಾರವಾಗಿದೆ. ಅದರ ಅಭಾವದಿಂದ ಮಾನವ ದೇಹವು ಕೆಳಗೆ ಬೀಳುತ್ತದೆ ಇಲ್ಲವೆ ಗಗನಕ್ಕೆ ಹಾರುತ್ತದೆ. ಸ್ಥಾನ—ಗುದ.

೨. ಸ್ವಾಧಿಷ್ಠಾನ, ದೇವಿಯ ಸ್ವಸ್ಥಾನ, ಅಗ್ನಿತತ್ವ, ಜಘನದ ಮಧ್ಯ ಭಾಗ.

೩. ಮಣಿಪೂರವು ಜಲತತ್ವ. ದೇವಿಯ ಚಲನದಿಂದ ಮಣಿಗಳಂತೆ ಕಾಣುವ ಜಲಂಬಿದುಗಳಿಂದ ತುಂಬುವುದರಿಂದ ಮಣಿಪೂರ. ಸಮಯಾಚಾರದ ಪೂಜೆಯಲ್ಲಿ ದೇವಿಗೆ ಆಭರಣಗಳನ್ನು ಅರ್ಪಿಸುವುದರಿಂದ ಮೂರನೆ ಸ್ಥಾನವನ್ನು ಎರಡಕ್ಕೇರಿಸಿದೆ. ಸ್ಥಾನ-ಹೊಕ್ಕಳ ಅಡಿ.

೪. ಅನಾಹತ–ವಾಯುತತ್ವ, ವಾಯುವಿಂದ ಆಹತ—ಹೊಡೆಯಲ್ಪಡುವುದರಿಂದ ಅನಾಹತ. ಸ್ಥಾನ-ಹೃದಯ.

೫. ವಿಶುದ್ಧಿ–ಆಕಾಶತತ್ವ, ಗಂಟಲಿನ ಮುಂಭಾಗ. ಗಾಳಿಯ ಮಾಲಿನ್ಯವನ್ನು ಶುದ್ಧಿಗೊಳಿಸುವ, ರೋಗಾಣುಗಳನ್ನು ನಾಶ ಮಾಡುವ ಕೆಲವು ಗ್ರಂಥಿಗಳು ಈ ಚಕ್ರದಲ್ಲಿರುವವೆಂದು ವೈದ್ಯಶಾಸ್ತ್ರ ಹೇಳುತ್ತದೆ.

ಆಜ್ಞಾಚಕ್ರ–ಮನಃತತ್ವ, ಸ್ಥಾನ—ಎರಡು ಹುಬ್ಬುಗಳ ನಡುವೆ.

ಎಚ್ಚೆತ್ತ ಕುಂಡಲಿನೀ ಶಕ್ತಿಯು ಮೂಲಾಧಾರದಲ್ಲಿ ಬ್ರಹ್ಮಗ್ರಂಥಿಯನ್ನು ಭೇದಿಸಿ ಸುಷುಮ್ನಾ ಮಾರ್ಗದಿಂದ ಮೇಲೇರಿ ಅನಾಹತದಲ್ಲಿ ವಿಷ್ಣುಗ್ರಂಥಿಯನ್ನೂ ವಿಶುದ್ಧಿಯಲ್ಲಿರುವ ರುದ್ರಗ್ರಂಥಿಯನ್ನೂ ಭೇದಿಸಿಕೊಂಡು ಸಹಸ್ರಾರ ಸಾವಿರ ದಳಗಳ ಮಧ್ಯದಲ್ಲಿ ಪತಿಯಾದ ಸದಾಶಿವನೊಡನೆ ಸಾಮರಸ್ಯವನ್ನು ಪಡೆದು ವಿಹರಿಸುತ್ತಾಳೆ. ಈ ಆರು ಚಕ್ರಗಳಲ್ಲಿ ಪೃಥ್ವಿ, ಅಗ್ನಿ, ಜಲ, ವಾಯು ಆಕಾಶ ಈ ಐದು ಮೂಲತತ್ವಗಳು, ಅವುಗಳ ತನ್ಮಾತ್ರ ಶುದ್ಧರೂಪಗಳಾದ ರಸ ಗಂಧ ಸ್ಪರ್ಶ ಶಬ್ದಗಳು, ಆಜ್ಞಾ ಚಕ್ರದಲ್ಲಿ ಮನಃ ತತ್ವದಲ್ಲಿ ಸಂಗ್ರಹೀತವಾದ ಏಕಾದಶ (೧೧) ಇಂದ್ರಿಯಗಳು ಸೇರಿ ೨೧ ತತ್ವಗಳು ಮಾಯೆಯಿಂದ ಆವರಿಸಲ್ಪಟ್ಟಿರುವುದರಿಂದ ಅಶುದ್ಧ ಪ್ರಾಕೃತ ತತ್ವಗಳು. ಶುದ್ಧ ತತ್ವಗಳಾದ ಮಾಯಾ, ಶುದ್ಧ ವಿದ್ಯಾ, ಮಹೇಶ್ವರ, ಸದಾಶಿವ ಈ "ಚತುಷ್ಟಯ"ದೊಡನೆ ೨೧ ಪ್ರಾಕೃತತತ್ವಗಳು ಮಿಳಿತವಾಗಿ ೨೫ ತತ್ವಗಳಾಗುತ್ತದೆ. ಈ ಮಿಳನದಲ್ಲಿರುವ ಮುಖ್ಯ ಭೇದವೆಂದರೆ ೨೧ ಪ್ರಾಕೃತತತ್ವಗಳು ಮಾಯೆ, ಮಹೇಶ್ವರ

Sri Vidyabharathi Digital Centre, Sringeri

CC-O. In Public Domain. Digitized by eGangotri

ತತ್ವಗಳೊಡನೆ ಸೇರಿದಾಗ ಉದಯಿಸುವ ಜೀವ ಭಾವವು ಅಶುದ್ಧ ಪ್ರಾಕೃತ ತತ್ವವೇ ಎಂದು ತಿಳಿಯತಕ್ಕದ್ದು, ಶುದ್ಧ ವಿದ್ಯಾತತ್ವವು ಸದಾಶಿವ ತತ್ವ ದೊಡನೆ ಸೇರಿದಾಗ ಸಾದಾಖ್ಯ ಕಲಾ ಎಂದು ವ್ಯವಹರಿಸಲ್ಪಡುತ್ತದೆ. ದೇವಿಯು ಉಳಿದ ೨೩ ತತ್ವಗಳನ್ನು ಅತಿಕ್ರಮಿಸಿ, ಸದಾಶಿವನನ್ನು ಸೇರಿದಾಗ ಷಡ್‌ವಿಂಶ ೨೬ನೆಯ ತತ್ವವೆನಿಸುತ್ತಾಳೆ. ತೈತ್ತರೀಯ ಆರಣ್ಯಕದ (೧.೨.೬) "ಪಂಚ ವಿಂಶತಿ ಆತ್ಮಾ ಭವತಿ" ಎಂಬ ಉಕ್ತಿ ಸದಾಶಿವ ತತ್ವ ಪ್ರತಿಪಾದಕ ಪರವಾದ್ದರಿಂದ ದೇವೀ ಮಿಳನದ ಪೂರ್ವ ತತ್ವಗಳಿಗೆ ಅನ್ವಯಿಸುತ್ತದೆ.

ದೇವಿ, ನಿನ್ನಯ ಪದಪದ್ಮಯುಗಾಂತರ್ವಿ-
ಗಳೆತ ಸುಧಾಸಾರದಿಂದೆ
ಪಾವನಗೊಳಿಸಿ ಲೋಕಗಳ, ಸುಧಾಸೂತಿ
ಮಹಿತ ಚಂದ್ರಮನೆಡೆಯಿಂದೆ
ಇಳಿದು ನಿನ್ನೆಡೆಗೆ ಭುಜಂಗಿಯಂದದೆ ಮೂರು
ಸುತ್ತಾಗಿ ತನುವ ಸಂವಲಿಸಿ
ಕುಲಕುಂಡ ಕುಹರದೆ ಮುಲಗಿ ನಿದ್ರಿಸುವೆ, ಸಂ
ಕಲಿತಾತ್ಮಶಕ್ತಿ ನೀನೆನಿಸಿ, ॥೧೦॥

ಕುಂಡಲಿನೀ ಶಕ್ತಿಯ ಪ್ರತಿಬೋಧದಿಂದ ಜೀವ ಜಗತ್ತುಗಳ ಮೇಲೆ ಆಗುವ ಪರಿಣಾಮವನ್ನು ಈ ಶ್ಲೋಕದಲ್ಲಿ ವಿವರಿಸಿದೆ.

ಓ ದೇವಿ, ಸದಾಶಿವನೊಡನೆ ನಿನ್ನ ಸಾಮರಸ್ಯದ ಪರಿಣಾಮವಾಗಿ ನಿನ್ನ ಪಾದ ಪದ್ಮಗಳಿಂದ ಸುಧಾಧಾರಾಸಾರವು ಲೋಕಗಳನ್ನು ಪವಿತ್ರಗೊಳಿಸಿ "ಸುಧಾ ಸೂತಿಮಹಿತ "ರಾಸಾಮ್ನಾಯ ಮಹಸ" ಸುಧಾರಸದ ಗುಣಾಧಿಕ್ಯದಿಂದ ಮಹತ್ವವನ್ನು ಪಡೆದ ಚಂದ್ರಮನಿಂದ ಸುಧೆಯನ್ನು ಪುನಃ ಪಡೆದು ಸ್ವಸ್ಥಾನಕ್ಕಿಳಿದು ಕುಲ ಕುಂಡಕು ಹರ" ಪೃಥ್ವಿ ತತ್ವ ವಿಲೀನವಾಗುವ ಮೂಲಾಧಾರದಲ್ಲಿ ಸರ್ಪದಂತೆ ಮೂರು ಸುತ್ತು ಸುತ್ತಿಕೊಂಡು, ಸಂಕಲಿತ—ಸಂಗ್ರಹರೂ ಪವಾದ ಆತ್ಮಶಕ್ತಿಯೆನಿಸಿ ನಿದ್ರಿಸುವೆ.

ದೇವಿಯ ಚರಣಗಳ ಸುಧಾಸಾರ ಸ್ರೋತವು ಜಗತ್ತನ್ನು ಪಾವನಗೊಳಿಸುವುದನ್ನು ತೈತ್ತರೀಯ ಬ್ರಾಹ್ಮಣವು(೩.೧.೩.೨)ಪ್ರತಿಪಾದಿಸುವ ಸೂಕ್ತವಿದು:

Sri Vidyabharathi Book Centre, Srinagar

 CC-O. In Public Domain. Digitized by eGangotri

ಲೋಕಸ್ಯ ದ್ವಾರಂ ಅರ್ಚಿಮತ್ ಪವಿತ್ರಂ
ಜ್ಯೋತಿಷ್ಮತ್ ಭಾಜಮಾನಂ ಮಹಸ್ವತ್
ಅಮೃತಸ್ಯ ಧಾರಾಂ ಬಹುಧಾ ದೋಹಮಾನಾಂ
ಚರಣಂ ನೋ ಲೋಕೇ ಸುಧಿತಾನ್ ದಧಾತು ॥

ಪ್ರತಿ ಪದಾರ್ಥ,: ಜ್ಯೋತಿಷ್ಮತ್–ಸೂರ್ಯಚಂದ್ರ ನಕ್ಷತ್ರಗಳ ಬೆಳಕಿನಿಂದ, ಅರ್ಚಿಮತ್–ಪ್ರಕಾಶಮಾನವಾಗಿ, ಭಾಜಮಾನಂ–ಬೆಳಗುವ ಲೋಕಸ್ಯ ಹದಿನಾಲ್ಕು ಲೋಕಗಳ, ದ್ವಾರಂ-ಪ್ರವೇಶ ಮಾರ್ಗಗಳನ್ನು, ಪವಿತ್ರಂ-ಸ್ವಯಂ ಪ್ರವಿತ್ರವೂ,ಮಹಸ್ವತ್ ಮಹತ್ವದಿಂದ ಕೂಡಿದುದೂ ಆಗಿ ಮಾಡುವ, ಅಮೃತಸ್ಯ ಧಾರಾಂ–ಧಾರಾಕಾರವಾದ ಸುಧೆಯನ್ನು, ಬಹುಧಾ ದೋಹ ಮಾನಃ—ಸಹಸ್ರ ನಾಡಿಗಳಿಂದ ಬಹುವಾಗಿ ಕಡೆದು ತೆಗೆದು, ಲೋಕೇ–ಲೋಕ ನಿವಾಸಿಗಳನ್ನು ತೃಪ್ತರನ್ನಾಗಿ ಮಾಡುವ, ಚರಣಂ-ಪಾದಗಳು, ನಃ–ನಮಗೂ ದಧಾತು—ತೃಪ್ತಿಯನ್ನು ಕೊಡಲಿ.

ಈ ಸಂಬಂಧದಲ್ಲಿ ಶಂಕರ ಭಗವತ್ ಪಾದರು "ಸಿದ್ಧಮನ್ನಂ ಪರಿತ್ಯಜ್ಯ ಭಿಕ್ಷಾ ಮಟತಿ ದುರ್ಮತಿಃ" ಸಿದ್ಧವಾದ ಅನ್ನವನ್ನು ಬಿಟ್ಟು ಬುದ್ಧಿ ಕೆಟ್ಟವನು ಭಿಕ್ಷಾಟನೆಗೆ ಹೊರಟಂತೆ ಎಂದು ಹೇಳಿದ್ದಾರೆ. ಸಾಧಕನ ಎಲ್ಲಾ ಇಷ್ಟಾರ್ಥಗಳನ್ನು ಈಡೇರಿಸುವ, ಸುಲಭ ಸಾಧ್ಯವಾದ ಶ್ರೀವಿದ್ಯೆ ಸಿದ್ಧವಾದ ಊಟದಂತೆ ಎದುರಿಗಿರುವಾಗ ಬೇರೆ ದೈವ, ಧರ್ಮ, ಮತ ಸಂಪ್ರದಾಯಗಳನ್ನು ಹುಡುಕುತ್ತ ಅಲೆಯುವುದು ಭಿಕ್ಷೆ ಬೇಡಿದಂತೆಯೇ ಸಂದೇಹ ಸಂದಿಗ್ಧ ಅಪಮಾನಗಳಲ್ಲಿ ಕೊನೆಗೊಳ್ಳಲು ವ್ಯರ್ಥ ಪರಿಶ್ರಮವಾಗುವುದು ಎಂಬುದೇ ಹೇಳಿಕೆಯ ಫಲಿತಾರ್ಥ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಶಿವಕೋಣ ನಾಲ್ಕೆನೆ ಶಕ್ತಿಕೋಣಗಳೈದು
ಒಂದರೊಳೊಂದು ಕೂಡಿತ್ತು,
ನವಧಾತು ರೂಪದೊಳಾಗಿತ್ತು ಶಿವನಿಗೆ
ಮೂಲ ಪ್ರಕೃತಿಗಳೊಂಭತ್ತು,
ಎಂಟು ಹದಿನಾರು ದಳದ ಪದ್ಮವೆರಡಾಗೆ
ಸುತ್ತಿರೆ ಮೂರು ಒಡ್ಯಾಣ,
ಉಂಟೆನಲದಕೆ ಭೂಪುರ ಮೂರು ಚೆನ್ನಾಯ್ತು
ದೇವಿ, ನಿನ್ನಯ ವಾಸಭವನ ॥ ೧೧ ॥

ಭಗವತ್ಪಾದರು ಈ ಶ್ಲೋಕದಲ್ಲಿ ಶ್ರೀಚಕ್ರದ ರಚನೆಯನ್ನು ವಿವರಿಸಿದ್ದಾರೆ. ವಾಚಕರ ಸಹಾಯಕ್ಕಾಗಿ ಮೂಲ ವಚನಾನುವಾದವನ್ನು ಮುಂದೆ ಕೊಟ್ಟಿದೆ.

ಓ ದೇವಿ, ನಿನ್ನ ಆವಾಸ ಸ್ಥಾನವಾದ ಶ್ರೀಚಕ್ರವು-ಪ್ರತ್ಯೇಕಿಸಲ್ಪಟ್ಟ ನಾಲ್ಕು ಶಿವ ಚಕ್ರಗಳು ಮತ್ತು ಐದು ಶಕ್ತಿ ಚಕ್ರಗಳಲ್ಲಿನ ಮೂಲ ಪ್ರಕೃತಿಗಳಿಂದಲೂ ಎಂಟು ಮತ್ತು ಹದಿನಾರು ದಳಗಳ ಎರಡು ಕಮಲಗಳಿಂದಲೂ ಮೂರು ಮೇಖಲೆಗಳಿಂದಲೂ, ಒಟ್ಟಿಗೆ ನಲವತ್ತ ನಾಲ್ಕು ಕೋಣಗಳಿಂದಲೂ ಕೂಡಿದೆ. ಶಿವಶಕ್ತಿ ಕೋಣಗಳಲ್ಲಿ ನವಧಾತು ಹೇಗೆ ಹಂಚಿಕೆಯಾಗಿದೆ ಎಂಬುದನ್ನು "ಕಾಮಿಕಾಗಮ"ದಲ್ಲಿ ಹೀಗೆ ಹೇಳಿದೆ.

ತ್ವಕ್ ಅಸೃಕ್ (ರಕ್ತ) ಮಾಂಸ, ಮೇಧ; ಅಸ್ತಿಧಾತವಃಶಕ್ತಿಮೂಲಕಾ
ಮಜ್ಜಾ ಶುಕ್ಲ ಪ್ರಾಣ ಜೀವಧಾತವ; ಶಿವ ಮೂಲಕಾ
ನವಧಾತುರಯಂ ದೇಹೋ ನವಶಕ್ತಿ ಸಮುದ್ಭವ;
ದಶಮೀ ಯೋನಿರೇಕೈವ ಸಾಶಕ್ತಿಃ ತದೀಶ್ವರೀ

ತ್ವಕ್–ಚರ್ಮ, ಅಸೃಕ್-ರಕ್ತ, ಮಾಂಸ, ಮೇಧ—ಕೊಬ್ಬು, ಅಸ್ತಿ-ಎಲುಬು ಈ ಐದು ಶಕ್ತಿಧಾತುಗಳು, ಮಜ್ಜಾ–ಅಸ್ತಿಸಾರ, ಶುಕ್ಲ-ರೇತಸ್ಸು, ಪ್ರಾಣ–ಪ್ರಾಣ ವಾಯು, ಜೀವಾತ್ಮ ಇವು ಶಿವ ಧಾತುಗಳು. ಈ ನವ ಧಾತುಗಳಿಂದ ರಚಿತವಾದ ದೇಹಕ್ಕೆ ಅಧೀಶ್ವರಿಯಾದ ದೇವಿಯೆ ಯೋನಿರೂಪಳಾದ ದಶಮೀ ಶಕ್ತಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಏವಂ ಪಿಂಡಾಂಡ ಮುತ್ಪನ್ನಂ ಬ್ರಹ್ಮಾಂಡಂ ತತ್ಸಾಮುಚ್ಚಯ :
ಏವಂ ಭೂತಾನಿ ಶಾಕ್ತಾನಿ ಮಾಯಾದೀನಿ ಶಿವಸ್ಯತು
ಮಾಯಾಚ ಶುದ್ಧ ವಿದ್ಯಾಚ ಮಹೇಶ್ವರ ಸದಾಶಿವಃ
ಪಂಚವಿಂಶತಿ ತತ್ವಾನಿ ತತ್ಪ್ರೈವಾಂತಃ ಭವಂತಿ ತೇ ॥

ಈ ಶ್ಲೋಕಗಳಲ್ಲಿ ಹೇಳಿರುವ ಸೃಷ್ಟಿಕ್ರಮವನ್ನು ಹಿಂದೆ ವಿವರಿಸಿದೆ. ಸೃಷ್ಟಿಕ್ರಮದ ಬಗೆಗೆ ಲಕ್ಷ್ಮೀಧರಾಚಾರ್ಯರ ಸುಧೀರ್ಘ ವ್ಯಾಖ್ಯಾನದಲ್ಲಿ ಆರಣ್ಯಕ ಬ್ರಾಹ್ಮಣ ಉಪನಿಷತ್ತುಗಳ ಆಧಾರವನ್ನು ವಿಪುಳವಾಗಿ ಉದ್ಧರಿಸಿದೆ. ಆಸಕ್ತರು ಮೈಸೂರು ಓರಿಯಂಟಲ್‌ರೀಸರ್ಚ್ ಸಂಸ್ಥೆಯ 114 ನೆಯ ಪ್ರಕಟನೆ "ಸೌಂದರ್ಯ ಲಹರಿ" ಯನ್ನು ನೋಡಬೇಕಾಗಿ ವಿನಂತಿ. ಸ್ಥಳಾಭಾವದಿಂದ ಶುದ್ಧ ತಾತ್ವಿಕವೂ ಗಹನವೂ ಆದ ಆ ಭಾಗವನ್ನು ಇಲ್ಲಿ ಕೊಡಲಾಗದಿದ್ದುದಕ್ಕಾಗಿ ಅನುವಾದಕನು ವಿಷಾದಿಸುತ್ತಾನೆ.

ಹಿಮಗಿರಿತನುಜಾತೆ, ನಿನ್ನ ಸೌಂದರ್ಯವ
ತೂಗಿ ನೋಡುವೆನೆಂದು ಭ್ರಮಿಸಿ,
ಕಮಲಭವನು ಮೊದಲಾಗಿ ಕವೀಂದ್ರರು
ಭ್ರಾಂತರಾದರು ಬಹುಶ್ರಮಿಸಿ.
ಅಮರ ಲಲನೆಯರು ನಿನ್ನನೌತ್ಸುಕ್ಯದೆ
ನೋಡಿ ಕಾಮಿಸಿ ಮನಸಿನಲಿ
ಯಮಿಗು ಅಸಾಧ್ಯವೆನಿಪ ಶಿವಸಾಮರ–
ಸ್ಯವ ಪಡೆದರು ಸುಲಭದಲಿ ॥ ೦೨ ॥

ದೇವಿಯ ಸೌಂದರ್ಯವನ್ನು ವರ್ಣಿಸುವ ಪದ್ಯ ಸುಲಭ ಗ್ರಾಹ್ಯ. ವಿಶೇಷಗಳನ್ನು ಮಾತ್ರ ಮುಂದೆ ಕೊಟ್ಟಿದೆ.

ಬ್ರಹ್ಮಾದಿ ಕವೀಂದ್ರರು ನಿನ್ನ ಸೌಂದರ್ಯವನ್ನು ವರ್ಣಿಸಲು ಅಶಕ್ತರಾದ ಕಾರಣ, ಉಪಮೆಗೆ ಆಧಾರರಾದ ರಂಭಾದಿ ಅಪ್ಸರೆಯರು ನಿನ್ನ ಸೌಂದರ್ಯಕ್ಕೆ ಮೋಹಿಸಿ ಪುಂಭಾವವನ್ನು ತಳೆದು ಋಷಿ ಮುನಿಗಳಿಗೂ ಅಲಭ್ಯವಾದ ಶಿವಸಾಮರಸ್ಯವನ್ನು ಶಿವನ ರೂಪಾಂತರವಾದ ನಿನ್ನಿಂದ ಪಡೆದರು.

Sri Vidyabharathi Book Centre, Shringeri

CC-O. In Public Domain. Digitized by eGangotri

ಮುದಿತನದಿಂದೆ ಕಣ್ ಬೆಳಗುಡುಗಿದರೇನು ?
ರಸಿಕತೆ ಜಡವಾದರೇನು ?
ಒದಗಿದೆ ನಿನ್ನ ಕಟಾಕ್ಷಾಲೋಕನ ಕೃಪೆ
ನರನು ಸುಂದರನೆನಿಸುವನು.
ಮುಡಿಬಿಚ್ಚಿ ಮತ್ತೆ ಕಟ್ಟಿದೆಯೆ, ತುಂಬಿದೆಯಿಂದೆ
ಸರಿದ ಸೆರಗ ಸಾವರಿಸದೆ,
ಸಡಲಿದೊಡ್ಯಾಣದುಡೆಗಳ ಹೆಂಗೆಳೆಯರು
ಅರಸಿಬರುವರವನೆಡೆಗೆ ॥ ೧೩ ॥

ನಿನ್ನ ಕೃಪಾಕಟಾಕ್ಷದಿಂದ ವೃದ್ಧನು ತರುಣನೂ ಸುಂದರನೂ ಆಗಿ ಮಹಿಳೆಯರನ್ನು ಆಕರ್ಷಿಸುವುದರಿಂದ ಅವರಲ್ಲಿ ಆಗುವ ಅಶ್ಲೀಲದ ಅಂಚಿನ ವಸ್ತ್ರಭೂಷಣಗಳ ನಿಪರ್ಯಾಸವನ್ನು ಇದರಲ್ಲಿ ಹೃದ್ಯವಾಗಿ ವರ್ಣಿಸಿದೆ.

ಧರೆಗೆ ಅರೈವತ್ತು, ಜಲಕೆ ಐವತ್ತೈರಡು,
ಅಗ್ನಿಗರವತ್ತು ಮತ್ತೈರಡು,
ಮರುತಕ್ಕೈವತ್ತು ಈರೆರಡು, ಆಕಾಶಕೆ
ಎಪ್ಪತ್ತೆರಡು ಕಿರಣಗಳು,
ಅರವತ್ತನಾಲ್ಕು ಮನಸ್ತತ್ವಕಿಂತಾಗೆ
ಮೂರುನೂರ ಅರವತ್ತು
ಕಿರಣ ಪುಂಜದ ಮೇಲೆ ಶೋಭಿಸುತಿದೆ, ದೇವಿ,
ನಿನ್ನ ಪಾದಾಂಬುಜವೆರಡು ॥೧೪॥

ಮೂಲಾಧಾರಾಧಿ ಷಟ್‌ಚಕ್ರಗಳಿಂದ ಕೂಡಿದ ಶ್ರೀಚಕ್ರವನ್ನು ಚಂದ್ರ-ಸೂರ್ಯ-ಅಗ್ನಿಗಳಿಗೆ ತ್ರಿಖಂಡ ಮಾಡಿ ಹಂಚುವುದರಿಂದ ಎರಡೆರಡು ಚಕ್ರಗಳ ಮೂರು ಖಂಡಗಳಾಗುತ್ತದೆ. ಮೂಲಾಧಾರ ಸ್ವಾಧಿಷ್ಠಾನದ ಮೊದಲ ಖಂಡವು ಅಗ್ನಿಸ್ಥಾನ, ರುದ್ರಗ್ರಂಥಿ, ಮಣಿಪೂರ ಅನಾಹತಗಳ ಎರಡನೆ ಖಂಡವು ಸೂರ್ಯಸ್ಥಾನ, ವಿಷ್ಣುಗ್ರಂಥಿ, ವಿಶುದ್ಧಿ ಆಜ್ಞಾಚಕ್ರಗಳ ಮೂರನೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಖಂಡವು ಚಂದ್ರಸ್ಥಾನದಲ್ಲಿ-ಬ್ರಹ್ಮಗ್ರಂಥಿ,(ಅವರೋಹಣ ಕ್ರಮದ ಈ ಹಂಚಿಕೆಯಲ್ಲಿ ರುದ್ರ ಬ್ರಹ್ಮಗ್ರಂಥಿಗಳಿಗೆ ಆಗಿರುವ ಸ್ಥಾನಪಲ್ಲಟವು. ಸಾಧಾರವೆ ವ್ಯತಿಕ್ರಮವೇ ಎಂಬುದನ್ನು ಮುಂದೆ ವಿವೇಚಿಸಲಾಗುವುದು.) ಸೋಮ ಸೂರ್ಯ ಅಗ್ನಿಗಳು ಅನುಕ್ರಮವಾಗಿ ತಮ್ಮ ಖಂಡಗಳ ಮೇಲೆ ಕಿರಣಗಳನ್ನು ಚಲ್ಲುವರು. ಕಿರಣ ರೂಪವಾದ ಈ ಮಯೂಖ-ಜ್ವಾಲೆಗಳ ಸಂಖ್ಯೆ ಈ ಶ್ಲೋಕದಲ್ಲಿ ಹೇಳಿದೆ. ಈ ಪ್ರಕಾರವಾಗಿ ಪೃಥ್ವೀತತ್ವದಿಂದ ಕೂಡಿದ ಮೂಲಾಧಾರದಲ್ಲಿ ೫೬, ಜಲತತ್ವದಿಂದ ಕೂಡಿದ ಮಣಿಪೂರದಲ್ಲಿ ೫೨, ತೇಜಸ್ ತತ್ವದಿಂದ ಕೂಡಿದ ಸ್ವಾಧಿಷ್ಠಾನದಲ್ಲಿ ೬೨ ವಾಯು ತತ್ವದಿಂದ ಕೂಡಿದ ಅನಾಹತದಲ್ಲಿ ೫೪, ಆಧಾರತತ್ವದಿಂದ ಕೂಡಿದ ವಿಶುದ್ಧಿ ಚಕ್ರದಲ್ಲಿ ೭೨ ಮನಸ್ತತ್ವದಿಂದ ಕೂಡಿದ ೬೪ ಕಿರಣಗಳಿವೆ. ಹೀಗೆ ಷಟ್ಚಕ್ರಗಳಲ್ಲಿ ೩೬೦ ಕಿರಣಗಳ ಮೇಲೆ ದೇವಿಯ ಪಾದಗಳು ಪ್ರತಿಷ್ಠಿತವಾಗಿದೆ ಎಂದು ಶ್ಲೋಕದ ಸಾರಾಂಶ.

ಶರದಭ್ರ ಶುಭ್ರ ಚಂದ್ರಿಕೆಯಂತೆ ತನುಕಾಂತಿ,
ಜಟಾಮಕುಟದೆ ತರುಣೇಂದು,
ವರ ಅಭಯದ ಮುದ್ರೆ ಪುಸ್ತಕ ಪಾನಪಾ–
ತ್ರೆಗಳ ಕರಗಳಲಿ ತಳೆದು
ಮೆರವ ಶಾರದೆ, ನಿನ್ನ ಚರಣಯುಗಳಕನು–
ದಿನವೆರಗುತ್ತೆ ಮಾನವನು,
ಅರಿವು ಬೆಳಗೆ ಹಾಲುಜೇನು ದ್ರಾಕ್ಷಾರಸ
ಮಧುರ ವಾಣಿಯ ಪಡೆಯುವನು ॥ ೧೫ ॥

ದೇವಿಯ ನಿಲುವನ್ನು ವರ್ಣಿಸುವ ಈ ಶ್ಲೋಕ ಸುಸ್ಪಷ್ಟ. ವಿಶೇಷಾಂಶಗಳು: ಶರತ್ಕಾಲದ ಆಕಾಶವು ಮೇಘಗಳಿಲ್ಲದೆ ನಿರ್ಮಲವಾಗಿರುವುದರಿಂದ ಬೆಳದಿಂಗಳು ಶುಭ್ರವಾಗಿರುತ್ತದೆ. ತನುಕಾಂತಿ-ಮೈಬಣ್ಣ, ಓ ದೇವಿ, ನಿನ್ನ ಚರಣಗಳನ್ನು ಪ್ರತಿದಿನ ಸ್ಮರಿಸುವ ಸಾಧಕನು. ಅರಿವು ವಿಶೇಷ ಕಾಂತಿಯಿಂದ ಬೆಳಗಿ ಅವನ ವಾಣಿ (ಕವಿತೆ) ಹಾಲುಜೇನು ದ್ರಾಕ್ಷಾರಸದಂತೆ ಮಧುರವಾಗಿರುತ್ತದೆ. ದೇವಿಯ ಅನುಗ್ರಹದಿಂದ ಮಾತ್ರವೆ ಕವಿತ್ವ ದೊರಕುವುದೆಂದು ಕವಿಯ ಅಭಿಪ್ರಾಯ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಕವಿವರರಂತಃ ಚೈತನ್ಯ ಕಮಲ ವನ
ಕುದಯಾರ್ಕ ಕಿರಣದಂತೆಸೆವ
ಸುವಿಮಲತನುರುಚಿ, ದೇವಿ ಆರುಣೆ, ನಿನ್ನ
ಭಕ್ತಿವೆರಸು ಪೂಜೆಗೈವ
ನರರು ವಾಗ್ದೇವಿಯ ಅಭಿನವ ತಾರುಣ್ಯ
ಶೃಂಗಾರ ಲಹರಿಯ ತೆರದೆ
ಮೆರೆವ ವಾಗ್ಝರಿಯಿಂದೆ ಸಹೃದಯರಂತರಂ
ಗವ ರಮಿಸುವರತಿಶಯದೆ ॥ ೧೬ ॥

ಮೇಲಿನ ಅಭಿಪ್ರಾಯವನ್ನೇ ಇಲ್ಲಿಯೂ ಪ್ರತಿಪಾದಿಸಿದೆ. ದೇವಿಯ ಶರೀರದ ಕಾಂತಿಯನ್ನು ನರ ಕವಿಗಳ ಅಂತಃ ಚೈತನ್ಯವೆಂಬ ಕಮಲ ವನವನ್ನು ಅರಳಿಸುವ ಉದಯ ರವಿಯ ಕಿರಣಗಳಿಗೆ ಹೋಲಿಸಿದೆ. ಇಂತ ವೈಬಣ್ಣ ಅರುಣಾದೇವಿಯನ್ನು ಆರಾಧಿಸುವುದರಿಂದ ವಾಗ್ದೇವಿಯ ನರ್ವೋನವತಾರು ಣ್ಯದ ಶೃಂಗಾರ ಲಹರಿಯಂತೆ ಮೃದುವಾದ ವಾಕ್ಪ್ರವಾಹದಿಂದ ಸಹೃದಯರ ಅಂತರಂಗವನ್ನು ರಮಿಸುತ್ತಾನೆ. ಕವಿ ಪ್ರತಿಭೆ ಅರಳಿ ಜನಪ್ರಿಯವಾಗು ವುದರಲ್ಲಿ ಸಹೃದಯರ ಪಾತ್ರ ಎಷ್ಟೆಂಬುದನ್ನು ಸಾಧಕರಿಗೆ ತಿಳಿಸುವುದು ಈ ಶ್ಲೋಕದ ಉದ್ದೇಶ.

ವಾಮಕೇಶ್ವರ ತಂತ್ರದಲ್ಲಿನ ಅರಣೋಪಾಸನೆಯ ವಿವರಗಳನ್ನು ಮುಂದೆ ಉದ್ಧರಿಸಿದೆ.

ಅರುಣಾಖ್ಯಾಂ ಭಗವತೀ ಅರುಣಾಭಾಂ ವಿಚಿಂತಯೇತ್
ಪಾಶಾಂಕುಶಧರಾಂ ದೇವೀಂ ಧನುರ್ಬಾಣ ಧರಾಂ ಶಿವಾಂ
ವರದಾಭಯ ಹಸ್ತಾಂಚ ಪುಸ್ತಕಾಕ್ಷಸ್ರಗನ್ವಿತಾಂ
ಅಷ್ಟಬಾಹುಂ ತ್ರಿನಯನಾಂ ಖೇಲಂತೀಂ ಅಮೃತಾಂಬುಧೌ
ಸಕರೊತ್ಯೇವ ಶೃಂಗಾರ ರಸಾಸ್ವಾದನ ಲಂಪಟಾನ್
ಸಭಾಸದಾನ್ ಸರ್ವಾನ್ ಸಾಧಕೇಂದ್ರಃ ಸಭಾಸ್ಥಲೇ ॥

ಅಷ್ಟಬಾಹುಗಳಲ್ಲಿ ಪಾಶ ಅಂಕುಶ ಧನುರ್ಬಾಣಗಳನ್ನು ಧರಿಸಿ, ಅಭಯ ವರದ ಹಸ್ತಗಳಿಂದಲೂ, ಪುಸ್ತಕ ಅಕ್ಷಮಾಲೆ ಹಿಡಿದು ಅಮೃತಸಾಗರದಲ್ಲಿ

Sri Vidyabharathi Book Centre, Sringeri

 CC-O. In Public Domain. Digitized by eGangotri

ಕ್ರೀಡಿಸುತ್ತಿರುವ ಕೆಂಪು ಮೈಬಣ್ಣದ ಅರುಣಾ ಭಗವತಿಯನ್ನು ಮನಸಿನಲ್ಲಿ ಚಿಂತಿಸಿ ಧ್ಯಾನ ಮಾಡುವ ಸಾಧಕೇಂದ್ರನು, ಶೃಂಗಾರ ರಸಾಸ್ವಾದನಲಂಪಟರಾದ ಸಭಾಸದರನ್ನು ಸಂತುಷ್ಟರಾಗಿ ಮಾಡುತ್ತಾನೆ.

ಇಂದು ಕಾಂತದ ಶಿಲೆಯಂತೆ ಬೆಳಗುವ ವ
ಶಿನ್ಯಾದಿ ವಾಕ್‌ಸವಿತ್ರಿಯರ
ಒಂದುಗೂಡಿಸಿ ನಿನ್ನೊಳ್ ಅನುದಿನ ನೆನೆಯುವ
ನರನಗ್ರನೆನೆ ಕವಿವರರ,
ನುಡಿವೆಣ್ಣವದನ ಕಮಲಮಧುರಾಮೋದ
ದಿಂದೆ ಬುಧರ ಮನವೊಲಿಸಿ
ಒಡಲ ಜುಮ್ಮೆನಿಸುವ ಕಾವ್ಯಗಳನು ರಚಿ
ಸುವನು, ಲೋಕವನೆಲ್ಲ ನಲಿಸಿ ॥ ೧೭ ॥

ಯೋಗಕಾಂತೆಯರೆಂದು ವಿಖ್ಯಾತರಾದ ವಾಗ್‌ಸವಿತ್ರಿ—ವಾಕ್ ಜನನಿಯರಿಂದ ಕೂಡಿದ ದೇವಿಯ ಉಪಾಸನೆಯನ್ನು, ಅದರಿಂದ ದೊರಕುವ ಫಲವನ್ನೂ ಇಲ್ಲಿ ವಿವರಿಸಿದೆ. ವಶಿನಿ, ಕಾಮೇಶ್ವರಿ, ಮೋಹಿನಿ, ವಿಮಲಾ, ಅರುಣಾ, ಜಯಿನಿ, ಸರ್ವೇಶ್ವರಿ ಕೌಲಿ ಇವರೇ ಆಯೋಗಕಾಂತೆಯರು * ಇವರೊಡನಿರುವ ದೇವಿಯನ್ನು ನಿತ್ಯವೂ ನೆನೆಯುವ ಸಾಧಕನು ಕವಿಗಳಲ್ಲಿ ಅಗ್ರಗಣ್ಯನಾಗಿ, ಸರಸ್ವತಿಯ ಮುಖ ಕಮಲದ ಮಧುರ ಗಂಧದಿಂದ ಪಂಡಿತರನ್ನು ಮೆಚ್ಚಿಸಿ, ಶ್ರೋತೃಗಳನ್ನು ಪುಳಕಿತರಾಗಿ ಮಾಡುವ ಕಾವ್ಯಗಳನ್ನು ರಚಿಸಿ ಲೋಕವನ್ನು ನಲಿಸುವನು.

---

* ಈ ಲೇಖಕನ ಲಲಿತಾ ಸಹಸ್ರ ಸಾಂಗತ್ಯದ ಅವತರಣಿಕೆಯಲ್ಲಿ ೨,೩,೪,೫,೬ ಈ ಪದ್ಯಗಳಲ್ಲಿ ಇವರನ್ನು ಸ್ಮರಿಸಿದೆ.

Sri Vidyabharathi Book Centre, Sringeri

 CC-O. In Public Domain. Digitized by eGangotri

ತರುಣ ಸೂರ್ಯನ ಕಿರಣಗಳಂತೆ ನಸುಗೆಂಪ
ನಾಂತ ನಿನ್ನಯ ತನು ಪ್ರಭೆಯ
ಅರುಣವಾಗಿಸಿದೆ ದ್ಯಾವಾಪೃಥುವಿಯ ನೆಂದು
ಭಾವಿಸಿ ನೆನೆಯೆ ಸಾಧಕನು
ಬೆದರಿದ ಜಿಂಕೆವೊಲ್ ಅರಳಿದ ಕಂಗಳ
ಬೆಳಗಿ ಚಲಿಸುವಪ್ಸರೆಯರು
ಮೊದಲೊಳ್ ಊರ್ವಶಿ, ಬಳಿಕನ್ಯರು ಬಳಿಸಾರಿ
ವಶವರ್ತಿನಿಯರೆನಿಸುವರು ॥ ೧೪ ॥

ವಶೀಕರಣದ ವಿಧಾನವೊಂದನ್ನು ಇಲ್ಲಿ ಸೂಚಿಸಿದೆ. ಓ ದೇವಿ, ಬೆಳಗಿನ ಸೂರ್ಯ ಕಿರಣಗಳಂತೆ ನಸು ಕೆಂಪಾದ ನಿನ್ನ ತನು ಪ್ರಭೆ—ಮೈ ಬೆಳಗಿನಿಂದ ದ್ಯಾವಾಪೃಥ್ವಿ–ಭೂಮ್ಯಾಕಾಶಗಳು ಅರುಣವರ್ಣವಾದಂತೆ ಭಾವಿಸಿ ನಿನ್ನನ್ನು ಆರಾಧಿಸುವ ಸಾಧಕನನ್ನು ಬೆದರಿದ ಜಿಂಕೆಯ ಕಣ್ಣುಗಳುಳ್ಳ ಊರ್ವಶಿ ಮೊದಲಾದ ಅಪ್ಸರೆಯರು ಬಳಿಸಾರಿ ವಶವರ್ತಿನಿಯರಾಗಿ ಸೇವಿಸುವರು.

ಮೊಗವ ಬಿಂದುವ ಮಾಡಿ, ಬಳಿಕೆರಡೆದೆ ಭಾವ
ಅದರಡಿಯೊಳು ದೇವಿ, ನಿನ್ನ
ಮೃಗಧರನರ್ಧಾಂಗ ಕಾಮುಕಲಾರೂಪ
ತನುವ ಧ್ಯಾನಿಸುವ ಸಾಧಕನ
ವನಿತೆಯರೊಲಿದು ಸೇವಿಪರೆನೆ ಲಘುವೆನಿ–
ಸಿತ್ತು ನಿಜವನರಿತರಿಗೆ,
ರವಿ ಶಶಿ ಸ್ತನಯುಗವೆನಿಸಿದ ಮೂಲೋಕ
ವಹುದು ಅಧೀನ ಆತನಿಗೆ ॥ ೧೯ ॥

ವಶೀಕರಣದ ಇನ್ನೊಂದು ವಿಧಾನ. ಮುಖವನ್ನು ಬಿಂದು ಸ್ಥಾನದಲ್ಲಿ ನೆನೆದು ಅದರಡಿ ಸ್ತನಗಳನ್ನು, ಅದರ ಕೆಳಗೆ ಹರನ ಅರ್ಧಾಂಗವಾದ ತ್ರಿಕೋಣ ದಲ್ಲಿ ದೇವಿಯ ಕಾಮುಕಲಾ ರೂಪವನ್ನು ಧ್ಯಾನಿಸುವ ಸಾಧಕರಿಗೆ ವನಿತೆ ಯರು ಒಲಿಯುವರೆಂದರೆ ಅತಿ ಲಘುವಾದ ಮಾತು, ಸೂರ್ಯ–ಚಂದ್ರರೆ ಸ್ತನಗಳಾದ ಮೂರು ಲೋಕವೇ ಅವನಿಗೆ ಅಧೀನವಾಗುತ್ತದೆ.

Sri Vidyabharathi Book Centre, Sringeri

ಸೌಂದರ್ಯ ಲಹರಿ CC-0. In Public Domain. Digitized by eGangotri

ಅಂಗಗಳಿಂದೆ ಕಿರಣಗಳ ಮೇಳೈಸಿ
ಅಮೃತರಸವ ನೊಸರಿಸುವ
ತಂಗದಿರನ ಶಿಲಾಪುತ್ತಲಿಯಂದದೆ
ನಿನ್ನ ನೆನೆದು ಧ್ಯಾನಗೈವ
ನರನು ಗರುಡನಂತೆ ಸರ್ಪ ದರ್ಪ ಹರ–
ಚತುರ ಮಾಂತ್ರಿಕನೆನಿಸುವನು,
ಜ್ವರತಾಪತಪ್ತರ ದೃಷ್ಟಿಮಾತ್ರದೆ ಸುಧಾ–
ಧಾರಾವರ್ಷದೆ ನಲಿಸುವನು ॥ ೨೦ ॥

ಗಾರುಡ ಪ್ರಯೋಗವನ್ನು ಇಲ್ಲಿ ಹೇಳಿದೆ.

ಓ ದೇವಿ, ಅಂಗಗಳ, ಕಿರಣಾವಳಿಯ ಮೇಳದಿಂದ ಅಮೃತ ರಸವನ್ನು ಸುರಿಸುವ ಚಂದ್ರಕಾಂತ ಶಿಲಾ ರೂಪದಲ್ಲಿ ನಿನ್ನನ್ನು ಧ್ಯಾನಿಸುವ ಸಾಧಕರು ಗರುಡ ಪಕ್ಷಿಯಂತೆ ಸರ್ಪದರ್ಪಹರ. ಹಾವು ಕಡಿದದ್ದನ್ನು ಗುಣ ಪಡಿಸಬಲ್ಲ ಮಾಂತ್ರಿಕನೂ, ಜ್ವರದಿಂದ ತಪ್ತರಾದವರನ್ನು ದೃಷ್ಟಿ ಮಾತ್ರದಿಂದ ಗುಣ ಪಡಿಸಬಲ್ಲ ವೈದ್ಯನೂ ಆಗುತ್ತಾನೆ ಎಂದು ಪದ್ಯದ ತಾತ್ಪರ್ಯ.

ಸೆಳೆಮಿಂಚಿನಂತೆ ತೆಳ್ಳನೆ ತನು ಬೆಳಗಿರೆ
ಶಶಿಸೂರ್ಯವಹ್ನಿ ತತ್ವಗಳ
ತಳೆದು ತನ್ನಲ್ಲಿ ತಾವರೆಗಳಾರರ ಮೇಲೆ
ಕುಳಿತು ಶೋಭಿಸುವ ನಿನ್ನತುಳ
ಶಕ್ತಿರೂಪದ ಕುಂಡಲಾಕೃತಿ ಕಲೆಯನು
ಕಾಣುವ ಮಹಿತರಿಗಹುದು
ಮುಕ್ತಿಸಾಧನೆಗನುವಹ ಪರಮಾಹ್ಲಾದ
ಲಹರಿಯೋಳ್ ಆತ್ಮಾನುಭವವು ॥ ೨೧ ॥

ಕುಂಡಲೀನಿ ಪ್ರತಿಬೋಧದ ಆತ್ಮಾನುಭವ ಈ ಪದ್ಯದ ಉದ್ದೇಶ. ದೇವಿಯ ಕಲಾಪೂರ್ಣ ಅಭಿವ್ಯಕ್ತಿಗಳಲ್ಲಿ ಪ್ರಮುಖವಾದ ಕುಂಡಲಿನಿಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಲಕ್ಷಣಗಳಿಂದರೆ ಸೆಳೆ ಮಿಂಚಿನಂತೆ ಬೆಳಗುವ ತೆಳುವಾದ ಮೈ, ಚಂದ್ರಸೂರ್ಯ ವಹ್ನಿ ತತ್ವಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಷಟ್‌ಚಕ್ರ ಕಮಲಗಳ ಮೇಲೆ ಅಧಿಕಾರ ನಡೆಸುವ, ಕುಂಡಲಾಕೃತಿಯ ಶಕ್ತಿರೂಪದ ನಿನ್ನನ್ನು ಕಾಣುವ ಮಹಿತ–ಸಾಧಕ ಶ್ರೇಷ್ಟರಿಗೆ, ಮುಕ್ತಿಸಾಧನೆಗೆ ಸಿದ್ಧವಾದ, ಪರಮಾಹ್ಲಾದ ಕರವಾದ ಆತ್ಮ ಸಾಕ್ಷಾತ್ಕಾರವು ಲಭಿಸುತ್ತದೆ.

'ದೇವಿ ಭವಾನಿ, ದಾಸನ ಮೇಲೆ ನಿನ್ನ ಕೃ
ಪಾದೃಷ್ಟಿ ಬೀರು' ಎಂದೆನುತೆ
ಭಾವ ಭಕುತಿಯಿಂದ ಬೇಡಲೆಳಸಿ ಮೊದ
ಲೆರಡು ಮಾತುಗಳಾಡಿ ಒಲಿಸೆ,
ಕರುಣಿಸು ತವರನು ಹರಿ ಬ್ರಹ್ಮೇಂದ್ರಾದ್ಯರ
ಮಕುಟ ಪ್ರಭೆಯ ನೀರಾಜನದೆ
ಬೆಳಗುವ ನಿನ್ನ ಪಾದಾಬ್ಜ ಸಾಯುಜ್ಯವ–
ನಿತ್ತು ರಕ್ಷಿಸುವೆ ಆಕ್ಷಣವೆ, ॥ ೨೨ ॥

ಇಂದ್ರಾದಿ ದೇವತೆಗಳು ಬ್ರಹ್ಮನು ಕೂಡ ದೇವಿಯಿಂದ ನಿಯುಕ್ತರಾದ ವರೆಂಬುದನ್ನು ಈ ಪದ್ಯದಲ್ಲಿ ಪ್ರತಿಪಾದಿಸಿದೆ. ಹರಿಬ್ರಹ್ಮೇಂದ್ರಾದ್ಯರ—ಹರಿ ಬ್ರಹ್ಮ ಇಂದ್ರಾದಿ ತ್ರಿದಶರೆಂದು ಕರೆಯಲ್ಪಡುವ ಆದ್ಯರ ಮಣಿ ಮಕುಟ ಗಳ ಪ್ರಭಾನೀರಾಜನದ ಆರತಿಯಿಂದ ಬೆಳಗುವ ನಿನ್ನ ಪಾದಪದ್ಮಗಳ ಸಾಯು ಜ್ಯವನ್ನು ನಿನ್ನ ಭಕ್ತರಿಗೂ ಕೊಡುವೆ. ಅದಕ್ಕಾಗಿ ಅವರು ಪ್ರಾರ್ಥನೆಯ ನುಡಿಗಳನ್ನು ಪೂರ್ಣವಾಗಿ ಹೇಳುವ ಅಗತ್ಯವೂ ಇಲ್ಲ, ಮನಸ್ಸಿನಲ್ಲಿ ಚಿಂತಿಸಿ ದರೆ ಸಾಕು ಎಂದು ಪದ್ಯದ ಫಲಿತಾರ್ಥ.

ಸೌಂದರ್ಯಲಹರಿ CC-O. In Public Domain. Digitized by eGangotri

ಮೂರು ಕಂಗಳು, ಕೆಂಪು ಮೈಬಣ್ಣ, ಸ್ತನಯುಗ
ಭಾರದೆ ನಡೆಯೊಳ್ ನಮ್ರತೆಯು,
ರಾರಾಜಿಸಿರೆ ಚಂದ್ರಲೇಖೆ ಮುಕುಟದಲಿ,
ನಿನ್ನೀ ರೂಪವ ನೋಡುತಿರಲು,
ಅಪಹರಿಸುತೆ ಶಿವನರ್ಧದೇಹವ ನೀನು
ಅತೃಪ್ತಚಿತ್ತದೆ ಬಳಿಕುಳಿದ
ವಪುವಿನರ್ಧವ ಕದ್ದೆಯೋ ಎಂಬ ಸಂದೇಹ
ಕಾಡುತಿರುವುದೆನ್ನ ಮನವ. ॥ ೨೩ ॥

ಹರನ ಶರೀರದ ಅರ್ಧವನ್ನು ಪಡೆದ ದೇವಿಯು ಅತೃಪ್ತಳಾಗಿ ಉಳಿದರ್ಧವನ್ನು ಕದ್ದಳೋ ಎಂಬ ಕವಿಯ ಸಂದೇಹಕ್ಕೆ ಕಾರಣಗಳೆಂದರೆ ಶಿವನನ್ನೇ ಹೋಲುವ ದೇವಿಯ ರೂಪ, ಮೂರು ಕಣ್ಣುಗಳು ಇತ್ಯಾದಿ.

ಕ್ಷಣಮಾತ್ರ ಚಲಿಸುವ ನಿನ್ನ ಭ್ರೂಲತಿಕೆಯ
ಇಚ್ಛೆ ಅರಿತು ಪರಶಿವನು
ಗುಣಗಳ ಮೂರಾಗಿ ವಿಂಗಡಿಸುತ್ತ ತ್ರಿ-
ಮೂರ್ತಿಗಳಿಗೆ ಹಂಚಿಕೊಡಲು
ಕಮಲಭವನು ಸೃಷ್ಟಿಸಿದನು ಲೋಕಗಳನು,
ಹರಿಯದ ರಕ್ಷಿಸುತಿಹನು,
ಕ್ರಮವನರಿತು ಮಹೇಶ್ವರನದ ದಹಿಸುತೆ
ತಾನೆ ತನ್ನೊಳು ಮರೆಯುಹನು ॥ ೨೪ ॥

ದೇವಿಯ ಕಣ್ಣೆವೆಗಳ ಚಲನೆಯಿಂದ ಇಚ್ಛೆಯೇನೆಂಬುದನ್ನು ತಿಳಿದು ಶಿವನು ಗುಣಗಳನ್ನು ತಮೋರಜ ಸತ್ವಗಳೆಂದು ಮೂರು ಭಾಗ ಮಾಡಿ ಬ್ರಹ್ಮವಿಷ್ಣು ಮಹೇಶ್ವರರಿಗೆ ಹಂಚಿದನು. ಅದರಂತೆ ಅವರು ಸೃಷ್ಟಿ ಸ್ಥಿತಿಲಯಗಳನ್ನು ನಡೆಸುತ್ತಿದ್ದಾರೆ ಎಂದು ಪದ್ಯದ ತಾತ್ಪರ್ಯ.

Sri Vidyabharathi Book Centre, Sringeri

 CC-O. In Public Domain. Digitized by eGangotri

ಭಗವತಿ, ನಿನ್ನ ತ್ರಿಗುಣವೆ ಕಾರಣವಾಗೆ
ತ್ರಿಮೂರ್ತಿಗಳವತರಿಸಿರಲು
ಬಗೆವೊಡೆ ನಿನ್ನಡಿಗರ್ಪಿತವಾದೆಲ್ಲ
ಪೂಜೆ ಅವರಿಗು ಸಲ್ಲುವುದು.
ತಿಳಿದಿದನವರು ನಿನ್ನಯ ಪಾದೋದ್ವಹನ ಪು–
ನೀತ ಪೀಠದ ಸನಿಹದಲಿ
ಬೆಳಗೆ ಮುಕುಟಮಣಿ ಮುಕುಳಿತ ಹಸ್ತದೆ
ಕಾದಿರುವರು ತಲೆಬಾಗಿ ॥ ೨೫ ॥

ದೇವಿಯ ಸತ್ವರಜತಮೋ ಗುಣಗಳು ಮೂರ್ತಿ ಧರಿಸಿ ತ್ರಿಮೂರ್ತಿಗಳು ಅವತರಿಸಿರುವುದರಿಂದ ದೇವಿಗೆ ಸಲ್ಲಿಸಿದ ಪೂಜೆಯು ತ್ರಿಮೂರ್ತಿಗಳಿಗೂ ಸಲ್ಲುವುದು. ಇದನ್ನರಿತ ಅವರು ಓ ದೇವಿ, ನಿನ್ನ ಪಾದೋದ್ವಾಹನ ನಿನ್ನ ಪಾದಗಳನ್ನು ಹೊತ್ತು ಪುನೀತವಾದ ಪೀಠದ ಬಳಿ ಕೈ ಎತ್ತಿ ನಮಿಸಿ ನಿಂತಿರುವರು ಎಂದು ಪದ್ಯದ ಫಲಿತಾರ್ಥ.

ಭೂತಪಂಚಕದ ಪಂಚತ್ವ ವಿರಿಂಚಿಗೆ,
ಹರಿಗೆ ರಕ್ಷತ್ವಾವಸಾನ
ಖ್ಯಾತಿ ಮೃತ್ಯುವಿಗೆ; ತನ್ನಾಳ್ವಿ ಮುಗಿದುದೆಂದು,
ಧನಪತಿಗೊದಗಿತ್ತು ನಿಧನ.
ಸುರಲೋಕದೊಳಗಿಂದ್ರ ಸಂತತಿ ಮುಗಿದಿತ್ತು
ದೇವಿ, ನಿನ್ನಯ ಪತಿ ಶಿವನು
ತೆರೆಗಣ್ಣೆರಡ ಮುಚ್ಚಿ ವಿಶ್ವಸಂಹಾರದ
ಮಾಯಾನರ್ತನಕೆ ನಿಂತಿರಲು ॥ ೨೬ ॥

ಪ್ರಳಯ ಸನ್ನಿಹಿತವಾದಾಗ ಏನಾಗುವುದೆಂಬುದನ್ನು ಸಂಗ್ರಹವಾಗಿ ಇಲ್ಲಿ ತಿಳಿಸಿದೆ. ಶಿವನು ಸೂರ್ಯ ಚಂದ್ರ ರೂಪವಾದ ಕಣ್ಣುಗಳನ್ನು ಮುಚ್ಚಿ ವಿಶ್ವ ಸಂಹಾರದ ತಾಂಡವಕ್ಕೆ ತೊಡಗುವುದು ಪ್ರಳಯದ ಸೂಚನೆ. ಆಗ ತ್ರಿಮೂರ್ತಿಗಳಿಗೂ ಉಳಿಗಾಲವಿಲ್ಲ. ಬ್ರಹ್ಮನ ಸೃಷ್ಟಿಗೆ ಆಧಾರವಾದ ಪಂಚ

Sri Vidyabharathi Book Centre, Sringeri

CC-O. In Public Domain. Digitized by eGangotri

ಭೂತಗಳ ವಿನಾಶ. ಹರಿಗೆ ಜಗದ್ರಕ್ಷಣೆಯ ಕಾರ್ಯದ ಕೊನೆ. ಯಮನಿಗೆ ರಜೆ, ದೇವಲೋಕದಲ್ಲಿ ಇಂದ್ರನ ಸಂತತಿ ಮುಗಿಯಿತು ? ಮುಂದೇನು.

ನುಡಿವುದೆ ಜಪವು, ಮುದ್ರಾರಚನೆಯೆ ಶಿಲ್ಪ–
ಕಲೆಗಳೆ ಉದಯಾಭ್ಯುತ್ತಾನ
ನಡೆವುದೆ ನಿನ್ನ ಪ್ರದಕ್ಷಿಣೆ ಎನಿಸಿರೆ
ಆಹುತಿ ಪ್ರತಿದಿನದಶನ,
ಮಲಗಿ ವಿಶ್ರಾಂತಿಯು ಪಡೆವುದೆ ವಂದನ
ಆತ್ಮಾರ್ಪಣವೆ ನಿತ್ಯದೊಸಗೆ
ತಿಳಿದೆ ನಿಂತೆನ್ನೆಲ್ಲ ಚಲನವಾಗಲಿ ದೇವಿ,
ನಿನ್ನ ಪೂಜಾವಿಧಿ ಎನಗೆ ॥ ೨೭ ॥

ಉಪಾಸನೆಯಲ್ಲಿ ಆತ್ಮಾರ್ಪಣದ ಸ್ವರೂಪವನ್ನು ಈ ಪದ್ಯದಲ್ಲಿ ವಿವರಿಸಿದೆ. ಓ ದೇವಿ, ನನ್ನ ಪ್ರತಿಯೊಂದು ಕಾರ್ಯವು ನಿನ್ನ ಪೂಜಾವಿಧಿಯಾಗಲಿ ಎಂದು ಸಾಧಕನು ದೇವಿಯನ್ನು ಪ್ರಾರ್ಥಿಸುತ್ತಾನೆ. ನುಡಿಗಳ ರಚನೆಯೇ ಶಿಲ್ಪ, ಕಲೆಗಳು ದಯವೇ ಅಭ್ಯುತ್ತಾನ—ಎದ್ದು ನಿಲ್ಲುವುದು, ನಡೆಯುವುದೆ ಪ್ರದಕ್ಷಿಣೆ, ಅಶನ–ಆಹಾರವೇ ಆಹುತಿ. ವಿಶ್ರಾಂತಿಯೇ ವಂದನೆ, ಹೀಗೆ ನಿತ್ಯ ಕರ್ಮಗಳನ್ನು ಪೂಜಾವಿಧಿಗೆ ಹೋಲಿಸಿದೆ.

ಜರೆ ಮೃತ್ಯುಗಳ ಭೀತಿ ಹರಿಸುವಮೃತಪಾನ
ದೊರಕಿದರೇನು ? ವಿಫಲವು.
ಸುರಪತಿ ಬ್ರಹ್ಮ ಕುಬೇರಾದಿ ದಿವಿಜರು
ಅವಧಿ ಮುಗಿಯೆ ಅಳಿವನವರು,
ಕಾಲಕೂಟದ ನಂಜನುಂಡ ನಿನ್ನಯ ಪತಿ
ಕಾಲಕಲ್ಪನೆಯ ಭೇದಿಸುತೆ
ಲೀಲಾಜಾಲದೆ ಮೃತ್ಯುಂಜಯನೆನಿಸಿರಲದು
ದೇವಿ, ನಿನ್ನೊಲೆಯ ಮಹಿಮೆ ॥ ೨೮ ॥

ಅಮೃತಪಾನಕ್ಕಿಂತ ನಿನ್ನ ಕರ್ಣಾಭರಣದ ಮಹಿಮೆ ಹೆಚ್ಚಿನದು. ಅಮೃತವನ್ನೇ ಉಂಡು ಬೆಳೆದ ಬ್ರಹ್ಮಾದಿಗಳು ಆಯುಷ್ಯಾವಧಿ ಮುಗಿದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲೆ ಅಳಯುವರು. ಕಾಲಕೂಟವನ್ನು ಕುಡಿದ ಶಿವನು ಮೃತ್ಯುಂಜಯ. ಓ ದೇವಿ, ಇದು ನಿನ್ನ ಓಲೆಯ ಮಹಿಮೆ.

ಹರಿಬ್ರಹ್ಮೇಂದ್ರರು ನಮಿಸುತಿರಲು ಬಂದ
ಶಿವನನೆದುರ್ಗೊಳಲೆದ್ದು
ಬರುತಿಹ ನಿನ್ನನೆಚ್ಚರಿಸಲು ಸಖಿಯರು,
"ಇಂದ್ರಮಕುಟ ಎದುರಿಹುದು,
ಮಧುಮಥನನ ಶಿರಸ್ತ್ರಾಣವಿದತಿ ಘನ,
ನಡೆ ದೇವಿ, ನೋಡುತೆ ನುಂದು
ವಿಧಿಯ ಕಿರೀಟವಿಲ್ಲದೆ " ಎಂಬ ನುಡಿಗಳು
ವಿಜಯಿಸುತಿರಲಿ ಎಂದೆಂದು ॥ ೨೯ ॥

ಹರಿಬ್ರಹ್ಮಾದಿಗಳು ದೇವಿಗೆ ವಂದನೆ ಸಲ್ಲಿಸುತ್ತಿರುವಾಗ ಶಿವನು ಬರುತ್ತಾನೆ. ಪತಿಯನ್ನು ಎದುರುಗೊಳ್ಳಲು ದೇವಿ ಎದ್ದು ಮುಂದೆ ಹೋದಾಗ ಸಖಿಯರು ಒಡತಿಗೆ ಕೊಡುವ ಎಚ್ಚರಿಕೆಯ ನುಡಿಗಳು ದೇವಿಯ ಮಹಿಮೋತ್ಕರ್ಷವನ್ನು ಪ್ರತಿಬಿಂಬಿಸುತ್ತವೆ.

ಸ್ವತನು ಸಮುದ್ಭೂತ ಅಷ್ಟಸಿದ್ಧಿಗಳ ಆ-
ಭರಣಗಳನು ಧರಿಸಿರುವ
ನಿತ್ಯೈ, ನಿಷೇವ್ಯೈ, ತಾದಾತ್ಮ್ಯಭಾವದೆ ದೇವಿ,
ನಿನ್ನ ಭಜಿಪ ಯೋಗಿವರರು
ತ್ರಿನಯನ ಸಮೃದ್ಧಿಯನು ತೃಣಸಮನೆಂದು
ತ್ಯಜಿಸಿದೊಡಾಶ್ಚರ್ಯವೇನು ?
ಭುವನಗಳನು ದಹಿಸುವ ಮಹಾಕಾಲಾಗ್ನಿ
ಅವರಿಗಹುದು ನೀರಾಜನವು ॥ ೩೦ ॥

ಭಗವತ್ ಪಾದರು ದೇವಿಯಲ್ಲಿ ತಾದಾತ್ಮ್ಯ ಭಾವದ ಉಪಾಸನೆಯ ರಹಸ್ಯವನ್ನು ಪ್ರತೀಕಗಳಿಂದ ವರ್ಣಿಸಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವತನು ನಿನ್ನ ದೇಹದಿಂದ ಹುಟ್ಟಿದ, ಅಣಿಮಾದಿ ಅಷ್ಟಸಿದ್ಧಿಗಳನ್ನು ಆಭರಣಗಳಾಗಿ ಧರಿಸಿರುವ, ಓ ನಿತ್ಯೆ—ಆದಿ ಅಂತರಹಿತೆಯಾದ, ನಿಷೇವ್ಯೆ, ಸೇವೆಗೆ ಅರ್ಹಳಾದ, ಇಲ್ಲಿ ಚರಣಗಳ ಪ್ರತೀಕವಾಗಿ"ತನು" ಎಂದು ಮಯೂಖ ಕಿರಣಗಳನ್ನು ಆಭರಣಗಳೆಂದೂ ಹೇಳಿದೆ. ಅಣಿಮಾದಿ ಅಷ್ಟಸಿದ್ಧಿಗಳೇ ದೇವಿಯ ನವಾವರಣಗಳು, ಇಂತಹ ನಿನ್ನನ್ನು ತಾದಾತ್ಮ್ಯ – ದೇವಿಯೇ ನಾನು ಎಂಬ ಭಾವದಿಂದ ಧ್ಯಾನಿಸುವ ಯೋಗಿಶ್ರೇಷ್ಠರು, ತ್ರಿನಯನ ಸಮೃದ್ಧಿ—ಸೂರ್ಯಚಂದ್ರ ಅಗ್ನಿರೂಪವಾದ ದೇವಿಯ ಮೂರು ಕಣ್ಣುಗಳ ಸೌಭಾಗ್ಯವನ್ನು ಅಥವಾ ಅತೀಂದ್ರಿಯ ಅನುಭಾವಗಳಲ್ಲಿ ತಂದು ಕೊಡುವ ಮೂರನೆಯ ಕಣ್ಣಿನ ಆನಂದವನ್ನು ಹುಲ್ಲು ಕಡ್ಡಿಗೆ ಸಮಾನ ಎಂದು ಭಾವಿಸಿದರೆ ಆಶ್ಚರ್ಯವೇನು? ಅಂತಹ ಮಹಾಯೋಗಿಗಳಿಗೆ ಮಹಾಕಾಲಾಗ್ನಿ ಪ್ರಳಯ ಕಾಲದ ಬೆಂಕಿಯೂ ನೀರಾಜನ–ಆರತಿಯಾಗಿ ಪರಿಣಮಿಸುತ್ತದೆ.

ಅಷ್ಟಸಿದ್ಧಿಗಳು ಯೋಗದಿಂದ ಸಿದ್ಧಿಸುತ್ತವೆ

೧ ಅಣಿಮ–ಸೂಕ್ಷ್ಮರೂಪ ಧರಿಸುವ ಶಕ್ತಿ

೨ ಮಹಿಮ–ದೊಡ್ಡ ರೂಪ ಧರಿಸುವ ಶಕ್ತಿ

೩ ಗರಿಮ–ಭಾರವಾಗುವಿಕೆ

೪ ಲಘಿಮ–ಹಗುರವಾಗುವಿಕೆ

೫ ಪ್ರಾಪ್ತಿ–ಪಡೆಯಲು ಸಾಧ್ಯವಲ್ಲದ್ದನ್ನು ಪಡೆಯುವುದು

೬ ಪ್ರಾಕಾಮ್ಯ–ಸ್ವಲ್ಪವನ್ನು ವಿಪುಳವಾಗಿ ಮಾಡುವುದು

೭ ಈಶಿತ್ವ–ಎಲ್ಲೆಲ್ಲಿಯೂ ಪ್ರಭಾವವನ್ನು ಸಂಪಾದಿಸಿ ಬೀರುವುದು

೮ ವಶಿತ್ವ–ಇಂದ್ರಿಯನಿಗ್ರಹ

Sri Vidyabharathi Book Centre, Sringeri

 CC-O. In Public Domain. Digitized by eGangotri

ಅವರವರಿಚ್ಛೆಯಂದದೆ ಸಿದ್ಧಿಗಳನೀವ
ಅರವತ್ತು ನಾಲ್ಕು ತಂತ್ರಗಳ
ಅವನಿ ಮೆಚ್ಚುವ ರೀತಿ ವಿರಚಿಸಿ ಪಶುಪತಿ
ರಂಜಿಸುತಿರಲು ಲೋಕಗಳ
ನಿನ್ನಿಚ್ಛೆಯಂತೆ ಸಕಲ ಪುರುಷಾರ್ಥವ
ಏಕಕಾಲದೊಳೆ ಸಲ್ಲಿಸುವ
ನಿನ್ನನಾಮದ ಶುಭತಂತ್ರವ ವಿರಚಿಸಿ
ಸುಗಮವಾಗಿಸಿದನು ಪಥವ ॥ ೩೦ ॥

ತಂತ್ರ ಶಾಸ್ತ್ರದ ಇತಿಹಾಸದ ಛಾಯೆಯಿಂದ ಕೂಡಿದ ಈ ಶ್ಲೋಕದ ವ್ಯಾಖ್ಯಾನದಲ್ಲಿ ಲಕ್ಷ್ಮೀಧರನು ತನ್ನ ಕಾಲ ೧೨ನೇ ಶತಮಾನದಲ್ಲಿ ಭಾರತದಲ್ಲಿ ಅದರ ನೆರೆರಾಷ್ಟ್ರಗಳಾದ ಚೀನಾ, ಬರ್ಮಾ, ಕಾಂಬೂಡಿಯ ದೇಶಗಳಲ್ಲಿ ಪ್ರಚಾರದಲ್ಲಿದ್ದ ತಂತ್ರಶಾಸ್ತ್ರ ಜ್ಞಾನವನ್ನು ಸಂಗ್ರಹಿಸಲು ಪ್ರಯತ್ನಿಸಿದ್ದಾನೆ. ಮೂಲದಲ್ಲಿ ಭಗವತ್‌ಪಾದರು ಹೇಳುವ ಅತಿಸಂದಾಯ:–ಅತಿಕ್ರಮಿಸಿ ಎಂಬುದು ಸ್ಪಷ್ಟಾರ್ಥ. ಮುಂದೆ ಅದಕ್ಕೆ "ವಂಚಯಿತ್ವ" ವಂಚಿಸಿ ಎಂದು ಅರ್ಥ ಮಾಡಿದುದು ಸಾಧುವಲ್ಲ. ಅತಿಕ್ರಮವು ವಂಚನೆಯಲ್ಲ. ಈ ಸಂಬಂಧದಲ್ಲಿ ಶಿವನನ್ನು "ಪಶುಪತಿ" ಎಂದು ಕರೆದಿರುವುದು ನಿರ್ಣಾಯಕ. ಅವಿದ್ಯೆ ಅಜ್ಞಾನಗಳಿಂದ ಆವೃತ್ತರಾದವರೆಲ್ಲ ಪಶುಗಳೇ. ಇಂದ್ರಾದಿಗಳಿಗೂ ಇದು ಅನ್ವಯಿಸುತ್ತದೆ. ಜ್ಞಾನವಿತ್ತು ಪಶುವನ್ನು ಮಾನವನ್ನಾಗಿಯೋ ದೇವತೆಯನ್ನಾಗಿಯೋ ಮಾಡುವ ಪರಮೇಶ್ವರನೇ ತಂತ್ರಗಳ ರಚನೆಗೆ ಪ್ರೇರಕನೆಂಬುದನ್ನು ಈಗ ಎಲ್ಲ ಸಂಶೋಧಕರು ಒಪ್ಪಿರುತ್ತಾರೆ. ಚತುರ್ವಿಧ 'ಪುರುಷಾರ್ಥ' ಗಳನ್ನು ಏಕಕಾಲದಲ್ಲಿ ಸಲ್ಲಿಸಬಲ್ಲ ಹೊಸ ತಂತ್ರವೊಂದನ್ನು ದೇವಿಯ ಪ್ರೇರಣೆಯಿಂದ, ದೇವಿಯ ಹೆಸರಿನಲ್ಲಿ ವಿರಚಿತವಾಯಿತೆಂಬುದಕ್ಕೂ ಈ ಮಾತು ಅನ್ವಯಿಸುತ್ತದೆ.

 CC-O. In Public Domain. Digitized by eGangotri

೬೪ ತಂತ್ರಗಳು

ತಂತ್ರ, ವಿಜ್ಞಾನ : ಇದಕ್ಕೆ ಈಗ ನಾವು ಕೊಡುತ್ತಿರುವ Science ಎಂಬ ಅರ್ಥ ನೂರು ವರ್ಷಗಳ ಹಿಂದೆ ಇರಲಿಲ್ಲ. ಆತ್ಮಾನು ಸಂಧಾನದಲ್ಲಿ ಸಾಧಕನು ಪಡೆಯಬಹುದಾದ ಅತೀಂದ್ರಿಯ ಜ್ಞಾನವೇ "ವಿಜ್ಞಾನ ತಂತ್ರ" ಎಂದು ಕರೆಯಲ್ಪಡುತ್ತಿದ್ದವೆಂಬುದನ್ನು ಉಪನಿಷತ್ತುಗಳಿಂದ ತಿಳಿಯಬಹುದು.

ಈಗ ನಾವು ಯಾವುದನ್ನು Science ಎನ್ನುವೆವೋ ಅದನ್ನು ನಮ್ಮ ಪೂರ್ವಜರು "ತಂತ್ರಜ್ಞಾನ" ಎನ್ನುತ್ತಿದ್ದರು. ವೈದ್ಯ ಜ್ಯೋತಿಷ್ಯ ಗಳನ್ನುಳಿದು ಇನ್ನೆಲ್ಲ "ವಿಜ್ಞಾನ"ಗಳೂ ಅವರ ದೃಷ್ಟಿಯಲ್ಲಿ "ತಂತ್ರ" ಆಗಿತ್ತು. ಲಕ್ಷ್ಮೀಧರನು ಕೊಡುವ "ತಂತ್ರ"ಗಳ ಪಟ್ಟಿಯನ್ನು ಈ ದೃಷ್ಟಿಯಿಂದ ವಿವೇಚಿಸಲು ಇಲ್ಲಿ ಪ್ರಯತ್ನಿಸಿದೆ.

1,2,3 ಮಹಾ ಮಾಯಾ ಶಂಬರ, ಯೋಗಿನೀಜಾಲ ಶಂಬರ, ತತ್ವ ಶಂಬರ, ಇವು ಶಂಬರ ಸಂಪ್ರದಾಯದ ಮೂರು ಮುಖ್ಯ ವಿಭಾಗಗಳು, ಮಾಯಾ ಪ್ರಪಂಚದ ನಿರ್ಮಾಣ- ಭೌತಿಕ ವಸ್ತುಗಳ ರಚನೆಯಲ್ಲಿ ಮಾರ್ಪಾಟು, ಅಗ್ನಿಜಲ ತತ್ವಗಳ ಸಂಶೋಧನೆ ಇವು ಶಂಬರದ ಉದ್ದೇಶ.

4-11 ಸಿದ್ಧ, ವಟುಕ, ಕಂಕಾಲ, ಕಾಲ, ಕಾಲಾಗ್ನಿ, ಯೋಗಿನಿ, ಮಹಾ, ಶಕ್ತಿ ಎಂದು ಹೆಸರಾದ ಭೈರವಾಷ್ಟಕ. ನಿಧಿ ಖನಿಜಗಳ ಶೋಧನೆ.

12-19 ಬಹುರೂಪಾಷ್ಟಕ. ಶಕ್ತಿ ಸಮುದ್ಭೂತವಾದ ಇವು ಕೌಮಾರಿ, ಬ್ರಾಹ್ಮಿ, ಮಹೇಶ್ವರಿ. ವೈಷ್ಣವೀ, ವಾರಾಹಿ, ಮಾಹೇಂದ್ರಿ, ಚಾಮುಂಡಾ ಶಿವದೂತೀ. ಸ್ತ್ರೀ ಪ್ರಧಾನವಾದ ಈ ತಂತ್ರಗಳಲ್ಲಿ ಸಂಗೀತ ನಾಟ್ಯ, ನಾಟಕ, ಚಿತ್ರಕಲೆ, ಪ್ರಸಾಧನ ವಸ್ತುಗಳು, ಆಭರಣಗಳು, ಅವುಗಳ ರಚನೆ ಇವು ಸೇರುತ್ತದೆ.

20–27 ಯಮಳಾಷ್ಟಕ ಯಮಳ–ಮಿಥುನ–ಜೋಡಿ, ಲೋಕ ವ್ಯವಹಾರದಲ್ಲಿ ಸ್ತ್ರೀ ಪುರುಷ ಮಿಥುನದ ಸ್ಥಾನಮಾನ ಆಹಾರ ವಿಹಾರಗಳನ್ನು ಕುರಿತದ್ದು.

Sri Vidyabharathi Book Centre, Sringeri

CC-O. In Public Domain. Digitized by eGangotri

28-43 ಚಂದ್ರಜ್ಞಾನ ವಿದ್ಯೆ, ಚಂದ್ರನ ಹದಿನಾರು ಕಲೆಗಳನ್ನು ನಿತ್ಯಾ ರೂಪದಿಂದ ಉಪಾಸನೆ. ಸುಭಗೋದಯದಲ್ಲಿ ಇವುಗಳ ನಾಮರೂಪ ಉಪಾಸನಾಕ್ರಮವನ್ನು ವಿಸ್ತಾರವಾಗಿ ಹೇಳಿದೆ.

ದರ್ಶಾದ್ಯಾ ಪೂರ್ಣಿಯಾಂತಶ್ಚ ಕಲಾ ಪಂಚದಶೈವತು
ಷೋಡಶೀತು ಕಲಾಜ್ಞೇಯಾ ಸಚ್ಚಿದಾನಂದ ರೂಪಿಣೀ

ಶುಕ್ಲಪಕ್ಷದ ಪಾಡ್ಯಮಿಯಿಂದ ಪೂರ್ಣಿಮೆಯೂ ಸೇರಿ ೧೫ ಕಲೆಗಳು, ಹದಿನಾರನೆಯ ಕಲೆಯೇ ಸಚ್ಚಿದಾನಂದ ರೂಪಳಾದ ದೇವಿ. ಹದಿನೈದು ನಿತ್ಯಾ ಕಲೆಗಳ ಹೆಸರುಗಳಿವು. ೧. ಮಹಾ ತ್ರಿಪುರ ಸುಂದರಿ ೨. ಕಾಮೇಶ್ವರಿ ೩. ಭಗಮಾಲಿನಿ, ೪. ನಿತ್ಯಕ್ಲಿನ್ನಾ ೫. ಭೇರುಂಡಾ ೬. ವಹ್ನಿ ವಾಸಿನೀ, ೭. ಮಹಾ ವಿದ್ಯಾ, ೮. ಈಶ್ವರೀ ೯. ದೂತಿ, ೧೦. ತ್ವರಿತಾ, ೧೧. ಕುಲ ಸುಂದರಿ, ೧೨. ನೀಲಪತಾಕಾ ವಿಜಯಾ, ೧೪. ಸರ್ವಮಂಗಲಾ, ೧೫. ಜ್ವಾಲಾಮಾಲಿನಿ, ೧೬. ಚಿತ್ರಾ.

ಚಂದ್ರ ಜ್ಞಾನವಿದ್ಯೆಯ ಬಗೆಗೆ ಉಪ ಲಬ್ಧಗ್ರಂಥಗಳು "ಚತುಷಷ್ಟಿ ತಂತ್ರಾತೀತ" ಎಂಬ ವ್ಯಾಖ್ಯಾನ ಕಾರನ ಹೇಳಿಕೆ ಸಂಖ್ಯೆಯನ್ನು ಕುರಿತದ್ದೋ ವಸ್ತುವನ್ನು ಕುರಿತದ್ದೋ ಎಂಬುದು ಅಸ್ಪಷ್ಟ. ಈ ವಿಚಾರದಲ್ಲಿ ಪ್ರಸಿದ್ಧ ವಾಮಕೇಶ್ವರ, ಶಕ್ತಿ ಸಂಗಮ, ಜ್ಞಾನಾರ್ಣವ ಮುಂತಾದ ತಂತ್ರಗಳು ಸಮಯಾಚಾರಕ್ಕೆ ಅತೀತವಾದದ್ದೆಂದು ವ್ಯಾಖ್ಯಾನಕಾರನ ಅಭಿಪ್ರಾಯವಾದರೆ ಲಲಿತಾ ಸಹಸ್ರ ವ್ಯಾಖ್ಯಾನ, ನೇತುಬಂಧ, ವರಿವಶ್ಯರಹಸ್ಯ ಮುಂತಾದ ಪ್ರಸಿದ್ಧ ತಂತ್ರ ಗ್ರಂಥಗಳ ಕರ್ತೃವಾದ ಭಾಸ್ಕರರಾಯನು (17ನೆಯ ಶತಮಾನ) ಇದನ್ನು ಒಪ್ಪುವುದಿಲ್ಲ. ಸೌಭಾಗ್ಯ ಭಾಸ್ಕರದಲ್ಲಿ ಲಕ್ಷ್ಮೀಧರನನ್ನು ಕಟು ವಾಗಿ ಟೀಕಿಸಿದುದೂ ಉಂಟು.

ಲಕ್ಷ್ಮೀಧರ ಮತ್ತು ಭಾಸ್ಕರರಾಯರ ನಡುವಣ ೫ ಶತಮಾನಗಳಲ್ಲಿ ಶ್ರೀವಿದ್ಯೆಯು ಭಾರತ ಮತ್ತು ನೆರೆಯ ರಾಷ್ಟ್ರಗಳಲ್ಲಿ ಜನಪ್ರಿಯತೆ ಗಳಿಸಿ ಸೌಂದರ್ಯ ಲಹರಿ ಮತ್ತು ಲಲಿತಾ ಸಹಸ್ರ ನಾಮಗಳು. ವೈದಿಕ ವೈದಿಕೇ ತರ ಪಂಡಿತರಲ್ಲಿ ಸಮಯಾಚಾರದ ಪ್ರಮುಖ ಪ್ರತಿನಿಧಿ ಗ್ರಂಥಗಳೆಂದು ಅಂಗೀಕರಿಸಲ್ಪಟ್ಟಿತು. ಹದಿನೆಂಟನೆಯ ಶತಮಾನದ ಅನಂತರ ಥಿಯಾಸೊಫಿ ಕಲ್ ಸೊಸೈಟಿ ಮತ್ತು ಸರ್ ಜಾನ್ ಉಡ್ರಾಫರು ಪ್ರಕಟಿಸಿದ ಶೈವಶಾಕ್ತಶಪ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಸ್ತ್ರ ಗ್ರಂಥಗಳ ಪರಿಣಾಮವಾಗಿ ಶ್ರೀ ವಿದ್ಯೆಯನ್ನು ಪ್ರತಿಪಾದಿಸುವ ಗ್ರಂಥ ರಾಶಿ ಪಾಶ್ಚಾತ್ಯ ರಾಷ್ಟ್ರಗಳಲ್ಲೆಯೂ ಪ್ರಚಾರಕ್ಕೆ ಬಂದಿತು.

ಇದರ ಪರಿಣಾಮವಾಗಿ ವಿಖ್ಯಾತ ಆಂಗ್ಲ ಕವಿ W. B. Yeats, ಅವರು 1933 ರಲ್ಲಿ ಪ್ರಕಟಿಸಿದ "The Vision" ಎಂಬ ತತ್ವ ಶಾಸ್ತ್ರ ಗ್ರಂಥದಲ್ಲಿ ಪ್ರತಿಪಾದಿಸಿರುವ "ಚಂದ್ರಕಲಾ ವಿಜ್ಞಾನ" ವಾಮಕೇಶ್ವರ ತಂತ್ರದ ಚಂದ್ರಜ್ಞಾನ ವಿದ್ಯೆಯನ್ನು ಬಹುಮಟ್ಟಿಗೆ ಹೋಲುತ್ತದೆ. ಈ ವಿಖ್ಯಾತ ಕವಿಯ ತಾತ್ವಿಕ ನಿಲುವಿನ ಬಗೆಗೆ "W. B. Yeats and Occultism" ಎಂಬ ಗ್ರಂಥವನ್ನು ರಚಿಸಿದ ಡಾ|| ಹರಬನ್‌ರಾಯ್ ಬಚನ್ ಅವರು ತಮ್ಮ ಮಹಾ ಪ್ರಬಂಧದಲ್ಲಿ "ಶೈವಶಾಕ್ತತಂತ್ರ" ಗಳನ್ನು ಎಲ್ಲಿಯೂ ಉಲ್ಲೇಖಿಸದಿದ್ದರೂ ಈಟ್ಸ್‌ರಿಗೆ sir John Woodroff ಅವರ ತಂತ್ರ ಶಾಸ್ತ್ರ ಗ್ರಂಥಗಳ ಪರಿಚಯವಿತ್ತೆಂಬುದನ್ನು ಅವರ ವೈಯಕ್ತಿಕ ಗ್ರಂಥಾಗಾರದಲ್ಲಿ ಉಪಲಬ್ಧವಾದ ಗ್ರಂಥಗಳ ಪಟ್ಟಿಯಿಂದ ತಿಳಿಯಬಹುದು. ಡಾ|| ಬಚನ್‌ರವರ ಗ್ರಂಥಕ್ಕೆ ಮುನ್ನುಡಿ ಬರೆದ T. B. Henn ಎಂಬ ತತ್ವಶಾಸ್ತ್ರ ಪಂಡಿತರು ಹೇಳಿದ್ದಾರೆ.

The poets (Yeats) debt to Sinnett's "Esoteric Bhudism", to Mohini Chatterji, to Madame Blavatsky....and above all to Purohit Swami is here examined for the first time. (Pri. VIII)*

ಶ್ರೀವಿದ್ಯೆಯನ್ನು ಪ್ರತಿಪಾದಿಸುವ ಸೌಂದರ್ಯ ಲಹರಿ ಮತ್ತು ಲಲಿತಾ ಸಹಸ್ರನಾಮದ ಪ್ರಾಮುಖ್ಯತೆಗೆ ಆಗತ್ಯವೆನಿಸಿದ ಈ ಟಿಪ್ಪಣಿಯನ್ನು ಮುಗಿಸಿ ಪ್ರಸ್ತುತ ವಿಷಯಕ್ಕೆ ಬರುವ.

---

* ಮಹಾರಾಷ್ಟ್ರ ಪ್ರಾಂತದ ಸನ್ಯಾಸಿ ಪುರೋಹಿತ ಸ್ವಾಮಿಯ ತನ್ನ ಗುರು ಹಂಸಾನಂದರ ಸೂಚನೆಯಂತೆ "ಹಿಂದೂ ಧರ್ಮ ರಹಸ್ಯ"ವನ್ನು ಪಾಶ್ಚಾತ್ಯ ದೇಶಗಳಲ್ಲಿ ಪ್ರಚಾರಕ್ಕಾಗಿ 1931ರಲ್ಲಿ ಇಂಗ್ಲೆಂಡಿಗೆ ಹೋದವರು, 5-6 ವರ್ಷಗಳ ಕಾಲ ಕವಿ ಈಟ್ಸ್ ಅವರ ಸಂಗಡ ವಾಸ ಮಾಡುತ್ತಿದ್ದು ಅವರ ಅಧ್ಯಯನದಲ್ಲಿ ಉಪದೇಶಿತನಾಗಿದ್ದ ವ್ಯಕ್ತಿ.

Sri Vidyabharathi Book Centre, Sringeri

 CC-O. In Public Domain. Digitized by eGangotri

44. ಮಾಲಿನಿ-ಸಮುದ್ರಯಾನದ ಸಾಧನಗಳ ರಚನೆ ಮತ್ತು ಪ್ರಯೋಗಗಳನ್ನು ಕುರಿತದ್ದು.

45. ಮಹಾ ಸಂಮೋಹನ-ಜಾಗೃತರನ್ನು, ನಿದ್ರಾವಸ್ಥೆಗೆ ತರುವ ವಿದ್ಯೆ, ಮೆಸ್ಮೆರಿಜಂ. ಕಳೆದ ಶತಮಾನದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಪ್ರಚಾರಕ್ಕೆ ಬಂದ ಈ ಸಂಮೋಹನ ವಿದ್ಯೆ ಈಗ ವೈದ್ಯಶಾಸ್ತ್ರದ ಅನುಮೋದನೆ ಪಡೆದು ಎಲ್ಲ ಡಾಕ್ಟರುಗಳು, ಮಾನಸಿಕ ರೋಗಗಳ ಚಿಕಿತ್ಸೆಯಲ್ಲಿ ಧಾರಾಳವಾಗಿ ಬಳಸುತ್ತಿದ್ದಾರೆ.

45. ವಾತುಲ, 46 ವಾತುಲೋತ್ತರ

47. ಕಾಮಿಕ, ಆಗಮಗಳೆಂದು ಕರೆಯಲ್ಪಡುವ ಈ ಮೂರು ತಂತ್ರಗಳೂ ಆಕರ್ಷಣ, ವಶೀಕರಣ, ಸಂಮೋಹನಗಳನ್ನು ಪ್ರತಿಪಾದಿಸುತ್ತವೆ.

48. ಪೈದ್ಭೇದ ತಂತ್ರ—ಯೋಗಶಾಸ್ತ್ರದ ಕಾಪಾಲಿಕ ಅವತರಣ. ಕುಂಡಲಿನೀಯೋಗದಲ್ಲಿ ಸಹಸ್ರಾರದ ಸ್ಥಾನವನ್ನು ಇದರಲ್ಲಿ ಅನಾಹತಕ್ಕೆ ಕೊಡಲಾಗಿದೆ.

49. ತಂತ್ರಭೇದ 50 ಗುಹ್ಯಕತಂತ್ರ.

ನೇಪಾಲ ಮತ್ತು ಟಿಬೆಟ್‌ನಲ್ಲಿ ಪ್ರಚಾರದಲ್ಲಿರುವ ಬೌದ್ಧಧರ್ಮಕ್ಕೆ ಸಂಬಂಧಿಸಿದ ವಜ್ರಯಾನ, ಗುಹ್ಯ ಸಮಾಜ ತಂತ್ರಗಳು ಸೇರಿವೆ. ಇವು ಅವೈದಿಕವೆಂದು ಈಗಲೂ ಪರಿಗಣಿಸಲ್ಪಟ್ಟಿವೆ.

51. ಕಲಾವಾದ-ಸಾಹಿತ್ಯ, ಸಂಗೀತ, ನಾಟ್ಯ, ನಾಟಕ, ಶಿಲ್ಪಕಲೆಗಳನ್ನು ಚಂದ್ರನ 16 ಕಲೆಗಳಿಗೆ ಹಂಚಿ ಉಪಾಸಿಸುವುದು. ಮಧ್ಯ ಯುಗದಲ್ಲಿ ಇವುಗಳಿಗಾಗಿಯೇ ಪ್ರತ್ಯೇಕಶಾಸ್ತ್ರ ಗ್ರಂಥಗಳು ಹುಟ್ಟಿಕೊಂಡು ಈಗಲೂ ಪ್ರಚಾರದಲ್ಲಿದೆ.

52. ಕಲಾಸಾರ–ಕಲಾವಾದದ ಸಮಷ್ಟಿರೂಪ.

53. ಕುಬ್ಜಿಕಾಮತಂ-ಘಟಿಕಾ ಸಿದ್ಧಿಗಾಗಿ, ಅದೃಶ್ಯಕರಣ, ಸೂಕ್ಷ್ಮ ದೇಹ (ಲಿಂಗ ಶರೀರ) ದಲ್ಲಿ ಸಂಚಾರ ಇವುಗಳಿಗಾಗಿ ದೇವಿಯನ್ನು ಕುಬ್ಜಾರೂಪದಲ್ಲಿ ಆರಾಧಿಸುವುದು. ಇದನ್ನು ವೈದ್ಯಶಾಸ್ತ್ರದ ರಸವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಗೀಕರಿಸುತ್ತದೆ. ಮಧ್ಯ ಯುಗದಲ್ಲಿ ಈ ತಂತ್ರ ಪಾಶ್ಚಾತ್ಯ ಮತ್ತು ಪೌರ್ವಾತ್ಯ ದೇಶಗಳಲ್ಲಿಯೂ ಹೆಚ್ಚಿಗೆ ಪ್ರಚಾರದಲ್ಲಿತ್ತು.

54. ರಸವಾದ-ವೈದ್ಯಶಾಸ್ತ್ರದ ಒಂದು ಶಾಖೆ. ಪಾದರಸವನ್ನು ಚಿನ್ನವಾಗಿ ಪರಿವರ್ತಿಸುವ ವಿದ್ಯೆ. ಇದೀಗ ಆಧುನಿಕ ವಿಜ್ಞಾನ ಕ್ಷೇತ್ರದಲ್ಲಿಯೂ ಪ್ರಚಾರದಲ್ಲಿದೆ.

55. ನಿರ್ಣಾತಂತ್ರ–ವಶೀಕರಣದ ಇನ್ನೊಂದು ವಿಧಾನ. ಸಂಯೋಗ ಯಕ್ಷಿಣಿ ಎಂದು ನಾಮಾಂತರ.

56. ಖ್ರೋತಲ, ಘುಟಿಕಾಸಾಧನೆ ಅಂಜನ. ಹಾಕಿ ಭವಿಷ್ಯ ಹೇಳುವುದು, ಪಾದುಕಾ ಸಾಧನೆ-ಆಂತರಿಕ್ಷ ಸಂಚಾರ. ವೇದ ಕಾಲದ ಭಾರತದಲ್ಲಿ ಈ ವಿದ್ಯೆ ಪ್ರಚಾರದಲ್ಲಿತೆಂಬುದಕ್ಕೆ ವೇದ ಸಾಹಿತ್ಯ, ಮುಖ್ಯವಾಗಿ ಬ್ರಾಹ್ಮಣ ಆರಣ್ಯಕಗಳಲ್ಲಿ ಉಲ್ಲೇಖಗಳಿವೆ. ಗಗನ ಸಂಚಾರ, ವಿಮಾನ ರಚನೆಯಲ್ಲಿ ತ್ರಿಪುರ ದಾನವರು ದೇವತೆಗಳ ತಂತ್ರಜ್ಞಾನವನ್ನು ಮೀರಿಸಿದ್ದರೆಂದು ಪುರಾಣಗಳು ಪ್ರತಿಪಾದಿಸಿವೆ. ಆಮೇಲಿನ ಶತಮಾನಗಳಲ್ಲಿ ಈ ತಂತ್ರಜ್ಞಾನ ಹೇಗೆ ಅದೃಶ್ಯವಾಯಿತು ಎಂಬುದು ಭೂಗೋಳದ ಪ್ರಾಚೀನ ಇತಿಹಾಸದ ಒಂದು ಯಕ್ಷ ಪ್ರಶ್ನೆ.

57. ಖ್ರೋತಲೋತ್ತರ–ಚತುಷಷ್ಟಿ ಸಹಸ್ರ-ಅರವತ್ತುನಾಲ್ಕುಸಾವಿರ ಯಕ್ಷಿಣಿಯರ ಸಾಧನೆ.

58. ಪಂಚಾಮೃತ - ಪಂಚಭೂತಗಳ ಶುದ್ಧೀಕರಣ. ಕಾಪಾಲಿಕ ಮತದಂತೆ ಇದರಲ್ಲಿ ವಾಜೀಕರಣ ಮಾರಣಗಳೂ ಸೇರುತ್ತವೆ.

59-64 ಸರ್ವಜ್ಞಾನಾದಿ ತಂತ್ರ ಪಂಚಕ. ವಾಣಿಜ್ಯ, ಉದ್ಯಮ, ಪ್ರವಾಸ, ವೃತ್ತಿ, ಧನ ವಿನಿಯಮ (Exchange) ಇವು ಸೇರಿವೆ.

ಮೇಲ್ಕಂಡ ಪಟ್ಟಿಯಿಂದ ತಿಳಿಯುವುದೇನೆಂದರೆ ಆಧುನಿಕವೆಂದು ಭಾವಿಸಿರುವ ಕೆಲವು ವೃತ್ತಿಗಳು ಪ್ರಾಚೀನ ಕಾಲದಲ್ಲಿಯೂ ಪ್ರಚಾರದಲ್ಲಿದ್ದು, ಧನ ವಿನಿಮಯವು 'ಹುಂಡಿ' ರೂಪದಲ್ಲಿ ಈಗಲೂ ಇದೆ.

ದೇವಿಯ ಅವಯವಗಳ ಪ್ರತೀಕವಾದ ಪಂಚದಶಾಕ್ಷರೀ ಮಂತ್ರವನ್ನು ಶಂಕರ ಭಗವತ್ಪಾದರು ನಾವು ಸಂಕೇತದಿಂದ ಮುಂದಿನ ಪದ್ಯದಲ್ಲಿ ವಿವರಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ದಾರೆ. ತಾಂತ್ರಿಕ ಪರಿ ಭಾಷೆಯಲ್ಲಿರುವ ವಿವರಣೆಯನ್ನು ಸಾಧಕರ ಅನುಕೂಲಕ್ಕಾಗಿ ನಾವು ವರ್ಣಗಳ ಮುಂತ್ರರೂಪದಲ್ಲಿ ಮುಂದೆ ಕೊಟ್ಟಿದೆ.

ಶಿವಶಕ್ತಿ ಕಾಮ ಪೃಥ್ವಿ ಮೊದಲು, ರವಿ ಶಶಿ
ಸ್ಮರ ಹಂಸ ಇಂದ್ರರಾಬಳಿಕ
ಅವತರಿಸಿರೆ ಪರಾ ಮಾರ ಹರಿಯು, ಮೂರು
ಖಂಡಕೊಂದೊಂದು ಹೃಲ್ಲೇಖ,
ಮಂತ್ರರೂಪದ ನಿನ್ನೀ ತನುವ ಬಣ್ಣಿಸಲೆಂತು
ಪ್ರತಿಮಾ ಸಂಕೇತ ಸಂವಲಿತ,
ತಾಂತ್ರಿಕ ಪರಿಭಾಷೆಯಿಂದೆ ನುಡಿದೆನಿದು
ಪಂಚದಶೀ ಕಲ್ಪಪಠಿತ ॥ ೩೨ ॥

ಶಿವ-ಕ-ಶಕ್ತಿ-ಏ, ಕಾಮ-ಈ, ಪೃಥ್ವಿ-ಲ, ಈ ನಾಲ್ಕು ವರ್ಣಗಳು ಆಗ್ನೇಯ ಖಂಡ, ರವಿ-ಹ, ಶಶಿ-ಸ, ಸ್ಮರ-ಕ, ಹಂಸ-ಹ, ಶಕ್ರ-ಲ, ಈ ಐದು ವರ್ಣಗಳು ಸೌರಖಂಡ, ಪರಾ-ಸ, ಮಾರ-ಕ, ಹರಿ-ಲ, ಈ ಮೂರು ವರ್ಣಗಳು ಸೌಮ್ಯಖಂಡ. ಪ್ರತಿ ಖಂಡದ ಕೊನೆಯಲ್ಲಿ ಹ್ರೀಂ ಕಾರವನ್ನು ಸೇರಿಸುವುದರಿಂದ ಉತ್ಪನ್ನವಾಗುವ ಪಂಚದಶಾಕ್ಷರೀ ಮಂತ್ರದ ಅಧಿದೇವತೆ ತ್ರಿಪುರ ಸುಂದರಿ, ದೇವಿಯ ಪ್ರತಿಬಿಂಬ ರೂಪ.

ದೇವಿಯ ಅವಯವಗಳ ಸಂಕೇತವಾದ ಈ ಪಂಚದಶೀ ಮಂತ್ರವನ್ನು ದೇವಿಯ ನಿಜರೂಪದ ಪ್ರತೀಕವಾದ ಷೋಡಶೀ ಮುಂತ್ರಕ್ಕೆ ಪರಿವರ್ತಿಸಿ, ಸೌಮ್ಯ ಖಂಡವನ್ನು ಚಂದ್ರಕಲಾ ಖಂಡವಾಗಿ ಮಾರ್ಪಡಿಸುವ ಹದಿನಾರನೆಯ ಏಕವರ್ಣ ಮಂತ್ರವನ್ನು ಗುರುಮುಖದಿಂದ ತಿಳಿಯಬೇಕೆಂಬ ನಿಯಮವಿದೆ, ಗುಣಶಾಲಿಯೂ ಶ್ರದ್ಧಾವಂತನೂ ಆದ ಸತ್ ಶಿಷ್ಯನಿಗೆ ಮಾತ್ರ ಬೋಧಿಸಬೇಕೆಂದು ಶಾಸ್ತ್ರ ಒತ್ತಿಹೇಳುತ್ತದೆ. ಈ ನಿಯಮಗಳನ್ನು ಪಾಲಿಸುವುದು ಕಠಿಣವೆಂದೂ, ಶ್ರೀವಿದ್ಯಾಪ್ರಸಾರಕ್ಕೆ ತಡೆಯಾಗುವುದೆಂದೂ ತಿಳಿದು ದೇಶಿಕರು,

"ಯೇತುಮದೀಯಂ ಗ್ರಂಥಂ ದೃಷ್ಟ್ವಾ ತಾಂ ಕಲಾಂ ಜಾನಂತಿ ತೇತು ಮತ್ ಶಿಷ್ಯ ಏವ ಇತಿ ಅಸ್ಮಾಕಂ ಅನುಗ್ರಹ" ಯಾರಾದರು ನನ್ನ ಗ್ರಂಥವನ್ನು

Sri Vidyabharathi Book Centre, Sringeri

ಸೌದರ್ಯ ಲಹರಿ CC-O. In Public Domain. Digitized by eGangotri

ಓದಿ ಆ ಕಲೆಯನ್ನು ತಿಳಿದುಕೊಳ್ಳುವರೋ ಅವರು ನನ್ನ ಶಿಷ್ಯರೇ ಆದದ್ದರಿಂದ ಅವರಲ್ಲಿ ನನ್ನ ಅನುಗ್ರಹ ಎಂದು ಹೇಳಿ ಆ ಏಕವರ್ಣ ಮಂತ್ರವನ್ನು" ಶಕಾರ ರೇಫ ಈಕಾರ ಕೊನೆಯಲ್ಲಿ ಬಿಂದು ಇದೇ ಚಂದ್ರಕಲಾ ವರ್ಣ ಎಂದು ಹೇಳಿದ್ದಾರೆ.

ಗುರುಸೇವೆ, ಪಾದವಂದನೆ, ಹಸ್ತಮಸ್ತಕ ಸಂಯೋಗ (ಮಂತ್ರದಾನ) ಇವೊಂದೂ ಇಲ್ಲದೆ ಅವರು ನಿಮ್ಮ ಶಿಷ್ಯರಾಗುವುದು ಹೇಗೆ? ಎಂಬ ಪೂರ್ವ ಪಕ್ಷದ ಆಕ್ಷೇಪಕ್ಕೆ ಲಕ್ಷ್ಮೀಧರದೇಶಿಕರ ಉತ್ತರವಿದು,

ನನ್ನ ಗ್ರಂಥವನ್ನು ಓದುವುದರಿಂದ ಮಂತ್ರ ರಹಸ್ಯವನ್ನು ತಿಳಿಯಬಲ್ಲ ಜಿಜ್ಞಾಸುಗಳಿಗೆ ನನ್ನ ಶಿಷ್ಯತ್ವ ಅಪರೋಕ್ಷವಾಗಿ ದೊರಕುತ್ತದೆ. ತಿಳಿಯಲಾರದವರಿಗೆ ಮಂತ್ರದಾನದ ಪ್ರಶ್ನೆಯೇ ಇಲ್ಲ. ವರ್ತಮಾನ ಕಾಲದ ಜಿಜ್ಞಾಸುಗಳಂತೆ ಭವಿಷ್ಯದಲ್ಲಿಯೂ ಇಂತಹ ಶ್ರೇಷ್ಟ ವರ್ಗದ ಜಿಜ್ಞಾಸುಗಳಿಗೆ ಮಂತ್ರದಾನರೂಪವಾದ ನನ್ನ ಅನುಗ್ರಹ ಇದ್ದೇ ಇರುತ್ತದೆ.

ಲಕ್ಷ್ಮೀಧರ ದೇಶಿಕರ ಈ ಆಶ್ವಾಸನೆ ಅವರ ವ್ಯಾಖ್ಯಾನದ ಪ್ರಮುಖ ಭಾಗಗಳ ಕನ್ನಡ ಅನುವಾದಕ್ಕೂ ಅನ್ವಯಿಸುತ್ತದೆ.

ಚಂದ್ರನ ಈ ಪಂಚದಶಕಲೆಗಳು, ಶುಕ್ಲ ಪಕ್ಷ ಪಾಡ್ಯದಿಂದ ಹುಣ್ಣಿಮೆಯವರೆಗೆ ಸೂರ್ಯನಿಂದ ಹೊರಬಂದು ಚಂದ್ರನನ್ನು ಸೇರಿ, ಕೃಷ್ಣಪಕ್ಷ ಪಾಡ್ಯದಿಂದ ಅಮಾವಾಸ್ಯೆಯವರೆಗೆ ಪುನಃ ಸೂರ್ಯನನ್ನು ಸೇರುವುದೆಂದು ಜ್ಯೋತಿಶಾಸ್ತ್ರದ ನಿಲವು. ಈ ಕಲೆಗಳು ಸುಷುಮ್ನಾನಾಡಿಯ ಮುಖಾಂತರ ಮಾನವದೇಹದ ಶ್ರೀಚಕ್ರದಲ್ಲಿ ಸಂಚರಿಸುವುದೆಂಬುದು ಶೈವಶಾಕ್ತ ಶಾಸ್ತ್ರಗಳ ಪ್ರಸ್ತಾನ

ಶ್ರೀ ವಿದ್ಯೆಯನ್ನು ಪ್ರತಿಪಾದಿಸುವ ೧ ಚಂದ್ರಕಲಾ, ೨ ಜ್ಯೋತಿಷ್ಮತಿ, ೩ ಕಲಾನಿಧಿ, ೪ ಕುಲಾರ್ಣವ, ೫ ಕುಲೇಶ್ವರಿ, ೬ ಭುವನೇಶ್ವರಿ, ೭ ಬಾರ್ಹಸ್ಪತ್ಯಂ, ೮ [illegible] ವಾಸಮತ ಈ ತಂತ್ರಗಳಲ್ಲಿ ನಾಲ್ಕು ವರ್ಣಗಳಿಗೂ ಅಧಿಕಾರವಿರುತ್ತದೆ.

ಶುಭಾಗಮ ಪಂಚಕವೆಂದು ಕರೆಯಲ್ಪಡುವ ವಶಿಷ್ಟ, ಸನಕ, ಶುಕ, ಸನಂದನ, ಸನತ್ಕುಮಾರ, ಇವರ ಹೆಸರಿನ ಆಗಮಗಳು ವೈದಿಕ ಮಾರ್ಗದಲ್ಲಿ

Sri Vidyabharathi Book Centre, Sringeri

ಶ್ರೀವಿದ್ಯೆಯನ್ನು ಭೋದಿಸುತ್ತವೆ. ಇದೇ "ಸೌಂದರ್ಯ ಲಹರಿ" ಯಲ್ಲಿ ಭಗವಾನ್ ಪೂಜ್ಯಪಾದ ಶಂಕರರು ಹೇಳುವ ಸಮಯಾಚಾರ. ಅದರ ನಿಜ ಸ್ವರೂಪವನ್ನು ೪೧ನೇ ಪದ್ಯದಲ್ಲಿ ವಿವರಿಸಿದೆ.

ಸಂಪತ್ ಸೂಚಕವಾದ ಸಂಕೇತಗಳಿಂದ ಸರ್ವಾಶಾ ಪರಿತ್ಯಾಗ ವೈರಾಗ್ಯವನ್ನು ಪ್ರತಿಪಾದಿಸುವುದು ಈ ಪದ್ಯದ ಪರಮೋದ್ದೇಶ.

ಬೈರವರೂಪೀ ಶಿವನೊಡನೆ ದೇವಿಯ, ಸಮರಸ-ಸಮಾನತೆಯನ್ನು ಪ್ರತಿಪಾದಿಸಿ ಶಿವನ ಶರೀರವೇ ದೇವಿ ಎಂದು ಹೇಳಿದೆ. ಆನಂದ ಬೈರವನ ಆತ್ಮ ಸತ್ವರೂಪವಾದ ನವಾವರಣಗಳನ್ನು ಮುಂದೆ ವಿವರಿಸಿದೆ.

೧. ಕಾಲವ್ಯೂಹ-ನಿಮೇಷದಿಂದ ಕಲ್ಪಾಂತದವರೆಗಿನ ಕಾಲಮಾನವನ್ನು ಘಟಿಕಾ, ಮಾಸ, ಸಂವತ್ಸರಗಳಾಗಿ ವಿಭಾಗಿಸಿ ನಿರ್ಣಯಿಸುವುದು.

೨. ಕುಲವ್ಯೂಹ–ನೀಲಾದಿವರ್ಣಗಳಿಂದ ರೂಪವನ್ನು ನಿರ್ಧರಿಸುವುದು.

೩. ನಾಮವ್ಯೂಹ–ನಿರ್ಧರಿಸಿದ ವಸ್ತುಗಳಿಗೆ ಹೆಸರಿಡುವುದು.

೪. ಜ್ಞಾನವ್ಯೂಹ–ವಸ್ತುವಿನ ಪರಿಚಯ. ಇದರಲ್ಲಿ ಎರಡು ವಿಧ. ವಿಕಲ್ಪದಿಂದ ಕೂಡಿದ್ದು ಸಭಾಗ, ನಿರ್ವಿಕಲ್ಪವಾದದ್ದು ವಿಭಾಗ.

೫. ಚಿತ್ತವ್ಯೂಹ–ಅಹಂಕಾರ, ಚಿತ್ತ, ಬುದ್ಧಿ, ಮಹತ್, ಮನಸ್ಸು ಎಂಬ ಅಹಂಕಾರ ಪಂಚಕ.

೬. ನಾದವ್ಯೂಹ-ಒಲವು, ಇಚ್ಛೆ,ಕೃತಿ, ಪ್ರಯತ್ನರೂಪದ ವಾಕ್-ವಾಣಿ. ಇದನ್ನು ವೈಜ್ಞಾನಿಕವಾಗಿ ಆಂತರಂಗದಲ್ಲಿ ಊಹೆತರ್ಕಗಳಿಂದ ಕೂಡಿದ್ದು ಪರಾವಾಕ್, ವಸ್ತುವಿನ ಸೂಕ್ಷ್ಮ ರಚನೆಯನ್ನು ಸ್ಪಷ್ಟವಾಗಿ ತಿಳಿಯುವುದು, ಪಶ್ಯಂತಿ ವಾಕ್.

ಪರಾ ಪಶ್ಯಂತಿ :–ವಾಕ್ಕುಗಳು,ಉಚ್ಚ-ಅನುಚ್ಚ ಸ್ಥಾನಗಳನ್ನೂ ವ್ಯಷ್ಟಿ-ಸೂಕ್ಷ್ಮ, ಸಮಷ್ಟಿ-ಸ್ಥೂಲ ರೂಪಗಳನ್ನೂ ತಿಳಿಯುವುದು ಪರಾ, ವಿಭಾಗಿಸುವದು ಪಶ್ಯಂತಿ, ಈ ಕ್ರಮದಲ್ಲಿ ನಿರ್ಧಾರವಾದ್ದನ್ನು ವಾಕ್ಯರೂಪದಲ್ಲಿ ಯೋಜಿಸುವುದು ಮಧ್ಯಮ, ಯೋಜಿಸಿದ ಕ್ರಮದಲ್ಲಿ ಹೇಳುವುದು ವೈಖರಿ. ವಚನ, ಭಾಷಣ, ಕವಿತೆ ಎಲ್ಲ ಪ್ರಕಾರಗಳು ಇದರಲ್ಲಿ ಸೇರುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೭. ಬಿಂದುವ್ಯೂಹ- ಷಟ್‌ಚಕ್ರ ಸಮೂಹ.
೮. ಕಲಾವ್ಯೂಹ-ಐವತ್ತು ವರ್ಣ (ಅಕ್ಷರ) ಸಮೂಹ.
೯. ಜೀವವ್ಯೂಹ-ಮೇಲಿನ ೮ ವ್ಯೂಹಗಳ ಭೋಕ್ತೃ ಜೀವರುಗಳ ಸಮೂಹ.

ಪರಮಶಿವನನ್ನು ನವಾತ್ಮನೆಂದು ಹೇಳುವ ನಿರ್ಧಾರಕ ವಾಕ್ಯವಿದು.

ನವವ್ಯೂಹಾತ್ಮಕೋ ದೇವೋ ಪರಾನಂದ ಪರಾತ್ಮಕಃ
ನವಾತ್ಮಾ ಭೈರವೋ ದೇವೋ ಭುಕ್ತಿ ಮುಕ್ತಿ ಪ್ರದಾಯಕಃ
ಪರಾನಂದ ಪರಾಶಕ್ತಿ ಚಿದ್ರೂಪಾನಂದ ಭೈರವೀ
ತಯೋರ್ಯದಾ ಸಾಮರಸ್ಯಂ ಜಗದುತ್ಪದ್ಯತೇ ತದಾ

ನವವ್ಯೂಹಾತ್ಮಕನೂ, ಪರಾನಂದ ಸ್ವರೂಪನೂ ಆದ ಭೈರವನು ಭೋಗ ಮೋಕ್ಷಗಳೆರಡನ್ನು ಕೊಡುವ ಪರಾನಂದ, ಸರ್ವೋಚ್ಚಶಕ್ತಿಯಾದ ಚಿದ್ರೂಪ ದೇವಿಯು ಆನಂದ ಭೈರವಿ, ಇವರ ಸಾಮರಸ್ಯದಿಂದ ಜಗದುತ್ಪತ್ತಿ. ಕಾಲೀದಾಸ ಮಹಾಕವಿ ರಘುವಂಶದ ನಾಂದೀ ಶ್ಲೋಕದಲ್ಲಿ ಹೀಗೆ ಹೇಳುತ್ತಾನೆ.

ವಾಗರ್ಥಾ ಇವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ !

ಮಾತಿನ ಅರ್ಥವನ್ನು ಪ್ರತಿಪಾದಿಸಲು ಮಾತು-ಅರ್ಥ ಒಂದಾಗುವಂತೆ "ಸಂಪೃಕ್ತಾ" ಗಾಢವಾಗಿ ಕೂಡಿರುವ ಜಗತ್ತಿನ ಮಾತಾಪಿತೃಗಳಾದ ಪಾರ್ವತೀ ಪರಮೇಶ್ವರರನ್ನು ವಂದಿಸುತ್ತೇನೆ.

ಮಂತ್ರದ ಮೊದಲಿಗೆ ಸ್ಮರ ಭುವನೇಶ್ವರಿ
ಸಿರಿಯ ಬೀಜಾಕ್ಷರಗಳನು
ಜಂತ್ರಿಸಿ, ನಿತ್ಯೆ, ನಿನ್ನನು ಭಜಿಸುವ ಮಹಾ-
ಭೋಗ ರಸಿಕ ಯೋಗಿವರರು
ಚಿಂತಾಮಣಿಗಣದೆ ರಚಿತ ರುಚಿರ ಜಪ-
ಮಾಲೆಯ ಕೈಯಲ್ಲಿ ಹಿಡಿದು
ಶಾಂತ ಚಿತ್ತದಲಿ ಶಿವಾಗ್ನಿಗೆ ಸುರಿವರು
ತ್ರಿಮಲ ಘೃತಾಹುತಿಗಳನು ॥ ೩೩ ॥

Sri Vidyabharathi Book Centre, Sringeri

 CC-O. In Public Domain. Digitized by eGangotri

ರವಿ ಶಶಿ ಸ್ತನಯುಗನೆನೆ ನೀನೆ ಶಿವನ ಶ-
ರೀರವೆಂಬರು ತತ್ವವಿದರು,
ನವಸಂಖ್ಯಾವರಣದೊಳೆಸೆವ ಆನಂದ ಭೈ-
ರವನಾತ್ಮಸತ್ವ ನೀನೆನಲು,
ಸಮರಸಾನಂದದ ಭಾವದೊಳೊಂದಾಗಿ
ಬೆರೆದಿದೆ ನಿಮ್ಮ ಮಹತ್ವ,
ಸಮನಿಸದೆಂದೆಂದು ಶೇಷಶೇಷೀಭಾವ.
ಕಲ್ಪನೆಗುಂಟೆ ಅಸ್ತಿತ್ವ ? ॥ ೩೪ ॥

ನೀನೆ ಮನವು, ನೀನೆ ವ್ಯೋಮ, ವಾಯುವು ನೀನೆ,
ವಾಯುಸಾರಥಿ ಅಗ್ನಿ ನೀನು,
ನೀನೆ ಜಲವು, ಭುವಿ ನೀನು, ಇನೆಲ್ಲವು
ನಿನ್ನ ಪರಿಣಾಮ ರೂಪಗಳು-
ನೀನಲ್ಲದನ್ಯಮಿನ್ನೊಂದಿಲ್ಲ ವಿಶ್ವದೆ,
ನೀನೆ ಸರ್ವವು ಶಿವದಯಿತೆ,
ನೀನೆ ಚಿದಾನಂದ ರೂಪಿಣಿ, ವಿಶ್ವ ವ-
ಪುಷ್ಮತಿ ಪರಿಣಮಿಸಿರುವೆ ॥ ೩೫ ॥

ದೇವಿಯ ವಿಶ್ವರೂಪವನ್ನು ವರ್ಣಿಸುವ ಕವಿಯು ದೇವಿಯನ್ನು ವಿಶ್ವವ ಪುಷ್ಮತಿ–ವಿಶ್ವವೇ ಶರೀರವಾಗಿರುವವಳು ಎಂದು ಹೇಳಿ, "ವಿಶ್ವದೆ ನೀನಲ್ಲದನ್ಯ ವಿನ್ನೊಂದಿಲ್ಲ" ಎನ್ನುತ್ತಾನೆ. ಶೇಷ ಶೇಷಿಭಾವ–ಜಗತ್‌ಸೃಷ್ಟಿಯಲ್ಲಿ ಪಂಚ ಭೂತಗಳಲ್ಲಿ ಇಷ್ಟು ವಿನಿಯುಕ್ತವಾಯಿತು, ಇಷ್ಟು ಉಳಿದಿದೆ ಎನ್ನುವ ಮಾತೇ ಇಲ್ಲ. ಚತುಶ್ಶತಿಯಲ್ಲಿ ದೇವಿಯನ್ನು "ಕಬಳೀಕೃತ ನಿಶ್ಯೇಷ ತತ್ವ ಗ್ರಾಮ ಸ್ವರೂಪಿಣೀ" ಪಂಚಭೂತಗಳನ್ನು ನಿಶ್ಯೇಷವಾಗಿ ಕಬಳಿಸಿದವಳು ಎಂದು ವರ್ಣಿಸಿದೆ.

CC-O. In Public Domain. Digitized by eGangotri

ಗಿರಿಜಾತೆ, ನಿನ್ನಾಜ್ಞಾ ಚಕ್ರದೆ ರವಿ ಶಶಿ
ಕೋಟಿ ತೇಜದೆ ಬೆಳಗುತಿಹ
ಪರಚಿತ್‌ಪ್ರಕಾಶದೆ ಸುರಭಿತ ಪಾರ್ಶ್ವನ
ಪರಮಶಿವನ ಪದಯುಗವ
ನಮಿಸಿ ಪೂಜಿಸುವ ಭಕ್ತರಿಗತಿಶಯ ಮುಂಟು.
ಲೋಕ ಅಲೋಕಕೆ ದೂರ,
ಹಿಮಕರ ಮಿಹಿರ ಅಗ್ನಿಗಳ ಕಂಡರಿಯದ
ಭಾಲೋಕವಾಸ ವಿಹಾರ. ॥ ೩೬ ॥

ಆಜ್ಞಾ ಚಕ್ರದಲ್ಲಿ ಪರಮಶಿವನನ್ನು ಸ್ತುತಿಸಿದೆ. ಇದು ರವಿ ಶಶಿ ಕೋಟಿ ಎಂಬಲ್ಲಿ ಕೋಟಿಯು ಸಂಖ್ಯಾವಾಚಕವಲ್ಲ, ಅಗಣ್ಯದ ಪರಾಕಾಷ್ಟೆಯನ್ನು ಸೂಚಿಸುತ್ತದೆ.

ಪರಚಿತ್-ಪರಾಚಿತ್-ಅತಿ ಶ್ರೇಷ್ಠವಾದ ಚಿತ್‌ಶಕ್ತಿಯ ಪ್ರಕಾಶದಿಂದ, ಸುರಭಿತ ಪಾರ್ಶ್ವ—ಪರಿಸರದ ಉತ್ತರ ದಕ್ಷಿಣ ದಿಶೆಗಳನ್ನು ಪರಿಮಳಯುಕ್ತವಾಗಿ ಮಾಡುವ, ಲೋಕ-ಅಲೋಕ-ಬೆಳಕು ಕತ್ತಲೆಗಳಿಂದ ದೂರವಾದ ಭಾಲೋಕ-ಜ್ಯೋತಿರ್ಮಯ ಲೋಕದಲ್ಲಿ ವಾಸ ಮಾಡುವ, ವಿಹರಿಸುವ ಅವಕಾಶ ಶಿವನನ್ನು ಆರಾಧಿಸುವ ಭಕ್ತರಿಗೆ ದೊರಕುತ್ತದೆ.

ಇಲ್ಲಿ "ಚಕ್ರ" ಶಬ್ದವು ಸಾಂಕೇತಿಕ, ಸಾಧಕನ ಹುಬ್ಬುಗಳ ನಡುವಿನ ಶ್ರೀಚಕ್ರದ ನಾಲ್ಕು ಶಿವ ಚಕ್ರಗಳನ್ನು ಸೂಚಿಸುತ್ತದೆ. ಆಜ್ಞಾ ಚಕ್ರದ ಸಹಜ ರೂಪವಾದ ಎರಡು ದಳದ ಪದ್ಮವನ್ನಲ್ಲ.

CC-O. In Public Domain. Digitized by eGangotri

ವಿಶುದ್ಧಿ ಚಕ್ರದೆ ತ್ರಾಸರಹಿತ ಸ್ಫಟಿಕಕಾಂತಿ
ವ್ಯೋಮಜನಕನೆನಿಸುತ್ತೆ
ವಿಶಾಲ ಚೇತನನಾದ ಶಿವನಿಗೆ, ಶಿವನ ಸ
ಮಾನತೆ ಪಡೆದ ಅದ್ರಿಜೆಗೆ
ನಮಿಸುವೆನೀರ್ವರ ಚಂದ್ರಿಕಾ ಸಮರುಚಿ
ಪಸರಿಸುತೆಲ್ಲೆಡೆಗಳಲಿ
ಶಮಿತಾಂತರ್ಧ್ವಾಂತದೆ ನಲಿಯಲಿ ವಿಶ್ವ,–ಸಂ-
ತೃಪ್ತ ಚಕೋರಿಯಂದದಲಿ ॥ ೩೭ ॥

ಆಕಾಶ ತತ್ವದ ವಿಶುದ್ಧಿ ಚಕ್ರದಲ್ಲಿ ಪ್ರತಿಷ್ಠಿತ ಶಿವ ದಂಪತಿಗಳನ್ನು ಇಲ್ಲಿ ವರ್ಣಿಸಿದೆ.

ತ್ರಾಸ ರಹಿತ–ರತ್ನಗಳಲ್ಲಿ ಕಾಣುವ ದೋಷಗಳೊಂದೂ ಇಲ್ಲದ ಸ್ಫಟಿಕ ದಂತೆ ಬೆಳಗುವ ನಿರ್ಮಲವಾದ ವ್ಯೋಮ-ಆಕಾಶವನ್ನು ಸೃಷ್ಟಿಸುವ ಶಿವದಂಪತಿಗಳನ್ನು ಕವಿಯು ಸ್ತುತಿಸಿ, ಚಂದ್ರ ಕಿರಣಗಳಂತೆ ಅವರ ಕಾಂತಿಯು ಅಂತರ್ಧ್ವಾಂತ-ಅಂತರಂಗದ ಕತ್ತಲನ್ನು ಹರಿಸಿ ವಿಶ್ವವನ್ನು ಚಂದ್ರ ಕಿರಣದಿಂದ ಸಂತೃಪ್ತವಾದ ಚಕೋರ ಪಕ್ಷಿಯಂತೆ ಸುಖಮಯವಾಗಿ ಮಾಡಲಿ ಎಂದು ತಾತ್ಪರ್ಯ.

ಆಲಾಪದಿಂದೆ ಅಷ್ಟಾದಶವಿದ್ಯೆಯೊಳ್
ಪರಿಣತಿಯನು ಕರುಣಿಸುವ,
ಹಾಲು ನೀರನು ಬೇರೆಮಾಡುವಂದದೆ ಗುಣ-
ದೋಷಗಳನು ಶುದ್ಧಿಗೈವ
ಚೆಲುವಿನಂಚೆಗಳಂತೆ ತತ್ವವಿದರ ಸಂವಿತ್
ಕಮಲಮಧುವ ಪಾನಗೈದು
ನಲಿವ ಶಿವಾಧವ ಹಂಸಮಿಥುನಕೆ ಆ-
ನತನಪ್ಪೆ ಕೈಗಳಮುಗಿದು ॥ ೩೮ ॥

CC-O. In Public Domain. Digitized by eGangotri

ಸಾಧಕನ ಅನಾಹತ ಚಕ್ರದಲ್ಲಿ (ಹೃದಯ ಸ್ಥಾನ) ಶಿವ ದಂಪತಿಗಳನ್ನು ಪ್ರತಿಷ್ಠಿಸಿ ಸ್ತುತಿಸಿದೆ.

ಆಗಮ ತಂತ್ರ ಶಾಸ್ತ್ರಗ್ರಂಥಗಳು ಶಿವ ಪಾರ್ವತಿಯರ ಸಂವಾದ ರೂಪದಲ್ಲಿರುವುದರಿಂದ "ಆಲಾಪದಿಂದ" ಅಷ್ಟಾದಶ ವಿದ್ಯೆಯಲ್ಲಿ ಪರಿಣತಿಯನ್ನು ಕೊಡುವ ಎಂದು ಹೇಳಿದೆ. ಹಂಸವು ಹಾಲು, ನೀರುಗಳನ್ನು ಬೇರ್ಪಡಿಸುವಂತೆ ವಿಮರ್ಶೆಯಿಂದ ವಸ್ತುವಿನ ಗುಣದೋಷಗಳನ್ನು ಬೇರ್ಪಡಿಸಿ ಶುದ್ಧಿ ಗೊಳಿಸುವ ಹಂಸ ಮಿಥುನವನ್ನು ಶಿವ-ಪಾರ್ವತಿಯರಿಗೆ ಹೋಲಿಸಿ, ತತ್ವವಿದರ ಸಂವಿತ್-ಜ್ಞಾನರೂಪ ಕಮಲದ ಮಧುವ-ಮಕರಂದವನ್ನು ಪಾನ ಮಾಡುವ ಶಿವ ದಂಪತಿಗಳಿಗೆ ನಮನ ಎಂದು ತಾತ್ಪರ್ಯ.

ಅಷ್ಟಾದಶವಿದ್ಯೆಗಳು ; ೧-೪ ನಾಲ್ಕು ವೇದಗಳು ೫-೧೦, ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ,ಈ ಆರು ವೇದಾಂಗಗಳು, ೧೧ ಮೀಮಾಂಸ ೧೨ ನ್ಯಾಯಶಾಸ್ತ್ರ ೧೩ ಪುರಾಣಗಳು (೧೪) ೧೪ ಸ್ಮೃತಿ ನಿಬಂಧ ಗ್ರಂಥಗಳು, ೧೫-೧೮ ಉಪ ವೇದಗಳಾದ ಆಯುರ್ವೇದ, ಧನುರ್ವೇದ ಗಾಂಧರ್ವವೇದ, ಅರ್ಥಶಾಸ್ತ್ರ.

ದೇವಿ, ನಿನ್ನಯ ಸ್ವಾಧಿಷ್ಠಾನದೊಳುದಿಸಿದ
ಸಂವರ್ತಕಾಗ್ನಿಯನದರ
ಭಾವನಾತ್ಮಕ ಶಾಂತರೂಪಿಣಿ ಸಮಯೆಯ
ಪದ ಚತುಷ್ಟಯಕೆನ್ನ ನಮನ.
ಮುನಿದಿರೆ ಮೂರು ಲೋಕವನೇಕಕಾಲದೆ
ದಹಿಸುವ ಕ್ರೋಧರೂಪೊಂದು,
ಮನವೊಲಿದಿರೆ ದೃಷ್ಟಿಶಿಶಿರೋಪಚಾರದೆ
ತಾಪವ ಹರಿಸಲಿನ್ನೊಂದು ॥ ೩೯ ॥

ಸ್ವಾಧಿಷ್ಠಾನ ಚಕ್ರದಲ್ಲಿ ಪ್ರತಿಷ್ಠಿತರಾದ ರುದ್ರಶಿವ ಸಮಯಾದೇವಿಯರನ್ನು ಸ್ತುತಿಸಿದೆ. ರುದ್ರಶಿವನು ಸಂವರ್ತಕಾಗ್ನಿ-ಪ್ರಳಯಾಗ್ನಿ ಸ್ವರೂಪನು, ಭಾವನಾತ್ಮಕಳಾದ ಸಮಯೆಯು ಶಾಂತ ಸ್ವರೂಪಿಣಿ. ರುದ್ರನ ಕ್ರೋಧ ಏಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲದಲ್ಲಿ ಸುಡಬಲ್ಲುದು. ಸಮಯೆಯ ಕೃಪಾದೃಷ್ಟಿ ಶಿಶಿರೋಪಚಾರದಂತೆ ಭಕ್ತರ ತಾಪವನ್ನು ಹರಿಸುವಂತಹುದು.

ಸ್ವಾಧಿಷ್ಠಾನವು ಅಗ್ನಿತತ್ವದ ಉತ್ಪತಿ ಸ್ಥಾನ.

ತಿಮಿರಕೆ ಶತೃತಾನಾದಂತೆ ಸ್ಫುರಿಸುವ
ಮಿಂಚಿನೊಡ್ಡಣೆಯೆ ಶಕ್ತಿತನು,
ವಿಮಲ ರತ್ನಾಭರಣಗಳಾಗೆ ಬೆಳಗುವ
ಬಹುವರ್ಣಕಾಂತ ಇಂದ್ರಧನು,
ಮಣಿಪೂರ ಪದ್ಮದೊಳಿಹ ನಿನ್ನ ಶ್ಯಾಮಲ
ರುಚಿ ಶುಭ್ರಮೇಘಮಳೆಗೆರೆದು
ತಣಿಸಿ ಹರಮಿಹಿರ, ತಪ್ತತ್ರಿಭುವನವ
ಪೊರೆಯೆ ಬೇಡುವೆನು ಕೈಮುಗಿದು ॥ ೪೦ ॥

ಮಣಿಪೂರ ಚಕ್ರದಲ್ಲಿ ಪ್ರತಿಷ್ಠಿತರಾದ ಶಿವ ಪಾರ್ವತಿಯರನ್ನು ಇಲ್ಲಿ ಸ್ತುತಿಸಿದೆ. ಕತ್ತಲೆಯ ಶತೃವಂತೆ ಹೊಳೆಯುವ ಮಿಂಚಿನ ಒಡ್ಡಣೆ–ಸಮೂಹವೇ ದೇವಿಯ ಶರೀರ. ಅದನ್ನು (ಧ್ಯಾನದಲ್ಲಿ) ಕಂಡ ಸಾಧಕನು ಬಹುವರ್ಣದ ಕಾಮನ ಬಿಲ್ಲೆಂದು ಭ್ರಮಿಸುವುದು ಸಹಜ. ನೀಲ ವರ್ಣದ ಮೇಘದಂತೆ ಕಾಣುವ ಆ ನಿನ್ನ ರೂಪ ಮೇಘ ಸಮೃದ್ಧವಾಗಿ ಮಳೆಗೆರೆದು ಮೂರು ಲೋಕಗಳನ್ನು ತಣಿಸಲಿ ಎಂದು ಪ್ರಾರ್ಥಿಸುತ್ತಾನೆ ಕವಿ.

ಮಣಿಪೂರವು ಜಲತತ್ವದ ಉಗಮ ಸ್ಥಾನ. ಅನಾಹತ ಚಕ್ರಸ್ಥ ಸೂರ್ಯಕಿರಣಗಳು. ಸ್ವಾಧಿಷ್ಠಾನದ ಅಗ್ನಿಯಿಂದ ಕಾವೇರಿ ಮಣಿಪೂರವನ್ನು ಪ್ರವೇಶಿಸಿ ಜಲವಾಗಿ ಮಾರ್ಪಟ್ಟು ಮೇಘವಾಗುತ್ತದೆ. ಸ್ವಾಧಿಷ್ಠಾನದ ಹರಮಿಹಿರತಪ್ತ–ಶಿವರೂಪಿ ಸೂರ್ಯನಿಂದ ಕಾದ ಮೂರು ಲೋಕಗಳನ್ನು ಜಲ ವೃಷ್ಟಿಯಿಂದ ತಣಿಸಲಿ ಎಂದು ತಾತ್ಪರ್ಯ. ಇದನ್ನು ಭಾವಪೂರ್ಣವಾಗಿ ವರ್ಣಿಸುವ ತೈತ್ತರೀಯ ಆರಣ್ಯಕದ ಋಕ್ಕನ್ನು ಮುಂದೆ ಕೊಟ್ಟಿದೆ.

ತದಿಂದ್ರ ಧನುರಿತ್ಯಜ್ಯಂ ಅಭ್ರವರ್ಣೇಷು ಚಕ್ಯತೇ
ಏತದೇವ ಶಂಯೋ ಬಾರ್ಹಸ್ಪತ್ಯಸ್ಯ ಏತತ್ ರುದ್ರಸ್ಯ ಧನುಃ.
(ತೈತ್ತರೀಯ, ೧-೧)

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಘ ಮಧ್ಯದ ಈ ಇಂದ್ರಧನು-ಕಾಮನಬಿಲ್ಲು ಆಜ್ಯಂ ಇತಿ-ಹೆದೆಯಿಲ್ಲದ್ದಾಗಿ ಬಾರ್ಹಸ್ಪತ್ಯಂ–ಬೃಹಸ್ಪತಿ ಸಂಹಿತೆಯಲ್ಲಿ ಪ್ರಶಂಸಿಸಲ್ಪಟ್ಟಿದೆ. ರುದ್ರನ ಪಿನಾಕವೆಂಬ ಧನುವೂ ಇದೆ.

ದೇವಿ, ನಿನ್ನಯ ಮೂಲಾಧಾರವನ್ನಪಿ ನವ
ರಸ ಭಾವ ತಾಂಡವಕೆಳಸಿ
ಲಾವಣ್ಯವತಿ ಲಾಸ್ಯಪರೆ ಸಮಯೆಯಂ ಕೂಡಿ
ಭೈರವನಿರೆ ರೂಪ ಮೆರೆಸಿ,
ಆವರೀರ್ವರನುರಾಗ ಘನಿಸಿ ಬಿಂದುಗಳಾಗಿ
ಕಂಡುದು ಸೃಷ್ಟಿವಿಧಾನ,
ಭುವನಕಾದುದು ಪರಾನಂದಮುದಯಿಸಿರೆ
ಜನನೀ ಜನಕರನುದಾನ ॥ ೪೦ ॥

ಓ ದೇವಿ, ಭೈರವ ರೂಪಿ ಪರಮಶಿವನು, ನಿನ್ನ ಮೂಲಾಧಾರ ಪದ್ಮದಲ್ಲಿ ನವಾವರಣ ಪ್ರತೀಕವಾದ ನವರಸಗಳ ತಾಂಡವನೃತ್ಯಕ್ಕೆಳಸಿ, ಲಾಸ್ಯ ಪತಿಯಾದ ಸಮಯ ರೂಪಿ ಆನಂದ ಭೈರವಿಯೊಡನೆ ನಾಟ್ಯವಾಡುತ್ತಿರಲು, ಅವರ ಅನುರಾಗ ಘನಿಸಿ ಬಿಂದು ರೂಪ ತಾಳಿ ಜಗತ್ತಿನ ಉತ್ಪತ್ತಿಯಾಗುತ್ತದೆ. ವಿಶ್ವ ಜಗತ್ತಿಗೆ ಜನನೀ ಜನಕರು ಲಭಿಸುತ್ತಾರೆ ಎಂದು ತಾತ್ಪರ್ಯ. ಇಲ್ಲಿ ತಿಳಿಯಬೇಕಾದ ರಹಸ್ಯಗಳನ್ನು ಮುಂದೆ ವಿವರಿಸಿದೆ.

ಅಧಾರ ಸ್ವಾಧಿಷ್ಠಾನ ಚಕ್ರಗಳು ತಮೋ ಲೋಕಗಳಾಗಿ ಕಾಪಾಲಿಕಾದಿ ಕಾಲ ಮತಗಳ ಬಾಹ್ಯಪೂಜೆಯ ಸ್ಥಾನಗಳಾದ್ದರಿಂದ, ಎಲ್ಲ ರೀತಿಯ ಬಾಹ್ಯ ಪೂಜೆಗಳನ್ನು ನಿರಾಕರಿಸಿ ಭಾವನಾ ಪ್ರಧಾನವಾದ ಮಾನಸಿಕ ಅಂತರ ಪೂಜೆಯನ್ನು ಅವಲಂಬಿಸುವ ಸಮಯಾಚಾರವು, ಮೇಲಿನ ಎರಡು ಚಕ್ರಗಳಲ್ಲಿ ಶಿವನನ್ನು ತಾಂಡವ ನಾಟ್ಯದ ಮಹಾ ಭೈರವನೆಂದೂ ದೇವಿಯನ್ನು ಲಾಸ್ಯ ಪ್ರಿಯಯಾದ ಸಮಯಾ ರೂಪದ ಆನಂದ ಭೈರವಿಯೆಂದೂ ಭಾವಿಸಿ ಉಪಾಸಿಸುವುದು ಸಮಯಾಚಾರ. ಅದರಂತೆ ಶ್ರೀಚಕ್ರದ ಮಧ್ಯದ ತ್ರಿಕೋಣವು ಜಗತ್ತಿನ ಉತ್ಪತ್ತಿಗೆ ಕಾರಣವಾದ ಬಿಂದುವಿನ ಸ್ಥಾನ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀವಿದ್ಯೆಯ ಪ್ರತಿಪಾದಕರಾದ ಭಾಸ್ಕರಾಚಾರ್ಯರು ಲಲಿತಾ ಸಹಸ್ರ ವ್ಯಾಖ್ಯಾನದಲ್ಲಿ ಸಮಯಾ ದೇವಿಯ ಇನ್ನೊಂದು ರೂಪವೇ ಕುಂಡಲಿನಿ ಎಂದು ಹೇಳಿರುವರಾದರೂ ಸಮಯ ಮತದಂತೆ ಕುಂಡಲಿನಿಯು ಬ್ರಹ್ಮ ವಿಷ್ಣು ರುದ್ರ ಗ್ರಂಥಿಗಳನ್ನು ಭೇದಿಸಿಕೊಂಡು ಸಹಸ್ರಾರದಲ್ಲಿ ಸದಾಶಿವನನ್ನು ಸೇರಿದಾಗ ಮಾತ್ರವೇ ಮೋಕ್ಷವೆಂದು ಅಂಗೀಕರಿಸುತ್ತಾರೆ. ಸೌಂದರ್ಯ ಲಹರಿಯಲ್ಲಿ ಭಗವಾನ್ ಶಂಕರರು ಹೇಳುವುದೂ ಇದೇ ಆದುದರಿಂದ ಶ್ರೀವಿದ್ಯೆಗೂ ಸಮಯಾ ಚಾರಕ್ಕೂ ಯಾವ ಭೇದವೂ ಇರುವುದಿಲ್ಲ.

ಭೈರವ ರೂಪಿ ಶಿವನೊಡನೆ ಐದು ವಿಧವಾದ ಸಾಮ್ಯಗಳನ್ನು ಹೊಂದಿರುವುದರಿಂದ ದೇವಿಯನ್ನು ಸಮಯಾ ಎಂದು ಹೇಳಿದೆ. ಆ ಸಾಮ್ಯಗಳೆಂದರೆ ಅಧಿಷ್ಠಾನ ಸಾಮ್ಯ, ಅವಸ್ಥಾನ ಸಾಮ್ಯ, ಅನುಷ್ಠಾನ ಸಾಮ್ಯ, ರೂಪಸಾಮ್ಯ, ನಾಮಸಾಮ್ಯ, ಜಗತ್ತಿನ ಮಾತಾಪಿತೃಗಳಾದ ಮಹಾ ಭೈರವ ಆನಂದ ಭೈರವಿಯರ ಸಾಮ್ಯಗಳನ್ನು ಭಗವತ್ ಪಾದರು ಈ ಶ್ಲೋಕದಲ್ಲಿ ಪ್ರತಿಪಾದಿಸಿದ್ದಾರೆ. ಸೌಂದರ್ಯ ಲಹರಿಯ ಈ ಅಭಿಪ್ರಾಯವನ್ನೇ ಕಾಳಿದಾಸ ಮಹಾಕವಿ "ರಘು ವಂಶ" ಮಹಾಕಾವ್ಯದಲ್ಲಿ ಪ್ರತಿಪಾದಿಸಿರುವುದನ್ನು ಹಿಂದೆ ತಿಳಿಸಿದೆ.

ವಿಶೇಷ ಸೂಚನೆ : ಸೌಂದರ್ಯ ಲಹರಿಯ ತತ್ವ ಪ್ರಧಾನವಾದ ಮೊದಲ ೪೧ ಶ್ಲೋಕಗಳನ್ನು "ಆನಂದ ಲಹರಿ" ಎಂದೂ, ವರ್ಣನಾ ಪ್ರಧಾನವಾದ ಉಳಿದ ೫೯ ಶ್ಲೋಕಗಳನ್ನು "ಸೌಂದರ್ಯ ಲಹರಿ" ಎಂದೂ ಕರೆಯುವ ಆರ್ವಾಚೀನ ವಿಧಾನವನ್ನು ಮೂಲಕರ್ತೃಗಳಾದ ಭಗವತ್ ಪೂಜ್ಯಪಾದರಾಗಲಿ, ವ್ಯಾಖ್ಯಾನಕಾರರಾದ ಲಕ್ಷ್ಮೀಧರ ದೇಶಿಕರಾಗಲಿ ಹೇಳಿಲ್ಲವಾದ್ದರಿಂದ ಕನ್ನಡ ಅನುವಾದದಲ್ಲಿ ಅದನ್ನು ಅನುಸರಿಸಿಲ್ಲ. ಉಳಿದ ೫೯ ಶ್ಲೋಕಗಳಲ್ಲಿ ತತ್ವಾಂಶಗಳಿಗೆ ವಿವರಣೆ ಕೊಟ್ಟು ಉಳಿದವುಗಳಲ್ಲಿ ಕಠಿಣ ಪದಗಳ ಅರ್ಥವನ್ನು ಟಿಪ್ಪಣಿಯಾಗಿ ಕೊಡಲಾಗುವುದು.

ಮಾನ್ಯ ವಾಚಕರು ದಯಮಾಡಿ ಇದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿ ಅನುವಾದಕನ ನಮ್ರ ವಿನಂತಿ.

CC-O. In Public Domain. Digitized by eGangotri

ಗಗನವ ಬೆಳಗುವ ದ್ವಾದಶಾದಿತ್ಯರ
ಮಣಿಗಳಂದದೆ ಅಳವಡಿಸಿ
ಸೊಗಸಿಂದೆ ರಚಿಸಿದ ನಿನ್ನ ಮುಕುಟವನು
ಬಣ್ಣಿಸೆ ಉಪಮೆಯನರಸಿ
ಸನಿಹದ ರತ್ನ ರಾಜಿಯ ಪ್ರಭೆ ಮಸಗಿರೆ
ಕಳೆಗುಂದಿದಿಂದು ಲೇಖೆಯನು
ಅನಿಮಿತ್ತದಿಂದ್ರಧನುವಿದೆಂದು ಭ್ರಮಿಸುತೆ
ಕವಿ ತನ್ನ ತಾ ನಗಿಸಿದನು. ॥೪೨॥

ದೇವಿಯ "ಕೇಶಾದಿ ಪಾದಾಂತ" ವರ್ಣನಾ ಸ್ತೋತ್ರವನ್ನು ಕೇಶದ ಪ್ರತೀಕವಾದ "ಮಕುಟ" ದಿಂದ ಪ್ರಾರಂಭಿಸಿದೆ. ದ್ವಾದಶಾದಿತ್ಯರು ಮಣಿ ರೂಪದಿಂದ ಮಕುಟದಲ್ಲಿರುವರೆಂದು ಅರಿತ ಕವಿ ವರ್ಣನೆಗೆ ತಕ್ಕ ಉಪಮೆ ಯನ್ನು ಹುಡುಕುತ್ತಾ ಮಣಿ ಪ್ರಭೆಯಿಂದ ಕಾಂತಿ ಗುಂದಿದ ಮಸ್ತಕದ ಚಂದ್ರಲೇಖೆಯನ್ನು ಅನಿಮಿತ್ತ-ಕಾರಣವಿಲ್ಲದೆ ಕಂಡು ಬಂದ ಕಾಮನಬಿಲ್ಲೆಂದು ಭ್ರಮಿಸಿ, ನಿಜವರಿತಾಗ, ನಕ್ಕುದನ್ನು ''ಕವಿ ತನ್ನ ತಾ ನಗಿಸಿದನು" ಎಂದು ವ್ಯಂಗ್ಯೋಕ್ತಿಯಲ್ಲಿ ಹೇಳಿದೆ.

ಅರಳಿದ ನೈದಿಲೆ ವನದ ಚೆಲ್ವನುಗೆದ್ದ
ನಿನ್ನ ನಿಬಿಡ ನೀಲ ಮೃದುಳ
ಕುರುಳಗಳೆನ್ನಯ ಮನದಳಲನು ಹರಿ-
ಸುತ್ತೆ ಮಾಡಲದನು ವಿಮಲ.
ಅದರೊಂದು ಸುರಭಿಯ ಪಡೆವಾಸೆ ಪ್ರಬಲಿಸೆ
ಇಂದ್ರನುದ್ಯಾನದೊಳಿರುವ
ವಿಧ ವಿಧ ಕಲ್ಪಕ ತರುಗಳ ಸುಮರಾಜಿ
ಆಶ್ರಯಿಸಿದೆ ನಿನ್ನ ಮುಡಿಯ ॥೪೩॥

ದೇವಿಯ ಕೇಶ ರಾಶಿಯನ್ನು ಅರಳಿದ ನೈದಿಲವನಕ್ಕೆ ಹೋಲಿಸಿದ ಕವಿ, ಅದರೊಂದು ಪರಿಮಳವನ್ನು ಪಡೆಯುವ ಆಸೆಯಿಂದ ಇಂದ್ರನ ಉದ್ಯಾನದ ಕಲ್ಪಕ ವೃಕ್ಷಗಳು ಹೂವಾಗಿ ನಿನ್ನ ಹೆರಳನ್ನು ಆಶ್ರಯಿಸಿದೆ ಎನ್ನುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನ ಮೊಗದ ಲಾವಣ್ಯಲಹರಿಯಾಗಿ
ಹರಿಯುತಿರಲು ಅದರೊಂದು
ಭಿನ್ನಾಂಶ ನಿನ್ನ ಸೀಮಂತ ಸರಣಿಯಾಗಿ
ಪೊರೆಯಲಿ ನಮ್ಮನೆಂದೆಂದು.
ಅಲ್ಲಿ ಕಾಣುವ ನಿನ್ನ ಹೆರಳ ಕಾರ್ಗತ್ತಲ
ವೈರಿವೃಂದವ ಬಂಧಿಸಿಡಲು
ಪಲ್ಲವಿಸಿದ ನವ್ಯ ರವಿಕಿರಣಗಳೊಡ್ಡಿ
ಕುಂಕುಮ ಬೊಟ್ಟಾದುದೆನಲು ॥೪೪॥

ಓ ದೇವಿ, ನಿನ್ನ ಮುಖದ ಸೊಬಗು ರಸ ರೂಪದಿಂದ ಹರಿಯುತ್ತಿರಲು ಅದರ ಒಂದು ಭಾಗ ನಿನ್ನ ಸೀಮಂತ–ಬೈತಲೆಯಾಗಿ ನಮ್ಮನ್ನು ರಕ್ಷಿಸಲಿ. ಅಲ್ಲಿ ಕಾಣುವ ಕತ್ತಲೆಯ ವೈರಿ ಸಮೂಹವನ್ನು ಬಂದಿಸಿಡಲು ಹುಟ್ಟಿದ ನವ್ಯ ರವಿಯ ಕಿರಣಗಳು ಹಣೆಗಿಟ್ಟ ಕುಂಕುಮದ ಬೊಟ್ಟಾಗಲಿ.

ಭೃಂಗಕಲಭದಂತೆ ನೀಲಿಯ ಪ್ರಭೆಯಿಂದೆ
ಸಹಜಕುಟಿಲತೆಯ ಮೆರೆವ
ಮುಂಗುರುಳಿಸೆದಿರೆ ನಿನ್ನ ಮೊಗವು ನಗೆ-
ಗೀಡು ಮಾಡಿತ್ತು ತಾವರೆಯ.
ನಿನ್ನ ಮುಗುಳು ನಗೆಗೊದಗಿದ ಪಲ್ಗಳ
ಕಾಂತಿಯಾಗಿರಲು ಕೇಸರವು,
ಮುನ್ನ ಸ್ಮರನ ಸುಟ್ಟ ಶಿವನ ಲೋಚನ ಮಧು–
ಕರಗಳಿಗಾಯ್ತು ಮಾದಕವು. ॥೪೫॥

ಭೃಂಗ ಕಲಭ—ಮರಿದುಂಬಿ. ನಕ್ಕಾಗ ಕಾಣುವ ಹಲ್ಲುಗಳು ಮೊಗದಾವರೆಯ ಕೇಸರಗಳು. ಇವುಗಳಿಂದ ಬೆಳಗುವ ಮೊಗವು ಹಿಂದೆ ಕಾಮನನ್ನು ಸುಟ್ಟ ಶಿವನ ಕಣ್ಣುಗಳೆಂಬ ಭ್ರಮರಗಳನ್ನು ಆಕರ್ಷಿಸುತ್ತದೆ. ಮಾದಕ-ಅಮಲೇರಿಸುವ ವಸ್ತು.

 CC-O. In Public Domain. Digitized by eGangotri

ಚೆಲುವ ತಿಂಗಳ ಬೆಳಕೆನಿಸಿರೆ ನಿನ್ನಯ
ಹಣೆಯಾದುದರ್ಧೇಂದು ಶಕಲ,
ವಿಲಿಖಿತ ಮಣಿಮುಕುಟದ ಚಂದ್ರಲೇಖೆಯ
ಉಳಿದರ್ಧವಾಯ್ತು ಸುವಿಮಲ.
ಎರಡೊಂದು ಗೂಡಿ ಅಪೂರ್ಣವಾಗಿರೆ ಪೂರ್ಣ,
ಶುಭವೆನಿಸಿತು ವಿಪರ್ಯಾಯ.
ಸುರಿಸಿ ಸುಧೆಯ ಲೋಕಗಳೆಲ್ಲ ನಲಿಸುವ
ರಾಕಾ ಸುಧಾಕರನುದಯ ||೪೬||

ವಿಪರ್ಯಾಯ-ಅಸಮವಾದ ಹೊಂದಾಣಿಕೆ. ದೇವಿಯ ಹಣೆಯು ಅರ್ಧೇಂದು ಶಕಲ-ಚಂದ್ರನ ಅರ್ಧಭಾಗಕ್ಕೆ ಮಸ್ತಕದ ಚಂದ್ರಲೇಖೆಯ ತೆಣುಕನ್ನು ಜೋಡಿಸಿ ಚಂದ್ರನು ಪೂರ್ಣನಾದನೆನ್ನುವುದು ವಿಪರ್ಯಾಸವಾದರೂ ಹುಣ್ಣಿಮೆಯನ್ನು ಸೂಚಿಸಿ ಶುಭವೆನಿಸಿತು.

ಭುವನದ ಭೀತಿಯ ಹರಿಸುವ ತವಕದೆ
ನಸುಬಾಗೆ ನಿನ್ನ ಹುಬ್ಬೆರಡು
ಅವಿರತಚಲಿಸುವ ಕಂಗಳೆ ಮದನನ
ಬಿಲ್ಲೆಂಬ ಭ್ರಮೆ ಉದಿಸಿದುದು.
ದೃಷ್ಟಿಯೆ ಹೆದೆಯಾಗಿ ರತಿಪತಿ ಅದ ತನ್ನ
ಬಲಗೈಯ ಮುಷ್ಟಿಯಿಂದೆಳೆದು
ಸೃಷ್ಟಿಪ್ರಬೋಧಕ ಭಾವ ಬಾಣಗಳನು
ಬಿಡುತಿರುವನೊ ಕಾಣಲರಿದು ||೪೭||

ದೇವಿಯ ಹುಬ್ಬುಗಳೇ ಸುಂದರವಾದ ಬಿಲ್ಲು ಎಂದು ತಿಳಿದ ಕಾಮನು ನೋಟವನ್ನೇ ಹೆದೆ-ಬಿಲ್ಲಿನ ಹಗ್ಗವಾಗಿ ಭಾವಿಸಿ ಬಾಣ ಹೂಡಿ ಸೃಷ್ಟಿ ಪ್ರಜೋದಕವಾದ ಬಾಣಗಳನ್ನು ಬಿಟ್ಟನೋ ಎಂದು ಕವಿಯ ಅನಿಸಿಕೆ, ರೂಪಕಾಲಂಕಾರ.

 CC-O. In Public Domain. Digitized by eGangotri

ದೇವಿ ನಿನ್ನಯ ಎಡೆಗಣ್ಣು ರವಿ ಎನಿಸೆ
ಹಗಲಿಗಾದುದು ತುಂಬು ಬೆಳಕು,
ಭಾವಿಸೆ ಬಲಗಣ್ಣು ಚಂದ್ರಮನಾಗಿರೆ
ಇರುಳು ವಿಶ್ರಾಂತಿಯ ನಸುಕು,
ಇನ್ನುಳಿದಿಹ ಹಣೆಗಣ್ಣು ಅರಳಿರುವ
ಹೊನ್ನ ತಾವರೆಯಂದದೆಸೆಯೆ,
ಉನ್ನತಿಗೇರಿತು ಸಂಧ್ಯಾಭಿಧಾನದೆ
ಇರುಳು ಹಗಲುಗಳ ಬೆಸುಗೆ. ॥೪೮॥

ನಿನ್ನ ಕಂಗಳ ದೃಷ್ಟಿಭೇದವನರಿಯೆ, ವಿ-
ಶಾಲಾ, ಕಲ್ಯಾಣಿ, ಅಯೋಧ್ಯಾ,
ಅನನ್ಯ ಕರುಣೆ ಧಾರಾ, ಅತಿಶಯ ಮಧುರಾ, ಭೋ-
ಗವತಿ, ಅವಂತಿ, ಬಹುವಿಜಯಾ
ಎಂಬ ವಿಶಿಷ್ಟಾರ್ಥ ಪದಗಳು ಬಳಿಕಾಯ್ತು
ಪ್ರಮುಖ ನಗರಗಳ ನಾಮ,
ತುಂಬು ಶ್ರೀಮಂತಿಕೆ, ವ್ಯವಹಾರಯೋಗ್ಯ ಸಂ-
ಪನ್ನ ನುಡಿಯ ರಮ್ಯ ಧಾಮ ॥೪೯॥

ದೇವಿಯ ದೃಷ್ಟಿ ಭೇದಗಳಾದ ವಿಶಾಲಾ-ಅಂತರಂಗದ ವಿಕಾಸದಿಂದ ಲಭಿಸುವ ಅತೀಂದ್ರಿಯ ದೃಷ್ಟಿ, ಕಲ್ಯಾಣಿ-ಸ್ಫುಟವಾದ ಕಾಂತಿಯಿಂದ ಶುಭಕಾರಕ, ಅಯೋಧ್ಯಾ—ಯಾರಿಂದಲೂ ಎದುರಿಸಲು ಸಾಧ್ಯವಲ್ಲದ್ದು, ಧಾರಾ-ಜನತೆಯಲ್ಲಿ ಅನನ್ಯ ಕೃಪಾ ಸೂಚಕ, ಮಧುರ-ಸವಿಯಾದದ್ದು, ಭೋಗವತಿವಿಲಾಸ ಉಪಭೋಗಗಳನ್ನು ಬಲ್ಲ ನಾಗರಿಕರಿಂದ ಕೂಡಿದ್ದು, ಅವಂತಿ-ಮುಗ್ಧತೆಯ ಸರಳ ದೃಷ್ಟಿ, ವಿಜಯಾ-ಕಣ್ಣಿನ ಗುಡ್ಡೆಗಳು ಪಾರ್ಶ್ವಕ್ಕೆ ತಿರುಗಿ ತೃಪ್ತಿ ಸೂಚಕ, ಇವು ದೃಷ್ಟಿ ಭೇದವನ್ನು ಸೂಚಿಸುವ ಪಾರಿಭಾಷಿಕ ನುಡಿಗಳಾಗಿ ಪ್ರಚಾರಕ್ಕೆ ಬಂದು ಆಮೇಲೆ ಪ್ರಮುಖ ನಗರಗಳ ಹೆಸರಾದವು. ಕೊನೆ ಎರಡು ಸಾಲಿನಲ್ಲಿ ಈ ನಗರಗಳ ಶ್ರೀಮಂತಿಕೆ, ವ್ಯವಹಾರ ಯೋಗ್ಯವಾದ ಸುಸಂಸ್ಕೃತ ಭಾಷೆಯನ್ನು ಸೂಚಿಸುತ್ತದೆ.

Sri Vidyabharathi Book Centre, Sringeri

 CC-0. In Public Domain. Digitized by eGangotri

ರಸ ಕವಿಗಳ ಸಂದರ್ಭೋಚಿತ ನುಡಿಗಳ
ಮಕರಂದ ಪಾನದೆ ಪಡೆದ
ರಸಿಕತೆ ಮೆರೆವ ನಿನ್ನಯ ಶ್ರವಣಗಳನು
ಆಶ್ರಯಿಸುತ್ತೆಡೆಬಿಡದ
ನಿನ್ನ ಮನೋರಮ ನೇತ್ರಭ್ರಮರಗಳಾ-
ಸ್ವಾದಿಸಿ ನವರಸಗಳನು
ತನ್ನ ಚಂಚಲತೆಯ ಮೆರೆಸಿರೆ ಕರುಬುತೆ
ಕೆಂಪಡರಿತೊ ಹಣೆಗಣ್ಣು ? ॥೫೦॥

ರಸಭರಿತ ಕಾವ್ಯಗಳನ್ನು ಕೇಳಿ ರಸ ತುಂಬಿದ ದೇವಿಯ ಕವಿಗಳ ಬಳಿಯಿದ್ದ ಕಣ್ಣುಗಳು ನವರಸಾಸ್ವಾದನೆಯಲ್ಲಿ ಮಗ್ನವಾಗಿರುವುದನ್ನು ಕಂಡು ಕೋಪದಿಂದ ಹಣೆಗಣ್ಣು ಕೆಂಪಾಯಿತೇ ಎಂದು ದೇವಿಯನ್ನು ಕವಿ ಪ್ರಶ್ನಿಸುತ್ತಾನೆ.

ಶಿವನೊಳು ಶೃಂಗಾರರಸಭರಮಿತರರೋಳ್
ಕುತ್ಸಿತ ಭಾವ ಸಂಕುಚಿತ,
ಸುರನದಿಯೊಳು ರೋಷಯುತಮದ್ರೀಶನ
ಚರಿತೆಯೋಳ್ ವಿಸ್ಮಯ ಭರಿತ,
ಶಿವನ ಜಟೆಯೊಳಿಹ ಅಹಿಗತಿಶಯ ಭೀತಿ,
ಗೆಳತಿಯರೊಳು ಸ್ನೇಹ ಪೂರ್ಣ
ವಿವಿಧ ಭಂಗಿಯನಿಂತು ತಳೆವ ನಿನ್ನಯ ದೃಷ್ಟಿ
ನನ್ನ ಮೇಲಿರಲಿ ಸಕರುಣ. ॥೫೧॥

ದೇವಿಯ ದೃಷ್ಟಿಯಲ್ಲಿ ನವರಸಗಳನ್ನು ಕಂಡ ಕವಿ ಹೇಳುತ್ತಾನೆ, ಶಿವನಲ್ಲಿ ಶೃಂಗಾರ, ಶಿವನಿಂದಕರಲ್ಲಿ ಕುತ್ಸಿತ- ಅಸಹನೆ ಮನಃ ಸಂಕೋಚಗಳನ್ನು ಸೂಚಿಸುವ ರೌದ್ರ ಭೀಭತ್ಸರಸಗಳು; ಸವತಿಯೆಂದು ಗಂಗಾ ನದಿಯಲ್ಲಿ ವೀರ ರಸದ ರೋಷ, ಶಿವನ ಚರಿತ್ರೆ ಕೇಳಿದಾಗ ಅದ್ಭುತ ರಸದ ವಿಸ್ಮಯ; ಶಿವನ ಆಭರಣಗಳಾದ ಹಾವುಗಳಲ್ಲಿ ಭಯಾನಕ, ಸಖಿಯರಲ್ಲಿ ಹಾಸ್ಯ, ಭಕ್ತರಲ್ಲಿ ಅನುಗ್ರಹ ರೂಪವಾದ ಕರುಣೆ ಶಾಂತಿ ರಸಗಳು, ಅಭಿವ್ಯಕ್ತವಾಗಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಡಿರೆ ಕವಿಗಳವರೆಗೆ ಕುರುಳು ಗರು–
ತ್ಮಂತನಂದದೊಳವತರಿಸಿ,
ಪುರಗಳ ದಹಿಸಿದ ಪರಶಿವನಂತರಂ-
ಗದೆ ಪ್ರೇಮರಸಪ್ರೂರ ಹರಿಸಿ
ಮೆರೆವ ನಿನ್ನೆರಡು ಕಣ್ಣುಗಳ ಬಣ್ಣಿಪರೆ ಹಿ-
ಮಾದ್ರಿ ಕುಲೋತ್ತುಂಗ ಕಲಿಕೆ,
ಅರಲಂಬನಾಕರ್ಣಮೆಳೆದು ಬಿಟ್ಟ ಕುಸಮ-
ಬಾಣದ ನೆನಪಾಯ್ತು ಮನದೆ. ॥೫೨॥

ದೇವಿಯನ್ನು ''ಹಿಮಾದ್ರಿ ಕುಲೋತ್ತುಂಗ ಕಲಿಕೆ'' ಪರ್ವತ ರಾಜ ಹಿಮವಂತನ ವಂಶದಲ್ಲಿ ಅತಿ ಶ್ರೇಷ್ಟವಾದ ಹೂವೊಗ್ಗೆ ಎಂದು ಸಂಭೋದಿಸಿ ಹೇಳುತ್ತಾನೆ ಕವಿ: ಗರುತ್ಮಂತ–ಪಕ್ಷಿ ರಾಜ ಗರುಡನಂತೆ ಕವಿಗಳವರೆಗೆ ಹರಡಿದ ಮುಂಗುರುಗಳನ್ನು ಆಡಿಸುತ್ತ ನೀನು ಕಾಣಿಸಿಕೊಂಡು ತ್ರಿಪುರಗಳನ್ನು ಸುಟ್ಟ ಪರಶಿವನಲ್ಲಿ ಪ್ರೇಮರಸ ಪ್ರವಾಹವನ್ನು ಹರಿಸಿದ ನಿನ್ನನ್ನು ನೋಡಿದಾಗ ನನಗೆ ಕಾಮದೇವನು ಕವಿಯವರೆಗೆ ಎಳೆದು ಬಿಟ್ಟ ಹೂಬಾಣಗಳ ನೆನಪಾಯಿತು.

ಮೂರು ಬಣ್ಣದ ನಿನ್ನ ಕಂಗಳ ಕಾಂತಿಗೆ
ಕಾಡಿಗೆ ಕಪ್ಪಲೇಪಿಸಿರೆ
ಬೇರೆ ಬಣ್ಣಗಳಾಗಿ ಕಾಣುತಲಿಹುದೆಂದು
ಬೇಸರಾಯಿತೆ ಶಿವದಯಿತೆ ?
ವಿಶ್ವದ ಪುನಸೃಷ್ಟಿಗೆಳಸಿದೆಯೋ ಬ್ರಹ್ಮ
ವಿಷ್ಣು ರುದ್ರರ ಪುನರ್ಘಟಿಸಿ !
ನತ್ವರವಾದುದೊ ಸತ್ವರಜಸ್ತಮೋ-
ಗುಣಗಳಾಳ್ವಿಕೆ ಜಡವೆನಿಸಿ ॥೫೩॥

ಸತ್ವ ರಜತಮೋಗುಣಗಳ ಪ್ರತೀಕವಾದ ದೇವಿಯ ಮೂರು ಬಣ್ಣದ ಕಣ್ಣುಗಳಿಗೆ ಕಾಡಿಗೆ ಕಪ್ಪನ್ನು ಲೇಪಿಸಿರುವುದನ್ನು ಕಂಡು ಕವಿ ದೇವಿಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಶ್ನಿಸುತ್ತಾನೆ. ವಿಶ್ವದ ಪುನಸ್ಸೃಷ್ಟಿಗಾಗಿ ಬ್ರಹ್ಮಾದಿಗಳನ್ನು ಪುನರ್ಘಟಿಸು ವಿರಾ ? ಸತ್ವಾದಿಗುಣಗಳ ಆಳ್ವಿಕೆ ಜಡವಾಯಿತೆ ? ಎಂದು.

ಪರಶಿವನೊಳು ನೆಟ್ಟ ಮನಸಿನಂಗನೆ, ನಮ್ಮ
ಪಾವನಗೊಳಿಸೆ ನೀನಿಂದು
ಕರುಣೆವೆರಸು ಕಂಗಳರುಣ ಧವಳ ನೀಲ
ಕಾಂತಿಯು ನೆರಸುತೆ ಬಂದು,
ನದವಾಗಿ ಶೋಣರೂಪದೆ ಗಂಗಾ ಯಮುನೆಯು-
ರೆಂಬ ನದೀ ನಾರಿಯರನು
ಪದುಳದೆ ಕೂಡಿ ತ್ರಿವೇಣಿ ಸಂಗಮವಾಗಿ
ಹರಿವೆ ಹರಿಸಿ ಪಾಪಗಳನು ||೫೪||

ಗಂಗೆಯು ಧವಳ, ಯಮುನೆಯು ನೀಲ, ಈ ಎರಡು ನದೀ ನಾರಿಯರನ್ನು ರಕ್ತವರ್ಣದ ಪುನ್ನದ ಶೋಣಾ ಕೂಡುವುದರಿಂದ ಪಾಪ ಹಾರಕವಾದ ತ್ರಿವೇಣೀ ಸಂಗಮವಾಗುತ್ತದೆ.

ನಿನ್ನ ಕಣ್ಣುಗಳ ಉನ್ಮೇಷ ನಿಮೇಷವೆ
ಜಗದುದಯಾಸ್ತಕಾರಣವು
ಮುನ್ನ ಪರಿಣತ ಆಭಿಜ್ಞ ಮತಿಗಳಿದ
ಸಂತರಂದದೆ ನುಡಿದಿಹರು.
ಧರಾಧರ ರಾಜನ್ಯಕನ್ಯೆ, ನೀನರಿತಿದ
ಉನ್ಮೇಷದುದಿಸಿದ ಜಗವ
ಪೊರೆಯೆ ಪ್ರಳಯದಿಂದೆ ಅನಿಮೇಷ ಲೋಚನೆ
ಆಗಿರುವೆಯೊ ತೋರಿದಯವ ||೫೫||

ದೇವಿಯ ಕಣ್ಣುಗಳನ್ನು ಮುಚ್ಚಿ ತೆರೆಯುವುದೇ ಜಗತ್ತಿನ ಉದಯಾಸ್ತ ಗಳೆಂಬ ಆಭಿಜ್ಞರ ವಚನವಂತೆ ಉನ್ಮೇಷದಿಂದ ಉಲಿಸಿದ ಜಗತ್ತು ನಾಶವಾಗ
CC-O. In Public Domain. Digitized by eGangotri

CC-O. In Public Domain. Digitized by eGangotri

ದಿರಲೆಂದು ದೇವಿಯು "ಅನಿಮೇಷ" ಮುಚ್ಚದಿರುವಕಣ್ಣಿನವಳಾಗುತ್ತಾಳೆ ಎಂದು ತಾತ್ಪರ್ಯ.

ಕವಿಗಳ ಬಳಿಯಿದ್ದು ಪಿಕುನಿಮಾತಾಡುವ
ನಿನ್ನ ಕಣ್ಣುಗಳಿಗೆ ಬೆದರಿ
ಅವಿತುಕೊಂಡಿರುವವೊ ನೀರಲಿ ಮೀಂಗಳು,
ತೆರೆದ ಕಂಗಳ ದೀನಜೀವಿ,
ಅಂತೆ ಕಂಗಳ ಚೆಲುವಿಗೆ ನಾಚಿ ಕುಮುದಶ್ರೀ
ದಳದ ಕದವ ಮುಚ್ಚಿ ಹಗಲು
ಬಂತೆನೆ ನಿಶಿ, ತೆರೆಯುತೆ ಹೊರಬರುವಳು.
ಸಮನಾಯ್ತು ಭೀತಿ-ಈರ್ವರಿಗು ||೫೬||

ಕವಿಗಳು ದೇವಿಯ ಕಣ್ಣುಗಳಿಗೆ ಹೋಲಿಸಿದ್ದನ್ನು ಕಂಡು ಮೀನು ನೀರ ಲ್ಲಡಗಿದವು. ನೈದಿಲೆಯು ಹಗಲಲ್ಲಿ ದಳಗಳ ಮರೆಯಲ್ಲಿದ್ದು ರಾತ್ರಿಯಾದಾಗ ಕಾಣಿಸಿಕೊಳ್ಳುವುದು ಎಂದು ತಾತ್ಪರ್ಯ.

ಅರೆಬಿರಿದಿಹ ನೈದಿಲಂದನೆಲ್ಲವ ಕದ್ದ
ನಿನ್ನ ಕಂಗಳ ಕೃಪಾದೃಷ್ಟಿ,
ತೊರೆಯಾಗಿ ಹರಿದಿರೆ ಅದಕೊಳೀ ದೀನನ
ಮುಳುಗಿಸುವುದೆ ನವಸೃಷ್ಟಿ.
ಗಿರಿರಾಜಸುತೆ, ನಿನಗಿದರಿಂದಿನಿತು ಹಾನಿ
ಇಲ್ಲ ನಾನಾಗುವೆ ಧನ್ಯ !
ಆರಮನೆ ಅಡವಿ ಎಂಬಂತರವಿಲ್ಲದೆ
ಶಶಿ ಬೆಳಗುವಳು ಸಮಾನ ||೫೭||

CC-O. In Public Domain. Digitized by eGangotri

ದೇವಿ, ನಿನ್ನಯ ಕಣ್ಣು ಕಿವಿಗಳ ನಡುವಣ
ಕೆನ್ನೆ ಕುಟಿಲತೆಯ ಮೆರಸೆ
ಹೂವಂಬಿನಾತನ ಕೋದಂಡ ಇದೆ ಎಂಬ
ಭಾವನೆ ಮನದೊಳಗುದಿಸೆ-
ಶ್ರವಣಪಥವ ದಾಟಿ ಮುಂದೆ ನಡೆಯುತಿಹ
ಅಪಾಂಗ ವ್ಯಾಸಂಗ ವಿಲಾಸ
ಹವಣಿನಿಸಿರೆ ರತಿಪತಿ ಶರಸಂಧಾನ-
ಕಾದುದು ಪ್ರತಿಭೆ ಆದರ್ಶ ||೫೪||

ದೇವಿಯ ಕಣ್ಣು ಕಿವಿಗಳ ನಡುವೆ ನಡೆಯುವ ಅಪಾಂಗ ವ್ಯಾಸಂಗ– ಓರೆನೋಟದ ಅಭ್ಯಾಸವನ್ನು ಕಂಡು ಕಾಮನು ತನ್ನ ಶರಸಂಧಾನ ಚಾತುರ್ಯ ಪ್ರದರ್ಶನಕ್ಕೆ ಇದು ಸರಿಯಾದ ಆದರ್ಶವೆಂದು ತಿಳಿದು ಅಭ್ಯಾಸ ಮಾಡಿದನು ಎಂದು ತಾತ್ಪರ್ಯ.

ಮಿರುಗುವ ನಿನ್ನ ಕೆನ್ನೆಗಳೆ ಕನ್ನಡಿಯಾಗೆ
ಪ್ರತಿಬಿಂಬಿಸಿದ ಓಲೆ ಎರಡು
ಗಿರಿಜಾತೆ, ನಿನ್ನಯ ಮೊಗವೆಂಬ ಅನುಪಮ
ರಥಕಾಗೆ ನಾಲ್ಕು ಚಕ್ರಗಳು,
ಕಲಿಕಾಮನದನೇರಿ ರವಿಶಶಿ ಚಕ್ರದ
ಪೃಥ್ವಿರಥದೊಳಿಹ ಶಿವನ
ಕಲಿತನದಿಂದೆ ಕಾದಾಡಿ ಗೆಲುವೆನೆಂದು
ತಿಳಿಯುತಾದನು ಮತಿಹೀನ ||೫೯||

ದೇವಿಯ ಮುಖವೆಂಬ ರಥಕ್ಕೆ ಕೆನ್ನೆಯಲ್ಲಿ ಪ್ರತಿಬಿಂಬಿಸಿದ ಓಲೆಗಳೂ ಸೇರಿ ನಾಲ್ಕು ಚಕ್ರಗಳಾಗಲು ಅದನ್ನೇರಿದ ಕಾಮನು ಸೂರ್ಯ ಚಂದ್ರರೆಂಬ ಎರಡೇ ರಥಗಳಿರುವ ಪೃಥ್ವಿರಥದಲ್ಲಿರುವ ಶಿವನನ್ನು ಸೋಲಿಸುವೆನು ಎಂದು ಭಾವಿಸಿ ಮತಿಹೀನನಾದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಮೃತ ಲಹರಿಯ ಮಾಧುರ್ಯವ ಹರಿಸುವ
ತನ್ನ ಸೂಕ್ತಿಗಳನು ವಾಣಿ
ಅವಿತೋತ್ಸಾಹದೆ ಹಾಡುತಿರಲದ ಶ್ರವಣ ಸು-
ವರ್ಣಪಾತ್ರದೆ ಪಾನಮಾಡಿ
ದೇವಿ ಮೆಚ್ಚುಗೆ ತೋರೆ ತಲೆಯ ನಾಡಿಸೆ ಮಣಿ-
ಕುಂಡಲಗಳ ಝಣತ್ಕಾರ,
ಭಾವುಕತೆಯ ಪರಾಕಾಷ್ಠೆ ತಾನಾದುದು
ಗಾನಕೊಪ್ಪುವ ಶೃತಿದಾನ ॥೬೦॥

ಗಿರಿಜೆ, ನಿನ್ನಯ ನಾಸಾದಂಡವೆ ಹಿಮಗಿರಿ
ವಂಶಧ್ವಜದ ಬಿದುರೆನಿಸಿ
ದೊರಕಿಸಲೆನಗಿಂದು ನಿನ್ನ ಸಾನ್ನಿಧ್ಯದ
ಸೌಭಾಗ್ಯಗಳನು ಸಂದಣಿಸಿ
ತನ್ನೊಳಗಿನ ಮುತ್ತುಗಳ ಚಂದ್ರನಾಡಿಯ
ಮೆಲ್ಲುಸಿರಿಂದುದುರಿಸುತೆ
ಚೆನ್ನಾಗಿಸಲಿ ಒಳಹೊರಗಿನೆಡೆಗಳನು
ಮುತ್ತಿನ ಮಳೆಸುರಿದಂತೆ ॥೬೧॥

ದೇವಿಯ ನಾಸಿಕವೇ ಹಿಮವಂತನ ವಂಶಧ್ವಜದ ಬಿದುರಿನ ದಂಡ. ಅದು ಭಕ್ತನಾದ ನನಗೆ ನಿನ್ನ ಸಾನ್ನಿಧ್ಯ ಸೌಭಾಗ್ಯವನ್ನು ದೊರಕಿಸಲಿ. ಮುತ್ತುಗಳ ಮಳೆಗೆರೆದು ನನ್ನ ಆಂತರಂಗ ಬಹಿರಂಗಗಳನ್ನು ಶುದ್ಧಿಮಾಡಲಿ ಎಂದು ಪ್ರಾರ್ಥಿಸುತ್ತಾನೆ ಕವಿ. ಬಿದುರು ಮೆಳೆಯಲ್ಲಿ ಮುತ್ತುಗಳು ಹುಟ್ಟುವುದೆಂಬ ಜನರ ನಂಬಿಕೆಯನ್ನು ಕವಿ ವಿಡಂಬಿಸಿದ್ದಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹಜದೆ ಕೆಂಪಾದ ನಿನ್ನ ಅಧರಗಳ
ಕೆಂಬಣ್ಣ ಕೆಣೆಯುಂಟೆ ಜಗದೆ ?
ಮಹೋದಧಿ ತಳದೆ ತಪದೊಳಿದೆ ಹವಳದ
ಲತೆಗಳಾ ಚೆಂಬಣ್ಣವಡರೆ,
ತೊಂಡೆ ತವಕಿಸುತೆ ಚಂದುಟಿಗುಪಮೆಯಾ-
ಗಿರೆ ಕವಿಸಮಯವೆನಿಸಿತು.
ಕಂಡುದುಂಟೇ ದೇವಿ, ನಿನ್ನ ಅಧರದೊಡ-
ನಿವುಗಳನಿಟ್ಟು ತೂಗುವುದು, ॥೬೨॥

ಓ ದೇವಿ, ನಿನ್ನ ತುಟಿಗಳ ಕೆಂಪನ್ನು ಪಡೆಯಲು ಹವಳದ ಲತೆ ಸಮುದ್ರ ತಳದಲ್ಲಿ ತಪಸ್ಸು ಮಾಡುತ್ತಿದೆ. ತೊಂಡೆ ಹಣ್ಣನ್ನು ತುಟಿಗಳಿಗೆ ಹೋಲಿಸುವುದು, ಅರ್ಥವಿಲ್ಲದ ಕವಿ ಸಮಯ. ನಿನ್ನ ಆಧರಗಳಿಗೆ ಇವುಗಳನ್ನು ಹೋಲಿಸಿ ತೂಗಿನೋಡುವುದನ್ನು ಯಾರೂ ಒಪ್ಪುವುದಿಲ್ಲ ಎಂದು ಪದ್ಯದ ತಾತ್ಪರ್ಯ.

ಅನುದಿನ ನಿನ್ನಯ ಮುಗುಳು ನಗೆಯ ಮೃದು
ಮಧುರ ಜ್ಯೊತ್ಸ್ನೆಯ ಬಿಂದುಗಳನು,
ಮನವಾರೆ ಕುಡಿಯುತೆ ಚಂಚುಪುಟವೆ ಜಡ-
ವಾಗೆ ಚಕೋರ ಸಂಕುಲಕೆ
ಹುಳಿರಸದಭಿರುಚಿ ಬೆಳೆಯೆ ಚಂದ್ರಿಕೆಯನು
ಹುಳಿತ ಕಂಬಳವೆಂದು ಭ್ರಮಿಸಿ
ಗಳಗಳ ಕುಡಿಯುತೆ ಸ್ವಚ್ಛಂದ ನಲಿವುದ
ನೋಡುತಲಿರುವೆನು ಪ್ರತಿನಿಶಿ ॥೬೩॥

ಜ್ಯೊತ್ಸ್ನೆ—ಬೆಳದಿಂಗಳು. ಮನವಾರೆ ಅದನ್ನು ವಾದಮಾಡಿದ ಚಕೋರ ಪಕ್ಷಿಗಳ ಚಂಚು-ಕೊಕ್ಕೆಗಳು ರಸಗ್ರಾಹಕ ಶಕ್ತಿಯನ್ನು ಕಳೆದುಕೊಂಡು ಜಡವಾಗಿ ಹುಳಿರಸದಲ್ಲಿ ಅಭಿರುಚಿ ಬೆಳೆಸಿಕೊಂಡು ಬೆಳದಿಂಗಳನ್ನು ಹುಳಿತ ಕಂಬಳ—ಹುಳಿಹಿಡಿದ ಗಂಜಿಯೆಂದು ಗಳಗಳ ಕುಡಿಯುವುದನ್ನು ನಾನು ಪ್ರತಿ ರಾತ್ರಿ ನೋಡುತ್ತಿದ್ದೇನೆ ಎಂದು ಕವಿ ತನ್ನ ಚಿನ್ಮಯವನ್ನು ಹೇಳುತ್ತಾನೆ.

Sri Vidyabharathi Book Centre, Singeri

CC-O. In Public Domain. Digitized by eGangotri

ಓದಿ ಓದಿ ಮರುಳಾದ ಕೂಚಂಭಟ್ಟ ಎಂಬ ಗಾಧೆಯಂತೆ ವಿದ್ಯಾಧಿಕ್ಯದಿಂದ ವ್ಯವಹಾರ ಜ್ಞಾನವನ್ನು ಮರೆತ "ಜ್ಞಾನಲವ ದುರ್ವಿಧಜ್ಞ"ರನ್ನು ಈ ಪದ್ಯ ದಲ್ಲಿ ವಿಡಂಬಿಸಿದೆ.

ಪತಿ ಪರಶಿವನ ಪ್ರಶಾಂತ ಗುಣಗಳನು
ಅವಿರತ ಅಶ್ರಾಂತ ಜಪಿಸಿ,
ಸತೀಕುಲತಿಲಕೆ, ನಿನ್ನಯ ಜಿಹ್ವೆಯಾಯ್ತೊ ಜ-
ಪಾಸುಮ, ಅನುರಕ್ತಿ ಘನಿಸಿ ?
ಇಚ್ಛೆಯಿಂದಿಹಳಲ್ಲಿ ಜಿಹ್ವಾಗ್ರ ಪೀಠಸ್ಥೆ
ಶಾರದೆ, ವಾಗಧಿದೇವಿ,
ಅಚ್ಚ ಸ್ಪಟಿಕದಂತೆ ಮಾಣಿಕ್ಯತನುರುಚಿ
ಬೆಳಗುತಿರುವಳನುಭಾವಿ ॥೬೪॥

ವಾಗಧಿದೇವಿಯಾದ ಸರಸ್ವತಿಯು ದೇವಿಯ ಜಿಹ್ವಾಗ್ರದಲ್ಲಿ ನೆಲಸಿರುವ ಳೆಂಬುದು ಆಗಮ ರಹಸ್ಯ. ಸತಿಕುಲತಿಲಕೆಯಾದ ದೇವಿಯ ವಾಣಿ-ಅನುಭಾವ ಅತೀಂದ್ರಿಯ ಅನುಭವದಿಂದ ಕೂಡಿದುದೆಂದು ಅಭಿಪ್ರಾಯ.

ದನುಜರ ಗೆದ್ದು ನಿನ್ನಡಿಗೆರಗಲು ಬಂದು
ಮಕುಟಗಳನು ತೆಗೆದಿಟ್ಟು
ವಿನಯದೆ ಚಂಡ ಪ್ರಮುಥನರ್ಪಿಸಿದ ನಿರ್ಮಾ-
ಲ್ಯವನು ಬೇಡೆನ್ನುತೆ ಬಿಟ್ಟು
ಇಂದ್ರಾದಿಸುರರು ಷಣ್ಮುಖನ ನೇತೃತ್ವದೆ
ನೀನಿತ್ತ ತಂಬುಲ ಪುಡಿಕೆಯನು
ಸಾಂದ್ರ ಕರ್ಪೂರದ ಶಕಲಸುಗಂಧಿತ
ವೆಂದು ಮುದದೆ ಸೇವಿಸುವರು ॥೬೫॥

ಶಿವನ ನಿರ್ಮಾಲ್ಯ–ಪ್ರಸಾದದ ಅವಶೇಷಕ್ಕಿಂತ ದೇವಿಯು ಕೊಟ್ಟ ತಂಬುಲಪುಡಿಕೆ–ತಾಂಬೂಲದ ಪೊಟ್ಟಣವು ಶ್ರೇಷ್ಠವೆಂಬುದನ್ನು ಇಲ್ಲಿ ಪ್ರತಿ ಪಾದಿಸಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶೂಲಪಾಣಿಯ ವಿಜಯೋತ್ಸವ ಗೀತವ
ವಾಣಿ ಹಾಡಲು ವೀಣೆ ನುಡಿಸಿ
ಕೇಳಿ ಹರ್ಷದೆ ನೀನು ಭಾಪು ! ಭಳಿರೆ ! ಎನೆ
ಮೆಚ್ಚಿನ ನುಡಿಗಳ ಬಳಸಿ,
ನಿನ್ನ ಕಂಠದ ಮಧುರತೆ ವೀಣೆಗಿಲ್ಲೆಂದು
ತಿಳಿದು ತಾತ್ಸಾರದೆ ತಾನೆ
ತನ್ನ ಸೆರಗ ಗವಸಿಣೆ ಮಾಡಿ ವೀಣೆಯ
ಮುಚ್ಚುತಿದ್ದಳು ವಾಣಿಜಾಣೆ ||೬೬||

ಮಗಳೆಂಬ ಮಮತೆಯಿಂ ಮುದ್ದಿಸೆ ಗಿರಿರಾಜ-
ನೆತ್ತಿ ಹಿಡಿದ ಸಿರಿ ಚಿಬುಕ,
ನಗುದಿನ ನೆರೆ, ನಿನ್ನ ಅಧರದ ಮಧುಪಾನಾ-
ಕುಲ ಶಿವನಿಗೆ ಪಾತ್ರೆ ಬಳಿಕ.
ಮರಳಿ ಶಿವನ ಮೊಗವೆಂಬ ಕನ್ನಡಿಗೆ ಕೈ-
ಪಿಡಿಯಂತೆಸೆವ ಹೊನ್ನ ಪುರುಳಿ,
ಗಿರಿರಾಜಸುತೆ, ನಿನ್ನ ಗಲ್ಲಕುಪಮೆ ಇಲ್ಲ-
ದಿರಲು ನಾನೆಂತು ಬಣ್ಣಿಸಲಿ ||೬೭||

ಗಲ್ಲ–ತುಟಿಯ ಕೆಳಭಾಗದ ಮೂರು ಅವಸ್ಥಾಂತರಗಳನ್ನು ಇಲ್ಲಿ ವರ್ಣಿಸಿದೆ. (೧) ಬಾಲ್ಯದಲ್ಲಿ ಹಿಂದೆ ಹಿಮವಂತನು ನಿನ್ನನ್ನು ಮುದ್ದಿಸಲು ಹಿಡಿದೆತ್ತುತ್ತಿದ್ದ ಅಂಗ, (೨) ಮದುವೆಯಾದ ಮೇಲೆ ಅಧರ ಪಾನಾಸಕ್ತನಾದ ಶಿವನ ಪಾನ ಪಾತ್ರೆ. (೩) ಶಿವನ ಮುಖವೆಂಬ ಕನ್ನಡಿಗೆ ಕೈಪಿಡಿಯಂತಿರುವ ಹೊನ್ನಪುರಳಿ, ಗಿಣಿಮರಿ ಆಕಾರದ ಚಿನ್ನದ ಕೈಪಿಡಿ.

 CC-O. In Public Domain. Digitized by eGangotri

ಪುರಮಥನನ ಭುಜಾಲಿಂಗನದಿಂದೆ ರೋ-
ಮಾಂಚಿತವಾಗೆ ನಿನ್ನ ತನು,
ಕೊರಳಾಯ್ತು ಮುಖ ಕಮಲದ ದಂಟಿನಂತೆ ಆ
ನಂದಾನುಭವ ಗಾನ ವೇಣು,
ಸುತ್ತಿ ಕಂತವ ಜೋತ ಮುತ್ತಿನ ಸರವಾಯ್ತು
ಅಗರು ಚಂದನ ಪರಿಮಳಿತ,
ಕತ್ತುರಿ ಲೇಪದೆ ಕಂದು ಬಣ್ಣವನಾಂತು,
ಬಳ್ಳಿಯಂದದಲಿ ವಿಚಲಿತ ॥೬೮॥

ಶಿವನ ಆಲಿಂಗನದಲ್ಲಿ ರೋಮಾಂಚಿತೆಯಾದ ದೇವಿಯನ್ನು ಈ ಪದ್ಯದಲ್ಲಿ ವರ್ಣಿಸಿದೆ. ಮುಖಕಮಲಕ್ಕೆ ಕೊರಳೇ ಆನಂದಾನುಭವದ ಗಾನವೇಣು-ಗಾನಕ್ಕೆ ಅನುವಾದ ಕೊಳಲು, ಕಸ್ತೂರಿ ಲೇಪದಿಂದ ಕಂದು ಬಣ್ಣವಾದ ಮುತ್ತಿನ ಹಾರವೇ ಬಳ್ಳಿ ಎಂದು ರೂಪಾಕಾಲಂಕಾರ.

ಗತಿ ಗೀತೆ ಗಮಕದೆ ನಿನ್ನ ನೈಪುಣ್ಯವ
ಸಾರಿತ್ತು ಕೊರಳ ತ್ರಿರೇಖೆ,
ಅತಿಶಯವೆನಿಸಿತ್ತು ಮದುವೆಯೋಳ್ ಮುಂಗಳ
ಸೂತ್ರದ ಮೂರೆಳೆಯಂತೆ.
ಅನುಮತವೆರಡಕ್ಕು, ಮಧುರ ಮಧುರ ತರ
ರಾಗರಂಜಿತ ರಸಭಾವ,
ಧ್ವನಿಸಿತ್ತು ಗಾನದೆ, ಷಡ್ಜ ಮಧ್ಯಮ ಗಾಂಧಾ-
ರದ ತಾನಕನುಮತ ನಿಭವ ॥೬೯॥

ಸಂಗೀತದ ಗತಿ ಗಮಕ ಗೀತಗಳ ರಹಸ್ಯಗಳನ್ನು ತಿಳಿದಿರುವ ಪ್ರತೀಕ ನಿನ್ನ ಕೊರಳಲ್ಲಿರುವ ಮೂರು ರೇಖೆಗಳು ಮದುವೆಯಲ್ಲಿ ಧರಿಸಿದ ಮಂಗಳ ಸೂತ್ರದ ಮೂರೆಳೆಯಂತೆ ಕಂಡರೂ ರಾಗರಂಜಿತ ರಸಭಾವಗಳನ್ನು ವ್ಯಕ್ತಪಡಿಸಲು ಷಡ್ಜ ಮಧ್ಯಮ ಗಾಂಧಾರವೆಂಬ ಮೂರು ಶ್ರುತಿಗಳಿಗೂ ಸರಿಯಾದ ತುಂಬು ಧ್ವನಿಯನ್ನು ಪಡೆದಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ತಾವರೆ ದಂಟಂತೆ ಕೋಮಲವೆನಿಸಿದ
ನಿನ್ನ ಈರೆರಡು ತೋಳುಗಳ
ಲಾವಣ್ಯವನು ದೇವಿ, ತನ್ನ ನಾಲ್ಕೊಗದಿಂದೆ
ಬಣ್ಣಿಸೆ ಬ್ರಹ್ಮನನುಗಾಲ
ಹಿಂದೆ ಶಿವನು ಉಗುರ್ಗೊನೆಯಿಂದೆ ತಲೆಯೊಂದ
ಚಿವುಟಿ ತೆಗೆದುದನು ನೆನೆದು
ಇಂದುಳಿದಿಹ ನಾಲ್ಕು ತಲೆಗಳಿಗಭಯವ
ಬೇಡುತಿಹನೊ ಎಂಬಂತಿಹುದು ॥೭೦॥

ಅಂದೆ ಅರಳಿದ ಕೆಂದಾವರೆಗಳ ಕಾಂತಿಯ
ನಾಚಿಸಿ, ನಗಿಸಿ, ಸೋಲಿಸುವ
ಅಂದದುಗುರುಗಳ ನಿನ್ನ ಕೈಗಳನೆಂತು
ಬಣ್ಣಿಪೆ ದೇವಿ, ನೀ ಹೇಳಾ.
ಕ್ರೀಡಿಸುತಿರೆ ನೀನು, ಕಾಲ್ಗಲಲತಿಗೆಯ
ನಸುಗೆಂಪು ಬಣ್ಣವ ಪಡೆದು
ರೂಡಿಸಿಕೊಂಡ ಕೆಂದಾವರೆ ನಿನ್ನ ಕೈ-
ಗಳಿಗೆಣೆಯಹುದೆ ಹೋಲಿಸಲು ॥೭೧॥

ಜ್ಞಾನಮೂರುತಿ ಗುಹ ವಿಷ್ಣ್ವೀಶ್ವರರನೇಕ-
ಕಾಲದೊಳುಣಿಸಿದ ನಿನ್ನ
ಪೀನ ಪಯೋಧರನೆಮ್ಮದುಃಖಗಳನು
ಹರಿಸಲಿ—ಅಮೃತರಸಪೂರ್ಣ.
ಎಳೆಯನಾಗಿರೆ ಅದನೋಡಿ ಗಣಪನೋರ್ಮೆ
ಸಂದೇಹದಲಿ ತನ್ನ ತಾನು
ತಲೆಮುಟ್ಟಿನೋಡುತೆ ತಂದೆತಾಯ್ ಸಹಜರ
ಅಪಹಾಸಕೀಡೆನಿಸಿದನು ॥೭೨॥

 CC-O. In Public Domain. Digitized by eGangotri

ತುಂಬಿದಮೃತರಸ ರತ್ನ ಕಲಶಗಳು
ನಿನ್ನ ಸ್ತನಯುಗಳಮೆಂದು
ನಂಬಿರುವೆವು ದೇವಿ, ಸಂದೇಹವಿನಿತಿಲ್ಲ,
ನೀನಾಗಿರುವೆ ಜ್ಞಾನಸಿಂಧು
ಪಾನಮಾಡುತೆ ನಿನ್ನ ಸ್ತನವ ಬೆಳೆದ ಷ-
ಡಾನನ ವಿಘ್ನಾಧೀಶ್ವರರು
ಮಾನಿನಿಯರ ಸಂಗ ಸುಖನನರಿಯದ ಸಾ–
ಹಿತ್ಯಾರಾಧಕ ಜ್ಞಾನಧನರು ||೭೩||

ಈ ಎರಡು ಪದ್ಯಗಳಲ್ಲಿ ದೇವಿಯ ಸ್ತನಪಾನದ ಪೌಷ್ಟಿಕತೆ ಜ್ಞಾನ ಸಮೃದ್ಧಿಯನ್ನು ಹೇಳಿದೆ. ತಾಯಿಯ ಎದೆ ಹಾಲನ್ನು ಕಂಡ ಗಣಪನಿಗೆ ಆನೆಯ ಗಂಡಸ್ಥಲದ ನೆನಪಾಗಿ ತಲೆಸವರಿಕೊಂಡು ತಂದೆ ತಾಯಿಗಳ ಹಾಸ್ಯಾಸ್ಪದನಾದ. ಜ್ಞಾನದ ಸಿಂಧು–ಸಮುದ್ರವೇ ಆದ ದೇವಿಯ ಎದೆ ಹಾಲನ್ನು ಕುಡಿದು ಬೆಳೆದ ಗಣಪ ಷಣ್ಮುಖರಿಬ್ಬರೂ ಸ್ತ್ರೀಯರ ಸಂಗವನ್ನೇ ಅರಿಯದ "ಸಾಹಿತ್ಯಾರಾಧಕ" ಜ್ಞಾನಧನರಾದರು.

ಜನನಿ, ನಿನ್ನ ಸ್ತನಯುಗವನಲಂಕರಿ-
ಸಿರುವ ಮುತ್ತಿನ ಕಂಠೀಹಾರ
ದನುಜ ಗಜಾಸುರನುತ್ತಮಾಂಗದೊಳುದಿ–
ಸುತ್ತೆ ಧವಳದ್ಯುತಿ ರುಚಿರ.
ಅಲ್ಲಿ ಪ್ರತಿಫಲಿಸೆ ಅಧರದರುಣ ಕಾಂತಿ.
ಮುನ್ನ ನಿನ್ನಯ ಪತಿ ಶಿವನು
ಗೆಲ್ಲುತೆ ತ್ರಿಪುರರ ಪಡೆದ ಕೀರ್ತಿದ್ಯುತಿ
ವ್ಯಾಮಿಶ್ರಮಾದವೊಲಿಹುದು ||೭೪||

CC-O. In Public Domain. Digitized by eGangotri

ದೇವಿಯ ಕೊರಳಲ್ಲಿರುವ ಮುತ್ತಿನ ಹಾರವು ಗಜಾಸುರನ ಮಸ್ತಕದಲ್ಲಿ ಹುಟ್ಟಿದ ತಿಳಿಮುತ್ತುಗಳಿಂದ ರಚಿಸಲ್ಪಟ್ಟು ದೇವಿಯ ತುಟಿಗಳ ಕೆಂಬಣ್ಣ ಅದರಲ್ಲಿ ಪ್ರತಿಬಿಂಬಿಸಿ ತ್ರಿಪುರಾಂತಕ ಶಿವನ ಯಶಸ್ಸನ್ನು ಸೂಚಿಸುತ್ತದೆ ಎಂದು ಪದ್ಯದ ತಾತ್ಪರ್ಯ.

ಚಾಲುಕ್ಯ ಅರಸು ಸರ್ವಜ್ಞ ಸೋಮೇಶ್ವರನು "ಅಭಿಲಷಿತಾರ್ಥ ಚಿಂತಾಮಣಿ"ಯಲ್ಲಿ ಮುತ್ತುಗಳು ಹುಟ್ಟುವ ಸ್ಥಾನಗಳನ್ನು ಹೀಗೆ ಹೇಳಿದ್ದಾನೆ

ಗಜ ಕುಂಭೇಷು ವಂಶೇಷು ಫಣಾಸು ಜಲಧೇಪ್ಯ ಚ.
ಶುಕ್ತಿಕಾಯಾಂ ಇಕ್ಷುದಂಡೇ ಷೋಡಾ ಮೌಕ್ತಿಕ ಸಂಭವ :

ಆನೆಯ ಕುಂಭಸ್ಥಳ, ಬಿದುರು, ಹಾವಿನ ಹೆಡೆ, ಮೇಘ, ಚಿಪ್ಪು ಮತ್ತು ಕಬ್ಬು ಇವು ಮುತ್ತುಗಳು ಹುಟ್ಟುವ ಸ್ಥಾನಗಳು. ಈ ಮುತ್ತುಗಳ ಬಣ್ಣಗಳನ್ನು ಅದೇ ಅನುಕ್ರಮದಲ್ಲಿ ಮಾಸಲು ಬಿಳುಪು, ಕೆಂಪು ಬಿಳುಪು, ನೀಲ, ಮಿಂಚುವ ಬಿಳುಪು, ಹಳದಿ ಎಂದು ಅದೇ ಗ್ರಂಥದಲ್ಲಿ ಹೇಳಿದೆ.

ದೇವಿ ದಯಾವತಿ, ಧರಣೀಧರಾಧಿಪ
ತನಯೆ, ನಿನ್ನೆದೆ ಹಾಲೊಳಿಹುದು
ಪಾವನತರ ಸುಧಾಸಾರಸ್ವತದ ಸಾರ-
ಸರ್ವಸ್ವವೆಂದರಿತಿರುವೆ.
ದ್ರಾವಿಡ ಶಿಶುನಾನು ನಿನ್ನ ದಯದೊಳದ
ಪಾನವಮಾಡುತೆ ಪಡೆದಿರುವೆ,
ಭಾವುಕ ಕವಿಯ ಪ್ರತಿಭೆ, ಅನುಭಾವದ
ವಾಗ್ವಿಲಾಸವನೆಂದು ತಿಳಿವೆ ||೭೫||

ಶಂಕರಭಗವತ್ ಪೂಜ್ಯಪಾದರು ಈ ಪದ್ಯದಲ್ಲಿ ತಮ್ಮನ್ನು "ದ್ರಾವಿಡ ಶಿಶು" ಎಂದು ಪರಿಚಯಿಸಿಕೊಂಡು "ಸುದಾಸಾರಸ್ವತ ಸಾರಸರ್ವಸ್ವ"ವಾದ ದೇವಿಯ ಎದೆ ಹಾಲನ್ನು ಪಾನಮಾಡಿ, ಭಾವುಕನಾದ ಕವಿಯ ಪ್ರತಿಭೆ, ಅತೀಂದ್ರಿಯ ಅನುಭಾವಿಯ ವಾಗ್‌ವಿಲಾಸವನ್ನು ಪಡೆದೆನೆಂದು ಹೇಳಿಕೊಂಡಿದ್ದಾರೆ. ಆದಿಶಂಕರರ ಕಾಲ ಕರ್ತೃತ್ವಗಳ ಬಗೆಗೆ ಈ ಪದ್ಯವು ಆಧಾರವೆಂದು ಸಂಶೋಧಕರ ಅಭಿಮತ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿವನ ಕ್ರೋಧಾಗ್ನಿ ಜ್ವಾಲೆಗಳಿಂದೆ ಸುಡೆ ತನು,
ಅತನುವೆನಿಸಿ ಮನಸಿಜನು
ಅವಿತುಕೊಂಡನೋ ದೇವಿ, ನಿನ್ನ ಗಂಭೀರ ನಾ–
ಭೀ ಸರೋವರದೊಳಗೆನಲು
ಉದಯಿಸಿತಲ್ಲೊಂದು ಧೂಮ ಲತಿಕೆ, ನೀಲ-
ತನುರುಚಿ, ಚೆಲುವಿನ ಬಳ್ಳಿ,
ಅದನು ರೋಮಾವಳಿ ಎಂದು ಕರೆದರು ಕ-
ವೀಂದ್ರರು ಮೆಚ್ಚು ಮಾತಿನಲಿ ||೭೬||

ಯಮುನೆಯ ಕಿರುದೊರೆಯೊಳಗೊಂದು ಗೆರೆಯಂತೆ
ಕಂಡೂ ಕಾಣಿಸದಿಹ ನಿನ್ನ
ಕಮನೀಯ ತನುಮಧ್ಯದಿರವ ಕಾಣುವೆನೆಂಬ
ಚಿಂತನ ಶೀಲ ಸಾಧಕರ
ನುಡಿಯಿದು ದೇವಿ, ಸ್ತನದ್ವಯದನ್ಯೋನ್ಯ
ಮುಥನದಿಂದಂತಃ ಶೂನ್ಯತೆಯು
ಪಡೆದು ತನುವ ನಿನ್ನ ಹೊಕ್ಕುಳ ಬಿಲವನು
ಪುಗುತಿರುವಂದದೊಳಿಹುದು ||೭೭||

ಸ್ಥಿರವಾಗಿ ನಿಂತುದೊ ಸುರನದಿಯಾವರ್ತ
ಸ್ತನಮುಕುಳಗಳನು ಪಡೆದು ?
ನೆರೆವ ತ್ರಿವಳಿ ಲತೆಗಿಟ್ಟ ಕಿರು ಪಾತೆಯೊ ?
ಮದನಾಗ್ನಿ ಕುಂಡವೊ ಎನಲು ?
ರತಿಯ ಲೀಲಾಗೃಹದಂತಿಹ ನಿನ್ನಯ
ನಾಭೀ ಕೂಪಕೆ ಜಯವೆಂಬೆ
ಪತಿ ಹರಶಿವನಿಗೆ ತ್ರಿನಯನ ಸಿದ್ಧಿಯ–
ನಿತ್ತಿಹುದದು ಜಗದಂಬೆ ||೭೮||

CC-O. In Public Domain. Digitized by eGangotri

ಮೊದಲೆ ಸಹಜಕೃಶವೆನಿಪ ನಿನ್ನಯ ನಡು
ಬಳಲಿರೆ ಸ್ತನಭಾರದಿಂದೆ
ಪದನೆತ್ತಿ ನಡೆವಾಗ ನಾರೀತಿಲಕ, ಕುಸಿ-
ವುದೊ ಎಂದು ಬೆದರಿದೆ ಮನದೆ.
ದಡನೆ ಕವಚಿ ಬೀಳುವಂತಿರೆ ರಭಸದೆ
ಹರಿಯುತಿರಲು ನದಿಯೊಂದು,
ದಡದಮೇಲಿನ ತರು ನೀನಾಗದಿರು, ದೇವಿ,
ದೃಢತೆ ಇರಲಿ ಎಂದೆಂದು ॥೭೯॥

ಈ ಪದ್ಯದಲ್ಲಿ ಭಗವತ್‌ಪಾದರು ತಮ್ಮ ಕಾಲದಲ್ಲಿ ಸಮಯ ಮತ ಪ್ರಚಾರಕ್ಕೆ ಒದಗಿರಬಹುದಾದ ಯಾವುದೋ ಅಡ್ಡಿ ಆತಂಕಗಳನ್ನು ಸಾಂಕೇತಿಕವಾಗಿ ಸೂಚಿಸಿ, "ನಿನ್ನ ಉಪಾಸನೆಯು ರಭಸವಾಗಿ ಹರಿಯುವ ನದೀ ದಡದ ಮರದಂತಾಗದೆ ಎಂದೆಂದಿಗೂ ದೃಢವಾಗಿರಲಿ" ಎಂದು ಹಾರೈಸಿದ್ದಾರೆ.

ನೆನೆದಿರೆ ಬೆವರಿಂದೆ ನಿನ್ನ ತೋಳುಗಳಡಿ
ಹರಿವುದೊ ಕಾಣೆ ಕೂರ್ಪಾಸ,
ಕನಕ ಕಲಶದಂತೆ ಮೆರೆವ ನಿನ್ನುತ್ತುಂಗ
ಸ್ತನಗಳೆತ್ತಿರೆ ಅವಕಾಶ.
ನಿನ್ನಂಗಸೌಷ್ಟವಕದರಿಂದೆ ಹಾನಿಯಾ-
ಗದಿರಲೆನುತೆ ತನುಭವನು
ಮುನ್ನ ಲವಲಿಲತಾರೂಪ ತ್ರಿವಳಿಯಿಂದೆ
ನಿನ್ನ ನಡುವ ಬಂಧಿಸಿದನು. ॥೮೦॥

ಕೂರ್ಪಾಸ–ಕುಪ್ಪಸ ಹರಿಯುವಷ್ಟು ದೊಡ್ಡದಾದ ಎದೆ ಅಂಗಸೌಷ್ಠವಕ್ಕೆ ಹಾನಿಯಾಗದಿರಲೆಂದು ತನುಭವ-ಮನ್ಮಥನು ಮುನ್ನೆಚ್ಚರಿಕೆಯಿಂದ ಲವಲೀಲತೆಯಂತಿರುವ ತ್ರಿವಳಿ–ಹೊಟ್ಟೆಯ ಮೇಲಿನ ಮೂರು ಗೆರೆಗಳಿಂದ ನಡುವನ್ನು ಬಂಧಿಸಿದ್ದಾನೆ ಎಂದು ತಾತ್ಪರ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮದುವೆಯೊಳ್ ಮಗಳಿಗೆ ಹಿಮವಂತನೊಲಿದಿತ್ತ
ಯೌತುಕವಿದೆನುತೆ ತನ್ನ
ಸುಧೃಡ ನಿತಂಬದ ಘನತೆ ವಿಸ್ತಾರವ,
ಪೃಥುವಿಗಾಯ್ತುದು ವರದಾನ
ಸ್ಥಲ ಜಲ ಗಿರಿ ವನ ಲಘು ಘನರೂಪದೆ
ಹರಡಿರಲದನು ನಿಸರ್ಗ
ಕಲೆ ಉದಿಸುತೆ ಮನುಸಂಸ್ಕೃತಿ ಬೆಳೆದುದು,
ಧರೆಯಾಯ್ತು ಪ್ರತಿರೂಪ ಸ್ವರ್ಗ ॥೮೧॥

ಯೌತುಕ-ಮದುವೆಯಲ್ಲಿ ಕೊಡುವ ಬಳುವಳಿಯಾಗಿ ಹಿಮವಂತನು ತನ್ನ ದೇಹದ ಧೃಡತೆ ವಿಸ್ತಾರಗಳನ್ನು ಮಗಳಿಗೆ ಕೊಡುತ್ತಾನೆ. ಇದರಿಂದ ಪೃಥ್ವಿಯು ಬೆಟ್ಟ ಬಯಲು ನದೀನದಗಳಿಂದ ವಾಸಯೋಗ್ಯವಾಗಿ ಮಾರ್ಪಟ್ಟು ಸಂಸ್ಕೃತಿ ಬೆಳೆಯಲು ಮಾನವನಿಗೆ ಸಹಾಯಕವಾಗಿ ಭೂಮಿಯು ಪ್ರತಿರೂಪ ಸ್ವರ್ಗವೇ ಆಯಿತು ಎಂದು ವರ್ಣಿಸಿದೆ.

ಆನೆ ಸೊಂಡಿಲನಂತೆ ಹೊಂಬಾಳೆಗಂಬವ
ತನ್ನ ಗುರುತ್ವಸೌಷ್ಟವದೆ
ಹಾನಿಗೀಡಾಗಿಸುತೆಸೆವ ನಿನ್ನಯ ತೊಡೆ-
ಗಳನೆಂತು ದೇವಿ ಬಣ್ಣಿಸುವೆ.
ಅನುದಿನ ಪತಿಪದಕೆರಗಿ ಗಂಟಿಕ್ಕಿದ
ನಿನ್ನಯ ಕಣೆಗಾಲ ಘನತೆ
ವನಿತೆಯರಾದರ್ಶವಾಗಿರಲೆಂದೆಂದು
ಸತೀಧರ್ಮವನು ಬೋಧಿಸುತ್ತೆ ॥೮೨॥

Sri Vidyabharathi Book Centre, Sringeri

ಸೌಂದರ್ಯ ಲಹರಿ-O. In Public Domain. Digitized by eGangotri

ಹರನ ಸೋಲಿಸಲೆಂದು ಎರಡೈದು ಶರಗಳ-
ನಿಟ್ಟೆ ಬತ್ತಳಿಕೆಯಂದವಲಿ
ಮೆರೆವ ನಿನ್ನಯ ಕಣಗಾಲ್ಗಳಾದವು ಪಂಚ-
ಬಾಣನ ವಿಜಯ ಜೋಕಾಲಿ
ಅದರಡಿಯಲ್ಲಿದೆ ನಿನ್ನ ಚರಣಗಳು,
ಅಲಕ್ತಕಾರಕ್ತ ಶಸ್ತ್ರಾಗ್ರ,
ಪದನತ ದಿವಿಜರ ಮಣಿ ಮಕುಟದೆ ಸಾಣೆ-
ಹಿಡಿದ ನಖರ ನಿಶಿತ ಶರ ॥ ೮೩ ॥

ದೇವಿಯ ಜಿಂಘೆ-ಕಣಕಾಲು-ಪಾದ ಮತ್ತು ಮುಂಡಿಗಳ ಜಿಪ್ಪಿನ ನಡುವಿನ ಭಾಗ, ಕಾಮದೇವನ ಬತ್ತಳಿಕೆ-ಬಾಣಗಳ ಕೋಶ ಎಂದು ವರ್ಣಿಸಿ ಅವನ ವಿಜಯೋತ್ಸವದ ಜೋಕಾಲಿ-ತೂಗುಮಣೆ ಎಂದೂ ಅದರಡಿಯ ಚರಣಗಳು ಪದಾನತರಾದ ದೇವತೆಗಳ ಮಣಿಮಯ ಕಿರೀಟಗಳಲ್ಲಿ ಸಾಣೆ ಹಿಡಿದ ಉಗುರುಗಳೆಂಬ ಮೊನಚಾದ ಅಲಗುಗಳೆಂದೂ ವರ್ಣಿಸಿದೆ. ರೂಪಕಾಲಂಕಾರದ ಸುಂದರ ನಿದರ್ಶನ.

ಶ್ರುತಿಗಳಂತದೊಳಿಹ ಉಪನಿಷತ್ ಮುಸ್ತಕಾ-
ಲಂಕಾರವೆನೆ ನಿನ್ನ ಚರಣ,
ಪತಿಯ ಜಟಾಜೂಟದೊಳಗಿಹ ಗಂಗೆಯೆ
ಅದಕರ್ಪಿಪಳು ತೀರ್ಥಸ್ನಾನ.
ಹರಿಯ ಶಿರದೊಳಿಹ ಚೂಡಾರತ್ನಪ್ರಭೆ
ಅದರಲತಿಗೆಯ ಪಸದನ,
ಕರುಣಿಸು ದೇವಿ ನಿನ್ನೀ ಪದಯುಗಮೆನ್ನ
ಶಿರದೊಳಿರಲಿ ಪೂಜಾಸ್ಥಾನ ॥ ೮೪ ॥

ಉಪನಿಷತ್ತುಗಳ ಶಿರದಲ್ಲಿ ಶೋಭಿಸುವ ದೇವಿಯ ಚರಣಗಳನ್ನು ಶಿವನ ಜಟೆಯಲ್ಲಿರುವ ಗಂಗೆಯು ತೀರ್ಥರೂಪಜಲದಿಂದ ತೊಳೆಯುವಳು. ವಿಷ್ಣುವಿನ ಮಕುಟದ ರತ್ನಗಳ ಕಾಂತಿಯೇ ಅದರ ಅಲಕ್ತಕ—ಅರಗಿನ, ಪಸದನ-ವರ್ಣಲೇಪ, ಇಂತಹ ನಿನ್ನ ಚರಣಗಳು ನನ್ನ ಶಿರಕ್ಕೆ ಪೂಜಾಸ್ಥಾನವಾಗಲಿ ಎಂದು ಕವಿಯ ಪ್ರಾರ್ಥನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿನ್ನದ ಹುಡಿಯಂತೆ ಮಿರುಗುವಲಕ್ತಕ
ರಸದಿಂದಲಂಕೃತಮೆನಿಸಿ
ಕಣ್ಣು ರಮಿಸುವ ನಿನ್ನ ಪದ ಪದ್ಮಯುಗಳಕೆ
ನಮೋನಮ ಎನ್ನುವೆ ನಮಿಸಿ
ಅದರೊಂದು ಘಾತದೆ ಅಸುಗೆ ಚಿಗುರುವುದ
ಕಾಣುತಂಧಕರಿಪು ಮನದೆ
ಇಂದ್ರನುದ್ಯಾನದ ತರುಗೆ ಕರುಬಿದನು,
ಮರುಗಿದನಭಿಮಾನಿ ಮತಿಗೆ ॥ ಲಜ ॥

ಮಿರುಗುವ ಅಲಕ್ತಕ ಲೇಪದಿಂದ ಶೋಭಿಸುವ ದೇವಿಯ ಪಾದಗಳಿಗೆ ನಮಸ್ಕಾರ ಮಾಡಿ ಅದರ ಮಹಿಮೆಯನ್ನು ಈರೀತಿ ವರ್ಣಿಸಿದೆ. ಓ ದೇವಿ, ನಿನ್ನ ಪದಾಘಾತದಿಂದ ಚಿಗುರಿದ ಅಶೋಕತರುವನ್ನು ಕಂಡು ಕರುಬಿದ ಪರಶಿವನು ತನ್ನ ಮನೋದೌರ್ಬಲ್ಯಕ್ಕಾಗಿ ಮರುಗುವುದೆಂದರೆ ಅದೊಂದು ವಿಚಿತ್ರವಲ್ಲವೆ ಎನ್ನುತ್ತಾನೆ ಕವಿ. ಕೊನೆಯ ಸಾಲಿನ ಅಭಿಮಾನಿಮತಿಗೆ— ಎಂಬುದು ಪಾರ್ವತಿಗೆ ಅನ್ವಯವಾಗುತ್ತದೆ. "ಆತ್ಮಾತ್ವಂ ಗಿರಿಜಾಮತಿ" ಎಂದು ಭಗವತ್ ಪಾದರೇ ಹೇಳಿದ್ದಾರೆ.

ಬೇಕೆಂದೆ ನುಡಿದು ಸಪತ್ನಿಯ ಹೆಸರನು
ತಪ್ಪೊಪ್ಪಿ ತಲೆಬಾಗಿ ನಿಲಲು
ಕಾಕು ಕೋಪದೆ ನೀನು ಪಾದಪದ್ಮವನೊಂದ
ಶಿವನ ಹಣೆಯೊಳಿಡೆ ಕಂಡು
ಮುನ್ನ ತನ್ನನು ಸುಟ್ಟ ಹಣೆಗಣ್ಣಿಗಿಂದಾಯ್ತು
ಶಾಸ್ತಿ ಎನುತೆ ಕಿಲಕಿಲನೆ
ನಿನ್ನ ಕಾಲ್ಗೆಜ್ಜೆ ನಿಕ್ವಣಿಸಿರೆ ನಕ್ಕನು
ಸ್ಮರನಾಗ ನೋವು ನಕ್ಕುದೆನೆ ॥ ಲಟ ॥

ದೇವಿಯ ಅಭಿಮಾನಾತಿರೇಕವನ್ನು ಪರಿಮಿತಿಯಲ್ಲಿಡುವ ಉದ್ದೇಶದಿಂದ ಒಂದುಸಾರಿ ಶಿವನು ಬೇಕೆಂದೇ ಸಪತ್ನಿಯ ಹೆಸರುಹೇಳಿ ದೇವಿಯುಕೋಪಿಸಲು

Sri Vidyabharathi Book Centre, Sringeri

ಸೌಂದರ್ಯ ಲಹರಿ CC-0. In Public Domain. Digitized by eGangotri

ತಪ್ಪೊಪ್ಪಿಕೊಂಡು ನಮಸ್ಕರಿಸಿ ಎದುರಿಗೆ ನಿಂತಾಗ ದೇವಿಯು ಕೋಪದಿಂದ ಒದೆಯಲು ಕಾಲೆತ್ತುತ್ತಾಳೆ. ಶಿವನು ಅದೃಶ್ಯನಾಗಿ ಕೆಲಕಿಲ ನಕ್ಕಾಗ ದೇವಿಗೆ ತನ್ನ ತಪ್ಪಿನ ಅರಿವಾಗಿ ಎತ್ತಿದ ಕಾಲನ್ನು ಇಳಿಸಲಾಗದೆ ಹೋದಾಗ ಶಿವನು ಮತ್ತೆ ಪ್ರತ್ಯಕ್ಷನಾಗಿ ನಾಟ್ಯವಾಡಿ ಕಾಲು ಕೆಳಗಿಳಿಯುವಂತೆ ಮಾಡುತ್ತಾನೆ. ಈ ಅಸಂಗತ ಪುರಾಣ ಕಥೆಯನ್ನು ವಿಡಂಬಿಸುವ ಈ ಪದ್ಯದಲ್ಲಿ ದೇವಿಯ ಕಾಲ ತುದಿ ಶಿವನ ಭಾಳನೇತ್ರಕ್ಕೆ ತಾಗಿತೆಂದೂ ಅದನ್ನು ನೋಡಿದ ಮನ್ಮಥನು, ನನ್ನನ್ನು ಸುಟ್ಟ ಕಣ್ಣಿಗೆ ತಕ್ಕ ಶಾಸ್ತಿ ಆಯಿತು ಎಂದು, ಕಾಲ್ಗೆಜ್ಜೆಗಳ ನಾದವನ್ನು ಅನುಕರಿಸಿ ಕೆಲಕಿಲ ನಕ್ಕನು ಎಂದು ಕಲ್ಪಿಸಿಕೊಂಡಿದೆ. ಅಸಂಭವವನ್ನು ಚಿತ್ರಿಸುವುದರಿಂದ ವಿಡಂಬನಾತ್ಮಕ ಅತಿಶಯೋಕ್ತಿ ಅಲಂಕಾರ, ಪುರಾಣ ಯುಗದಲ್ಲಿ ಶಿವನ ಬಗೆಗೆ ಪ್ರಚಾರಕ್ಕೆ ಬಂದ ಅತಿರೇಕ ಅಸಂಗತ ಅಸಂಭಾವ್ಯ ದಂತಕಥೆಗಳಿಗೆ ಒಂದು ನಿದರ್ಶನ.

ಹಿಮದಿಂದೆ ಕೊರಗುತೆ ಇರುಳೆಲ್ಲ ನಿದ್ರಿಸಿ
ಹಗಲು ಸಿರಿಗೆ ನೆಲೆಗೊಡುವ
ಕಮಲವ ನಿನ್ನಡಿಗಳಿಗೆಣೆಯೆನಲು ಹೀ–
ನೋಪಮೆಯಹುದು ಅಭವ್ಯ.
ಹಿಮಗಿರಿ ಮೌಳಿಗಾಭರಣದಂತುದಯಿಸಿ
ಹಗಲಂತೆ ವಿಕಸಿಸುತಿರುಳು
ಸಮಯದಂತರ್ಯಾಗಕಧಿಕಫಲವ ನೀವ
ನ್ನಿಡಿಗೆಣೆಯೆ ತಾವರೆಯು ॥ ೮೭ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಮಿತ ಕೀರ್ತಿಗಳುಗಮಸ್ಥಾನ, ಆಪದ್ರ-
ಕ್ಷಣೆಗೆ ಸದಾ ಸಿದ್ಧಾಯುಧವು,
ವಿಮಲತ್ವಕಾದಿ ಎನಿಪ ನಿನ್ನ ಪಾದಾಗ್ರ
ಕೆಣೆಯೆ ಕಮಠನ ಕರ್ಪರವು
ಮದುನೆಯೋಳ್ ಅಭವನು ಸದಯ ಚಿತ್ತದೊಳೆಂತು
ಕೈಗಳಿಂ ಪಿಡಿದೆತ್ತುತದನು
ಸದನ ಸೋಪಾನ ಶಿಲಾತಲಕಿಟ್ಟನೆಂ
ಬುದೆ ನಮಗಿನ್ನು ಕೌತುಕವು ॥ ೮೮ ॥

ದೇವಿಯ ಚರಣಗಳನ್ನು ಕಮಲಕ್ಕೆ ಹೋಲಿಸುವುದು ಉಚಿತವಲ್ಲವೆಂದು ಮೊದಲ (೮೭) ಪದ್ಯದಲ್ಲಿ ಪ್ರತಿಪಾದಿಸಿ ಮುಂದಿನ ಪದ್ಯದಲ್ಲಿ ಚರಣಗಳ ಅಗ್ರ ಭಾಗವನ್ನು ಆಮೆಯ ಬೆನ್ನ ಚಿಪ್ಪಿಗೆ ಹೋಲಿಸುವುದು ಹೀನೋಪಮೆಯ ಪರಾಕಾಷ್ಠೆಯೆಂದು ಒತ್ತಿ ಹೇಳಿದ್ದಾರೆ ಭಗವತ್ಪಾದರು.

ದೇವಿಯ ಚರಣಗಳು ಅಪಾರವಾದ ಕೀರ್ತಿಯ ಉಗಮಸ್ಥಾನ, ಆಪದ್ರಕ್ಷಣೆಗೆ ಸದಾ ಸಿದ್ಧವಾದ ಆಯುಧ, ವಿಮಲತ್ವದ ಆದಿ. ವಿವಾಹ ವಿಧಿಯ ಸಪ್ತಪದಿಯಲ್ಲಿ ದೇವಿಯ ಚರಣವನ್ನು ಕೈಯಿಂದೆತ್ತಿ ವಾಸಗೃಹದ ಮೆಟ್ಟಿಲ ಶಿಲೆಯ ಮೇಲಿಡಲು ಶಿವನು ಹೇಗೆ ಶಕ್ತನಾದನೋ ಎಂದು ಕವಿ ಆಶ್ಚರ್ಯ ಪಡುತ್ತಾನೆ.

ಸುರವನಿತೆಯರ ಮುಗಿದ ಕೈಗಳಾಗಿರೆ
ತಾವರೆ ಕೊಳ, ಅದಕೆದುರು.
ತರುಣ ಶಶಿಗಣವು ನಿನ್ನುಗುರುಗಳೆನೆ,
ನಾಚಿನೊಂದಿತ್ತು ಕಲ್ಪತರು,
ಸುರಲೋಕವಾಸಿಗಳೆನ್ನಿಂದೆ ಪಡೆವರು
ಬೇಡಿದಷ್ಟೇ ಫಲಗಳನು.
ಕರೆದು ದರಿದ್ರರ ಕೊಡುವುದು ನಿನ್ನಂಘ್ರಿ
ಬೇಡದಿರ್ದೆಲ್ಲವನೆಂದು ॥ ೮೯ ॥

ದೇವಿಯ ಕಾಲ್ಬೆರಳ ಉಗುರುಗಳು ಚಂದ್ರ ಶಿಶುಗಳ ಸಾಲಿನಂತೆ ಬೆಳಗುವುದನ್ನು ನೋಡಿ ಕಲ್ಪತರು ನಾಚಿತು. "ನಾನು ಬೇಡಿದಷ್ಟನ್ನೇ ಕೊಡುತ್ತೇನೆ,

Sri Vidyabharathi Book Centre, Sringeri

 CC-0. In Public Domain. Digitized by eGangotri

ದೇವಿಯ ಉಗುರುಗಳಾದರೊ ದೀನ ದರಿದ್ರರನ್ನು ತಾನಾಗಿ ಕರೆದು ಅವರು ಬೇಡದಿದ್ದ ಫಲಗಳನ್ನು ಕೊಡುವುದು ಎಂಬ ಕಾರಣಕ್ಕಾಗಿ.

ದೀನರಿಗನುದಿನ ಆಶಾ ಸದೃಶಧನ–
ವಿತ್ತು ಮನಸ್ತೃಪ್ತಿ ತರುವ,
ಮಾನವ ಲೋಕಕಾದರ್ಶ ಸೌಂದರ್ಯದ
ಅಮರ ಮಧುವ ಕರುಣಿಸುವ,
ಮುಂದಾರ ಕುಸುಮು ಸುಗಂಧಿತವೆನಿಪ ನಿ-
ನ್ನಂಘ್ರಿಯುಗಳದೊಳು ನಾನು
ಒಂದಾಗಿ ಮನದೊಡನೈದು ಇಂದ್ರಿಯಗಳ
ಷಟ್ಪದ ಭೃಂಗವಾಗುವೆನು ॥೯೦॥

ದೇವಿಯ ಚರಣಗಳ ಉಪಾಸನೆಯಿಂದ ದೊರಕುವ ಮನಃ ಶಾಂತಿಯನ್ನು ಇಲ್ಲಿ ಗುರುತಿಸಿದೆ. ಇಂದಲ್ಲ ನಾಳೆ ಇಚ್ಛೆ ಫಲಿಸುವುದೆಂಬ ಆಶಾಭಾವನೆ ಮಶ್ಯಾಂತಿಯ ಆಧಾರಸ್ತಂಭ, ಸೌಂದರ್ಯ ಸತೀತ್ವಗಳ ಆದರ್ಶವು ಮಧು ವಿನಂತೆ ಉತ್ತೇಜಕ. ಇವೆರಡನ್ನು ಮಾನವ ಲೋಕಕ್ಕೆ ಕರುಣಿಸುವ, ಮುಂದಾರ ಪುಷ್ಪಗಳಿಂದ ಸುಗಂಧಮಯವಾದ ನಿನ್ನ ಚರಣಗಳಲ್ಲಿ ಐದು ಇಂದ್ರಿಯಗಳು ಮತ್ತು ಮನಸ್ಸಿನ ಆರುಕಾಲಿನ ಭೃಂಗವಾಗಿ ತನ್ನನ್ನು ತಾನೇ ಅರ್ಪಿಸಿಕೊಳ್ಳು-ತ್ತಾನೆ ಕವಿ,

ನಡಿಗೆಯು ನಿನ್ನಿಂದೆ ಕಲಿಯಲಿಚ್ಛಿಸಿ ಅರ-
ಸಂಚೆ ಅಭ್ಯಾಸಕೆ ತೊಡಗಿ
ಎಡವಿದರೇನಾಯ್ತು ಬಿಡದು ತನ್ನಾಟವ,
ಬೆಳೆದುದಲ್ಲವೆ ಮನೆಯಲ್ಲಿ ?
ಅದಕೆ ಶಿಕ್ಷೆಯ ಕೊಡುವಂದದೆ ಕ್ವಣಿಸುವ
ಮಣಿಮಯ ಮುಂಜೀರ ರಣಿತ
ಪದಯುಗಕೆರಗುವೆ, ಚಾರು ಚರಿತೆ, ದೇವಿ,
ಭಕ್ತಿ ಕುಸುಮ ಪರಿಮಳಿತ. ॥೯೧॥

CC-O. In Public Domain. Digitized by eGangotri

ಹರಿ, ಬ್ರಹ್ಮ, ರುದ್ರ, ಈಶ್ವರರು ಮುಂಚದ ನಾಲ್ಕು
ಕಾಲುಗಳಾಗಿರೆ ನಿನಗೆ,
ಸುರುಚಿರ ಸ್ವಚ್ಛ ಪ್ರಚ್ಛದನೆನಿಸಿರೆ ಸದಾ-
ಶಿವನಿಂದಾಯ್ತನುಭಾವದೊಸಗೆ.
ಶೃಂಗಾರ ರಸವೆ ರೂಪಾಂತಂತೆ ದೇವಿ, ನಿ-
ನ್ನರುಣಾರುಣ ಪ್ರಭೆಯೊಂದು
ಮಂಗಳಾಕಾರವ ತಳೆದವತರಿಸಿರೆ
ಕಂಗಳಿಗಾಯ್ತು ಕೌತುಕವು ||೯೨||

ವಿಶ್ವದ ನಿರ್ವಹಣೆಯಲ್ಲಿ ಮಹೇಶ್ವರ ತತ್ವಕ್ಕೆ ಸೇರಿದ ಬ್ರಹ್ಮ, ವಿಷ್ಣು, ರುದ್ರ ಈಶ್ವರರೂ ಸೇರಿ ದೇವಿಯ ಮಂಚದ ನಾಲ್ಕುಕಾಲುಗಳು. ಅತೀಂದ್ರಿಯ ಅನುಭಾವದ ಶುಭವನ್ನು ಕೊಡುವ ಸದಾಶಿವನೇ ಸ್ಪಷ್ಟವಾದ ಮೇಲು ಹಾಸಿಗೆ, ದೇವಿಯ ಅರುಣಾರುಣ ಪ್ರಭೆಯಿಂದ ಶೃಂಗಾರರಸವೇ ರೂಪಾದಂತೆ ಅಲ್ಲಿ ಮಂಗಳಾಕಾರದಿಂದ ಅವತರಿಸಿರಲು ಕಣ್ಣುಗಳಿಗೆ ಅದೊಂದು ಮಹಾ ಕೌತುಕ.

ತನುವೆತ್ತ ಕುಟಿಲತೆ ಕುಂತಳಕೊದಗಿರೆ,
ನಗೆಗಾಯ್ತು ಮಧುರತೆ ನೈಜ,
ಮನದೆ ಶಿರೀಷದ ಮೃದುಳತೆ ಮೆರೆದಿರೆ
ಶಿಲೆಯಂತೆ ಸುಧೃಡಮುರೋಜ,
ನಡುಬಡವಾಗಿರಲೇನಂತೆ ಅಡಿಗಳಿ-
ಗಿತ್ತುದು ಬಲವ,-ನಿತಂಬ.
ಪೊಡವಿಯನುದ್ಧರಿಸುವ ಶಿವಕರುಣೆಯು
ನಿಜರೂಪ ನೀನು ಜಗದಂಬ ||೯೩||

 CC-0. In Public Domain. Digitized by eGangotri

ಚಂದ್ರನೊಳಿರುವ ಕಲಂಕವೆ ಕಸ್ತೂರಿ
ಬಿಂಬವಾಗಿರೆ ಜಲನಿಬಿಡ
ಸಾಂದ್ರ ಕಲೆಗಳೆಂಬ ಕರ್ಪೂರ ತುಂಬಿದ
ಮರಕತ ರತ್ನ ಕರಂಡ
ಬರಿದಾಗೆ ನಿನ್ನಲಂಕಾರಕ್ಕೆ ಪ್ರತಿದಿನ
ಸರಸಿಜ ಸಂಭವನದನು
ಮರಳಿ ಮೊದಲಿನಂತೆ ತುಂಬುತಲಿರುವನು,
ಶಶಿಯೆ ನಿನಗೆ ಕಾಮಧೇನು ॥೯೪॥

ಪುರಮಥನನ ಪಟ್ಟಮಹಿಷಿ ನೀನಾಗಿರೆ
ನಿನ್ನ ಮಹಿಮೆ ಅಸಮಾನ,
ತರಳಚಿತ್ತರಿಗದು ಎಂದೆಂದು ದೊರಕದು
ನಿನ್ನ ಚರಣ ಸನ್ನಿಧಾನ.
ದೇವಿ, ನಿನ್ನೆಯ ಮನೆಬಾಗಿಲೊಳಿಹ ಅಣಿ-
ಮಾದಿ ಸಿದ್ಧಿಗಳನು ಪಡೆದು
ಭಾವ ಪರವಶದೆ ವಂಚಿತರಾಗುತ್ತೆ
ಮರಳುವರಿಂದ್ರಾದಿ ಸುರರು ॥೯೫॥

ಕಮಲ ಭವನ ಸತಿ ಸರಸತಿಗಿನಿಯರು
ಕವಿವರರೆಲ್ಲ ಈ ಜಗದೆ,
ಅಮಿತ ಧನವನಾಂತ ಸಿರಿವಂತರೆಲ್ಲರ
ಗೆಳತಿಯಾದಳು ವಿಷ್ಣುದಯಿತೆ,
ಶಿವಸತಿ ಭಗವತಿ, ಜಗದಂಗನೆಯರೊಳು
ಪಡೆದೆ ಶಿರೋಮಣಿ ಬಿರುದ.
ಶಿವನಲ್ಲದನ್ಯರಿರಲಿ, ಕುರುವಕ ತರು
ಕಾಣದಂದವನು ನಿನ್ನುರದ ॥೯೬॥

ವಿಶ್ವದ ವರಕವಿಗಳೆಲ್ಲ ಸರಸ್ವತಿಯ ಗೆಳೆಯರು' ಶ್ರೀಮಂತರೆಲ್ಲ ಲಕ್ಷ್ಮೀ ದೇವಿಯ ಕೃಪಾಪೋಷಿತರು. ಪರಶಿವನ ಪತ್ನಿಯಾದ ನೀನು ಪಾರ್ವತಿಯು,

CC-O. In Public Domain. Digitized by eGangotri

ಜಗತ್ತಿನ ಸ್ತ್ರೀಯರಲ್ಲಿ ಶಿರೋಮಣಿ. ಶಿವನನ್ನುಳಿದು ಬೇರೆ ಪುರುಷರಿರಲಿ, ದೋಹದದ ನೆಪದಿಂದ ಗೋರಂಟಿಗಿಡವೂ ಕೂಡಾ ನಿನ್ನ ಸ್ತನಗಳ ಸ್ಪರ್ಶವನ್ನು ಪಡೆಯುವುದು ದುರ್ಲಭ.

ಭಗವತ್ಪಾದರು ಈ ಪದ್ಯದಲ್ಲಿ ಲಕ್ಷ್ಮಿ ಸರಸ್ವತಿಯರಿಗೆ ಅನ್ಯಾಯ ಮಾಡಿರುವರೆನ್ನುವುದು ಉಚಿತವೆನಿಸದು. ಲಕ್ಷ್ಮಿಸರಸ್ವತಿಯರ ಮೂಲಪ್ರಕೃತಿಯನ್ನು ಮಾತ್ರ ಇಲ್ಲಿ ಸೂಚಿಸಿದೆ. ಅವರ ವೈಯಕ್ತಿಕ ಸತೀತ್ವವನ್ನಲ್ಲ. ಮುಂದಿನ ಪದ್ಯದಲ್ಲಿ ಲಕ್ಷ್ಮಿ ಸರಸ್ವತಿ ಪಾರ್ವತಿಯರು ಒಂದೇ ತತ್ವದ ಮೂರು ಅಂಶ ಅಥವ ಮುಖಗಳೆಂದು ಪ್ರತಿಪಾದಿಸಿ ಅಪವಾದದ ತಳಹದಿ ಕುಸಿಯುವಂತೆ ಮಾಡಿದ್ದಾರೆ.

ನೀನೆ ವಾಗಧಿದೇವಿ, ವಿಧಿಸತಿ ಸರಸತಿ,
ನೀನೆ ವಿಷ್ಣುಪ್ರಿಯೆ ಸಿರಿಯು,
ನೀನೆ ಪಾರ್ವತಿ ಪರಶಿವ ಸತಿ ಎಂಬರು
ಆಗಮಶಾಸ್ತ್ರ ಕೋವಿದರು.
ಅರಿವೊಡೆ ನೀನು, ಈ ಮೂರಕತೀತ ಪ–
ರಬ್ರಹ್ಮ ಮಹಿಷಿ ಚತುರ್ಥಿ,
ನಿರುಪಮ ನಿಸ್ಸೀಮ ಮಹಿಮೆ, ಮಹಾಮಾಯೆ
ಜಗವನಾಳುವ ಪರಾಶಕ್ತಿ, ॥೯೭॥

ಎಂದು ಪಡೆವೆನಂಬೆ, ಪೇಳಾ ದಯದೆ, ನಿನ್ನ
ಅಲಕ್ತಕಾಂಚಿತ ಪಾದತೀರ್ಥ ?
ಬಂದೆ ಸಂನಿಧಿಗೆ ವಿದ್ಯಾರ್ಥಿಯಂದದೆ ನಾನು,
ನಿರ್ಣಯಿಸಲು ಪರಮಾರ್ಥ.
ಹುಟ್ಟು ಮೂಕರನು ಮಾತಾಡಿಸಿ ಕವಿತೆಗೆ
ಸ್ಫೂರ್ತಿಯನಿತ್ತು ಮೆರೆಸುವ
ದಿಟ್ಟತನದ ನಿನ್ನ ವಾಣೀ ಮುಖಾಬ್ಜ ತಾಂ–
ಬೂಲರಸವನೆಂದು ಕೊಡುವೆ ? ॥೯೮॥

CC-O. In Public Domain. Digitized by eGangotri

ಸ್ತೋತ್ರದ ಕೊನೆಯಲ್ಲಿ ಕವಿ ಹಂಬಲಿಸಿ ದೈನ್ಯದಿಂದ ದೇವಿಯನ್ನು ಬೇಡಿ ಕೊಳ್ಳುತ್ತಾನೆ : ನಿನ್ನ ಅಲಕ್ತಕಾಂಚಿತ-ಅರಗಿನರಸದಿಂದ ಕೂಡಿದ ಪಾದತೀರ್ಥವನ್ನು ನಾನು ಪಡೆಯುವುದೆಂದು ? ವಿದ್ಯಾರ್ಥಿಯಾಗಿ ನಾನು ನಿನ್ನ ಸಂನಿಧಿಗೆ ಬಂದೆ, ಪರಮಾರ್ಥವೇನೆಂದು ತಿಳಿದು ನಿರ್ಣಯಿಸಲು. ಮೂಕರನ್ನು ಮಾತಾಡಿಸುವ ವಾಣಿ ಅಂಶದ ನಿನ್ನ ಮುಖದ ತಾಂಬೂಲ ರಸವನ್ನು ಯಾವಾಗ ಕರುಣಿಸುವೆ ಎಂದು.

ಇಲ್ಲಿ ರಹಸ್ಯವೆಂದರೆ ಭಗವಾನ್ ಶಂಕರ ಪೂಜ್ಯಪಾದರು ಪರಮಾರ್ಥವನ್ನು ತೊಂಬತ್ತ ಏಳನೆಯ ಪದ್ಯದಲ್ಲಿ ಮೊದಲ ನಾಲ್ಕು ಸಾಲುಗಳಲ್ಲಿ ಆಗಮುಗಳ ಮತದಂತೆ ಸರಸ್ವತಿ ಲಕ್ಷ್ಮಿ, ಪಾರ್ವತಿಯರು ನಿನ್ನ ರೂಪವೆ ಎಂದು ಹೇಳಿ ಮುಂದೆ "ನೀನು ಈ ಮೂರಕ್ಕೆ ಅತೀತೆಯಾದ **ಪರಬ್ರಹ್ಮ ಮಹಿಷಿಚತುರ್ಥಿ**, ಜಗವನ್ನಾಳುವ ನಿರುಪಮ—ಉಪಮೆಗಳೊಂದೂ ಇಲ್ಲದ, ನಿಸ್ಸೀಮ-ಅಪರಿಮಿತವಾದ ಮಹಿಮೆಯಿಂದ ಕೂಡಿದ **ಪರಾಶಕ್ತಿ ಮಹಾಮಾಯೆ** ಎಂದು ಹೇಳಿ ಶೈವಶಾಕ್ತ ಸಮಯಧರ್ಮಗಳ ರಹಸ್ಯ ತತ್ವವನ್ನು ಸಾಧಕರಿಗೆ ಕರುಣಿಸಿದ್ದಾರೆ. ಮನುಕುಲಕ್ಕೆ ಭಗವಾನ್ ಶಂಕರರ ಉತ್ಕೃಷ್ಟ ಪರಮೋಚ್ಚ ಅನುಗ್ರಹ ಇದು. ಇದೇ ಅರ್ಥವನ್ನು ಮುಂದಿನ ಪದ್ಯದಲ್ಲಿ" ಒಗಟಿಯ ನುಡಿಯಾಗಿ ವಿಸ್ತರಿಸಿದೆ.

ನಿನ್ನನು ಭಜಿಸುವ ಭಕ್ತರು ವಿಷ್ಣು ವಿ-
ರಂಚಿಸಪತ್ನರೆಂದೆನಿಸಿ
ಮನ್ನಣೆ ನೀಡದೆ ಸಿರಿಸರಸತಿಯರಿ-
ಗಾತ್ಮರತಿಯ ಕೂಡಲೆಳಸಿ
ಪಶುಪಾಶರೂಪ ಅವಿದ್ಯಾ ಬಂಧವಘೇದಿ-
ಸುತೆ ಪಡೆವರು ಜೀವನ್ಮುಕ್ತಿ.
ವಿಶದ ತತ್ವಾರ್ಥಾನುಭಾವ ಪರಾನಂದ
ಮೊಂದರೊಳ್ ಉಳಿವುದಾಸಕ್ತಿ ||೯೯||

ದೇವಿಯನ್ನು ಉಪಾಸಿಸುವ ಭಕ್ತರು ವಿಷ್ಣು ವಿರಂಚಿಗಳಿಗೆ ಸಪತ್ನರು-ಸಮಾನ ಮಹಿಮಾತಿಶಯವನ್ನು ಪಡೆದವರಾದರೂ ಸಿರಿ ಸರಸ್ವತಿಯರಿಗೆ-ವಿದ್ಯೆ ಸಂಪತ್ತುಗಳಿಗೆ ಮಾನ್ಯತೆ ಕೊಡದೆ (ನಿರಾಕರಿಸಿ), ಆತ್ಮರತಿಯ—ಆತ್ಮಾನು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಧಾನ ರೂಪವಾದ ರತಿ–ಆನಂದವನ್ನು, ಕೂಡಲೆಳಸಿ— ಪಡೆಯುವ ಅಪೇಕ್ಷೆಯಿಂದ ಪಶುಪಾಶರೂಪವಾದ ಅವಿದ್ಯೆ–ಅಜ್ಞಾನ ಬಂಧನವನ್ನು ಕಡಿದು ಹಾಕಿ ಜೀವನ್ಮುಕ್ತರಾಗುತ್ತಾರೆ. ಆಗ ಅವರಲ್ಲಿ ಉಳಿಯುವುದು ವಿಶದ-ಸ್ಪಷ್ಟವಾದ ತತ್ವಾರ್ಥದ, ಅನುಭಾವ–ಅತೀಂದ್ರಿಯ ಅನುಭವದ ಸಾಕ್ಷಾತ್ಕಾರದ, ಪರಾ–ಶ್ರೇಷ್ಠವಾದ ಆನಂದದಲ್ಲಿ ಆಸಕ್ತಿ ಮಾತ್ರ.

ಭಗವತ್ ಪಾದರು "ಸೌಂದರ್ಯ ಲಹರಿ"ಯಲ್ಲಿ ಪ್ರತಿಪಾದಿಸುವ ಸಮಯಾಚಾರದಂತೆ ಉಪಾಸನೆಯು ಎರಡು ವಿಧ. ೧ ಷಟ್‌ಚಕ್ರದಲ್ಲಿ ಕುಂಡಲಿನಿ ರೂಪ ಪರಾಶಕ್ತಿಯ ಉಪಾಸನೆ, ಕುಂಡಲಿನಿ ಪ್ರತಿಬೋಧ, (೨) ಧಾರಣಾರೂಪದ ಮಾನಸಿಕ ಉಪಾಸನೆ.

೧. ಕುಂಡಲಿನಿ ಪ್ರತಿಬೋಧ–ಆಧಾರ ಸ್ವಾಧಿಷ್ಠಾನ ಚಕ್ರಗಳು ತಾಮಿಸ್ರಲೋಕಗಳಾದ್ದರಿಂದ ಉಪಾಸನೆಗೆ ನಿಷಿದ್ಧ. ಮಣಿಪೂರದಿಂದ ಸಹಸ್ರಾರವೂ ಸೇರಿ ಐದು ಚಕ್ರಗಳಲ್ಲಿ ದೇವಿಯನ್ನು ಉಪಾಸಿಸುವುದು ಸಮಯಾಚಾರಕ್ಕೆ ಸಂಮತ. ಮಣಿಪೂರದಲ್ಲಿ ಉಪಾಸಕರು ದೇವಿಯ ಪುರಸಮೀಪದಲ್ಲಿ ಪುರಾಂತರವನ್ನು ನಿರ್ಮಿಸಿಕೊಂಡು ವಾಸಮಾಡುವ "ಸಾರ್ಷ್ಟಿ" ಎಂಬ ಹೆಸರಿನ ಮುಕ್ತಿಯನ್ನು ಪಡೆಯುವರು. ಸಂವಿತ್ ರೂಪವಾದ ಅನಾಹತ ಚಕ್ರದಲ್ಲಿ ಉಪಾಸಿಸುವವರು ದೇವಿಯ ಪುರದಲ್ಲಿ ವಾಸಮಾಡುವ ಸಾಲೋಕ್ಯ ಮುಕ್ತಿಗೆ ಅರ್ಹರು. ವಿಶುದ್ಧಿ ಚಕ್ರದ ಉಪಾಸಕರು ದೇವಿಯ ಸೇವಾರೂಪವಾದ ಸಾಮೀಪ್ಯ ಮುಕ್ತಿಯನ್ನು ಪಡೆಯುವರು. ಆಜ್ಞಾಚಕ್ರೋಪಾಸಕರು ದೇವಿಯ ಸಮಾನರೂಪದ ಸಾರೂಪ್ಯ ಮುಕ್ತಿ ಪಡೆಯುವರು. ರೂಪ ಒಂದಾದರೂ ದೇಹಗಳು ಬೇರೆ ಎಂಬುದು ಸಾರೂಪ್ಯ ಸಾಯುಜ್ಯ ಮುಕ್ತಿಗಳಿಗಿರುವ ಅಂತರ. ಈ ನಾಲ್ಕು ಮುಕ್ತಿಗಳು ಗೌಣ-ಅಮುಖ್ಯ, ಹೆಸರಿಗೆ ಮಾತ್ರ ಮುಕ್ತಿ. ಸಹಸ್ರಾರ ಕಮಲದಲ್ಲಿ ದೇವಿಯನ್ನು ಉಪಾಸಿಸುವರು ಪಡೆಯುವ ಸಾಯುಜ್ಯ ಮುಕ್ತಿಯೇ ಶಾಶ್ವತ ಮುಕ್ತಿ. ಸಾಧಕನು ಯೋಗ್ಯತೆಗೆ ತಕ್ಕ ಪ್ರಮಾಣದಲ್ಲಿ ಪರಾನಂದ ಎಂದು ಕರೆಯಲ್ಪಡುವ, ಶಿವಶಕ್ತಿ ಸಂಪುಟದಲ್ಲಿ ತಾದಾತ್ಮ್ಯದ ಪರಾ–ಶ್ರೇಷ್ಠಮುಕ್ತಿಯನ್ನು ಪಡೆಯುವನು.

CC-0. In Public Domain. Digitized by eGangotri

ಧಾರಣೆಯಿಂದ ಮುಕ್ತಿ. ಮಾನಸಿಕ ಉಪಾಸನೆಯಿಂದ ಲಭಿಸುವ ಧಾರಣಾಮುಕ್ತಿಯನ್ನು ಭಗವತ್ ಪಾದರು "ಧಾರಣಾ ಪರಿಜ್ಞಾನಾತ್ ಮುಕ್ತಿ" ಎಂದು ಕರೆದಿದ್ದಾರೆ. ಷಟ್‌ಚಕ್ರ ಕಮಲಗಳಲ್ಲಿ ಚಲಿಸುವ ಪ್ರಾಣವಾಯುವನ್ನು ಸ್ತಂಭಿಸಿ, ನಾದಬಿಂದು ಕಲೆಗಳು ತನ್ನ ಇಚ್ಛೆಯಂತೆ ಒಂದು ಚಕ್ರದಲ್ಲಿ ನಿಲ್ಲುವಂತೆ ಮಾಡುವುದೇ ಧಾರಣ ಸಿದ್ಧಿ, ಪ್ರತಿ ಚಕ್ರಕ್ಕೆ ೫೦ ರಂತೆ ೩೦೦, ಸಹಸ್ರಾರಕ್ಕೆ ಸಮಷ್ಠಿಯಾಗಿ ೬೦, ಒಟ್ಟಾರೆ ೩೬೦ ಧಾರಣಾವಿಧಾನಗಳಾಗುತ್ತದೆ. ಈ ಒಂದೊಂದು ವಿಧಾನವೂ ನಾದಬಿಂದು ಕಲೆಗಳೊಡನೆ ಸೇರುವುದರಿಂದ ಆಗುವ ವಿಧಾನಗಳು ಅಸಂಖ್ಯವಾದುದರಿಂದ ಅವುಗಳಲ್ಲಿ ತನಗೆ ಬೇಕಾದ ವಿಧಾನವನ್ನು ಗುರುಮುಖದಿಂದ ತಿಳಿಯತಕ್ಕದ್ದು.

ಧಾರಣಾಯೋಗದಿಂದ ಲಭಿಸುವ ಫಲವೆಂದರೆ ಮತಿ, ಸ್ಮೃತಿ (ನೆನಪು), ಬುದ್ಧಿ, ಪ್ರಜ್ಞಾ, ಅದರ ಪರಿಣತ ರೂಪವಾದ ಮೇಧ, ಪ್ರತಿಭೆ, ವಿವೇಕ ಇವುಗಳ ಪ್ರಾಪ್ತಿ. ಈ ಬಗೆಗೆ ಹೆಚ್ಚು ವಿವರಗಳು ಸುಭಗೋದಯ, ಚರಣಾಗಮುಗಳಲ್ಲಿ ಪ್ರತಿಪಾದಿಸಲ್ಪಟ್ಟಿದೆ.

ಷಟ್‌ಚಕ್ರ ಕಮಲಗಳಲ್ಲಿ ಮನಸ್ತತ್ವದ ಆರು ರೂಪಗಳು ಮತ್ತು ಪಂಚಭೂತ ತನ್ಮಾತ್ರಗಳ ತಾದಾತ್ಮ್ಯ ಭಾವವೇ ಪಿಂಡಾಂಡ. ಬ್ರಹ್ಮಾಂಡ (ವಿಶ್ವ) ದೊಡನೆ ಪಿಂಡಾಂಡದ ಐಕ್ಯವನ್ನು ಅರಿಯಲು ಈ ಎರಡರ ಆರು ಬಗೆಯ ಸಾಮ್ಯಗಳನ್ನು ತಿಳಿಯಬೇಕೆಂದು ಎಲ್ಲ ಯೋಗಶಾಸ್ತ್ರಗಳೂ ಹೇಳುತ್ತವೆ.

ಪಿಂಡ ಬ್ರಹ್ಮಾಂಡಯೋರೈಕ್ಯಂ ಲಿಂಗಸೂತ್ರಾತ್ಮನೋರಪಿ
ಸ್ವಾಪ-ಅವ್ಯಾಕೃತಯೋರೈಕ್ಯಂ ಕ್ಷೇತ್ರಜ್ಞ ಪರಮಾತ್ಮನೋ ॥

ಪಿಂಡಾಂಡ ಬ್ರಹ್ಮಾಂಡಗಳ ಐಕ್ಯವನ್ನು ಮೊದಲು ಅರಿಯಬೇಕು. ಆನಂತರ ೧೧ ಇಂದ್ರಿಯಗಳು, ೫ ಭೂತತನ್ಮಾತ್ರ ಒಟ್ಟು ಹದಿನಾರು ಅಂಶಗಳ ಲಿಂಗಾತ್ಮ-ಲಿಂಗ ಶರೀರ, ಅರ್ಚ-ಜ್ಞಾನ, ಬೆಳಕು ಕಾಂತ ಇವುಗಳಿಂದ ಕೂಡಿದ ಪರಾವಸ್ತುವನ್ನು ಪಡೆಯುವ ಮಾರ್ಗದಲ್ಲಿ ಲಿಂಗ ಶರೀರವನ್ನು ನಡೆಸುವ ಶಕ್ತಿಯೇ ಸೂತ್ರಾತ್ಮ. ಈ ಎರಡು ಐಕ್ಯ ವಿಧಾನ ಅರಿತ ಸ್ವಾಪ-ಅವ್ಯಾಕೃತ, ಕ್ಷೇತ್ರಜ್ಞ,-ಪರಮಾತ್ಮರ ಐಕ್ಯ ಸಾಧ್ಯವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಾಪ-ಸುಷುಪ್ತಿಯ ಗಾಢನಿದ್ರೆಯಲ್ಲಿರುವ ಜೀವ, ಅವ್ಯಾಕೃತ-ಅವಿದ್ಯಾರೂಪ ಅಜ್ಞಾನದಿಂದ ಮರೆಮಾಡಲ್ಪಟ್ಟ ಪ್ರಾಜ್ಞ, ಸಾಕ್ಷಿಚೇತನ ಬ್ರಹ್ಮ, ಇವೆರಡರ ಐಕ್ಯ, ಕೊನೆಯಲ್ಲಿ ಕ್ಷೇತ್ರಜ್ಞ—ಜೀವ, ಪರಮಾತ್ಮ-ಅಭಿವ್ಯಕ್ತ-ವ್ಯಾಕೃತವಾದ ಬ್ರಹ್ಮ ಇವರ ಜೀವಬ್ರಹ್ಮೈಕ್ಯ ಸಿದ್ಧಿಸುತ್ತದೆ. "ಸೌಂದರ್ಯ ಲಹರಿ"ಯಲ್ಲಿ ಈ ವಾಕ್ಯಗಳನ್ನು ಸಂಕ್ಷಿಪ್ತವಾಗಿ ಹೇಳಿದೆ. ಹೆಚ್ಚಿನ ವಿವರಗಳನ್ನು ಸುಭಗೋದಯ-ಬ್ರಹ್ಮಸೂತ್ರಗಳಿಂದ ಅರಿಯಬೇಕು.

ಬೆಳಕಿತ್ತು ಲೋಕವ ಬೆಳಗುವ ಸೂರ್ಯಂಗೆ
ದೀಪದಾರತಿ ಎತ್ತಿದಂತೆ,
ಇಳೆಗೆ ತಂಪಿವ ಚಂದ್ರನಿಗಿಂದು ಕಾಂತದ
ಜಲದರ್ಘ್ಯವರ್ಪಿಸಿದಂತೆ,
ಅಂಬುನಿಧಿಗೆ ಸ್ವಕೀಯಾಂಬುಗಳಿಂದೆ ಸಂ
ತೃಪ್ತಿತರ್ಪಣವನಿತ್ತಂತೆ,
ಅಂಬೆ, ನೀನೊಲಿದಿತ್ತ ನುಡಿಗಳಿಂದಲೆ ನಿನ್ನ
ನುತಿಸಿದವೋಲೆನ್ನ ಕವಿತೆ ॥೧೦೦॥

ಶಂಕರ ಭಗವತ್‌ಪೂಜ್ಯಪಾದರ ಅಭಿಮಾನಶೂನ್ಯತೆ, ಪರಾಶಕ್ತಿಯಲ್ಲಿ ಆತ್ಮಾರ್ಪಣ, ತತ್ವನಿಷ್ಠೆ ಈ ಶ್ರೇಷ್ಠ ಗುಣಗಳು ಕೊನೆಯ ಈ ಪದ್ಯದ ಹೃದಯ ಸ್ಪರ್ಶಿ ಉಪಮಾನಗಳಿಂದ ವ್ಯಕ್ತವಾಗಿದೆ. ವಿಶ್ವಕ್ಕೆ ಬೆಳಕನ್ನು ಕೊಡುವ ಸೂರ್ಯನಿಗೆ ದೀಪದಾರತಿ ಎತ್ತಿದಂತೆ ಎಂದು ಪ್ರಾರಂಭವಾಗುವ ಪದ್ಯ.

"ಅಂಬೆ ನೀನೊಲಿದಿತ್ತ ನುಡಿಗಳಿಂದಲೆ ನಿನ್ನ
ನುತಿಸಿದವೋಲೆನ್ನ ಕವಿತೆ"

ಎಂದು ಪರಾಶಕ್ತಿಯ ಸ್ತವನ ರೂಪವಾದ ಈ ಸ್ತೋತ ರತ್ನ ಮುಗಿಯುತ್ತದೆ.

ಓಂ ಸತ್ಯಂ ಶಿವಂ ಸುಂದರಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿವಮಹಿಮ್ನಃ ಸ್ತೋತ್ರಮ್

ಶ್ರೀ ಗಣೇಶಧ್ಯಾನಮ್

ಹರಿಃ ಓಂ ಗಜಾನನಂ ಭೂತಗಣಾಧಿ ಸೇವಿತಮ್ ।
ಕಪಿತ್ಥ ಜಂಬೂಫಲ ಸಾರ ಭಕ್ಷಿತಮ್ ॥
ಉಮಾಸುತಂ ಶೋಕ ವಿನಾಶ ಕಾರಣಂ ।
ನಮಾಮಿ ವಿಘ್ನೇಶ್ವರ ಪಾದಪಂಕಜಂ ॥ಪ॥

॥ ಶಿಖರಿಣೀ ಛಂದಃ ॥

ಮಹಿಮ್ನಃ ಪಾರಂತೇ ಪರಮವಿದುಷೋ ಯದ್ಯಸದೃಶೀ ।
ಸ್ತುತಿರ್ಬ್ರಹ್ಮಾದೀನಾಮಪಿ ತದವಸನ್ನಾಸ್ತ್ವಯಿಗಿರಃ ॥
ಅಥಾऽವಾಚ್ಯಃ ಸರ್ವಃ ಸ್ವಮತಿ ಪರಿಣಾಮಾವಧಿ ಗೃಣನ್ ।
ಮಮಾಪ್ಯೇಷ ಸ್ತೋತ್ರೇ ಹರ ನಿರಪವಾದಃ ಪರಿಕರಃ ॥೧॥

ಅತೀತಃ ಪಂಥಾನಂ ತವ ಚ ಮಹಿಮಾ ವಾಙ್ಮನಸಯೋ ।
ರತದ್ವ್ಯಾವೃತ್ಯಾಯಂ ಚಕಿತಮಭಿಧತ್ತೇ ಶ್ರುತಿರಪಿ ॥
ಸ ಕಸ್ಯ ಸ್ತೋತವ್ಯಃ ಕತಿವಿಧಗುಣಃ ಕಸ್ಯವಿಷಯಃ ।
ಪದೇತ್ವರ್ವಾಚೀನೇಪತತಿ ನಮನಃ ಕಸ್ಯನವಚಃ ॥೨॥

ಮಧುಸ್ಫೀತಾ ವಾಚಃ ಪರಮಮಮೃತಂ ನಿರ್ಮಿತವತ ।
ಸ್ತವ ಬ್ರಹ್ಮನ್ ಕಿಂವಾಗಪಿ ಸುರಗುರೋರ್ವಿಸ್ಮಯಪದಮ್
ಮಮ ತ್ವೇತಾಂ ವಾಣೀಂ ಗುಣಕಥನ ಪುಣ್ಯೇನಭವತಃ ।
ಪುನಾಮೀತ್ಯರ್ಥೇऽಸ್ಮಿನ್ಪುರಮಥನ ಬುದ್ಧಿರ್ವ್ಯವಸಿತಾ ॥೩॥

Sri Vidyabharathi Book Centre, Sringeri

CC-O. In Public Domain. Digitized by eGangotri

ತವೈಶ್ವರ್ಯಂ ಯತ್ತಜ್ಜಗದುದಯ ರಕ್ಷಾಪ್ರಲಯಕೃತ್ ।
ತ್ರಯೀವಸ್ತು ವ್ಯಸ್ತಂ ತಿಸೃಷು ಗುಣಭಿನ್ನಾಸು ತನುಷು ॥
ಅಭವ್ಯಾನಾಮಸ್ಮಿನ್ ವರದ ರಮಣೀಯಾಮರಮಣೀಂ ।
ವಿಹಂತುಂ ವ್ಯಾಕ್ರೋಶೀಂ ವಿದಧತ ಇಹೈಕೇ ಜಡಧಿಯಃ ॥೪॥

ಕಿಮೀಹಃ ಕಿಂಕಾಯಃ ಸಖಲು ಕಿಮುಪಾಯ ಸ್ತ್ರಿಭುವನಂ ।
ಕಿಮಾಧಾರೋ ಧಾತಾ ಸೃಜತಿ ಕಿಮುಪಾದಾನ ಇತಿಚ ॥
ಅತಕ್ರ್ಯೈಶ್ವರ್ಯೇ ತ್ವಯ್ಯನವರಸದುಃಸ್ಥೋ ಹತಧಿಯಃ ।
ಕುತರ್ಕೋ೭ಯಂ ಕಾಂಶ್ಚಿನ್ಮುಖರಯತಿ ಮೋಹಾಯ ಜಗತಃ ॥೫॥

ಅಜನ್ಮಾನೋ ಲೋಕಾಃ ಕಿಮವಯವವಂತೋ೭ಪಿ ಜಗತಾ ।
ಮಧಿಷ್ಠಾತಾರಂ ಕಿಂಭವವಿಧಿರನಾದೃತ್ಯಭವತಿ ॥
ಅನೀಶೋವಾ ಕುರ್ಯಾದ್ಭುವನ ಜನನೇ ಕಃಪರಿಕರೋ ।
ಯತೋ ಮಂದಾಸ್ತ್ವಾಂ ಪ್ರತ್ಯಮರವರ ಸಂಶೇರತ ಇಮೆ ॥೬॥

ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ ।
ಪ್ರಭಿನ್ನೇ ಪ್ರಸ್ಥಾನೇ ಪರಮಿದಮದಃ ಪಥ್ಯಮಿತಿಚ ॥
ರುಜೀನಾಂ ವೈಚಿತ್ರ್ಯಾದೃಜು ಕುಟಿಲನಾನಾಪಥಜುಷಾಂ ।
ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ ॥೭॥

ಮಹೋಕ್ಷಃ ಖಟ್ವಾಂಗಂ ಪರಶುರಜಿನಂ ಭಸ್ಮಫಣಿನಃ ।
ಕಪಾಲಂ ಚೇತ್ಯೇವಂತವ ವರದ ತಂತ್ರೋಪಕರಣಮ್ ॥
ಸುರಸ್ತಾಂ ತಾಮೃದ್ಧಿಂ ದಧತಿ ತು ಭವದ್ಭ್ರೂಪ್ರಣಿಹತಾಂ ।
ನಹಿ ಸ್ವಾತ್ಮಾರಾಮಂ ವಿಷಯ ಮೃಗತೃಷ್ಣಾ ಭ್ರಮಯತಿ ॥೮॥

ಧ್ರುವಂ ಕಶ್ಚಿತ್ಸರ್ವಂ ಸಕಲಮಪರಸ್ತ್ವಧ್ರುವಮಿದಂ ।
ಪರೋ ಧ್ರೌವ್ಯಾಧ್ರೌವ್ಯೇ ಜಗತಿ ಗದತಿ ವ್ಯಸ್ತವಿಷಯೇ ॥
ಸಮಸ್ತೇ೭ಪ್ಯೇತಸ್ಮಿನ್ಪುರ ಮಥನ ತೈರ್ವಿಸ್ಮಿತ ಇವ ।
ಸ್ತುವಂಜಿಹ್ರೇಮಿ ತ್ವಾಂ ನಖಲು ನನು ಧೃಷ್ಟಾಮುಖರತಾ ॥೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ತವೈಶ್ವರ್ಯಂ ಯತ್ನಾದ್ಯದುಪರಿ ವಿರಿಂಚೋ ಹರಿರಧಃ ।
ಪರಿಚ್ಛೇತ್ತುಂ ಯಾತಾವನಲಮನಲಸ್ಕಂಧವಪುಷಃ ॥
ತತೋ ಭಕ್ತಿಶ್ರದ್ಧಾ ಭರಗುರುಗೃಣದ್ಭ್ಯಾಂ ಗಿರಿಶ ಯತ್ ।
ಸ್ವಯಂ ತಸ್ಥೇ ತಾಭ್ಯಾಂ ತವ ಕಿಮನುವೃತ್ತಿರ್ನ ಫಲತಿ ॥೧೦॥

ಅಯತ್ನಾ ದಾಪಾದ್ಯ ತ್ರಿಭುವನ ಮವೈರವ್ಯತಿಕರಂ ।
ದಶಾಸ್ಯೋಯದ್ಬಾಹೂ ನಭೃತ ರಣಕಂಡೂಪರವಶಾನ್ ॥
ಶಿರಃ ಪದ್ಮ ಶ್ರೇಣೀ ರಚಿತ ಚರಣಾಂಭೋರುಹಬಲೇ ।
ಸ್ಥಿರಾಯಾ ಸ್ತ್ವದ್ಭಕ್ತೆ ಸ್ತ್ರಿಪುರಹರ ವಿಸ್ಫೂರ್ಜಿತಮಿದಂ ॥೧೧॥

ಅಮುಷ್ಯತ್ವತ್ಸೇವಾ ಸಮಧಿಗತಸಾರಂ ಭುಜವನಂ ।
ಬಲಾತ್ಕೈಲಾಸೇಪಿ ತ್ವದಧಿವಸತೌ ವಿಕ್ರಮಯತಃ ॥
ಅಲಭ್ಯಾ ಪಾತಾಲೇಽಪ್ಯಲಸ ಚಲಿತಾಂಗುಷ್ಠಶಿರಸಿ ।
ಪ್ರತಿಷ್ಠಾ ತ್ವಯ್ಯಾಸೀದ್ ಧ್ರುವಮುಪಚಿತೋ ಮುಹ್ಯತಿವಿಲಃ ॥೧೨॥

ಯದೃದ್ಧಿಂ ಸುತ್ರಾಮ್ಣೋ ವರದ ಪರಮೋಚ್ಚೈರಪಿ ಸತಿ ।
ಮಧಶ್ಚಕ್ರೇ ಬಾಣಃ ಪರಿಜನವಿಧೇಯ ಸ್ತ್ರಿಭುವನಃ ॥
ನತಚ್ಚಿತ್ರಂ ತಸ್ಮಿನ್ವರಿವಸಿತರಿ ತ್ವಚ್ಚರಣಯೋ ।
ರ್ನಕಸ್ಯಾಪ್ಯುನ್ನತ್ಯೈ ಭವತಿ ಶಿರಸಸ್ತ್ವಯ್ಯವನತಿಃ ॥೧೩॥

ಅಕಾಂಡ ಬ್ರಹ್ಮಾಂಡಕ್ಷಯ ಚಕಿತದೇವಾಸುರ ಕೃಪಾ ।
ವಿಧೇಯಸ್ಯಾऽऽ ಸೀದ್ಯಸ್ತ್ರಿನಯನವಿಷಂ ಸಂಹೃತವತಃ ॥
ಸಕಲ್ಮಾಷಃ ಕಂಠೆ ತವನ ಕುರುತೇನಶ್ರಿಯಮುಹೋ ।
ವಿಕಾರೋऽಪಿಶ್ಲಾಘ್ಯೋ ಭುವನಭಯ ಭಂಗವ್ಯಸನಿನಃ ॥೧೪॥

ಅಸಿದ್ಧಾರ್ಥಾನೈವಕ್ವಚಿದಪಿ ಸದೇವಾಸುರನರೇ ।
ನಿವರ್ತಂತೇ ನಿತ್ಯಂ ಜಗತಿ ಜಯಿನೋಯಸ್ಯ ವಿಶಿಖಾಃ ॥
ಸಪಶ್ಯನ್ನೀಶತ್ವಾವಿತರ ಸುರಸಾಧಾರಣಮಭೂತ್ ।
ಸ್ಮರಃ ಸ್ಮರ್ತವ್ಯಾತ್ಮಾ ನಹಿ ವಶಿಷುಪಥ್ಯಃ ಪರಿಭವಃ ॥೧೫॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹೀಪಾದಾಘಾತಾದ್ವ್ರಜತಿ ಸಹಸಾ ಸಂಶಯಪದಂ ।
ಪದಂ ವಿಷ್ಣೋರ್ಭ್ರಾಮ್ಯದ್ಭು ಜಪರಿಘ ರುಗ್ಣಗ್ರಹಗಣಮ್ ॥
ಮುಹುರ್ದ್ಯೌರ್ದೌಸ್ಥ್ಯಂ ಯಾತ್ಯನಿಭೃತಜಟಾ ತಾಡಿತ ತಟಾ ।
ಜಗದ್ರಕ್ಷಾಯೈತ್ವಂ ನಟಸಿ ನನುವಾಮೈವ ವಿಭುತಾ ॥೧೬॥

ವಿಯದ್ವ್ಯಾಪೀ ತಾರಾಗಣಗುಣಿತ ಫೇನೋದ್ಗಮರುಚಿಃ ।
ಪ್ರವಾಹೋವಾರಾಂಯಃ ಪೃಷತಲಘುದೃಷ್ಟಃ ಶಿರಸಿತೇ ॥
ಜಗದ್ದ್ವೀಪಾಕಾರಂ ಜಲಧಿವಲಯಂ ತೇನಕೃತಮಿ ।
ತ್ಯನೇ ನೈವೋನ್ನೇಯಂ ದೃತಮಹಿಮ ದಿವ್ಯಂ ತವ ವಪುಃ ॥೧೭॥

ರಥಃಕ್ಷೋಣೀ ಯಂತಾಶತಧೃತಿರಗೇಂದ್ರೋ ಧನುರಥೋ ।
ರಥಾಂಗೇ ಚಂದ್ರಾರ್ಕೌ ರಥಚರಣಪಾಣಿಃ ಶರ ಇತಿ ॥
ದಿಧಕ್ಷೋಸ್ತೇ ಕೋಽಯಂ ತ್ರಿಪುರತೃಣಮಾಡಂಬರ ವಿಧಿ ।
ರ್ವಿಧೇಯೈಃ ಕ್ರೀಡಂತ್ಯೋ ನಖಲು ಪರತಂತ್ರಾಃ ಪ್ರಭುಧಿಯಃ ॥೧೮॥

ಹರಿಸ್ತೇ ಸಾಹಸ್ರಂ ಕಮಲ ಬಲಿಮಾಧಾಯ ಪದಯೋ ।
ರ್ಯದೇಕೋನೇ ತಸ್ಮಿನ್ನಿ ಜಮುದ ಹರನ್ನೇತ್ರ ಕಮಲಮ್ ॥
ಗತೋಭಕ್ತ್ಯುದ್ರೇಕಃ ಪರಿಣತಿಮಸೌ ಚಕ್ರವಪುಷಾ ।
ತ್ರಯಾಣಾಂ ರಕ್ಷಾಯೈತ್ರಿಪುರಹರ ಜಾಗರ್ತಿಜಗತಾಂ ॥೧೯॥

ಕ್ರತೌಸುಪ್ತೇ ಜಾಗ್ರತ್ಪ್ರಮಸಿ ಫಲಯೋಗೇಕ್ರತುಮತಾಂ ।
ಕ್ವಕರ್ಮ ಪ್ರಧ್ವಸ್ತಂಫಲತಿ ಪುರುಷಾರಾಧನಮೃತೆ ॥
ಅತಸ್ತಾ ವಂ ಸಂಪ್ರೇಕ್ಷ್ಯಕ್ರತುಷು ಫಲದಾನ ಪ್ರತಿಭುವಂ ।
ಶ್ರುತೌಶ್ರದ್ಧಾಂ ಬದ್ಧಾ ವ್ಯದೃಢಪರಿಕರಃ ಕರ್ಮಸುಜನಃ ॥೨೦॥

ಕ್ರಿಯಾದಕ್ಷೋ ದಕ್ಷಃ ಕ್ರತುಪತಿರಧೀಶಸ್ತನುಭೃತಾ ।
ಮೃಷೀಣಾಮಾರ್ತ್ವಿಜ್ಯಂ ಶರಣದ ಸದಸ್ಯಾಃ ಸುರಗಣಾಃ ॥
ಕ್ರತುಭ್ರೇಷಸ್ತ್ವತ್ತಃ ಕ್ರತುಫಲವಿಧಾನವ್ಯಸನಿನೋ ।
ಧ್ರುವಂ ಕರ್ತುಃ ಶ್ರದ್ಧಾವಿಧುರಮಭಿಚಾರಾ ಯ ಹಿಮಖಾಃ ॥೨೧॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಜಾನಾಥಂ ನಾಥ ಪ್ರಸಭಮಭಿಕಂ ಸ್ವಾಂದುಹಿತರಂ ।
ಗತಂ ರೋಹಿದ್ಭೂತಾಂ ರಿರಮಯಿಷು ಮೃಷ್ಯಸ್ಯವಪುಷಾ ॥
ಧನುಃಪಾಣೇರ್ಯಾಂತಂ ದಿವಮಪಿ ಸಪತ್ರಾ ಕೃತಮಮುಂ ।
ತ್ರಸಂತಂ ತೇಽದ್ಯಾಪಿ ತ್ಯಜತಿ ನಮೃಗವ್ಯಾಧರಭಸಃ ॥೨೨॥

ಶ್ಮಶಾನೇಷ್ವಾ ಕ್ರೀಡಾಸ್ಮರಹರ ಪಿಶಾಚಾಃ ಸಹಚರಾ ।
ಶ್ಚಿತಾ ಭಸ್ಮಾಲೇಪಃ ಸ್ರಗಪಿನೃಕರೋಟೀ ಪರಿಕರಃ ॥
ಅಮಂಗಲ್ಯಂ ಶೀಲಂ ತವಭವತು ನಾಮೈವಮಖಿಲಂ ।
ತಥಾಽಪಿ ಸ್ಮರ್ತೃಣಾಂ ವರದ ಪರಮಂ ಮಂಗಲಮಸಿ ॥೨೩॥

ಸ್ಫಲಾವರ್ಣ್ಯಶಂಸಾ ಧೃತಧನುಷಮಹ್ನಾ ಯ ತೃಣವತ್ ।
ಪುರಃ ಪ್ಲುಷ್ಟಂ ದೃಷ್ಟ್ವಾ ತ್ರಿಪುರಮಥನ ಪುಷ್ಪಾಯುಧಮಪಿ ॥
ಯದಿಸ್ತ್ರೈಣಂ ದೇವೀ ಯಮನಿರತ ದೇಹಾರ್ಧಘಟನಾ ।
ದವೈತಿತ್ವಾಮದ್ಧಾ ಬತವರದ ಮುಗ್ಧಾಯುವತಯಃ ॥೨೪॥

ಮನಃ ಪ್ರತ್ಯಕ್ಚಿತ್ತೇ ಸವಿಧಮವಧಾ ಯಾತ್ತಮರುತಃ ।
ಪ್ರಹೃಷ್ಯದ್ರೋಮಾಣಃ ಪ್ರಮದಸಲಿಲೋತ್ಸಂಗಿತದೃಶಃ ॥
ಯದಾಲೋಕ್ಯಾಹ್ಲಾದಂ ಹ್ರದ ಇವ ನಿಮಜ್ಜಾ ಮೃತವಯಂ ।
ದಧತ್ಯಂತಸ್ತತ್ತ್ವಂ ಕಿಮಪಿ ಯಮಿನಸ್ತ್ವತ್ಕಿಲ ಭವಾನ್ ॥೨೫॥

ತ್ವಮರ್ಕಸ್ತ್ವಂ ಸೋಮಸ್ತ್ವಮಸಿ ಪವನಸ್ತ್ವಂ ಹುತವಹ ।
ಸ್ತ್ವಮಾಪಸ್ತ್ವಂ ವ್ಯೋಮ ತ್ವಮುಧರಣಿರಾತ್ಮಾತ್ವಮಿತಿಚ ॥
ಪರಿಚ್ಛಿನ್ನಾ ಮೇವಂ ತ್ವಯಿಪರಿಣತಾ ಬಿಭ್ರತಿಗಿರಂ ।
ನವಿಘ್ನಸ್ತತ್ತತ್ತ್ವಂ ವಯಮಿಹತು ಯತ್ತ್ವಂ ನಭವಸಿ ॥೨೬॥

ತ್ರಯೀಂ ತಿಸ್ರೋವೃತ್ತೀಸ್ತ್ರಿಭುವನಮಥೋತ್ರೀನಪಿಸುರಾ ।
ನಕಾರಾದ್ಯೈರ್ವರ್ಣೈಸ್ತ್ರಿಭಿರಭಿದಧತ್ತೀರ್ಣವಿಕೃತಿ ॥
ತುರೀಯಂ ತೇ ಧಾಮಧ್ವನಿಭಿರವಿರುಂಧಾನ ಮಣುಭಿಃ ।
ಸಮಸ್ತವ್ಯಸ್ತಂ ತ್ವಾಂ ಶರಣದ ಗೃಣಾತ್ಯೋಮಿತಿ ಪದಂ ॥೨೭॥

Sri Vidyabharathi Book Centre, Sringeri

CC-O. In Public Domain. Digitized by eGangotri

ಭವಃ ಶರ್ವೋ ರುದ್ರಃ ಪಶುಪತಿ ರಥೋಗ್ರಃ ಸಹಮಹಾಂ ।
ಸ್ತಥಾಭೀಮೇಶಾನಾ ವಿತಿಯದ ಭಿಧಾನಾಷ್ಟಕವಿದಂ ॥
ಅಮುಷ್ಮಿನ್ನ ಪ್ರತ್ಯೇಕಂ ಪ್ರವಿಚರತಿ ದೇವಶ್ರುತಿರಪಿ ।
ಪ್ರಿಯಾ ಯಾಸ್ಮೈ ಧೃಥಾಮ್ನೆ ಪ್ರಣಿಹಿತ ನಮಸ್ಯೋಽಸ್ಮಿ ಭವತೇ ॥೨೮॥

ನಮೋ ನೇದಿಷ್ಠಾಯ ಪ್ರಿಯದವ ದವಿಷ್ಠಾಯ ಜಗತಾಮೆ ।
ನಮಃ ಕ್ಷೋದಿಷ್ಠಾಯ ಸ್ಮರಹರ ಮಹಿಷ್ಠಾಯ ಜಗತಾಮೆ ॥
ನಮೊ ವರ್ಷಿಷ್ಠಾಯ ತ್ರಿನಯನ ಯವಿಷ್ಠಾಯ ಜಗತಾಮೆ ।
ನಮಃ ಸರ್ವಸ್ಮೈತೆ ತದಿದಮಿತಿ ಶರ್ವಾಯ ಜಗತಾಮೆ ॥೨೯॥

ಬಹುಲರಜಸೆ ವಿಶ್ವೋತ್ಪತ್ತೌ ಭವಾಯ ನಮೋನಮಃ ।
ಪ್ರಬಲತಮಸೆ ತತ್ಸಂಹಾರೆ ಹರಾಯ ನಮೋನಮಃ ॥
ಜನಸುಖಕೃತೆ ಸತ್ತೋದ್ರಿಕ್ತೌ ಮೃಡಾಯ ನಮೊ ನಮಃ ।
ಪ್ರಮಹಸಿಪದೆ ನಿಸ್ತ್ರೈಗುಣ್ಯೆ ಶಿವಾಯ ನಮೊ ನಮಃ ॥೩೦॥

ಕೃಶಪರಿಣತಿಚೇತಃ ಕ್ಲೇಶವಶ್ಯಂ ಕ್ವಚೇದಂ ।
ಕ್ವಚತವಗುಣ ಸೀಮೋಲ್ಲಂಘಿನೀ ಶಶ್ವದೃದ್ಧಿಃ ॥
ಇತಿಚಕಿತ ಮಮಂದೀ ಕೃತ್ಯಮಾಂ ಭಕ್ತಿರಾಧಾತ್ ।
ವರದ ಚರಣಯೋಸ್ತೇ ವಾಕ್ಯ ಪುಷ್ಪೋಪಹಾರಮ್ ॥೩೧॥

ಅಸಿತಗಿರಿಸಮಂಸ್ಯಾತ್ಕಜ್ಜಲಂ ಸಿಂಧುಪಾತ್ರೆ ।
ಸುರತರುವರ ಶಾಖಾಲೇಖನೀ ಪತ್ರಮುರ್ವೀ ॥
ಲಿಖಿತಿಯದಿಗೃಹಿತ್ವಾ ಶಾರದಾ ಸರ್ವಕಾಲಂ ॥
ತದಪಿತವಗುಣಾನಾಮೀಶ ಪಾರಂ ನಯಾತಿ ॥೩೨॥

ಅಸುರಸುರಮುನೀಂದ್ರೈ ರರ್ಚಿತಸ್ಯೇಂದು ಮೌಳೇ ।
ರ್ಗ್ರಥಿತ ಗುಣ ಮಹಿಮ್ನೊ ನಿರ್ಗುಣಸ್ಯೇಶ್ವರಸ್ಯ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸಕಲಗಣವರಿಷ್ಠಃ ಪುಷ್ಪದಂತಾಭಿಧಾನೋ ।
ರುಚಿರಮಲಘುವೃತ್ತೈಃ ಸ್ತೋತ್ರಮೇತಚ್ಚಕಾರ ॥೩೩॥

ಅಹರಹರನವದ್ಯಂ ಧೂರ್ಜಟೇ ಸ್ತೋತ್ರಮೇತತ್ ।
ಪಠತಿ ಪರಮಭಕ್ತ್ಯಾ ಶುದ್ಧ ಚಿತ್ತಃ ಪುಮಾನ್ಯಃ ॥
ಸಭವತಿ ಶಿವಲೋಕೇ ರುದ್ರತುಲ್ಯಸ್ತಥಾತ್ರ ।
ಪ್ರಚುರತರಧನಾಯುಃ ಪುತ್ರವಾನ್ಕೀರ್ತಿಮಾಂಶ್ಚ ॥೩೪॥

ಮಹೇಶಾನ್ನಾ ಪರೋದೇವೋ ಮಹಿಮ್ನೋ ನಾಪರಾಸ್ತುತಿಃ ।
ಅಘೋರಾನ್ನಾ ಪರೋ ಮಂತ್ರೋನಾಸ್ತಿತತ್ತ್ವಂ ಗುರೋಃಪರಂ ॥೩೫॥

ದಿಕ್ಷಾದಾನಂ ತಪಸ್ತೀರ್ಥಂ ಜ್ಞಾನಂ ಯಾಗಾದಿಕಾಃಕ್ರಿಯಾಃ ।
ಮಹಿಮ್ನಸ್ತವ ಪಾಠಸ್ಯ ಕಲಾಂನಾರ್ಹಂತಿಷೋಡಶೀಮ್ ॥೩೬॥

ಕುಸುಮ ದಶನನಾಮಾ ಸರ್ವಗಂಧರ್ವರಾಜಃ ।
ಶಶಿಧರವರಮೌಳೇರ್ದೇವ ದೇವಸ್ಯದಾಸಃ ॥
ಸಗುರು ನಿಜಮಹಿಮ್ನೋ ಭ್ರಷ್ಟ ಏವಾಸ್ಯ ರೋಷಾತ್ ।
ಸ್ತವನಮಿದ ಮಕಾರ್ಷೀದ್ದಿವ್ಯ ದಿವ್ಯಂ ಮಹಿಮ್ನಃ ॥೩೭॥

ಸುರವರ ಮುನಿಪೂಜ್ಯಂ ಸ್ವರ್ಗಮೋಕ್ಷೈಕ ಹೇತುಂ ।
ಪಠತಿ ಯದಿ ಮನುಷ್ಯಃ ಪ್ರಾಂಜಲಿರ್ನಾನ್ಯಚೇತಾಃ ॥
ವ್ರಜತಿ ಶಿವಸಮೀಪಂ ಕಿನ್ನರೈಃ ಸ್ತೂಯಮಾನಃ ।
ಸ್ತವನ ಮಿದಮಮೋಘಂ ಪುಷ್ಪದಂತಪ್ರಣೀತಮ್ ॥೩೮॥

ಶ್ರೀ ಪುಷ್ಪದಂತ ಮುಖಪಂಕಜನಿರ್ಗತೇನ ।
ಸ್ತೋತ್ರೇಣ ಕಿಲ್ಬಿಷಹರೇಣಹರಪ್ರಿಯೇಣ ॥
ಕಂಠಸ್ಥಿತೇನ ಪಠಿತೇನ ಸಮಾಹಿತೇನ ।
ಸುಪ್ರೀಣಿತೋಭವತಿ ಭೂತಪತಿರ್ಮಹೇಶಃ ॥೩೯॥

Sri Vidyabharathi Book Centre, Sringeri

CC-O. In Public Domain. Digitized by eGangotri

ಇತ್ಯೇಷಾವಾಙ್ಮಯೀ ಪೂಜಾ ಶ್ರೀಮಚ್ಛಂಕರಪಾದಯೋಃ ।
ಅರ್ಪಿತಾ ತೇನದೇವೇಶಃ ಪ್ರೀಯತಾಂಮೇಸದಾಶಿವಃ ॥೪೦॥

॥ ಇತಿ ಶ್ರೀ ಪುಷ್ಪದಂತ ವಿರಚಿತಂ ಶಿವ
ಮಹಿಮ್ನಃ ಸ್ತೋತ್ರಂ ಸಂಪೂರ್ಣಂ ॥

— ೦ —

CC-O. In Public Domain. Digitized by eGangotri

ಸೌಂದರ್ಯಲಹರೀ

ಶಿವಃ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ
ನ ಚೇದೇವಂ ದೇವೋ ನ ಖಲು ಕುಶಲಃ ಸ್ಪಂದಿತುಮಪಿ ।
ಅತಸ್ತ್ವಾಮಾರಾಧ್ಯಾಂ ಹರಿಹರವಿರಿಂಚ್ಯಾದಿಭಿರಪಿ
ಪ್ರಣಂತುಂ ಸ್ತೋತುಂ ವಾ ಕಥಮಕೃತಪುಣ್ಯಃ ಪ್ರಭವತಿ ॥ ೧ ॥

ತನೀಯಾಂಸಂ ಪಾಂಸುಂ ತವ ಚರಣಪಂಕೇರುಹಭವಂ
ವಿರಿಂಚಿಃ ಸಂಚಿನ್ವನ್ ವಿರಚಯತಿ ಲೋಕಾನವಿಕಲಮ್ ।
ವಹತ್ಯೇನಂ ಶೌರಿಃ ಕಥಮಪಿ ಸಹಸ್ರೇಣ ಶಿರಸಾಂ
ಹರಃ ಸಂಕ್ಷುದ್ಯೈನಂ ಭಜತಿ ಭಸಿತೋದ್ಧೂಲನವಿಧಿಮ್ ॥ ೨ ॥

ಅವಿದ್ಯಾನಾಮಂತಸ್ತಿಮಿರಮಿಹರದ್ವೀಪನಗರೀ
ಜಡಾನಾಂ ಚೈತನ್ಯಸ್ತಬಕಮಕರಂದಸ್ರುತಿಝರೀ ।
ದರಿದ್ರಾಣಾಂ ಚಿಂತಾಮಣಿಗುಣನಿಕಾ ಜನ್ಮಜಲಧೌ
ನಿಮಗ್ನಾನಾಂ ದಂಷ್ಟ್ರಾ ಮುರರಿಪುವರಾಹಸ್ಯ ಭವತಿ ॥ ೩ ॥

ತ್ವದನ್ಯಃ ಪಾಣಿಭ್ಯಾಮಭಯವರದೋ ದೈವತಗಣ-
ಸ್ತ್ವಮೇಕಾ ನೈವಾಸಿ ಪ್ರಕಟಿತವರಾಭೀತ್ಯಭಿನಯಾ ।
ಭಯಾತ್ತ್ರಾತುಂ ದಾತುಂ ಫಲಮಪಿ ಚ ವಾಂಛಾಸಮಧಿಕಂ
ಶರಣ್ಯೇ ಲೋಕಾನಾಂ ತವ ಹಿ ಚರಣಾವೇವ ನಿಪುಣೌ ॥ ೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿಸ್ತ್ವಮಾರಾಧ್ಯ ಪ್ರಣತಜನಸೌಭಾಗ್ಯಜನನೀಂ
ಪುರಾ ನಾರೀ ಭೂತ್ವಾ ಪುರರಿಪುಮಪಿ ಕ್ಷೋಭಮನಯತ್ ।
ಸ್ಮರೋಽಪಿ ತ್ವಾಂ ನತ್ವಾ ರತಿನಯನಲೇಹ್ಯೇನ ವಪುಷಾ
ಮುನೀನಾಮಪ್ಯಂತಃ ಪ್ರಭವತಿ ಹಿ ಮೋಹಾಯ ಮಹತಾಮ್ ॥ ೫ ॥

ಧನುಃ ಪೌಷ್ಪಂ ಮೌರ್ವೀ ಮಧುಕರಮಯೀ ಪಂಚ ವಿಶಿಖಾ
ವಸಂತಃ ಸಾಮಂತೋ ಮಲಯಮರುದಾಯೋಧನರಥಃ ।
ತಥಾಪ್ಯೇಕಃ ಸರ್ವಂ ಹಿಮಗಿರಿಸುತೇ ಕಾಮಪಿ ಕೃಪಾ-
ಮಪಾಂಗಾತ್ತೇ ಲಬ್ಧ್ವಾ ಜಗದದಿಮನಂಗೋ ವಿಜಯತೇ ॥ ೬ ॥

ಕ್ವಣತ್ಕಾಂಚೀದಾಮಾ ಕರಿಕಲಭಕುಂಭಸ್ತನನತಾ
ಪರಿಕ್ಷೀಣಾ ಮಧ್ಯೇ ಪರಿಣತಶರಚ್ಚಂದ್ರವದನಾ ।
ಧನುರ್ಬಾಣಾನ್ ಪಾಶಂ ಸೃಣಿಮಪಿ ದಧಾನಾ ಕರತಲೈಃ
ಪುರಸ್ತಾದಾಸ್ತಾಂ ನಃ ಪುರಮಥಿತುರಾಹೋಪುರುಷಿಕಾ ॥ ೭ ॥

ಸುಧಾಸಿಂಧೋರ್ಮಧ್ಯೇ ಸುರವಿಟಪಿವಾಟೀಪರಿವೃತೇ
ಮಣಿದ್ವೀಪೇ ನೀಪೋಪವನವತಿ ಚಿಂತಾಮಣಿಗೃಹೇ ।
ಶಿವಾಕಾರೇ ಮಂಚೇ ಪರಮಶಿವಪರ್ಯಂಕನಿಲಯಾಂ
ಭಜಂತಿ ತ್ವಾಂ ಧನ್ಯಾಃ ಕತಿಚನ ಚಿದಾನಂದಲಹರೀಮ್ ॥ ೮ ॥

ಮಹೀಂ ಮೂಲಾಧಾರೇ ಕಮಪಿ ಮಣಿಪೂರೇ ಹುತವಹಂ
ಸ್ಥಿತಂ ಸ್ವಾಧಿಷ್ಠಾನೇ ಹೃದಿ ಮರುತಮಾಕಾಶಮುಪರಿ ।
ಮನೋಽಪಿ ಭ್ರೂಮಧ್ಯೇ ಸಕಲಮಪಿ ಭಿತ್ತ್ವಾ ಕುಲಪಥಂ
ಸಹಸ್ರಾರೇ ಪದ್ಮೇ ಸಹ ರಹಸಿ ಪತ್ಯಾ ವಿಹರಸೇ ॥ ೯ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಧಾಧಾರಾಸಾರೈಶ್ಚರಣಯುಗಲಾಂತರ್ವಿಗಲಿತೈಃ
ಪ್ರಪಂಚಂ ಸಿಂಚಂತೀ ಪುನರಪಿ ರಸಾಮ್ನಾಯಮಹಸಾ ।
ಅವಾಪ್ಯ ಸ್ವಾಂ ಭೂಮಿಂ ಭುಜಗನಿಭಮಧ್ಯುಷ್ಟವಲಯಂ
ಸ್ವಮಾತ್ಮಾನಂ ಕೃತ್ವಾ ಸ್ವಪಿಷಿ ಕುಲಕುಂಡೇ ಕುಹರಿಣೆ ॥ ೧೦ ॥

ಚತುರ್ಭಿಃ ಶ್ರೀಕಂಠೈಃ ಶಿವಯುವತಿಭಿಃ ಪಂಚಭಿರಪಿ
ಪ್ರಭಿನ್ನಾಭಿಃ ಶಂಭೋರ್ನವಭಿರಪಿ ಮೂಲಪ್ರಕೃತಿಭಿಃ ।
ಚತುಶ್ಚತ್ವಾರಿಂಶದ್ವಸುದಲಕಲಾಶ್ರತ್ರಿವಲಯ-
ತ್ರಿರೇಖಾಭಿಃ ಸಾರ್ಧಂ ತವ ಶರಣಕೋಣಾಃ ಪರಿಣತಾಃ ॥ ೧೧ ॥

ತ್ವದೀಯಂ ಸೌಂದರ್ಯಂ ತುಹಿನಗಿರಿಕನ್ಯೇ ತುಲಯಿತುಂ
ಕವೀಂದ್ರಾಃ ಕಲ್ಪಂತೇ ಕಥಮಪಿ ವಿರಿಂಚಿಪ್ರಭೃತಯಃ ।
ಯದಾಲೋಕೌತ್ಸುಕ್ಯಾದಮರಲಲನಾ ಯಾಂತಿ ಮನಸಾ
ತಪೋಭಿರ್ದುಷ್ಪ್ರಾಪಾಮಪಿ ಗಿರಿಶಸಾಯುಜ್ಯಪದವೀಮ್ ॥ ೧೨ ॥

ನರಂ ವರ್ಷೀಯಾಂಸಂ ನಯನವಿರಸಂ ನರ್ಮಸು ಜಡಂ
ತವಾಪಾಂಗಾಲೋಕೇ ಪತಿತಮನುಧಾವಂತಿ ಶತಶಃ ।
ಗಲದ್ವೇಣೀಬಂಧಾಃ ಕುಚಕಲಶವಿಸ್ರಸ್ತಸಿಚಯಾ
ಹಠಾತ್ತ್ರುಟ್ಯತ್ಕಾಂಚ್ಯೋ ವಿಗಲಿತದುಕೂಲಾ ಯುವತಯಃ ॥ ೧೩ ॥

ಕ್ಷಿತೌ ಷಟ್ಪಂಚಾಶದ್ ದ್ವಿಸಮಧಿಕಪಂಚಾಶದುದಕೇ
ಹುತಾಶೇ ದ್ವಾಷಷ್ಟಿಶ್ಚತುರಧಿಕಪಂಚಾಶದನಿಲೇ ।
ದಿವಿ ದ್ವಿಃಷಟ್ತ್ರಿಂಶನ್ಮನಸಿ ಚ ಚತುಃಷಷ್ಟಿರಿತಿ ಯೇ
ಮಯೂಖಾಸ್ತೇಷಾಮಪ್ಯುಪರಿ ತವ ಪಾದಾಂಬುಜಯುಗಮ್ ॥ ೧೪ ॥

CC-O. In Public Domain. Digitized by eGangotri

ಶರಜ್ಜ್ಯೋತ್ಸ್ನಾಶುದ್ಧಾಂ ಶಶಿಯುತಜಟಾಜೂಟಮುಕುಟಾಂ
ವರತ್ರಾಸತ್ರಾಣಸ್ಫಟಿಕಘಟಿಕಾಪುಸ್ತಕಕರಾಮ್ ।
ಸಕೃನ್ನತ್ವಾ ನ ತ್ವಾಂ ಕಥಮಿವ ಸತಾಂ ಸಂನಿದಧತೇ
ಮಧುಕ್ಷೀರದ್ರಾಕ್ಷಾಮಧುರಿಮಧುರೀಣಾ ಭಣಿತಯಃ ॥ ೧೫ ॥

ಕವೀಂದ್ರಾಣಾಂ ಚೇತಃಕಮಲವನಬಾಲಾತಪರುಚಿಂ
ಭಜಂತೇ ಯೇ ಸಂತಃ ಕತಿಚಿದರುಣಾಮೇವ ಭವತೀಮ್ ।
ವಿರಿಂಚಿಪ್ರೇಯಸ್ಯಾಸ್ತರುಣತರಶೃಂಗಾರಲಹರೀ–
ಗಭೀರಾಭಿರ್ವಾಗ್ಭಿರ್ವಿದಧತಿ ಸತಾಂ ರಂಜನಮಮಿಮಾ ॥ ೧೬ ॥

ಸವಿತ್ರೀಭಿರ್ವಾಚಾಂ ಶಶಿಮಣಿಶಿಲಾಭಂಗರುಚಿಭಿ–
ರ್ವಶಿನ್ಯಾದ್ಯಾಭಿಸ್ತ್ವಾಂ ಸಹ ಜನನಿ ಸಂಚಿಂತಯತಿ ಯಃ ।
ಸ ಕರ್ತಾ ಕಾವ್ಯಾನಾಂ ಭವತಿ ಮಹತಾಂ ಭಂಗಿರುಚಿಭಿ
ರ್ವಚೋಭಿರ್ವಾಗ್ದೇವೀವದನಕಮಲಾಮೋದಮಧುರೈಃ ॥ ೧೭ ॥

ತನುಚ್ಛಾಯಾಭಿಸ್ತೇ ತರುಣತರಣಿಶ್ರೀಸರಣಿಭಿ-
ರ್ದಿವಂ ಸರ್ವಾಮುರ್ವೀಮರುಣಿಮನಿಮಗ್ನಾಂ ಸ್ಮರತಿ ಯಃ ।
ಭವಂತ್ಯಸ್ಯ ತ್ರಸ್ಯದ್ವನಹರಿಣಶಾಲೀನನಯನಾಃ
ಸಹೋರ್ವಶ್ಯಾ ವಶ್ಯಾಃ ಕತಿ ಕತಿ ನ ಗೀರ್ವಾಣಗಣಿಕಾಃ ॥ ೧೮ ॥

ಮುಖಂ ಬಿಂದುಂ ಕೃತ್ವಾ ಕುಚಯುಗಮಧಸ್ತಸ್ಯ ತದಧೋ
ಹರಾರ್ಧಂ ಧ್ಯಾಯೇದ್ಯೋ ಹರಮಹಿಷಿ ತೇ ಮನ್ಮಥಕಲಾಮ್ ।
ಸ ಸದ್ಯಃ ಸಂಕ್ಷೋಭಂ ನಯತಿ ವನಿತಾ ಇತ್ಯತಿಲಘು
ತ್ರಿಲೋಕೀಮಪ್ಯಾಶು ಭ್ರಮಯತಿ ರವೀಂದುಸ್ತನಯುಗಾಮ್ ॥ ೧೯ ॥

CC-O. In Public Domain. Digitized by eGangotri

ಕಿರಂತೀಮಂಗೇಭ್ಯಃ ಕಿರಣನಿಕುರಂಬಾಮೃತರಸಂ
ಹೃದಿ ತ್ವಾಮಾಧತ್ತೇ ಹಿಮಕರಶಿಲಾಮೂರ್ತಿಮಿವ ಯಃ ।
ಸ ಸದ್ಯಾರ್ಣಾಂ ದರ್ಪಂ ಶಮಯತಿ ಶಕುಂತಾಧಿಪ ಇವ
ಜ್ವರಪ್ಲುಷ್ಟಾನ್ ದೃಷ್ಟ್ಯಾ ಸುಖಯತಿ ಸುಧಾಧಾರಸಿರಯಾ ॥ ೨೦ ॥

ತಟಿಲ್ಲೇಖಾತನ್ವೀಂ ತಪನಶಶಿವೈಶ್ವಾನರಮಯೀಂ
ನಿಷಣ್ಣಾಂ ಷಣ್ಣಾಮಪ್ಯುಪರಿ ಕಮಲಾನಾಂ ತವ ಕಲಾಮ್ ।
ಮಹಾಪದ್ಮಾಟವ್ಯಾಂ ಮೃದಿತಮಲಮಾಯೇನ ಮನಸಾ
ಮಹಾಂತಃ ಪಶ್ಯಂತೋ ದಧತಿ ಪರಮಾಹ್ಲಾದಲಹರೀಮ್ ॥ ೨೧ ॥

ಭವಾನಿ ತ್ವಂ ದಾಸೇ ಮಯಿ ವಿತರ ದೃಷ್ಟಿಂ ಸಕರುಣಾ-
ಮಿತಿ ಸ್ತೋತುಂ ವಾಂಛನ್ ಕಥಯತಿ ಭವಾನಿ ತ್ವಮಿತಿ ಯಃ ।
ತದೈವ ತ್ವಂ ತಸ್ಮೈ ದಿಶಸಿ ನಿಜಸಾಯುಜ್ಯಪದವೀಂ
ಮುಕುಂದಬ್ರಹ್ಮೇಂದ್ರಸ್ಫುಟಮುಕುಟನೀರಾಜಿತಪದಾಮ್ ॥ ೨೨ ॥

ತ್ವಯಾ ಹೃತ್ವಾ ವಾಮಂ ವಪುರಪರಿತೃಪ್ತೇನ ಮನಸಾ
ಶರೀರಾರ್ಧಂ ಶಂಭೋರಪರಮಪಿ ಶಂಕೇ ಹೃತಮಭೂತ್ ।
ಯದೇತತ್ತ್ವದ್ರೂಪಂ ಸಕಲಮರುಣಾಭಂ ತ್ರಿನಯನಂ
ಕುಚಾಭ್ಯಾಮಾನಮ್ರಂ ಕುಟಿಲಶಶಿಚೂಡಾಲಮುಕುಟಮ್ ॥೨೩॥

ಜಗತ್ಸೃಷ್ಟೇ ಧಾತಾ ಹರಿರವತಿ ರುದ್ರಃ ಕ್ಷಪಯತೇ
ತಿರಸ್ಕುರ್ವನ್ನೇತತ್ಸ್ವಮಪಿ ವಪುರೀಶಸ್ತಿರಯತಿ ।
ಸದಾಪೂರ್ವಃ ಸರ್ವಂ ತದಿದಮನುಗೃಹ್ಣಾತಿ ಚ ಶಿವ-
ಸ್ತವಾಜ್ಞಾಮಾಲಂಬ್ಯ ಕ್ಷಣಚಲಿತಯೋರ್ಭ್ರೂಲತಿಕಯೋಃ ॥ ೨೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ರಯಾಣಾಂ ದೇವಾನಾಂ ತ್ರಿಗುಣಜನಿತಾನಾಂ ತವ ಶಿವೇ
ಭವೇತ್ಪೂಜಾ ಪೂಜಾ ತವ ಚರಣಯೋರ್ಯಾ ವಿರಚಿತಾ ।
ತಥಾ ಹಿ ತ್ವತ್ಪಾದೋದ್ವಹನಮಣಿಪೀಠಸ್ಯ ನಿಕಟೇ
ಸ್ಥಿತಾ ಹ್ಯೇತೇ ಶಶ್ವನ್ಮುಕುಲಿತಕರೋತ್ತಂಸಮುಕುಟಾಃ ॥ ೨೫ ॥

ವಿರಿಂಚಿಃ ಪಂಚತ್ವಂ ವ್ರಜತಿ ಹರಿರಾಪ್ನೋತಿ ವಿರತಿಂ
ವಿನಾಶಂ ಕೀನಾಶೋ ಭಜತಿ ಧನದೋ ಯಾತಿ ನಿಧನಮ್ ।
ವಿತಂದ್ರೀ ಮಾಹೇಂದ್ರೀ ವಿತತಿರಪಿ ಸಂವಿಗಲಿತದೃಶಾ
ಮಹಾಸಂಹಾರೇಽಸ್ಮಿನ್ ವಿಹರತಿ ಸತಿ ತ್ವತ್ಪತಿರಸೌ ॥ ೨೬ ॥

ಜಪೋ ಜಲ್ಪಃ ಶಿಲ್ಪಂ ಸಕಲಮಪಿ ಮುದ್ರಾವಿರಚನಾ
ಗತಿಃ ಪ್ರಾದಕ್ಷಿಣ್ಯಕ್ರಮಣಮಶನಾದ್ಯಾಹುತಿವಿಧಿಃ ।
ಪ್ರಣಾಮಃ ಸಂವೇಶಃ ಸುಖಮಖಿಲಮಾತ್ಮಾರ್ಪಣದೃಶಾ
ಸಪರ್ಯಾಪರ್ಯಾಯಸ್ತವ ಭವತು ಯನ್ಮೇ ವಿಲಸಿತಮ್ ॥ ೨೭ ॥

ಸುಧಾಮಪ್ಯಾಸ್ವಾದ್ಯ ಪ್ರತಿಭಯಜರಾಮೃತ್ಯುಹರಿಣೀಂ
ವಿಪದ್ಯಂತೇ ವಿಶ್ವೇ ವಿಧಿಶತಮಖಾದ್ಯಾ ದಿವಿಷದಃ ।
ಕರಾಲಂ ಯತ್ ಕ್ಷ್ವೇಲಂ ಕಬಲಿತವತಃ ಕಾಲಕಲನಾ
ನ ಶಂಭೋಸ್ತನ್ಮೂಲಂ ತವ ಜನನಿ ತಾಟಂಕಮಹಿಮಾ ॥ ೨೮ ॥

ಕಿರೀಟಂ ವೈರಿಂಚಂ ಪರಿಹರ ಪುರಃ ಕೈಟಭಭಿದಃ
ಕಠೋರೇ ಕೋಟೀರೇ ಸ್ಖಲಸಿ ಜಹಿ ಜಂಭಾರಿಮುಕುಟಮ್ ।
ಪ್ರಣಮ್ರೇಷ್ವೇತೇಷು ಪ್ರಸಭಮುಪಯಾತಸ್ಯ ಭವನಂ
ಭವಸ್ಯಾಭ್ಯುತ್ಥಾನೇ ತವ ಪರಿಜನೋಕ್ತಿರ್ವಿಜಯತೇ ॥ ೨೯ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವದೇಹೋದ್ಭೂತಾಭಿರ್ಘೃಣಿಭಿರಣಿಮಾದ್ಯಾಭಿರಭಿತೋ
ನಿಷೇವ್ಯೇ ನಿತ್ಯೇ ತ್ವಾಮಹಮಿತಿ ಸದಾ ಭಾವಯತಿ ಯಃ ।
ಕಿಮಾಶ್ಚರ್ಯಂ ತಸ್ಯ ತ್ರಿನಯನಸಮೃದ್ಧಿಂ ತೃಣಯತೋ
ಮಹಾಸಂವರ್ತಾಗ್ನಿರ್ವಿರಚಯತಿ ನೀರಾಜನವಿಧಿಮ್ ॥ ೩೦ ॥

ಚತುಃಷಷ್ಟ್ಯಾ ತಂತ್ರೈಃ ಸಕಲಮಭಿಸಂಧಾಯ ಭುವನಂ
ಸ್ಥಿತಸ್ತತ್ತತ್ಸಿದ್ಧಿಪ್ರಸವಪರತಂತ್ರೈಃ ಪಶುಪತಿಃ ।
ಪುನಸ್ತ್ವನ್ನಿರ್ಬಂಧಾದಖಿಲಪುರುಷಾರ್ಥೈಕ ಘಟನಾ–
ಸ್ವತಂತ್ರಂ ತೇ ತಂತ್ರಂ ಕ್ಷಿತಿತಲಮವಾತೀತರದಿದಮ್ ॥ ೩೧ ॥

ಶಿವಃ ಶಕ್ತಿಃ ಕಾಮಃ ಕ್ಷಿತಿರಥ ರವಿಃ ಶೀತಕಿರಣಃ
ಸ್ಮರೋ ಹಂಸಃ ಶಕ್ರಸ್ತದನು ಚ ಪರಾಮಾರಹರಯಃ ।
ಅಮೀ ಹೃಲ್ಲೇಖಾಭಿಸ್ತಿಸೃಭಿರವಸಾನೇಷು ಘಟಿತಾ
ಭಜಂತೇ ವರ್ಣಾಸ್ತೇ ತವ ಜನನಿ ನಾಮಾವಯವತಾಮ್ ॥ ೩೨ ॥

ಸ್ಮರಂ ಯೋನಿಂ ಲಕ್ಷ್ಮೀಂ ತ್ರಿತಯಮಿದಮಾದೌ ತವ ಮನೋ-
ರ್ನಿಧಾಯೈಕೇ ನಿತ್ಯೇ ನಿರವಧಿಮಹಾಭೋಗರಸಿಕಾಃ ।
ಭಜಂತಿ ತ್ವಾಂ ಚಿಂತಾಮಣಿಗುಣನಿಬದ್ಧಾಕ್ಷವಲಯಾಃ
ಶಿವಾಗ್ನೌ ಜುಹ್ವಂತಃ ಸುರಭಿಘೃತಧಾರಾಹುತಿಶತೈಃ ॥ ೩೩ ॥

ಶರೀರಂ ತ್ವಂ ಶಂಭೋಃ ಶಶಿಮಿಹಿರವಕ್ಷೋರುಹಯುಗಂ
ತವಾತ್ಮಾನಂ ಮನ್ಯೇ ಭಗವತಿ ನವಾತ್ಮಾನಮನಘಮ್ ।
ಅತಃ ಶೇಷಃ ಶೇಷೀತ್ಯಯಮುಭಯಸಾಧಾರಣತಯಾ
ಸ್ಥಿತಃ ಸಂಬಂಧೋ ವಾಂ ಸಮರಸಪರಾನಂದಪರಯೋಃ ॥ ೩೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮನಸ್ತ್ವಂ ವ್ಯೋಮ ತ್ವಂ ಮರುದಸಿ ಮರುತ್ಸಾರಥಿರಸಿ
ತ್ವಮಾಪಸ್ತ್ವಂ ಭೂಮಿಸ್ತ್ವಯಿ ಪರಿಣತಾಯಾಂ ನ ಹಿ ಪರಮ್ !
ತ್ವಮೇವ ಸ್ವಾತ್ಮಾನಂ ಪರಿಣಮಯಿತುಂ ವಿಶ್ವವಪುಷಾ
ಚಿದಾನಂದಾಕಾರಂ ಶಿವಯುವತಿಭಾವೇನ ಬಿಭೃಷೇ ॥ ೩೫ ॥

ತವಾಜ್ಞಾಚಕ್ರಸ್ಥಂ ತಪನಶಶಿಕೋಟಿದ್ಯುತಿಧರಂ
ಪರಂ ಶಂಭುಂ ವಂದೇ ಪರಿಮಿಲಿತಪಾರ್ಶ್ವಂ ಪರಚಿತಾ ।
ಯಮಾರಾಧ್ಯನ್ ಭಕ್ತ್ಯಾ ರವಿಶಶಿಶುಚೀನಾಮವಿಷಯೇ
ನಿರಾಲೋಕೇಽಲೋಕೇ ನಿವಸತಿ ಹಿ ಭಾಲೋಕಭುವನೇ ॥ ೩೬ ॥

ವಿಶುದ್ಧಿ ತೇ ಶುದ್ಧಸ್ಫಟಿಕವಿಶದಂ ವ್ಯೋಮಜನಕಂ
ಶಿವಂ ಸೇವೇ ದೇವೀಮಪಿ ಶಿವಸಮಾನವ್ಯವಸಿತಾಮ್ ।
ಯಯೋಃ ಕಾಂತ್ಯಾ ಯಾಂತ್ಯಾ ಶಶಿಕಿರಣಸಾರೂಪ್ಯಸರಣೇ
ರ್ವಿಧೂತಾಂತರ್ಧ್ವಾಂತಾ ವಿಲಸತಿ ಚಕೋರೀವ ಜಗತೀ ॥ ೩೭ ॥

ಸಮುನ್ಮೀಲತ್ಸಂವಿತ್ಕಮಲಮಕರಂದೈಕರಸಿಕಂ
ಭಜೇ ಹಂಸದ್ವಂದ್ವಂ ಕಿಮಪಿ ಮಹತಾಂ ಮಾನಸಚರಮ್ ।
ಯದಾಲಾಪಾದಷ್ಟಾದಶಗುಣಿತವಿದ್ಯಾಪರಿಣತಿ–
ರ್ಯದಾದತ್ತೇ ದೋಷಾದ್ಗುಣಮಖಿಲಮದ್ಭ್ಯಃ ಪಯ ಇವ ॥ ೩೮ ॥

ತವ ಸ್ವಾಧಿಷ್ಠಾನೇ ಹುತವಹಮಧಿಷ್ಠಾಯ ನಿರತಂ
ತಮಾಡೇ ಸಂವರ್ತಂ ಜನನಿ ಮಹತೀಂ ತಾಂ ಚ ಸಮಯಾಮ್ ।
ಯದಾಲೋಕೇ ಲೋಕಾನ್ ದಹತಿ ಮಹತಿ ಕ್ರೋಧಕಲಿತೇ
ದಯಾರ್ದ್ರಾ ಯಾ ದೃಷ್ಟಿಃ ಶಿಶಿರಮುಪಚಾರಂ ರಚಯತಿ ॥ ೩೯ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ತಟಿತ್ವಂತಂ ಶಕ್ತ್ಯಾ ತಿಮಿರಪರಿಪಂಥಿಸ್ಫುರಣಯಾ
ಸ್ಫುರನ್ನಾನಾರತ್ನಾಭರಣಪರಿಣದ್ಧೇಂದ್ರ ಧನುಷಮ್ ।
ತವ ಶ್ಯಾಮಂ ಮೇಘಂ ಕಮಪಿ ಮಣಿಪೂರೈಕಶರಣಂ
ನಿಷೇವೇ ವರ್ಷಂತಂ ಹರಮಿಹಿರತಪ್ತಂ ತ್ರಿಭುವನಮ್ ॥ ೪೦ ॥

ತವಾಧಾರೇ ಮೂಲೇ ಸಹ ಸಮಯಯಾ ಲಾಸ್ಯಪರಯಾ
ನವಾತ್ಮಾನಂ ಮನ್ಯೇ ನವರಸಮಹಾತಾಂಡವನಟಮ್ ।
ಉಭಾಭ್ಯಾಮೇತಾಭ್ಯಾಮುದಯವಿಧಿಮುದ್ದಿಶ್ಯ ದಯಯಾ
ಸನಾಥಾಭ್ಯಾಂ ಜಜ್ಞೇ ಜನಕಜನನೀಮಜ್ಜಗದಿದಮ್ ॥೪೧ ॥

ಗತೈರ್ಮಾಣಿಕ್ಯತ್ವಂ ಗಗನಮಣಿಭಿಃ ಸಾಂದ್ರಘಟಿತಂ
ಕಿರೀಟಂ ತೇ ಹೈಮಂ ಹಿಮಗಿರಿಸುತೇ ಕೀರ್ತಯತಿ ಯಃ ।
ಸ ನೀಡೇಯಚ್ಛಾಯಾಚ್ಛುರಣಶಬಲಂ ಚಂದ್ರಶಕಲಂ
ಧನುಃ ಸೌನಾಸೀರಂ ಕಿಮಿತಿ ನ ನಿಬಧ್ನಾತಿ ದಿಷಣಾಮ್ ॥ ೪೨ ॥

ಧುನೋತು ಧ್ವಾಂತಂ ನಸ್ತುಲಿತದಲಿತೇಂದೀವರವನಂ
ಘನಸ್ನಿಗ್ಧಶ್ಲಕ್ಷ್ಣಂ ಚಿಕುರನಿಕುರುಂಬಂ ತವ ಶಿವೇ ।
ಯದೀಯಂ ಸೌರಭ್ಯಂ ಸಹಜಮುಪಲಬ್ಧುಂ ಸುಮನಸೋ
ವಸಂತ್ಯಸ್ಮಿನ್ ಮನ್ಯೇ ವಲಮಥನವಾಟೀವಿಟಪಿನಾಮ್ ॥ ೪೩ ॥

ತನೋತು ಕ್ಷೇಮಂ ನಸ್ತವ ವದನಸೌಂದರ್ಯಲಹರೀ-
ಪರೀವಾಹಸ್ರೋತಃ ಸರಣಿರಿವ ಸೀಮಂತಸರಣಿಃ ।
ವಹಂತೀ ಸಿಂದೂರಂ ಪ್ರಬಲಕಬರೀಭಾರತಿಮಿರ-
ದ್ವಿಷಾಂ ಬೃಂದೈರ್ಬಂದೀಕೃತಮಿವ ನವೀನಾರ್ಕಕಿರಣಮ್ ॥ ೪೪ ॥

CC-O. In Public Domain. Digitized by eGangotri

ಅರಾಲೈಃ ಸ್ವಾಭಾವ್ಯಾದಲಿಕಲಭಸಶ್ರೀಭಿರಲಕೈಃ
ಪರೀತಂ ತೇ ವಕ್ತ್ರಂ ಪರಿಹಸತಿ ಪಂಕೇರುಹರುಚಿಮ್ ।
ದರಸ್ಮೇರೇ ಯಸ್ಮಿನ್ ದಶನರುಚಿಕಿಂಜಲ್ಕ ರುಚಿರೇ
ಸುಗಂಧೌ ಮಾದ್ಯಂತಿ ಸ್ಮರದಹನಚಕ್ಷುರ್ಮಧುಲಿಹಃ ॥ ೪೫ ॥

ಲಲಾಟಂ ಲಾವಣ್ಯದ್ಯುತಿವಿಮಲಮಾಭಾತಿ ತವ ಯತ್-
ದ್ವಿತೀಯಂ ತನ್ಮನ್ಯೇ ಮಕುಟಘಟಿತಂ ಚಂದ್ರಶಕಲಮ್ ।
ವಿಪರ್ಯಾಸನ್ಯಾಸಾದುಭಯಮಪಿ ಸಂಭೂಯ ಚ ಮಿಥಃ
ಸುಧಾಲೇಪಸ್ಯೂತಿಃ ಪರಿಣಮತಿ ರಾಕಾಹಿಮಕರಃ ॥ ೪೬ ॥

ಭ್ರುವೌ ಭುಗ್ನೇ ಕಿಂಚದ್ಭುವನಭಯಭಂಗವ್ಯಸನಿನಿ
ತ್ವದೀಯೇ ನೇತ್ರಾಭ್ಯಾಂ ಮಧುಕರರುಚಿಭ್ಯಾಂ ಧೃತಗುಣಮ್ ।
ಧನುರ್ಮನ್ಯೇ ಸವ್ಯೇತರಕರಗೃಹೀತಂ ರತೀಪತೇಃ
ಪ್ರಕೋಷ್ಠೇ ಮುಷ್ಟೌ ಚ ಸ್ಥಗಯತಿ ನಿಗೂಢಾಂತರಮುಮೇ ॥ ೪೭ ॥

ಅಹಃ ಸೂತೇ ಸವ್ಯಂ ತವ ನಯನಮರ್ಕಾತ್ಮಕತಯಾ ।
ತ್ರಿಯಾಮಾಂ ವಾಮಂ ತೇ ಸೃಜತಿ ರಜನೀನಾಯಕತಯಾ ।
ತೃತೀಯಾ ತೇ ದೃಷ್ಟಿರ್ದರದಲಿತಹೇಮಾಂಬುಜರುಚಿಃ
ಸಮಾಧತ್ತೇ ಸಂಧ್ಯಾಂ ದಿವಸನಿಶಯೋರಂತರಚರೀಮ್ ॥ ೪೮ ॥

ವಿಶಾಲಾ ಕಲ್ಯಾಣೀ ಸ್ಫುಟರುಚಿರಯೋಧ್ಯಾ ಕುವಲಯೈಃ
ಕೃಪಾಧಾರಾ ಧಾರಾ ಕಿಮಪಿ ಮಧುರಾ ಭೋಗವತಿಕಾ ।
ಅವಂತೀ ದೃಷ್ಟಿಸ್ತೇ ಬಹುನಗರವಿಸ್ತಾರವಿಜಯಾ
ಧ್ರುವಂ ತತ್ತನ್ನಾಮವ್ಯವಹರಣಯೋಗ್ಯಾ ವಿಜಯತೇ ॥ ೪೯ ॥

CC-O. In Public Domain. Digitized by eGangotri

ಕವೀನಾಂ ಸಂದರ್ಭಸ್ತಬಕಮಕರಂದೈಕರಸಿಕಂ
ಕಟಾಕ್ಷವ್ಯಾಕ್ಷೇಪಭ್ರಮರಕಲಭೌ ಕರ್ಣಯುಗಲಮ್ ।
ಅಮುಂಚಂತೌ ದೃಷ್ಟ್ವಾ ತವ ನವರಸಾಸ್ವಾದತರಲೌ
ಅಸೂಯಾಸಂಸರ್ಗಾದಲಿಕನಯನಂ ಕಿಂಚಿದರುಣಮ್ ॥ ೫೦ ॥

ಶಿವೇ ಶೃಂಗಾರಾರ್ದ್ರಾ ತದಿತರಜನೇ ಕುತ್ಸನಪರಾ
ಸರೋಷಾ ಗಂಗಾಯಾಂ ಗಿರಿಶಚರಿತೇ ವಿಸ್ಮಯವತೀ ।
ಹರಾಹಿಭ್ಯೋ ಭೀತಾ ಸರಸಿರುಹಸೌಭಾಗ್ಯಜನನೀ
ಸಖೀಷು ಸ್ಮೇರಾ ತೇ ಮಯಿ ಜನನಿ ದೃಷ್ಟಿಃ ಸಕರುಣಾ ॥ ೫೧ ॥

ಗತೇ ಕರ್ಣಾಭ್ಯರ್ಣಂ ಗರುತ ಇವ ಪಕ್ಷ್ಮಾಣಿ ದಧತೀ
ಪುರಾಂ ಭೇತ್ತುಶ್ಚಿತ್ತಪ್ರಶಮರಸವಿದ್ರಾವಣಫಲೇ ।
ಇಮೇ ನೇತ್ರೇ ಗೋತ್ರಾಧರಪತಿಕುಲೋತ್ತಂಸಕಲಿಕೇ
ತವಾಕರ್ಣಾಕೃಷ್ಟಸ್ಮರಶರವಿಲಾಸಂ ಕಲಯತಃ ॥ ೫೨ ॥

ವಿಭಕ್ತತ್ರೈವರ್ಣ್ಯಂ ವ್ಯತಿಕರಿತಲೀಲಾಂಜನತಯಾ
ವಿಭಾತಿ ತ್ವನ್ನೇತ್ರತ್ರಿತಯಮಿದಮೀಶಾನದಯಿತೇ ।
ಪುನಃ ಸ್ರಷ್ಟುಂ ದೇವಾನ್ ದ್ರುಹಿಣಹರಿರುದ್ರಾನುಪರತಾನ್
ರಜಃ ಸತ್ತ್ವಂ ಭಿಭ್ರತ್ತಮ ಇತಿ ಗುಣಾನಾಂ ತ್ರಯಮಿವ ॥ ೫೩ ॥

ಪವಿತ್ರೀಕರ್ತುಂ ನಃ ಪಶುಪತಿಪರಾಧೀನಹೃದಯೇ
ದಯಾಮಿತ್ರೈರ್ನೇತ್ರೈ ರರುಣಧವಲಶ್ಯಾಮರುಚಿಭಿಃ ।
ನದಃ ಶೋಣೋ ಗಂಗಾ ತಪನತನಯೇತಿ ಧ್ರುವಮಮುಂ
ತ್ರಯಾಣಾಂ ತೀರ್ಥಾನಾಮುಪನಯಸಿ ಸಂಭೇದಮನಘಮ್ ॥ ೫೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಮೇಷೋನ್ಮೇಷಾಭ್ಯಾಂ ಪ್ರಲಯಮುದಯಂ ಯಾತಿ ಜಗತೀ
ತವೇತ್ಯಾಹುಃ ಸಂತೋ ಧರಣಿಧರರಾಜನ್ಯತನಯೇ ।
ತ್ವದುನ್ಮೇಷಾಜ್ಜಾತಂ ಜಗದಿದಮಶೇಷಂ ಪ್ರಲಯತಃ
ಪರಿತ್ರಾತುಂ ಶಂಕೇ ಪರಿಹೃತನಿಮೇಷಾಸ್ತವ ದೃಶಃ ॥ ೫೫ ॥

ತವಾಪರ್ಣೇ ಕರ್ಣೇಜಪನಯನಪೈಶುನ್ಯಚಕಿತಾ
ನಿಲೀಯಂತೇ ತೋಯೇ ನಿಯತಮನಿಮೇಷಾಃ ಶಫರಿಕಾಃ ।
ಇಯಂ ಚ ಶ್ರೀರ್ಬದ್ಧಚ್ಛದಪುಟಕವಾಟಂ ಕುವಲಯಂ
ಜಹಾತಿ ಪ್ರತ್ಯೂಷೇ ನಿಶಿ ಚ ವಿಘಟಯ್ಯ ಪ್ರವಿಶತಿ ॥ ೫೬ ॥

ದೃಶಾ ದ್ರಾಘೀಯಸ್ಯಾ ದರದಲಿತನೀಲೋತ್ಪಲರುಚಾ
ದವೀಯಾಂಸಂ ದೀನಂ ಸ್ನಪಯ ಕೃಪಯಾ ಮಾಮಪಿ ಶಿವೇ ।
ಅನೇನಾಯಂ ಧನ್ಯೋ ಭವತಿ ನ ಚ ತೇ ಹಾನಿರಿಯತಾ
ವನೇ ವಾ ಹರ್ಮ್ಯೇ ವಾ ಸಮಕರನಿಪಾತೋ ಹಿಮಕರಃ ॥ ೫೭ ॥

ಅರಾಲಂ ತೇ ಪಾಲೀಯುಗಲಮಗರಾಜನ್ಯತನಯೇ
ನ ಕೇಷಾಮಾಧತ್ತೇ ಕುಸುಮಶರಕೋದಂಡಕುತುಕಮ್ ।
ತಿರಶ್ಚೀನೋ ಯತ್ರ ಶ್ರವಣಪಥಮುಲ್ಲಂಘ್ಯ ವಿಲಸ-
ನ್ನಪಾಂಗವ್ಯಾಸಂಗೋ ದಿಶತಿ ಶರಸಂಧಾನಧಿಷಣಾಮ್ ॥ ೫೮ ॥

ಸ್ಫುರದ್ಗಂಡಾಭೋಗಪ್ರತಿಫಲಿತತಾಟಂಕಯುಗಲಂ
ಚತುಶ್ಚಕ್ರಂ ಮನ್ಯೇ ತವ ಮುಖಮಿದಂ ಮನ್ಮಥರಥಮ್ ।
ಯಮಾರುಹ್ಯ ದ್ರುಹ್ಯತ್ಯವನಿರಥಮರ್ಕೇಂದುಚರಣಂ
ಮಹಾವೀರೋ ಮಾರಃ ಪ್ರಮಥಪತಯೇ ಸಜ್ಜಿತವತೇ ॥ ೫೯ ॥

CC-O. In Public Domain. Digitized by eGangotri

ಸರಸ್ವತ್ಯಾ ಸೂಕ್ತೀರಮೃತಲಹರೀಕೌಶಲಹರೀಃ
ಪಿಬಂತ್ಯಾಃ ಶರ್ವಾಣಿ ಶ್ರವಣಚುಲುಕಾಭ್ಯಾಮವಿರಲಮ್ ।
ಚಮತ್ಕಾರಶ್ಲಾಘಾಚಲಿತಶಿರಸಃ ಕುಂಡಲಗಣೋ
ಝಣತ್ಕಾರೈಸ್ತಾರೈಃ ಪ್ರತಿವಚನಮಾಚಷ್ಟ ಇವ ತೇ ॥ ೬೦ ॥

ಅಸೌ ನಾಸಾವಂಶಸ್ತುಹಿನಗಿರಿವಂಶಧ್ವಜಪಟೇ
ತ್ವದೀಯೋ ನೇದೀಯಃ ಫಲತು ಫಲಮಸ್ಮಾಕಮುಚಿತಮ್ ।
ವಹತ್ಯಂತರ್ಮುಕ್ತಾಃ ಶಿಶಿರಕರನಿಃಶ್ವಾಸಗಲಿತಂ
ಸಮೃದ್ಧ್ಯಾ ಯತ್ತಾಸಾಂ ಬಹಿರಪಿ ಚ ಮುಕ್ತಾಮಣಿಧರಃ ॥ ೬೧ ॥

ಪ್ರಕೃತ್ಯಾ ರಕ್ತಾಯಾಸ್ತವ ಸುದತಿ ದಂತಚ್ಛದರುಚೇಃ
ಪ್ರವಕ್ಷ್ಯೇ ಸಾದೃಶ್ಯಂ ಜನಯತು ಫಲಂ ವಿದ್ರುಮಲತಾ ।
ನ ಬಿಂಬಂ ತದ್ಬಿಂಬಪ್ರತಿಫಲನರಾಗಾದರುಣಿತಂ
ತುಲಾಮಧ್ಯಾರೋಢುಂ ಕಥಮಿವ ವಿಜಿಜ್ಞೇತ ಕಲಯಾ ॥ ೬೨ ॥

ಸ್ಮಿತಜ್ಯೋತ್ಸ್ನಾಜಾಲಂ ತವ ವದನಚಂದ್ರಸ್ಯ ಪಿಬತಾಂ
ಚಕೋರಾಣಾಮಾಸೀದತಿರಸತಯಾ ಚಂಚುಜಡಿಮಾ ।
ಅತಸ್ತೇ ಶೀತಾಂಶೋರಮೃತಲಹರೀಮಾಮ್ಲರುಚಯಃ
ಪಿಬಂತಿ ಸ್ವಚ್ಛಂದಂ ನಿಶಿ ನಿಶಿ ಭೃಶಂ ಕಾಂಜಿಕಧಿಯಾ ॥ ೬೩ ॥

ಅವಿಶ್ರಾಂತಂ ಪತ್ಯುರ್ಗುಣಗಣಕಥಾಮ್ರೇಡನಜಪಾ
ಜಪಾಪುಷ್ಪಚ್ಛಾಯಾ ತವ ಜನನಿ ಜಿಹ್ವಾ ಜಯತಿ ಸಾ ।
ಯದಗ್ರಾಸೀನಾಯಾಃ ಸ್ಫಟಿಕದೃಷದಚ್ಛಚ್ಛವಿಮಯೀ
ಸರಸ್ವತ್ಯಾ ಮೂರ್ತಿಃ ಪರಿಣಮತಿ ಮಾಣಿಕ್ಯವಪುಷಾ ॥ ೬೪ ॥

CC-O. In Public Domain. Digitized by eGangotri

ರಣೇ ಜಿತ್ವಾ ದೈತ್ಯಾನಪಹೃತಶಿರಸ್ಕೈಃ ಕವಚಿಭಿ-
ರ್ನಿವೃತ್ತೈಶ್ಚಂಡಾಂಶತ್ರಿಪುರಹರನಿರ್ಮಾಲ್ಯವಿಮುಖೈಃ ।
ವಿಶಾಖೇಂದ್ರೋಪೇಂದ್ರೈಃ ಶಶಿವಿಶದಕರ್ಪೂರಶಕಲಾಃ
ವಿಲೀಯಂತೇ ಮಾತಸ್ತವ ವದನತಾಂಬೂಲಕಬಲಾಃ ॥ ೬೫ ॥

ವಿಪಂಚ್ಯಾ ಗಾಯಂತೀ ವಿವಿಧಮುಪದಾನಂ ಪಶುಪತೇ-
ಸ್ತ್ವಯಾರಬ್ಧೇ ವಕ್ತುಂ ಚಲಿತಶಿರಸಾ ಸಾಧುವಚನೇ ।
ತ್ವದೀಯೈರ್ಮಾಧುರ್ಯೈರಪಲಪಿತತಂತ್ರೀಕಲರವಾಂ
ನಿಜಾಂ ವೀಣಾಂ ವಾಣೀ ನಿಚುಲಯತಿ ಚೋಲೇನ ನಿಭೃತಮ್ ॥ ೬೬ ॥

ಕರಾಗ್ರೇಣ ಸ್ಪೃಷ್ಟಂ ತುಹಿನಗಿರಿಣಾ ವತ್ಸಲತಯಾ
ಗಿರೀಶೇನೋದಸ್ತಂ ಮುಹುರಧರಪಾನಾಕುಲತಯಾ ।
ಕರಗ್ರಾಹ್ಯಂ ಶಂಭೋರ್ಮುಖಮುಕುರವೃಂತಂ ಗಿರಿಸುತೇ
ಕಥಂಕಾರಂ ಬ್ರೂಮಸ್ತವ ಚುಬುಕಮೌಪಮ್ಯರಹಿತಮ್ ॥ ೬೭ ॥

ಭುಜಾಶ್ಲೇಷಾನ್ನಿತ್ಯಂ ಪುರದಮಯಿತುಃ ಕಂಟಕವತೀ
ತವ ಗ್ರೀವಾ ಧತ್ತೇ ಮುಖಕಮಲನಾಲಶ್ರಿಯಮಿಯಮ್ ।
ಸ್ಖಲತಃ ಶ್ವೇತಾ ಕಾಲಾಗರುಬಹುಲಜಂಬಾಲಮಲಿನಾ
ಮೃಣಾಲೀಲಾಲಿತ್ಯಂ ವಹತಿ ಯದಹೋ ಹಾರಲತಿಕಾ ॥ ೬೮ ॥

ಗಲೇ ರೇಖಾಸ್ತಿಸ್ರೋ ಗತಿಗಮಕಗೀತೈಕನಿಪುಣೇ
ವಿವಾಹವ್ಯಾನದ್ಧ ಪ್ರಗುಣಗುಣಸಂಖ್ಯಾಪ್ರತಿಭುವಃ ।
ವಿರಾಜಂತೇ ನಾನಾವಿಧಮಧುರರಾಗಾಕರಭುವಾಂ
ತ್ರಯಾಣಾಂ ಗ್ರಾಮಾಣಾಂ ಸ್ಥಿತಿನಿಯಮಸೀಮಾನ ಇವ ತೇ ॥ ೬೯ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಮೃಣಾಲೀಮೃದ್ವೀನಾಂ ತವ ಭುಜಲತಾನಾಂ ಚತಸೃಣಾಂ
ಚತುರ್ಭಿಃ ಸೌಂದರ್ಯಂ ಸರಸಿಜಭವಃ ಸ್ತೌತಿ ವದನೈಃ ।
ನಖೇಭ್ಯಃ ಸಂತ್ರಸ್ಯನ್ ಪ್ರಥಮಮಥನಾಧಂಧಕರಿಪೋ-
ಶ್ಚತುರ್ಣಾಂ ಶೀರ್ಷಾಣಾಂ ಸಮಮುಭಯಹಸ್ತಾರ್ಪಣಧಿಯಾ ॥ ೭೦ ॥

ನಖಾನಾಮುದ್ಯೋತೈರ್ನವನಲಿನರಾಗಂ ವಿಹಸತಾಂ
ಕರಾಣಾಂ ತೇ ಕಾಂತಿಂ ಕಥಯ ಕಥಯಾಮಃ ಕಥಮುಮೇ ।
ಕಯಾಚಿದ್ವಾ ಸಾಮ್ಯಂ ಭಜತು ಕಲಯಾ ಹಂತ ಕಮಲಂ
ಯದಿ ಕ್ರೀಡಲ್ಲಕ್ಷ್ಮೀಚರಣತಲಲಾಕ್ಷಾ ರಸಚರಮ್ ॥ ೭೧ ॥

ಸಮಂ ದೇವಿ ಸ್ಕಂದದ್ವಿಪವದನಪೀತಂ ಸ್ತನಯುಗಂ
ತವೇದಂ ನಃ ಖೇದಂ ಹರತು ಸತತಂ ಪ್ರಸ್ನುತಮುಖಮ್
ಯದಾಲೋಕ್ಯಾಶಂಕಾಕುಲಿತಹೃದಯೋ ಹಾಸಜನಕಃ
ಸ್ವಕುಂಭೌ ಹೇರಂಭಃ ಪರಿಧೃಶತಿ ಹಸ್ತೇನ ರುಟತಿ ॥ ೭೨ ॥

ಅಮೂ ತೇ ವಕ್ಷೋಜಾವಮೃತರಸಮಾಣಿಕ್ಯಕುತುಪೌ
ನ ಸಂದೇಹಸ್ಪಂದೋ ನಗಪತಿಪತಾಕೇ ಮನಸಿ ನಃ ।
ಪಿಬಂತೌ ತೌ ಯಸ್ಮಾದವಿದಿತವಧೂಸಂಗರಸಿಕೌ
ಕುಮಾರಾವದ್ಯಾಪಿ ದ್ವಿರದವದನಕ್ರೌಂಚದಲನೌ ॥ ೭೩ ॥

ವಹತ್ಯಂಬ ಸ್ತಂಬೇರಮದನುಜಕುಂಭಪ್ರಕೃತಿಭಿಃ
ಸಮಾರಬ್ಧಾಂ ಮುಕ್ತಾಮಣಿಭಿರಮಲಾಂ ಹಾರಲತಿಕಾಮ್ ।
ಕುಚಾಭೋಗೋ ಬಿಂಬಾಧರರುಚಿಭಿರಂತಃ ಶಬಲಿತಾಂ
ಪ್ರತಾಪವ್ಯಾಮಿಶ್ರಾಂ ಪುರದಮಯಿತುಃ ಕೀರ್ತಿಮಿವ ತೇ ॥ ೭೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ತವ ಸ್ತನ್ಯಂ ಮನ್ಯೇ ಧರಣಿಧರಕನ್ಯೇ ಹೃದಯತಃ
ಪಯಃ ಪಾರಾವಾರಃ ಪರಿವಹತಿ ಸಾರಸ್ವತಮಿವ ।
ದಯಾವತ್ಯಾ ದತ್ತಂ ದ್ರವಿಡಶಿಶುರಾಸ್ವಾದ್ಯ ತವ ಯತ್
ಕವೀನಾಂ ಪ್ರೌಢಾನಾಮಜನಿ ಕಮನೀಯಃ ಕವಯಿತಾ ॥ ೭೫ ॥

ಹರಕ್ರೋಧಜ್ವಾಲಾವಲಿಭಿರವಲೀಢೇನ ವಪುಷಾ
ಗಭೀರೇ ತೇ ನಾಭೀಸರಸಿ ಕೃತಸಂಗೋ ಮನಸಿಜಃ ।
ಸಮುತ್ತಸ್ಥೌ ತಸ್ಮಾದಚಲತನಯೇ ಧೂಮಲತಿಕಾ
ಜನಸ್ಯಾಂ ಜಾನೀತೇ ತವ ಜನನಿ ರೋಮಾವಲಿರಿತಿ ॥ ೭೬ ॥

ಯದೇತತ್ಕಾಲಿಂದೀತನುತರತರಂಗಾಕೃತಿ ಶಿವೇ
ಕೃಶೇ ಮಧ್ಯೇ ಕಿಂಚಿಜ್ಜನಸಿ ತವ ಯದ್ಭಾತಿ ಸುಧಿಯಾಮ್ ।
ವಿಮರ್ದಾದನ್ಯೋನ್ಯಂ ಕುಚಕಲಶಯೋರಂತರಗತಂ
ತನೂಭೂತಂ ವ್ಯೋಮ ಪ್ರವಿಶದಿವ ನಾಭಿಂ ಕುಹರಿಣೇಮ್ ॥ ೭೭ ॥

ಸ್ಥಿರೋ ಗಂಗಾವರ್ತಃ ಸ್ತನಮುಕುಲರೋಮಾವಲಿಲತಾ
ಕಲಾವಾಲಂ ಕುಂಡಂ ಕುಸುಮಶರತೇಜೋಹುತಭುಜಃ ।
ರತೇರ್ಲೀಲಾಗಾರಂ ಕಿಮಪಿ ತವ ನಾಭಿರ್ಗಿರಿಸುತೇ
ಬಿಲದ್ವಾರಂ ಸಿದ್ಧೇರ್ಗಿರಿಶನಯನಾನಾಂ ವಿಜಯತೇ ॥ ೭೮ ॥

ನಿಸರ್ಗಕ್ಷೀಣಸ್ಯ ಸ್ತನತಟಭರೇಣ ಕ್ಲಮಜುಷೋ
ನಮನ್ಮೂರ್ತೇರ್ನಾರೀತಿಲಕ ಶನಕೈಸ್ತ್ರುಟ್ಯತ ಇವ ।
ಚಿರಂ ತೇ ಮಧ್ಯಸ್ಯ ತ್ರುಟಿತತಟನೀತೀರತರುಣಾ
ಸಮಾವಸ್ಥಾಸ್ಥೈರ್ಯಂ ಭವತು ಶರದಂಭೋಜಕೃತಕಸ್ಯೇ ॥ ೭೯ ॥

Vidyaratna Digitized by Sri Jagadguru Shivarathri Deshikendra Mahaswamiji Oriental Research Institute, Sringeri

CC-O. In Public Domain. Digitized by eGangotri

ಕುಚೌ ಸದ್ಯಃ ಸ್ವಿದ್ಯತ್ತಟಘಟಿತಕೂರ್ಪಾಸಭಿದುರೌ
ಕಷಂತೌ ದೋರ್ಮೂಲೇ ಕನಕಕಲಶಾಭೌ ಕಲಯತಾ ।
ತವ ತ್ರಾತುಂ ಭಂಗಾದಲಮಿತಿ ವಲಗ್ನಂ ತನುಭುವಾ
ತ್ರಿಧಾ ನದ್ಧಂ ದೇವಿ ತ್ರಿವಲಿಲವಲೀವಲ್ಲಭಿರಿವ ॥ ೮೦ ॥

ಗುರುತ್ವಂ ವಿಸ್ತಾರಂ ಕ್ಷಿತಿಧರಪತಿಃ ಪಾರ್ವತಿ ನಿಜಾ-
ನ್ನಿತಂಬಾದಾಚ್ಛಿದ್ಯ ತ್ವಯಿ ಹರಣರೂಪೇಣ ನಿದಧೇ ।
ಅತಸ್ತೇ ವಿಸ್ತೀರ್ಣೋ ಗುರುರಯಮಶೇಷಾಂ ವಸುಮತೀಂ
ನಿತಂಬಪ್ರಾಗ್ಭಾರಃ ಸ್ಥಗಯತಿ ಲಘುತ್ವಂ ನಯತಿ ಚ ॥ ೮೧ ॥

ಕರೀಂದ್ರಾಣಾಂ ಶುಂಡಾನ್ ಕನಕಕದಲೀಕಾಂಡಪಟಲೀ-
ಮುಭಾಭ್ಯಾಮೂರುಭ್ಯಾಮುಭಯಮಪಿ ನಿರ್ಜಿತ್ಯ ಭವತಿ ।
ಸುವೃತ್ತಾಭ್ಯಾಂ ಪತ್ಯುಃ ಪ್ರಣತಿಕಠಿನಾಭ್ಯಾಂ ಗಿರಿಸುತೇ
ವಿಜಿಗ್ಯೇ ಜಾನುಭ್ಯಾಂ ವಿಬುಧಕರಿಕುಂಭದ್ವಯಮಪಿ ॥ ೮೨ ॥

ಪರಾಜೇತುಂ ರುದ್ರಂ ದ್ವಿಗುಣಶರಗರ್ಭೌ ಗಿರಿಸುತೇ
ನಿಷಂಗೌ ಜಂಘೇ ತೇ ವಿಷಮವಿಶಿಖೋ ಬಾಢಮುಕೃತ ।
ಯದಗ್ರೇ ದೃಶ್ಯಂತೇ ದಶಶರಫಲಾಃ ಪಾದಯುಗಲೀ-
ನಖಾಗ್ರಚ್ಛದ್ಮಾನಃ ಸುರಮಕುಟಶಾಣೈಕನಿಶಿತಾಃ ॥ ೮೩ ॥

ಶ್ರುತೀನಾಂ ಮೂರ್ಧಾನೋ ದಧತಿ ತವ ಯೌ ಶೇಖರತಯಾ
ಮಮಾಪ್ಯೇತೌ ಮಾತಃ ಶಿರಸಿ ದಯಯಾ ದೇಹಿ ಚರಣೌ ।
ಯಯೋಃ ಪಾದ್ಯಂ ಪಾಂಥಃ ಪಶುಪತಿಜಟಾಜೂಟತಟಿನೀ
ಯಯೋರ್ಲಾಕ್ಷಾ ಲಕ್ಷ್ಮೀಚರುಣಹರಿಚೂಡಾಮಣಿರುಚಿಃ ॥ ೮೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ನಮೋವಾಕಂ ಬ್ರೂಮೋ ನಯನರಮಣೀಯಾಯ ಪದಯೋ–
ಸ್ತವಾಸ್ಮೈ ದ್ವಂದ್ವಾಯ ಸ್ಫುಟರುಚಿರಸಾಲಕ್ತಕವತೇ ।
ಅಸೂಯತ್ಯತ್ಯಂತಂ ಯದಭಿಹನನಾಯ ಸ್ಪೃಹಯತೇ
ಪಶೂನಾನಿಶಾನಃ ಪ್ರಮದವನಕಂಕೇಲಿತರವೇ ॥ ೮೫ ॥

ಮೃಷಾ ಕೃತ್ವಾ ಗೋತ್ರಸ್ಖಲನಮಥ ವೈಲಕ್ಷ್ಯನಮಿತಂ
ಲಲಾಟೇ ಭರ್ತಾರಂ ಚರಣಕಮಲೇ ತಾಡಯತಿ ತೇ ।
ಚಿರಾದಂತಃಶಲ್ಯಂ ದಹನಕೃತಮುನ್ಮೂಲಿತವತಾ
ತುಲಾಕೋಟಿಕ್ವಾಣೈಃ ಕಿಲಿಕಿಲಿತಮಾಶಾನರಿಪುಣಾ ॥ ೮೬ ॥

ಹಿಮಾನೀಹಂತವ್ಯಂ ಹಿಮಗಿರಿನಿವಾಸೈಕಚತುರೌ
ನಿಶಾಯಾಂ ನಿದ್ರಾಣಂ ನಿಶಿ ಚರಮಭಾಗೇ ಚ ವಿಶದೌ ।
ವರಂ ಲಕ್ಷ್ಮೀಪಾತ್ರಂ ಶ್ರಿಯಮತಿಸೃಜಂತೌ ಸಮಯಿನಾಂ
ಸರೋಜಂ ತ್ವತ್ಪಾದೌ ಜನನಿ ಜಯತಶ್ಚಿತ್ರಮಿಹ ಕಿಮ್ ॥ ೮೭ ॥

ಪದಂ ತೇ ಕೀರ್ತೀನಾಂ ಪ್ರಸದಮುಪದಂ ದೇವಿ ವಿಪದಾಂ
ಕಥಂ ನೀತಂ ಸದ್ಭಿಃ ಕಠಿನಕಮಠೀಖರ್ಪರತುಲಾಮ್ ।
ಕಥಂ ವಾ ಬಾಹುಭ್ಯಾಮುಪಯಮನಕಾಲೇ ಪುರಭಿದಾ
ಯದಾದಾಯ ನ್ಯಸ್ತಂ ದೃಷದಿ ದಯಮಾನೇನ ಮನಸಾ ॥ ೮೮ ॥

ನಖೈರ್ನಾಕಸ್ತ್ರೀಣಾಂ ಕರಕಮಲಸಂಕೋಚಶಶಿಭಿಃ
ತರೂಣಾಂ ದಿವ್ಯಾನಾಂ ಹಸತ ಇವ ತೇ ಚಂಡಿ ಚರಣೌ ।
ಫಲಾನಿ ಸ್ವಃಸ್ಥೇಭ್ಯಃ ಕಿಸಲಯಕರಾಗ್ರೇಣ ದದತಾಂ
ದರಿದ್ರೇಭ್ಯೋ ಭದ್ರಾಂ ಶ್ರಿಯಮನಿಶಮಾಹ್ವಾಯ ಯಶಸೌ ॥ ೮೯ ॥

SuVidyabharathi Book Centre, Shringeri

CC-O. In Public Domain. Digitized by eGangotri

ದದಾನೇ ದೀನೇಭ್ಯಃ ಶ್ರೀಯಮನಿಶಮಾಶಾನುಸದೃಶೀಂ
ಅಮಂದಂ ಸೌಂದರ್ಯ ಪ್ರಕರಮಕರಂದಂ ವಿಕಿರತಿ ।
ತವಾಸ್ಮಿನ್ ಮಂದಾರಸ್ತಬಕಸುಭಗೇ ಯಾತು ಚರಣೇ
ನಿಮಜ್ಜನ್ಮಜ್ಜೀವಃ ಕರಣಚರಣ ಷಟ್ಚರಣತಾಮ್ ॥ ೯೦ ॥

ಪದನ್ಯಾಸಕ್ರೀಡಾಪರಿಚಯಮಿವಾರಬ್ಧುಮನಸಃ
ಸ್ಖಲಂತಸ್ತೇ ಖೇಲಂ ಭವನಕಲಹಂಸಾ ನ ಜಹತಿ ।
ಅತಸ್ತೇಷಾಂ ಶಿಕ್ಷಾಂ ಸುಭಗಮಣಿಮಂಜೀರರಣಿತ-
ಚ್ಛಲಾದಾಚಕ್ಷಾಣಂ ಚರಣಕಮಲಂ ಚಾರುಚರಿತೇ ॥ ೯೧ ॥

ಗತಾಸ್ತೇ ಮಂಚತ್ವಂ ದ್ರುಹಿಣಹರಿರುದ್ರೇಶ್ವರಭೃತಃ
ಶಿವಃ ಸ್ವಚ್ಛಚ್ಛಾಯಾಘಟಿತಕಪಟಪ್ರಚ್ಛದಪಟಃ ।
ತ್ವದೀಯಾನಾಂ ಭಾಸಾಂ ಪ್ರತಿಫಲನರಾಗಾರುಣತಯಾ
ಶರೀರೀ ಶೃಂಗಾರೋ ರಸ ಇವ ದೃಶಾಂ ದೋಗ್ಧಿ ಕುತುಕಮ್ ॥ ೯೨ ॥

ಅರಾಲಾ ಕೇಶೇಷು ಪ್ರಕೃತಿಸರಲಾ ಮಂದಹಸಿತೇ
ಶಿರೀಷಾಭಾ ಚಿತ್ತೇ ದೃಷದುಪಲಶೋಭಾ ಕುಚತಟೇ ।
ಭೃಶಂ ತನ್ವೀ ಮಧ್ಯೇ ಪೃಥುರುರಸಿಜಾರೋಹವಿಷಯೇ
ಜಗತ್ರ್ರಾತುಂ ಶಂಭೋರ್ಜಯತಿ ಕರುಣಾ ಕಾಚಿದರುಣಾ ॥ ೯೩ ॥

ಕಲಂಕಃ ಕಸ್ತೂರೀ ರಜನಿಕರಬಿಂಬಂ ಜಲಮಯಂ
ಕಲಾಭಿಃ ಕರ್ಪೂರೈರ್ಮರಕತಕರಂಡಂ ನಿಬಿಡಿತಮ್ ।
ಅತಸ್ತ್ವದ್ಭೋಗೇನ ಪ್ರತಿದಿನಮಿದಂ ರಿಕ್ತ ಕುಹರಂ
ವಿಧಿರ್ಭೂಯೋ ಭೂಯೋ ನಿಬಿಡಯತಿ ನೂನಂ ತವ ಕೃತೇ ॥ ೯೪ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರಾರಾತೇರಂತಃಪುರಮಸಿ ತತಸ್ತ್ವಚ್ಚರಣಯೋಃ
ಸಪರ್ಯಾಮರ್ಯಾದಾ ತರಲಕರಣಾನಾಮಸುಲಭಾ ।
ತಥಾ ಹ್ಯೇತೇ ನೀತಾಃ ಶತಮುಖಮುಖಾಃ ಸಿದ್ಧಿಮತುಲಾಂ
ತವ ದ್ವಾರೋಪಾಂತಸ್ಥಿತಿಭಿರಣಿಮಾದ್ಯಾಭಿರಮರಾಃ ॥ ೯೫ ॥

ಕಲತ್ರಂ ವೈಧಾತ್ರಂ ಕತಿಕತಿ ಭಜಂತೇ ನ ಕವಯಃ
ಶ್ರಿಯೋ ದೇವ್ಯಾಃ ಕೋ ವಾ ನ ಭವತಿ ಪತಿಃ ಕೈರಪಿ ಧನೈಃ ।
ಮಹಾದೇವಂ ಹಿತ್ವಾ ತವ ಸತಿ ಸತೀನಾಮಚರಮೇ
ಕುಚಾಭ್ಯಾಮಾಸಂಗಃ ಕುರವಕತರೋರಪ್ಯಸುಲಭಃ ॥ ೯೬ ॥

ಗಿರಾಮಾಹುರ್ದೇವೀಂ ದ್ರುಹಿಣಗೃಹಿಣೀಮಾಗಮವಿದೋ
ಹರೇಃ ಪತ್ನೀಂ ಪದ್ಮಾಂ ಹರಸಹಚರೀಮದ್ರಿತನಯಾಮ್ ।
ತುರೀಯಾ ಕಾಪಿ ತ್ವಂ ದುರಧಿಗಮನಿಸ್ಸೀಮಮಹಿಮಾ
ಮಹಾಮಾಯಾ ವಿಶ್ವಂ ಭ್ರಮಯಸಿ ಪರಬ್ರಹ್ಮಮಹಿಷಿ ॥ ೯೭ ॥

ಕದಾ ಕಾಲೇ ಮಾತಃ ಕಥಯ ಕಲಿತಾಲಕ್ತಕರಸಂ
ಪಿಬೇಯಂ ವಿದ್ಯಾರ್ಥೀ ತವ ಚರಣನಿರ್ಣೇಜನಜಲಮ್ ।
ಪ್ರಕೃತ್ಯಾ ಮೂಕಾನಾಮಪಿ ಚ ಕವಿತಾಕಾರಣತಯಾ
ಕದಾ ಧತ್ತೇ ವಾಣೀಮುಖಕಮಲತಾಂಬೂಲರಸತಾಮ್ ॥ ೯೮ ॥

ಸರಸ್ವತ್ಯಾ ಲಕ್ಷ್ಮ್ಯಾ ವಿಧಿಹರಿಸಪತ್ನೋ ವಿಹರತೇ
ರತೇಃ ಪಾತಿವ್ರತ್ಯಂ ಶಿಥಿಲಯತಿ ರಮ್ಯೇಣ ವಪುಷಾ ।
ಚಿರಂ ಜೀವನ್ನೇವ ಕ್ಷಪಿತಪಶುಪಾಶವ್ಯತಿಕರಃ
ಪರಾನಂದಾಭಿಖ್ಯಂ ರಸಯತಿ ರಸಂ ತ್ವದ್ಭಜನವಾನ್ ॥ ೯೯ ॥

ಪ್ರದೀಪಜ್ವಾಲಾಭಿರ್ದಿವಸಕರನೀರಾಜನವಿಧಿಃ
ಸುಧಾಸೂತೇಶ್ಚಂದ್ರೋಪಲಜಲಲಯೈರರ್ಘ್ಯರಚನಾ ।
ಸ್ವಕೀಯೈರಂಭೋಭಿಃ ಸಲಿಲನಿಧಿಸೌಹಿತ್ಯಕರಣಂ
ತ್ವದೀಯಾಭಿರ್ವಾಗ್ಭಿಸ್ತವ ಜನನಿ ವಾಚಾಂ ಸ್ತುತಿರಿಯಮ್ ॥ ೧೦೦ ॥

॥ ಸಮಾಪ್ತಂ ॥

CC-O. In Public Domain. Digitized by eGangotri

ಒಪ್ಪೋಲೆ

ಪುಟ	ಪಂಕ್ತಿ	ತಪ್ಪು	ಒಪ್ಪು
೪	೭	ಮನ್ನುತೆ	ಮೆಸುತ್ತೆ
೧೩	೧	ಬ್ರಹ್ಮನ	ಬ್ರಹ್ಮನು
೧೯	೮	ಗ್ರಹಾಪಕ್ಷೆಯಿಂ	ಗ್ರಹಾಪೇಕ್ಷೆಯಿಂ
೨೩	೧೮	ಅಷ್ಪಪ್ರಮಾಣ	ಅಲ್ಪಪ್ರಮಾಣ
೨೫	೧೧	ವೇಷಪಥೇ	ವೇಷುಪಥೇ
೩೧	೧೦	ಅಗುಬೃತಂ	ಅನುಭೃಶಂ
೩೩	೪	೭೯ನೆಯ	೭೩ನೆಯ
೩೬	೨	ಚಂಪಕಮಾಲಾ	ಉತ್ಪಲಮಾಲಾ
೩೭	೭	ಮಂಜನಕ್ಕ	ಮಜ್ಜನಕ್ಕ
"	೮	ವೋರಾಗೆ	ವೋಲಾಗೆ
೩೯	೩	ಪ್ರಂಚಕ್ಕೆ	ಪ್ರಪಂಚಕ್ಕೆ
"	೨೦	ಕೊಯ್ದನು	ಕೊಯ್ದನನು
೪೩	೭	ಕಂದ ಸನಿಹ.	ಕಂದ॥ಸನಿಹ
"	೮	ಅಣುವಿಗೆ ಕರಿದು	ಅಣುವಿಗಣುಕಿರಿದು
		ಚುದನಾರಿ	ಸ್ಮರಹರ
"	೯	ಮಹಿತಕೊಳು	ಮಹಿತರೊಳು ನೀವು
೪೫	೧೫	ನಮ	ನಮನಂ
"	೧೯	ತುಳುಕಸುವೆ	ತುಳಕಿಸುತೆ
೫೮	೩	ಹೀಗೆ ತಿದ್ದುಕೊಳ್ಳಿ ಉಭಯವರದಹಸ್ತ ದಿಂದೆ ರಕ್ಷಣೆ ಯಿಂದ	
೬೦	೯	ಹೀಗೆ ತಿದ್ದುಕೊಳ್ಳಿ ಒಡ್ಯಾಣದೊಳು ಗೆಜ್ಜೆ ಕ್ವಣಿಸೆ ಕರಿಕಲಭ ಕುಂಭ ಕುಚದೆ ನಸುಬಾಗಿ	

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಟ	ಪಂಕ್ತಿ	ತಪ್ಪು	ಒಪ್ಪು
೬೧	೮	ಹೀಗೆ ತಿದ್ದುಕೊಳ್ಳಿ ಸುಧಾಸಿಂಧು ಮದ್ಯದೆ ಸುತ್ತ ಕಲ್ಪವೃಕ್ಷ	
"	೧೨	ಅಲ್ಲಿ ನೀನಿರುವೆ	ನೀನಿಹೆ ಅಲ್ಲಿ
	೧೪–೧೫	ಹೀಗೆ ತಿದ್ದಿಕೊಳ್ಳಿ ಧನ್ನರು ನಿನ್ನ ಭಜಿಸಿ ಪಡೆವರು ಚಿರಾ ನಂದ ಲಹರಿಯ ಪೇರೊಸೆಗೆ	
೬೪	೯	ಗಳಿತ	ಗಳಿತ
೬೮	೩	ಒದಗಡೆ	ಒದಗಿರೆ
೬೯	೧೦	ಕೂದಿಸು	ಕೂಡಿದ ಅಜ್ಞಾಚಕ್ರದಲ್ಲಿ
೭೬	೪	ಅವರಿಗೂ	ಮೂವರಿಗೂ
೮೨	೪	ಪೂರ್ಣಿಯಾಂತಶ್ಚ	ಪೂರ್ಣಿಮಾಂತಶ್ಚ
೯೮	೧೩	ನೀಲಿಯ	ನೀಲಿಮ
೧೦೦	೧	ಎಡಗಣ್ಣು	ಬಲಗಣ್ಣು
"	೩	ಬಲಗಣ್ಣು	ಎಡಗಣ್ಣು
೧೦೪	೨೧	ಬೆಳಗುವಳು	ಬೆಳಗುವನು
೧೦೫	೨೦	ಮತಿಹೀನ	ತನುಹೀನ
೧೦೭	೨೦	ನೋಡತಲಿರುವೆನು	ನೋಡುತಿರುವನು
೧೦೮	೨೪	ತ್ರೈಷ್ಣ	ತ್ರೈಷ್ಣ
೧೧೬	೧೬	ನಿನ್ನಯ ತೊಡೆ	ನಿನ್ನಯ ಊರು
೧೧೮	೩	ಕವಿಸುವ	ರವಿಪ
೧೧೯	೧೯	ನ್ನಿಡಗೆನೆಯ	ನನ್ನಡಿಗೆನೆಯೆ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿವಮಹಿಮ್ನಸ್ತೋತ್ರ – ಸೌಂದರ್ಯಲಹರಿ – ಕನ್ನಡನಾಡಿನ ಹಿರಿಯ ಸಾಹಿತಿ **ದಿವಂಗತ ಬಿ. ಪುಟ್ಟಸ್ವಾಮಯ್ಯನವರ** ಕೊನೆಯ ಕೃತಿ.

ಶಿವಮಹಿಮ್ನಸ್ತೋತ್ರದ ಪರಿಚಯವನ್ನು ನಮ್ಮ ಜನರಿಗೆ ಆಷ್ಟಾಗಿ ಇದುವರೆಗೆ ಯಾರೂ ಮಾಡಿಕೊಟ್ಟಿರಲಿಲ್ಲ. ದಿ॥ ಬಿ. ಪುಟ್ಟಸ್ವಾಮಯ್ಯನವರೇ ಮೊದಲಿಗರು. **ಸೌಂದರ್ಯಲಹರಿಗೆ** ಜಿಕ್ಕಣಾಮಾತ್ಯನೂ ಸೇರಿದಂತೆ ಹತ್ತಾರು ಕನ್ನಡ ಅನುವಾದಗಳಿವೆ. ಆದರೂ ಕಾವ್ಯಕೃತಿಗೆ ಕಾವ್ಯದ ಅನುವಾದವೆನ್ನೇ ಕನ್ನಡಿ ಹಿಡಿದಿರುವುದು ಪುಟ್ಟಸ್ವಾಮಯ್ಯನವರ ವೈಶಿಷ್ಟ್ಯ.

ಈವರೆಗೆ ಕಥೆ, ಕಾದಂಬರಿ, ನಾಟಕಗಳಿಂದ ಹೆಸರಾದ **ಶ್ರೀ ಪುಟ್ಟಸ್ವಾಮಯ್ಯನವರು** ಕವಿತೆಯಲ್ಲೂ ಎಷ್ಟು ಸಿದ್ಧಿಯನ್ನು ಪಡೆದಿದ್ದಾರೆನ್ನುವುದು ತಿಳಿಯುತ್ತದೆ.

ತಮ್ಮ ಸಾರ್ಥಕ ಬಾಳುವೆಯ ಗೋಪುರಕ್ಕೆ ಕಲಶವಿಡುವಂತೆ **ಲಲಿತಾಸಹಸ್ರನಾಮ**ವನ್ನು ಸಾಂಗತ್ಯವನ್ನಾಗಿಯೂ, **ದುರ್ಗಾಸಪ್ತಶತಿಯನ್ನು** ಕಾವ್ಯವಾಗಿಯೂ ತಿರುಗಿಸಿ ಕನ್ನಡಕ್ಕೆ ತಂದು ಜನರ ಸಂಸ್ಕಾರ ಹಿಗ್ಗಿಸುವ ಕೆಲಸ ಮಾಡಿದ್ದಾರೆ. **ಶ್ರೀವಿದ್ಯೆಯ** ತಾಂತ್ರಿಕ ಪ್ರಕ್ರಿಯೆಗಳ ಪರಿಚಯ, ಪರ ಭಾಷೆಯ ಮೇಲೆ ಒಡೆತನ ಇವರಿಗೆ ಸಿದ್ಧಿಸಿದೆಯೆಂಬುದು ಈ ಎರಡೂ ಕೃತಿಗಳಿಂದ ಸ್ಪಷ್ಟವಾಗಿದೆ.

ಕನ್ನಡನಾಡಿನಲ್ಲಿ ಶ್ರೀವಿದ್ಯೆ ಹಿಂಹೊಮ್ಮಿ ಹರಡಿಕೊಂಡಿತ್ತು. ಈ ಉಪಾಸನೆಯನ್ನು ಕುರಿತು ಕನ್ನಡದಲ್ಲಿರುವಷ್ಟು ವಿಪುಲವಾದ ಸಾಹಿತ್ಯ ತೆಲುಗಿನಲ್ಲೂ, ತಮಿಳಿನಲ್ಲೂ ಇಲ್ಲ. ಶ್ರೀ ಪುಟ್ಟಸ್ವಾಮಯ್ಯನವರ ಪ್ರಯತ್ನದ ಫಲವಾಗಿ ಶ್ರೀವಿದ್ಯೆಯಲ್ಲಿನ ಆಸಕ್ತಿ ನಮ್ಮ ಜನರಲ್ಲಿ ಮುತ್ತಿ ಕಿರಳಲಿ.

ವಿದ್ಯಾಲಂಕಾರ ಪ್ರೊ॥ ಸಾಲಿಗ್ರಾಮ ಕೃಷ್ಣ
ರಾಮಚಂದ್ರರಾವ್
(ಮುನ್ನುಡಿಯಿಂದ)

ಅಧಿಕೃತ ಮಾರಾಟಗಾರರು :

ಶಾರದಾ ಪ್ರಕಾಶನ

ಬೆಂಗಳೂರು – 560053

Sri Vidyabharathi Book Centre, Singeri